ಕನ್ನಡ ಸಿನಿಮಾ ಮತ್ತು ದೇಸೀ ಸಂಸ್ಕೃತಿ

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್. ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ಜೆ. ವಿಜಯಲಕ್ಷ್ಮಿ

ಮಾರ್ಗದರ್ಶಕರು

ಡಾ. ಎ. ಸುಬ್ಬಣ್ಣ ರೈ
ಪ್ರಾಧ್ಯಾಪಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೨

ಪರಿವಿಡಿ

ಅಧ್ಯಾಯ-೧

ಅಧ್ಯಯನದ ಉದ್ದೇಶ - ವ್ಯಾಪ್ತಿ ಮತ್ತು ಪೂರ್ವ ಪ್ರಮೇಯ

ಒಂದು ಕಾಲಕ್ಕೆ ಸಿನಿಮಾದ ಬಗೆಗಿನ ಚರ್ಚೆಗೆ, ವಿಮರ್ಶೆಗೆ ಅಷ್ಟೊಂದು ಅವಕಾಶವಿರಲಿಲ್ಲ. ಪ್ರಾರಂಭದ ದಿನಗಳಲ್ಲಿ ಕೆಲವು ಪತ್ರಿಕೆಗಳು ಕೆಲವು ಚಿತ್ರಗಳ ಬಗೆಗಿನ ಮಾಹಿತಿಯನ್ನಷ್ಟೇ ಪ್ರಕಟಿಸುತ್ತಿದ್ದವು. ಅಂದರೆ ಯಾವ್ಯಾವ ಚಿತ್ರ ಮಂದಿರಗಳಲ್ಲಿ ಯಾವ್ಯಾವ ಚಿತ್ರ ಪ್ರದರ್ಶನಗೊಳ್ಳುತ್ತಿವೆ? ಅದರ ನಟ-ನಟಿ ನಿರ್ದೇಶಕರು ಯಾರ್ಯಾರು? ಇತ್ಯಾದಿ ಮಾಹಿತಿಗಳಷ್ಟೇ ಅಲ್ಲಲ್ಲಿ ಪ್ರಕಟವಾಗುತ್ತಿದ್ದವು. ಬರಬರುತ್ತಾ ಕೆಲವು ಪತ್ರಿಕೆಗಳು ಸಿನಿಮಾಗಳ ರಂಜನಾತ್ಮಕ ಮಾಹಿತಿ-ಸುದ್ದಿಗಳನ್ನು ಆಕರ್ಷಕ ಛಾಯಾಚಿತ್ರಗಳೊಂದಿಗೆ ಪ್ರಕಟಿಸ ತೊಡಗಿದವು. ದಿನ ಕಳೆದಂತೆ ಚಿತ್ರ ವಿಮರ್ಶೆಗಳೂ ಕೆಲವು ಪತ್ರಿಕೆಗಳಲ್ಲಿ ಪ್ರಾರಂಭವಾದವು. ಇತ್ತೀಚಿನ ದಿನಗಳಲ್ಲಂತೂ ದೂರದರ್ಶನದ ವಿವಿಧ ವಾಹಿನಿಗಳು ಚಿತ್ರ ಪ್ರದರ್ಶನದ ಜತೆಗೆ, ಚಿತ್ರಗಳ ಕುರಿತಾದ ಮಾಹಿತಿ-ಚರ್ಚೆ ಹಾಗೂ ಪ್ರೇಕ್ಷಕರ-ಅಭಿಪ್ರಾಯ ಇತ್ಯಾದಿಗಳನ್ನು ಪ್ರಸಾರ ಮಾಡತೊಡಗಿವೆ. ಇವೆಲ್ಲವುಗಳ ಜತೆಗೆ ಸಿನಿಮಾದ ರಸಗ್ರಹಣದ ಕುರಿತು, ಅವರ ವಿವಿಧ ಪರಿಕರಗಳ ಕುರಿತು, ಪರಿಕಲ್ಪನೆಗಳ ಕುರಿತು ಅಧ್ಯಯನ ಪೂರ್ಣ ಲೇಖನ, ಪುಸ್ತಕಗಳೂ ಪ್ರಕಟಗೊಳ್ಳುತ್ತಿವೆ. ಅನ್ಯ ರಾಜ್ಯಗಳ ವಿಶ್ವವಿದ್ಯಾಲಯಗಳಲ್ಲಿ ಸಿನಿಮಾ ಸಂಶೋಧನಾ ವಿಷಯವಾಗಿ ಬಹಳ ಹಿಂದೆಯೇ ಪ್ರವೇಶ ಪಡೆದಿತ್ತು. ಈಚಿನ ವರ್ಷಗಳಲ್ಲಿ ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲೂ ಸಿನಿಮಾಕ್ಕೆ ಸಂಬಂಧಪಟ್ಟ ಗಂಭೀರ ಅಧ್ಯಯನಗಳು ನಡೆಯ ತೊಡಗಿವೆ. ಸಿನಿಮಾದ ವಿವಿಧ ಪರಿಕರ - ಪರಿಕಲ್ಪನೆಗಳ ಕುರಿತು ಎಂ.ಫಿಲ್, ಪಿಎಚ್.ಡಿ, ಡಿ.ಲಿಟ್ ಪದವಿಗಾಗಿ ಸಂಶೋಧನಾ ಪ್ರಬಂಧಗಳು ಸಿದ್ಧಗೊಂಡು ಮಂಡನೆಯಾಗುತ್ತಿವೆ. ಬೆರಳೆಣಿಕೆಯಲ್ಲಿರುವ ಅಂಥ ಕೆಲವು ಅಧ್ಯಯನಗಳನ್ನು ಇಲ್ಲಿ ಗಮನಿಸಬಹುದು.

''ಕನ್ನಡ ಚಲನ ಚಿತ್ರಗಳಲ್ಲಿ ಸ್ತ್ರೀ''; ಎಂ.ಪೂರ್ವಾಚಾರ್ ; ಕುವೆಂಪು ವಿಶ್ವವಿದ್ಯಾಲಯ; ೧೯೯೬

''ಕನ್ನಡ ವೃತ್ತಿರಂಗಭೂಮಿ ಮತ್ತು ಚಲನಚಿತ್ರರಂಗ ಒಂದು ತಾಲನಿಕ ಅಧ್ಯಯನ'' ಗಂಜೀಹಾಳ ಪ್ರಭುದೇವ ; ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ; ೨೦೦೨.

''ಕನ್ನಡ ಕಾದಂಬರಿ ಆಧಾರಿತ ಚಲನಚಿತ್ರಗಳ ಅಧ್ಯಯನ'' ಮಾನಸ ಕೆ.ವಿ ; ಕುವೆಂಪು ವಿಶ್ವವಿದ್ಯಾಲಯ; ೨೦೦೩.

Contents, morles and values in Girish Kasaravalli`s cinema ; father Richard Rego ; Puna University 2003.

''ಕನ್ನಡ ರಂಗಭೂಮಿ ಮತ್ತು ಚಲನ ಚಿತ್ರರಂಗಕ್ಕೆ ಡಾ|| ರಾಜ್‌ಕುಮಾರ್ ಕೊಡುಗೆ'' ಗುರುಮೂರ್ತಿ .ಡಿ ; ಮೈಸೂರು ವಿ.ವಿ.೨೦೦೫. ಮುಂತಾದವುಗಳು ಕರ್ನಾಟಕ ವಿವಿಧ ವಿಶ್ವವಿದ್ಯಾಲಯಗಳಿಗೆ ಪಿ ಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧಗಳಾಗಿವೆ. ಸಿ.ಸಿತಾರಾಮ್ ಅವರ ಎನ್.ಲಕ್ಷ್ಮೀನಾರಾಯಣ ಒಂದು ಅಧ್ಯಯನ ಎಂಬುದು ಕನ್ನಡ ವಿಶ್ವವಿದ್ಯಾಲಯಕ್ಕೆ ಡಿಲಿಟ್ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧವಾಗಿದೆ. ಈ ಮಹಾಪ್ರಬಂಧದಲ್ಲಿ ಕನ್ನಡ ಚಲನಚಿತ್ರಗಳಲ್ಲಿ ಸ್ತ್ರೀ, ಕನ್ನಡ ರಂಗಭೂಮಿ ಮತ್ತು ಚಲನ ಚಿತ್ರರಂಗಕ್ಕೆ ರಾಜ್ ಕೊಡುಗೆ, ಎನ್ ಲಕ್ಷ್ಮೀನಾರಾಯಣ ಒಂದು ಅಧ್ಯಯನ ಇವುಗಳು ಪುಸ್ತಕ ರೂಪದಲ್ಲೂ ಪ್ರಕಟವಾಗಿವೆ.ಇವಲ್ಲದೆ ಕರ್ನಾಟಕದ ಬೇರೆಬೇರೆ ವಿಶ್ವವಿದ್ಯಾಲಯಗಳಲ್ಲಿ ಸಿನಿಮಾ ಕ್ಷೇತ್ರಕ್ಕೆ ಸಂಬಂಧ ಪಟ್ಟ ವಿವಿಧ ಅಧ್ಯಯನಗಳು ಪ್ರಗತಿಯಲ್ಲಿವೆ.''ಕನ್ನಡ ಚಲನಚಿತ್ರ ಮತ್ತು ಕನ್ನಡ ಭಾಷೆ; ಪ್ರೇಮಪಲ್ಲವಿ ಸಿ.ಬಿ. ಕನ್ನಡ ವಿಶ್ವವಿದ್ಯಾಲಯ ಹಂಪಿ. ''ನಾಡು ನುಡಿ ಕಥನಗಳಾಗಿ ರಾಜ್ ಚಿತ್ರಗಳು'' ಮಂಜುನಾಥ್ ; ಮಂಗಳೂರು ವಿಶ್ವವಿದ್ಯಾನಿಲಯ ಮುಂತಾದವುಗಳನ್ನು ಇಲ್ಲಿ ಉದಾಹರಿಸಬಹುದಾಗಿದೆ.

ಇವುಗಳ ಜೊತೆಗೆ ಸಿನಿಮಾಕ್ಕೆ ಸಂಬಂಧಪಟ್ಟ ಇತರ ಕೆಲವು ಪ್ರಕಟಣೆಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ೧೯೮೩ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯವು 'ಸಿನಿಮಾ-ಸರ್ಕಾರ-ಸಮಾಜ' ಎಂಬ ಪುಸ್ತಕವೊಂದನ್ನು ಪ್ರಕಟಿಸಿತು. ಕನ್ನಡ ಸಾಹಿತ್ಯ ಪರಿಷತ್ತು ಕೂಡಾ ಕರ್ನಾಟಕದ ಕಲೆಗಳು ಮಾಲಿಕೆಯಲ್ಲಿ ಸಿನಿಮಾಕ್ಕೂ ತಕ್ಕಮಟ್ಟಿನ ಪ್ರಾತಿನಿಧ್ಯ ನೀಡಿತು.

ಇತರ ಖಾಸಗಿ ಸಂಸ್ಥೆಗಳೂ ಸಿನಿಮಾದ ಬಗೆಗೆ ಕೆಲವು ಪುಸ್ತಕಗಳನ್ನು ಪ್ರಕಟಿಸಿದವು. ಇವಲ್ಲದೆ ಚಲನ ಚಿತ್ರದ ವಿವಿಧಾಂಗಗಳಿಗೆ ಸಂಬಂಧಪಟ್ಟಂತೆ ಬೇರೆ ಬೇರೆ ಪುಸ್ತಕಗಳಲ್ಲಿ ಪತ್ರಿಕೆಗಳಲ್ಲಿ ಅಧ್ಯಯನ ಪೂರ್ಣ ಲೇಖನಗಳು ಪ್ರಕಟವಾಗುತ್ತಿವೆ. ವಿಚಾರ ಸಂಕೀರಣ, ಸಂವಾದಗಳು ನಡೆಯುತ್ತಿವೆ. ಒಟ್ಟಿನಲ್ಲಿ ಇತ್ತೀಚಿನ ದಿನಗಳಲ್ಲಿ ಸಿನಿಮಾದ ಬಗೆಗೆ ತಕ್ಕಮಟ್ಟಿನ ಗಂಭೀರ ಚಿಂತನೆಗಳು ಅಲ್ಲಲ್ಲಿ ಪ್ರಾರಭವಾಗಿವೆ ಎನ್ನಬಹುದು. ಕನ್ನಡ ವಿಶ್ವ ವಿದ್ಯಾಲಯದ ಪ್ರಸಾರಾಂಗವು ಚಲನ ಚಿತ್ರದ ಇತಿಹಾಸ ಕುರಿತು ಎರಡು ಸಂಪುಟಗಳ ಗ್ರಂಥವನ್ನು ಪ್ರಕಟಿಸಿತು. ಕನ್ನಡ ಪುಸ್ತಕ ಪ್ರಾಧಿಕಾರವೂ ಕನ್ನಡ ಸಿನಿಮಾದ ಬಗೆಗೆ ಪುಸ್ತಕವೊಂದನ್ನು ಪ್ರಕಟಿಸಿದೆ.ಪ್ರಸ್ತುತ ನಿಬಂಧವು ಈ ಹಾದಿಯಲ್ಲಿ ಮತ್ತೊಂದು ಪ್ರಯತ್ನವಾಗಿದೆ.

ಸಿನಿಮಾ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ 'ದೇಸೀ ಸಂಸ್ಕೃತಿ' ಎಂಬ ಪರಿಕಲ್ಪನೆಯನ್ನು ನಿರ್ವಚಿಸಿಕೊಳ್ಳುವುದು ಸ್ವಲ್ಪ ಕಷ್ಟದ ಕೆಲಸವೇ. ವಿದೇಶೀ ತಂತ್ರಜ್ಞಾನ ಮೂಲದ ಜಾಗತಿಕ ಮಟ್ಟದ ಕಲಾ ಮಾಧ್ಯಮವೊಂದು ನಮ್ಮ ದೇಸೀ ಭಾಷೆಗೆ ಪ್ರವೇಶಿಸಿದಾಗಲೇ ಅದರಲ್ಲಿ ಒಂದು ಬಗೆಯ 'ದೇಸೀ ಸಂಸ್ಕೃತಿ' ಯನ್ನು ಗುರುತಿಸಲು ಸಾಧ್ಯವಾಗುತ್ತದೆ. ಹೀಗೆ ಪ್ರಾರಂಭದಲ್ಲಿ ದೇಶ ಭಾಷೆಯ ಮೂಲಕ ಸಿನಿಮಾದಲ್ಲಿ ದೇಸೀ ಸಂಸ್ಕೃತಿ ಕಾಣಿಸಿ ಕೊಂಡಿತೆಂದು ಹೇಳಬಹುದು. ಆದರೆ ಪ್ರಾರಂಭದ ಮೂಕಿ ಚಿತ್ರಗಳನ್ನು ಪರಿಗಣಿಸಿದಾಗ ಭಾಷೆಗೂ ಮುಂಚಿತವಾಗಿ ಕಥಾ ವಸ್ತುವಿನಲ್ಲಿ ದೇಸೀತನ ಕಾಣಿಸಿಕೊಂಡಿತೆಂದು ಹೇಳಬೇಕಾಗುತ್ತದೆ. ಇಂಥ ದೇಸೀ ಸಂಸ್ಕೃತಿಯನ್ನು ಭಾರತದಲ್ಲಿ ಮಾತ್ರವಲ್ಲದೆ ಪ್ರಪಂಚದ ಇತರ ದೇಶಗಳಲ್ಲೂ ಗುರುತಿಸಲು ಸಾಧ್ಯವಾಗುತ್ತದೆ. ಆದರೆ ವಿಭಿನ್ನ ಭಾಷೆ - ಸಂಸ್ಕೃತಿಗಳ ನೆಲೆಯಾಗಿರುವ ಭಾರತದ ಮಟ್ಟಿಗಂತೂ 'ದೇಸೀ ಸಂಸ್ಕೃತಿ' ಎಂಬ ಪರಿಕಲ್ಪನೆಯು ಕೆಲವೊಮ್ಮೆ ಗೊಂದಲಕ್ಕೆ ಈಡಾಗುವುದೂ ಉಂಟು ದೇಸಿ (ದೇಸಿ), ದೇಶೀಯತೆ, ದೇಸಿತನ, ದೇಸೀಸಂಸ್ಕೃತಿ ಎಂಬುವುಗಳು 'ದೇಶ' ಎಂಬುದರಿಂದ ಹುಟ್ಟಿ ಬಂದಿದ್ದರೂ, ಇಂದು 'ದೇಸೀ ಸಂಸ್ಕೃತಿ' ಎಂಬುದು ಅಖಂಡ ದೇಶದ ಕಲ್ಪನೆಯೊಂದಿಗೆ ಅಷ್ಟಾಗಿ ತಳಕು ಹಾಕಿಕೊಂಡಿಲ್ಲ. ಭಾರತದಂತಹ ದೇಶದ ಸಂದರ್ಭದಲ್ಲಿ 'ಅಖಂಡ ದೇಶ' ವೆಂಬ ಪರಿಕಲ್ಪನೆಯನ್ನು ಸಮಕಾಲೀನ ಸಂಸ್ಕೃತಿ ಚಿಂತಕರು ಒಪ್ಪಿಕೊಳ್ಳಲು ಸಿದ್ಧರಿರುವುದಿಲ್ಲ. ಹಾಗಾಗಿ ಇಲ್ಲಿ 'ದೇಸೀ ಸಂಸ್ಕೃತಿ' ಎಂಬುದಕ್ಕೂ ಭಾರತೀಯವೆಂಬ ಅಖಂಡತೆಯ ಕಲ್ಪನೆಗೂ ನೇರವಾದ ಸಂಬಂಧವಿರುವುದಿಲ್ಲ.

ಆದೇನಿದ್ದರೂ ಸಮಕಾಲೀನ ಸಂಸ್ಕೃತಿ ಚಿಂತಕರ ಗ್ರಹಿಕೆಯಂತೆ ಸಾಂಸ್ಕೃತಿಕ ಅನನ್ಯತೆ, ಗ್ರಾಮೀಣ ಸಂಸ್ಕೃತಿ, ಸ್ಥಳೀಯತೆ, ಪ್ರಾದೇಶಿಕತೆ, ಉಪಪ್ರಾದೇಶಿಕತೆ, ಇತ್ಯಾದಿ ಅರ್ಥಗಳಲ್ಲಿ ಪ್ರಸ್ತುತ 'ದೇಸೀ ಸಂಸ್ಕೃತಿ' ಎಂಬುದನ್ನು ಪರಿಭಾವಿಸಬೇಕಾಗುತ್ತದೆ.

'ಕನ್ನಡ ಸಿನಿಮಾ ಮತ್ತು ದೇಸೀ ಸಂಸ್ಕೃತಿ' ಎಂಬ ಶೀರ್ಷಿಕೆಯಲ್ಲಿನ ಕನ್ನಡ ಎಂಬುದನ್ನು 'ದೇಸೀ ಸಂಸ್ಕೃತಿ'ಗೂ ಅನ್ವಯಿಸಿಕೊಂಡು 'ಕನ್ನಡ (ದ) ದೇಸೀ ಸಂಸ್ಕೃತಿ' ಎಂದಿಟ್ಟುಕೊಳ್ಳುವ ಉದ್ದೇಶ ಪ್ರಸ್ತುತ ಅಧ್ಯಯನಕ್ಕಿಲ್ಲ. ಶುದ್ಧಾಂಗವಾಗಿ ಇದುವೇ ಕನ್ನಡದ ದೇಸೀ ಸಂಸ್ಕೃತಿ ಎಂದು ಗುರುತಿಸುವುದೂ ಕಷ್ಟ ಆದುದರಿಂದ 'ದೇಸೀ ಸಂಸ್ಕೃತಿ' ಎಂಬುದನ್ನು 'ಭಾರತೀಯ ಸಂಸ್ಕೃತಿ' ಎಂಬ ವ್ಯಾಪಕವಾದ ಅರ್ಥದಲ್ಲಿ ಗ್ರಹಿಸಿ ಅದರೊಳಗಡೆಯ 'ಕನ್ನಡ ಸಂಸ್ಕೃತಿ' ಹಾಗೂ ಇದರ 'ಬಹು ಸಂಸ್ಕೃತಿ' ಗಳನ್ನು ಸಿನಿಮಾದಲ್ಲಿ ಗುರುತಿಸಲು ಪ್ರಯತ್ನಿಸಲಾಗುವುದು.

ಸಿನಿಮಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಮುನ್ನೆಲೆಯಲ್ಲಿರುವ ಸಂಸ್ಕೃತಿ ಪರಿಕಲ್ಪನೆಯೆಂದರೆ 'ಜನಪ್ರಿಯ ಸಂಸ್ಕೃತಿ'ಯ ಪರಿಕಲ್ಪನೆ ಬಹುತೇಕ ಸಿನಿಮಾಗಳಲ್ಲಿ ಉದ್ಯಮದ ಸರಕಾಗಿ ಈ 'ಜನಪ್ರಿಯ ಸಂಸ್ಕೃತಿ' ಬಳಕೆಗೊಳ್ಳುತ್ತದೆ. 'ಜನಪ್ರಿಯ ಸಂಸ್ಕೃತಿ' ಎಂದಾಗ ಅಲ್ಲಿ ಎಷ್ಟೋ ವೇಳೆ ದೇಶೀಯವಾದುದು, ದೇಶೀಯವಲ್ಲದುದು ಎಂಬ ವ್ಯತ್ಯಾಸವೂ ಅನಿವಾರ್ಯವೆನಿಸುವುದಿಲ್ಲ. ಇಲ್ಲಿ ಸಂಸ್ಕೃತಿಯು ಮನರಂಜನೆಯ ವಸ್ತುವೂ ಆಗುತ್ತದೆ. ಬಹುತೇಕ 'ವಾಣಿಜ್ಯ' ಸಿನಿಮಾಗಳಲ್ಲಿ ಇದು ಸರ್ವೇಸಾಮಾನ್ಯ.

ಸಿನಿಮಾಕ್ಕೆ ಸಂಬಂಧಪಟ್ಟ ಹಾಗೆ ಚರ್ಚೆ ಸಾಧ್ಯವಾಗಬಹುದಾದ ಇನ್ನೊಂದು ಸಂಸ್ಕೃತಿ ಪರಿಕಲ್ಪನೆಯೆಂದರೆ ಈಗಾಗಲೇ ಗಮನಿಸಿದ 'ದೇಸೀ ಸಂಸ್ಕೃತಿ' ಪರಿಕಲ್ಪನೆ. 'ಕನ್ನಡ ಸಿನಿಮಾ ಮತ್ತು ದೇಸೀ ಸಂಸ್ಕೃತಿ ಎಂಬ ವಿಷಯದೊಳಗಡೆ ಸಿನಿಮಾಗಳಲ್ಲಿ ಬಿಂಬಿತವಾಗಿರುವ ಕನ್ನಡತನ, ಕರ್ನಾಟಕತ್ವ, ಈ ನಾಡಿನ ಪ್ರಾದೇಶಿಕತೆ, ಉಪಪ್ರಾದೇಶಿಕತೆ, ಸಾಂಸ್ಕೃತಿಕ ಅನನ್ಯತೆ, ಗ್ರಾಮೀಣ ಸಂಸ್ಕೃತಿ - ಇತ್ಯಾದಿ ಹಲವು ಸಾಂಸ್ಕೃತಿಕ ವಿವರಗಳು ಸಮಾವೇಶಗೊಳ್ಳುತ್ತವೆ. ಬಹುಪಾಲು ಕಲಾತ್ಮಕ ಸಿನಿಮಾಗಳು ಇಲ್ಲಿ ಅಧ್ಯಯನದ ವಸ್ತುಗಳಾಗುತ್ತವೆ. ಪ್ರಾದೇಶಿಕತೆ ಎಂಬ ಹಣೆ ಪಟ್ಟಿ ಹೊತ್ತ ಸಿನಿಮಾಗಳು ಇಲ್ಲಿ ಮುಖ್ಯವಾಗುತ್ತವೆ.

ಜತೆಗೆ ವಾಣಿಜ್ಯ ಚಿತ್ರಗಳೆಂಬ ಹಣೆ ಪಟ್ಟಿ ಹೊತ್ತ ಸಿನಿಮಾಗಳು ಭಾಗಶಃವಾಗಿಯಾದರೂ 'ದೇಸೀ ಸಂಸ್ಕೃತಿ'ಯನ್ನು ಬಿಂಬಿಸುತ್ತಿರುವುದರಿಂದ ಅಂಥ ಕೆಲವು ಸಿನಿಮಾಗಳು ಅಧ್ಯಯನಕ್ಕೆ ಆಕರಗಳಾಗುತ್ತವೆ. ಇಂಥ ಸಿನಿಮಾಗಳಲ್ಲಿ ಬಹುಪಾಲು ಸಿನಿಮಾಗಳು ಕನ್ನಡದ ಪ್ರಸಿದ್ಧ ಬರಹಗಾರರ ಸಾಹಿತ್ಯ ಕೃತಿಗಳನ್ನಾಧರಿಸಿ ನಿರ್ಮಾಣವಾದವುಗಳು, ಅವುಗಳಲ್ಲೂ ಪ್ರಾದೇಶಿಕ ಕಾದಂಬರಿಗಳದೇ ಸಿಂಹಪಾಲು ಎನ್ನಬಹುದು. ಶಿವರಾಮ ಕಾರಂತ, ಕುವೆಂಪು, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಯು.ಆರ್.ಅನಂತಮೂರ್ತಿ, ಚಂದ್ರಶೇಖರ್ ಕಂಬಾರ್, ಶ್ರೀಕೃಷ್ಣ ಆಲನಹಳ್ಳಿ, ಗಿರೀಶ್ ಕಾರ್ನಾಡ್, ರಂ.ಶಾ.ಲೋಕಾಪುರ, ನಾ. ಡಿಸೋಜಾ, ಕುಂ.ವೀರಭದ್ರಪ್ಪ ಬೊಳುವಾರು ಮಹಮ್ಮದ್ ಕುಂಞ, ವಿಶುಕುಮಾರ ಮೊದಲಾದ ಲೇಖಕರ ಕಥೆ - ಕಾದಂಬರಿ - ನಾಟಕಗಳು ಸಿನಿಮಾಗಳಾಗಿ ದೇಸೀ ಸಂಸ್ಕೃತಿಯ ಅಭಿವ್ಯಕ್ತಿಯ ದೃಷ್ಟಿಯಿಂದ ನಮಗೆ ಮುಖ್ಯವಾಗುತ್ತವೆ.

ಸಾಹಿತ್ಯ ಮತ್ತು ಸಿನಿಮಾಗಳ ಸಂಬಂಧದಲ್ಲಿ ಆಧುನಿಕ ಸಾಹಿತ್ಯವನ್ನು ಮಾತ್ರವಲ್ಲದೆ ಮೌಖಿಕ ಸಂಪ್ರದಾಯದ ದೇಸೀ ಸಾಹಿತ್ಯವನ್ನು ಪರಿಗಣಿಸಲಾಗುವುದು. ಕನ್ನಡದ ಮೈಲಾರಲಿಂಗ, ಮಂಟೇಸ್ವಾಮಿ, ಮಲೇಮಾದೇಶ್ವರದಂಥ ಕಾವ್ಯಗಳು, ಸಂಗ್ಯಾಬಾಳ್ಯಾದಂಥ ಜನಪದ ರಂಗಭೂಮಿ ಸಾಹಿತ್ಯಗಳು, ಮೌಖಿಕ ಪರಂಪರೆಯಿಂದ ಲಿಖಿತ ಸಾಹಿತ್ಯರೂಪಕ್ಕಿಳಿದು ನಂತರ ಸಿನಿಮಾವಾದ ನಾಗಮಂಡಲದಂಥ ಕಥೆಗಳು ಇಲ್ಲಿ ವಿಶ್ಲೇಷಣೆಗೊಳಪಡುತ್ತವೆ. ಒಟ್ಟಿನಲ್ಲಿ ಸಿನಿಮಾ ಒಂದು ಕಲಾಮಾಧ್ಯಮವೆಂಬ ವಾಸ್ತವವನ್ನು ನೆನಪಿನಲ್ಲಿಟ್ಟು ಕೊಂಡೇ ಅಂದರೆ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಮುಖಗಳನ್ನು ಇಲ್ಲಿ ಅಧ್ಯಯನಕ್ಕೊಳ ಪಡಿಸಲಾಗುವುದು.

ಸಿನಿಮಾ ಮತ್ತು ದೇಸೀ ಸಂಸ್ಕೃತಿ ಎಂಬ ವಿಷಯದ ಕುರಿತು ಅಧ್ಯಯನ ನಡೆಸುವ ಸಂದರ್ಭದಲ್ಲಿ ಕೇವಲ ಸಾಹಿತ್ಯ ಕೇಂದ್ರಿತ ಚರ್ಚೆಯಷ್ಟೆ ಮುಖ್ಯವಾಗುವುದಿಲ್ಲ. ನಿರ್ದೇಶಕ ಕೇಂದ್ರಿತ ಚರ್ಚೆಯೂ ಮುಖ್ಯವಾಗುತ್ತದೆ. ಸಿನಿಮಾವೊಂದರಲ್ಲಿ ದೇಸೀ ಸಂಸ್ಕೃತಿಯನ್ನು ಬಿಂಬಿಸುವಲ್ಲಿ ನಿರ್ದೇಶಕರ ಪಾತ್ರವೇ ಪ್ರಮುಖವಾಗಿರುತ್ತದೆ. ಸಿದ್ಧಲಿಂಗಯ್ಯ, ಗಿರೀಶ್ ಕಾಸರವಳ್ಳಿ, ಟಿ. ಎಸ್. ನಾಗಾಭರಣ, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ, ಬರಗೂರು ರಾಮಚಂದ್ರಪ್ಪ, ಎ.ಜಿ.ಶೇಷಾದ್ರಿ, ಶಿವರಾಮಕಾರಂತ, ಕವಿತಾಲಂಕೇಶ್, ಸುಂದರ ಕೃಷ್ಣ ಅರಸ್, ಜಯಮಾಲಾ,

ಸೌಂದರ್ಯ ಮುಂತಾದ ನಿರ್ದೇಶಕರ ಚಿತ್ರಗಳು ದೇಸೀ ಸಂಸ್ಕೃತಿಯ ಅಭಿವ್ಯಕ್ತಿಯ ದೃಷ್ಟಿಯಿಂದ ಅತ್ಯಂತ ಪ್ರಸ್ತುತವೆನಿಸುತ್ತವೆ.

ನಮ್ಮಲ್ಲಿ ಸಾಹಿತ್ಯದ ಬೆಳವಣಿಗೆಗೂ, ಸಿನಿಮಾಕ್ಕೂ ಒಂದು ಬಗೆಯ ಅವಿನಾಭಾವ ಸಂಬಂಧವಿದ್ದಂತಿದೆ. ಕನ್ನಡ ಸಿನಿಮಾ ವಿವಿಧ ಸಾಹಿತ್ಯ ಪಂಥಗಳೊಂದಿಗೆ ಗುರುತಿಸಿ ಕೊಂಡುದ್ದನ್ನೂ ಕಾಣುತ್ತೇವೆ. ಹಾಗಾಗಿ ಸಿನಿಮಾಗಳಲ್ಲಿ ದೇಸೀ ಸಂಸ್ಕೃತಿಯ ಯಥಾವತ್ ಚಿತ್ರಣವನ್ನಷ್ಟೆ ಅಲ್ಲದೆ, ಸಾಂಸ್ಕೃತಿಕ ಸಂಘರ್ಷದ ನೆಲೆಗಳನ್ನೂ ಕಾಣಲು ಸಾಧ್ಯವಾಗುತ್ತದೆ. ಕೇಸರಿ ಹರವೂ ಅವರ 'ಭೂಮಿಗೀತ' ಚಿತ್ರದಲ್ಲಿ ಬುಡಕಟ್ಟು ಸಂಸ್ಕೃತಿಗೂ, ಆಧುನಿಕತೆಗೆ ಪ್ರತೀಕವಾದ ಸರಕಾರಕ್ಕೂ ನಡುವೆ ಸಂಘರ್ಷವೇರ್ಪಡುತ್ತದೆ. ಬರಗೂರು ರಾಮಚಂದ್ರಪ್ಪ ಅವರ ಬಹುಪಾಲು ಚಿತ್ರಗಳು ಇಂಥ ಸಾಂಸ್ಕೃತಿಕ ಸಂಘರ್ಷಗಳನ್ನೇ ವಸ್ತುವಾಗಿರಿಸಿಕೊಂಡಿವೆ. ಕರಡೀಪುರ, ಹಗಲುವೇಷದಂಥ ಅವರ ಸಿನಿಮಾಗಳೂ ಇದಕ್ಕೆ ಉತ್ತಮ ಉದಾಹರಣೆಗಳಾಗುತ್ತವೆ. ಇದು ಬಂಡಾಯ ಚಳುವಳಿ ಹಾಗೂ ಸಾಹಿತ್ಯದ ಮೂಲಕ ಕಾಣಿಸಿಕೊಂಡ ವೈಚಾರಿಕತೆಯ ಫಲವೂ ಹೌದು.

ವಿವಿಧ ಸಾಮುದಾಯಿಕ ಸಂವೇದನೆಗಳಲ್ಲೂ ನಾವು ದೇಸೀ ಸಂಸ್ಕೃತಿಯನ್ನು ಕಾಣಲು ಸಾಧ್ಯವಾಗುತ್ತದೆ. ಮುಸ್ಲಿಂ ಸಂವೇದನೆ, ದಲಿತ ಸಂವೇದನೆ, ಬುಡಕಟ್ಟು ಸಂವೇದನೆ, ಅಲೆಮಾರಿ ಸಂವೇದನೆ, ಶ್ರಮಿಕ (ಕೃಷಿಕ) ಸಂವೇದನೆ ಇತ್ಯಾದಿಗಳು ದೇಸೀ ಸಂಸ್ಕೃತಿಯ ಸಂವೇದನೆಯ ನೆಲೆಗಳಾಗಿ ಸಿನಿಮಾಗಳಲ್ಲಿ ಚಿತ್ರಿತವಾಗಿವೆ. 'ಮುನ್ನುಡಿ'ಯ ಮುಸ್ಲಿಂ ಸಂವೇದನೆಯಲ್ಲಿ ಸಂಘರ್ಷ-ಪ್ರತಿಭಟನೆಯ ನೆಲೆಯೂ ಇದೆ. 'ಚೋಮನ ದುಡಿ'ಯು ದಲಿತ ಸಂವೇದನೆಯ ಜೊತೆಗೆ ಶ್ರಮಿಕ ಸಂವೇದನೆಯನ್ನು ಒಳಗೊಂಡಿದೆ. 'ಮಲೆಯ ಮಕ್ಕಳು', 'ಭೂಮಿಗೀತ'ದಂಥ ಸಿನಿಮಾಗಳಲ್ಲಿ ಬುಡಕಟ್ಟು ಸಂವೇದನೆಯೇ ಕೇಂದ್ರ ಬಿಂದುವಾಗಿದೆ. ಕವಿತಾ ಲಂಕೇಶರ 'ಅಲೆಮಾರಿ' ಸಿನಿಮಾದಲ್ಲಿ ಲಂಬಾಣಿ ಸಮುದಾಯದ ಬೇನೆ ಬೇಸರಗಳು ಚಿತ್ರಿತವಾಗಿವೆ. 'ದ್ವೀಪ' ಸಿನಿಮಾದಲ್ಲಿ ಕೃಷಿಕ ಸಮುದಾಯದ ಸಂವೇದನೆ ಅಭಿವ್ಯಕ್ತವಾಗಿದೆ.

ಹೀಗೆ ಸಿನಿಮಾದಲ್ಲಿ 'ದೇಸೀ ಸಂಸ್ಕೃತಿ'ಯ ನೆಲೆಯನ್ನು ನಾವು ನಿರ್ದಿಷ್ಟ ಪ್ರಾದೇಶಿಕತೆಯಲ್ಲಿ ಉಪ ಪ್ರಾದೇಶಿಕತೆಯಲ್ಲಿ, ಭಾಷೆಯಲ್ಲಿ, ಉಡುಗೆ - ತೊಡುಗೆಗಳಲ್ಲಿ, ಆಚಾರ - ವಿಚಾರಗಳಲ್ಲಿ

ಹಬ್ಬ - ಹರಿದಿನಗಳಲ್ಲಿ, ಆಟ - ಕೂಟಗಳಲ್ಲಿ, ಸಾಹಿತ್ಯ ಕಲೆಗಳಲ್ಲಿ ಗುರುತಿಸಿ ಅಧ್ಯಯನ ನಡೆಸಬಹುದಾಗಿದ.

'ದೇಸೀ ಸಂಸ್ಕೃತಿ' ಎಂದಾಗ ನಾವು 'ನಗರ ಸಂಸ್ಕೃತಿ'ಯನ್ನು ಸಂಪೂರ್ಣವಾಗಿ ಹೊರತುಪಡಿಸಿ ಮಾತನಾಡುವುದಿಲ್ಲ 'ದೇಸೀ ಸಂಸ್ಕೃತಿ'ಯ ಸಂದರ್ಭದಲ್ಲಿ ಗ್ರಾಮೀಣ ಸಂಸ್ಕೃತಿಯೇ ಮುನ್ನೆಲೆಯಲ್ಲಿ ನಿಲ್ಲುತ್ತದಾದರೂ ತತ್ಸಂಬಂಧವಾದ ಚರ್ಚೆಯ ಸಂದರ್ಭದಲ್ಲಿ ನಗರ ಸಂಸ್ಕೃತಿಯೂ ಪರಿಗಣನೆಗೆ ಬರುತ್ತದೆ. ಬಹುಪಾಲು ಸಿನಿಮಾಗಳಲ್ಲಿ ಗ್ರಾಮೀಣ ಸಂಸ್ಕೃತಿ ಹಾಗೂ ನಗರ ಸಂಸ್ಕೃತಿಗಳೊಳಗೆ ಒಂದಲ್ಲ ಒಂದು ರೀತಿಯ ಸಂಘರ್ಷ ವೇರ್ಪಡುತ್ತದೆ. ಕಾರಂತರ ಕಾದಂಬರಿಯನ್ನಾಧರಿಸಿ ಟಿ. ಎಸ್. ನಾಗಭರಣ ಅವರ ನಿರ್ದೇಶನದಲ್ಲಿ ನಿರ್ಮಾಣಗೊಂಡ 'ಚಿಗುರಿದ ಕನಸು ಲಿಂಗದೇವರು ನಿರ್ದೇಶನದ ಕಾಡಬೆಳದಿಂಗಳು ಸಿನಿಮಾಗಳು ಈ ಮಾದರಿಗೆ ಇತ್ತೀಚಿನ ಉದಾಹರಣೆ ಎನ್ನಬಹುದು.

ಗ್ರಾಮೀಣ ಸಂಸ್ಕೃತಿ ಮತ್ತು ನಗರ ಸಂಸ್ಕೃತಿಗಳೊಳಗಿನ ಸಂಘರ್ಷ 'ವಾಣಿಜ್ಯ ಚಿತ್ರ'ಗಳೆಂದು ಪರಿಗಣಿತವಾದ ಸಿನಿಮಾಗಳಲ್ಲೂ ಇಲ್ಲದಿಲ್ಲ. ಅಲ್ಲಿ ಈ ತೆರನಾದ ಸಂಘರ್ಷ—ಒಂದು ಜನಪ್ರಿಯ ಮಾದರಿಯಾಗಿ ಬೆಳೆದು ಬಂದಿದೆ. ಅಂಥ ಸಿನಿಮಾಗಳಲ್ಲಿ ಸಾಮಾನ್ಯವಾಗಿ ಹೆಣ್ಣುನಗರ ಸಂಸ್ಕೃತಿಯ ಪ್ರತೀಕವಾಗಿಯೂ ಗಂಡು ಗ್ರಾಮೀಣ ಇಲ್ಲವೆ ಶ್ರಮಿಕ (ಕೃಷಿಕ) ಸಂಸ್ಕೃತಿಯ ಪ್ರತೀಕವಾಗಿಯೂ ಚಿತ್ರಿತವಾಗಿರುತ್ತಾರೆ. ನಗರ ಸಂಸ್ಕೃತಿ (ಪ್ರತಿನಿಧಿ)ಯಿಂದ ಬಗೆ ಬಗೆಯ ಅವಹೇಳನಕ್ಕೆ, ತಾತ್ಸಾರಕ್ಕೆ ಒಳಗಾಗುವ ಗ್ರಾಮೀಣ ಸಂಸ್ಕೃತಿಯು ಕೊನೆಗೆ ಮೇಲುಗೈ ಸಾಧಿಸುತ್ತದೆ. ಇದು ಸಿನಿಮಾಗಳಲ್ಲಿ ಜನಪ್ರಿಯ ಮಾದರಿಯಾಗಿ ಬೆಳೆದು ಬಂದಿದ್ದರೂ, ಇಲ್ಲೂ ಕೂಡ ಒಂದು ಬಗೆಯ 'ದೇಸೀ ಸಂಸ್ಕೃತಿ'ಯ ಪ್ರತಿಪಾದನೆಯಿರುವುದನ್ನು ಅಲ್ಲಗಳೆಯುವಂತಿಲ್ಲ.

ಸಿನಿಮಾಗಳ ಕ್ಷೇತ್ರ ವ್ಯಾಪ್ತಿಗೆ ಸಂಬಂಧಪಟ್ಟಂತೆ ಕನ್ನಡ ನಾಡನ್ನು ಒಂದು ಅಖಂಡ ಘಟಕವಾಗಿ ಪರಿಗಣಿಸಬಹುದಾದರೆ 'ದೇಸೀ ಸಂಸ್ಕೃತಿ' ಎಂದಾಗ ಅದನ್ನು ಇನ್ನೂ ಕೆಲವು ಪ್ರಾದೇಶಿಕ, ಉಪ ಪ್ರಾದೇಶಿಕ ಘಟಕಗಳಾಗಿ ಒಡೆಯಬೇಕಾಗುತ್ತದೆ ಈಗಾಗಲೇ ರೂಢಿಯಲ್ಲಿರುವ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕರಾವಳಿ ಕರ್ನಾಟಕ ಅದೇ ರೀತಿ ಬಯಲು ಸೀಮೆ, ಮಲೆನಾಡು

[illegible]

ಎಂಬ ವಿಭಾಗ ಕ್ರಮಗಳನ್ನು ಹೆಚ್ಚು ಕಡಿಮೆ ಸಿನಿಮಾ ಸಂದರ್ಭದಲ್ಲೂ ಅನ್ವಯಿಸಿಕೊಳ್ಳಬಹುದೆಂದು ತೋರುತ್ತದೆ. ಈ ಪ್ರತಿಯೊಂದು ಪ್ರಾದೇಶಿಕ ಘಟಕದ ಭಾಷೆ ಹಾಗೂ ಒಟ್ಟಾರೆ ಜೀವನ ಕ್ರಮ ವಿಶಿಷ್ಟವಾಗಿರುತ್ತದೆ. ಇದು ಆಯಾ ಪ್ರದೇಶಗಳ ದೇಸೀ ಸಂಸ್ಕೃತಿಯೂ ಹೌದು, ಕನ್ನಡ ಸಿನಿಮಾಗಳಲ್ಲಿ ಇವೆಲ್ಲಾ ಹೇಗೆ ಬಿಂಬಿತವಾಗಿವೆ ಎಂಬುದನ್ನು ಕಂಡುಕೊಳ್ಳುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿರುತ್ತದೆ.

ಹೇಳಿಕೇಳಿ ಸಿನಿಮಾ ಎಂಬುದು ಒಂದು ಕಲಾಮಾಧ್ಯಮ. ಕಲೆಯ ಮೂಲಉದ್ದೇಶ ಮನಸ್ಸಿಗೆ ಮುದ ನೀಡುವುದು. ಜತೆಗೆ ಜೀವನ ಮೌಲ್ಯದ ಪ್ರತಿಪಾದನೆ, ಅರಿವಿನ ಪರಿಧಿಯ ವಿಸ್ತರಣೆ ಇತ್ಯಾದಿ ಉದ್ದೇಶಗಳೂ ಕಲೆಯ ಮೂಲಕ ಸಾಧಿತವಾಗಬಹುದು. ಒಂದು ಸಮಷ್ಟಿ ಕಲಾಮಾಧ್ಯಮವಾದ ಸಿನಿಮಾದಲ್ಲಿ ಇಂಥ ವಿವಿಧೋದ್ದೇಶಗಳ ಈಡೇರಿಕೆಗೆ ವಿಪುಲ ಅವಕಾಶಗಳಿವೆ. ಕಲೆಗಾಗಿ ಕಲೆ ಎಂಬ ಮಾತನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಇಂದು ಸಿನಿಮಾ ಒಂದು ಉದ್ಯಮವಾಗಿ ಬೆಳೆದು ನಿಂತಿದೆ. ಹಾಗಾಗಿ ಸಂಸ್ಕೃತಿಯೂ ಸೇರಿದಂತೆ ಸಿನಿಮಾದ ಸರ್ವಾಂಗಗಳು ಉದ್ಯಮದ ಸರಕಾಗುವುದಿಲ್ಲವೇ? 'ಉದ್ಯಮ' (ಚಿತ್ರೋದ್ಯಮ) ಎನ್ನುವುದು ಕೇವಲ 'ವಾಣಿಜ್ಯ ಚಿತ್ರ'ಗಳೆಂದು ಹಣೆಪಟ್ಟಿ ಹಚ್ಚಿಸಿಕೊಂಡ ಸಿನಿಮಾಗಳಿಗಷ್ಟೆ ಸಂಬಂಧಪಟ್ಟದ್ದೇ? ಕಲಾತ್ಮಕ ಚಿತ್ರಗಳೆಂದು ಪರಿಗಣಿತವಾದ ಸಿನಿಮಾಗಳು 'ಉದ್ಯಮ' ಕ್ಕೆ ಹೊರತಾಗಿ ನಿಲ್ಲುತ್ತವೆಯೇ? ಸಿನಿಮಾಕ್ಕೆ ಸಂಬಂಧಪಟ್ಟಂತೆ ಕಲೆ-ಸಾಹಿತ್ಯ-ಸಂಸ್ಕೃತಿಗಳ ಕುರಿತು ಚರ್ಚೆ ನಡೆಸುವಾಗ 'ಉದ್ಯಮ'ದ ಕಲ್ಪನೆ ಗೌಣವಾಗಬೇಕೆ? ಇತ್ಯಾದಿ ಗೊಂದಲಗಳು ಇಲ್ಲಿ ಸರ್ವೇ ಸಾಮಾನ್ಯ.

ಇನ್ನೊಂದು ಸಂಗತಿಯೂ ಇಲ್ಲಿ ಮುಖ್ಯವೆನಿಸುತ್ತದೆ. ಯಾವುದೇ ಕಲೆಯಾಗಲೀ (ವಿಶೇಷತ : ಪ್ರದರ್ಶನಕಲೆ) ಅದು ಪ್ರೇಕ್ಷಕರ ಅಭಿರುಚಿಗೆ ತಕ್ಕಂತೆ ರೂಪುಗೊಳ್ಳಬೇಕೇ? ಅಥವಾ ಸ್ವತಃ ಅದುವೇ ಪ್ರೇಕ್ಷಕರ ಅಭಿರುಚಿಯನ್ನು ರೂಪಿಸಬೇಕೆ? ಉದ್ಯಮವಾಗಿ ಬೆಳೆದು ನಿಂತ ಸಿನಿಮಾದ ಸಂದರ್ಭದಲ್ಲಿ ಇಂಥ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವುದು ಅಷ್ಟು ಸುಲಭವಲ್ಲ. ಇಂದು ಪ್ರೇಕ್ಷಕರ ಅಭಿರುಚಿಗೆ ತಕ್ಕಂತೆ ಸಿನಿಮಾವನ್ನು ನಿರ್ಮಿಸಿದರೆ ಅದು ವಾಣಿಜ್ಯ ದೃಷ್ಟಿಯಿಂದ ಯಶಸ್ವಿಯಾಗಬಹುದು ; ಅದುವೇ ಪ್ರೇಕ್ಷಕಾಭಿರುಚಿಯನ್ನು ರೂಪಿಸಲು ಅಥವಾ ತಿದ್ದಲು

ಹೊರಟಲ್ಲಿ ಅಂಥ ಸಿನಿಮಾಗಳಿಗೆ ವಾಣಿಜ್ಯ ದೃಷ್ಟಿಯಿಂದ ಸೋಲಾಗಬಹುದು. ಇದೇ ವೇಳೆ 'ಲೋಕೋಭಿನ್ನರುಚಿ :' ಎಂದ ಹಾಗೆ ವಿವಿಧ ಬಗೆಯ ಅಭಿರುಚಿಯನ್ನು ಬೆಳೆಸಿಕೊಂಡ ಪ್ರೇಕ್ಷಕರ ವರ್ಗವೂ ಇದೆಯೆಂಬುದನ್ನು ಮರೆಯುವ ಹಾಗಿಲ್ಲ. ಆದರೂ 'ದೇಸೀ ಸಂಸ್ಕೃತಿ'ಯ ಪ್ರತಿಪಾದನೆಯುಳ್ಳ ಶುದ್ಧ ಕಲಾತ್ಮಕ ಸಿನಿಮಾಗಳನ್ನು ನೋಡಿ ಮೆಚ್ಚಿಕೊಳ್ಳುವ ಪ್ರೇಕ್ಷಕರೆಷ್ಟು ಮಂದಿಯಿದ್ದಾರೆ? ನಿಧಾನಗತಿಯ ಚಲನೆಯುಳ್ಳ ಹಾಡು-ಕುಣಿತಗಳೂ ಕಡಿಮೆಯಿರುವ ಇಂಥ ಸಿನಿಮಾಗಳು ಅನೇಕ ವೇಳೆ ಪ್ರಶಸ್ತಿ ಸಮಿತಿಯ ತೀರ್ಪುಗಾರರಿಗಷ್ಟೇ ಪ್ರೀಯವಾಗುತ್ತವೆ. ಆದಕ್ಕಾಗಿಯೇ ಇರಬೇಕು. ಇತ್ತೀಚಿನ ವರ್ಷಗಳಲ್ಲಿ 'ವಾಣಿಜ್ಯ' ಮತ್ತು 'ಕಲಾತ್ಮಕ' ಸಿನಿಮಾಗಳ ನಡುವಿನ ಗೋಡೆಯನ್ನು ಒಡೆಯುವ ಪ್ರಯತ್ನ ನಡೆಯುತ್ತಿರುವುದು. ಇವೆಲ್ಲಾ ಪ್ರಸ್ತುತ ಅಧ್ಯಯನದ ಪೂರಕ ಚರ್ಚೆಗಳಾಗುತ್ತವೆ. ಈ ಚರ್ಚೆಗಳ ಸಹಾಯದಿಂದ 'ದೇಸೀ ಸಂಸ್ಕೃತಿ' ಎಂದರೆ ಯಾವುದು? ಅದು ಕನ್ನಡ ಸಿನಿಮಾಗಳಲ್ಲಿ ಹೇಗೆ ಅಭಿವ್ಯಕ್ತಿಗೊಂಡಿದೆ? ಅ ನಿರ್ದಿಷ್ಟ ಸಂಸ್ಕೃತಿಯನ್ನು ಒಂದು ಪರಿಪೂರ್ಣ ಕಲೆಯಾಗಿಸುವಲ್ಲಿ ನಿರ್ದೇಶಕರೂ ಸೇರಿದಂತೆ ಒಟ್ಟು ಚಿತ್ರತಂಡದ ಪಾತ್ರವೇನು? ಆ ನಿರ್ದಿಷ್ಟ ಸಂಸ್ಕೃತಿಯು ಎಷ್ಟರ ಮಟ್ಟಿಗೆ ಸಂಬಂಧಪಟ್ಟ ಸಿನಿಮಾದಲ್ಲಿ ಒಂದು ಪರಿಪೂರ್ಣ ಕಲೆಯಾಗಿ ಪುನರ್ ಸೃಷ್ಟಿಗೊಂಡಿದೆಯೇ? ಇತ್ಯಾದಿ ಅಂಶಗಳನ್ನು ಕಂಡುಕೊಳ್ಳುವುದೇ ಇಲ್ಲಿನ ಪ್ರಮುಖ ಉದ್ದೇಶವಾಗಿದೆ. ಹಾಗಂತ ಸಿನಿಮಾಗಳ ಮೌ ಲ್ಯಮಾಪನವಾಗಲಿ, ಪ್ರೇಕ್ಷಕಾಭಿರುಯಾಗಲಿ, ನಿಷ್ಕರ್ಷೆ ಯಾಗಲಿ ಪ್ರಸ್ತುತ ಆಧ್ಯಯನದ ಉದ್ದೇಶವಲ್ಲ. ಆವುಗಳಲ್ಲಿ ಆಭಿವ್ಯಕ್ತವಾದ ದೇಸೀ ಸಂಸ್ಕೃತಿ ಅಂಶಗಳನ್ನು ಗುರುತಿಸುವುದಷ್ಟೇ ಇಲ್ಲಿ ಮುಖ್ಯ ಉದ್ದೇಶವಾಗುತ್ತದೆ.

ಸಿನಿಮಾಕ್ಕೆ ಸಂಬಂಧಪಟ್ಟಂತೆ ದೇಸೀ ಸಂಸ್ಕೃತಿ ಚರ್ಚೆಯನ್ನು ಇನ್ನಷ್ಟು ವಿಸ್ತರಿಸಿಕೊಳ್ಳಬೇಕಾದ ಅವಶ್ಯಕತೆ ಇದೆ. ಯಾವುದೇ ಕಲೆಯಾಗಲಿ ಅದು ತನ್ನ ಸುತ್ತಲಿನ ಸಂಸ್ಕೃತಿಯನ್ನು ತನ್ನೊಳಗೆ ಅಳವಡಿಸಿಕೊಂಡು ಬೆಳೆಯುತ್ತದೆ. ಸಿನಿಮಾದ ಸಂದರ್ಭದಲ್ಲೂ ಈ ಮಾತು ಸತ್ಯವೆನಿಸುತ್ತದೆ. ಅದರಂತೆ ವಿದೇಶೀ ತಂತ್ರಜ್ಞಾನ ಮೂಲವಾದ ಸಿನಿಮಾವು ನಮ್ಮ ದೇಶಕ್ಕೆ ಕಾಲಿರಿಸಿದಾಗ ಇಲ್ಲಿನ ಸಂಸ್ಕೃತಿಯ ಅಂಶಗಳನ್ನು ಮೈಗೂಡಿಸಿಕೊಂಡೇ ಬೆಳೆದು ಬಂದಿತು. ಕನ್ನಡ

ಸಿನಿಮಾಗಳಿಗೂ ಈ ಮಾತು ಅನ್ವಯವಾಗುತ್ತದೆ. ಇಲ್ಲಿ ದೇಸೀ ಸಂಸ್ಕೃತಿ ಅಂದಾಗ ಭಾರತೀಯ ಸಂಸ್ಕೃತಿ, ಅದರೊಳಗಡೆಯ ಕರ್ನಾಟಕ ಸಂಸ್ಕೃತಿ, ಅಲ್ಲಿನ ಪ್ರಾದೇಶಿಕ ಸಂಸ್ಕೃತಿ, ಅಲ್ಲಿರುವ ಸಮುದಾಯಗಳ ಸಂಸ್ಕೃತಿ ಇತ್ಯಾದಿ ಅಂಶಗಳೆಲ್ಲ ಸಮಾವೇಶಗೊಳ್ಳುತ್ತವೆ. ಆದುದರಿಂದ ಒಂದು ಹಂತದಲ್ಲಿ ಭಾರತೀಯ ಪುರಾಣ-ಇತಿಹಾಸ, ಜನಪದ-ಜಾನಪದ, ಮೊದಲಾದವುಗಳಲ್ಲಿ ಸಿನಿಮಾಕ್ಕೆ ಅನ್ವಯಿಸಿ, ಇಲ್ಲಿ ಚರ್ಚೆಗೊಳಗಾಗುತ್ತವೆ ಈಗಾಗಲೇ ಗಮನಿಸಿದಂತೆ ಸಮಕಾಲೀನ ಸಂಸ್ಕೃತಿ ಚಿಂತನೆ ಸಂದರ್ಭದಲ್ಲಿ 'ದೇಸೀ ಸಂಸ್ಕೃತಿ' ಪರಿಕಲ್ಪನೆಗೆ ವಿಭಿನ್ನ ವಿಶಿಷ್ಟ ಅರ್ಥವಿರಬಹುದಾದರೂ, ಸಿನಿಮಾಕ್ಕೆ ಸಂಬಂಧಿಸಿದಂತೆ ದೇಸೀ ಸಂಸ್ಕೃತಿಯನ್ನು ಅಧ್ಯಯನಕ್ಕೆ ಒಳಪಡಿಸುವಾಗ ಈ ಎಲ್ಲಾ ಪರಿಪ್ರೇಕ್ಷ್ಯಗಳು ಅನಿವಾರ್ಯವಾಗುತ್ತವೆ. ಹಾಗಾಗಿ ನಿಭಂದದ ಪ್ರಾರಂಭದಲ್ಲಿ ದೇಸೀ ಸಂಸ್ಕೃತಿ ಪರಿಲ್ಪನೆಯನ್ನು ವಿವಿಧ ನೆಲೆಗಳಲ್ಲಿ ವ್ಯಾಖ್ಯಾನಿಸಿಕೊಳ್ಳಲು ಪ್ರಯತ್ನಿಸಲಾಗುವುದು. ಅದೇ ರೀತಿ ಆ ವಿವಿಧ ನೆಲೆಗಳನ್ನು ಕನ್ನಡದ ಸಿನಿಮಾಗಳಲ್ಲಿ ಐತಿಹಾಸಿಕವಾಗಿ ಹೇಗೆ ಗುರುತಿಸಬಹುದೆಂಬುದನ್ನು ವಿವರಿಸಲಾಗುವುದು. ಒಟ್ಟಾರೆಯಾಗಿ ಪ್ರಸ್ತುತ ಅಧ್ಯಯನವು ದೇಸೀ ಸಂಸ್ಕೃತಿ ಕುರಿತಾದ ಸಮಕಾಲಿನ ಚಿಂತನೆಗಷ್ಟೇ ಸೀಮಿತಗೊಳ್ಳುತ್ತದೆ. ಪಾರಂಪರಿಕವಾದ ದೇಶೀ ಪ್ರಜ್ಞೆ, ರಾಷ್ಟ್ರೀಯ ಪ್ರಜ್ಞೆ, ನಾಡು-ನುಡಿಗಳ ಕುರಿತಾದ ಪ್ರಜ್ಞೆ ಇತ್ಯಾದಿ ಅರ್ಥದ ನೆಲೆಗಳಿಗೂ ವಿಸ್ತರಿಸಿ ಕೊಳ್ಳುತ್ತದೆ.

ಅಧ್ಯಯನಕ್ಕೆ ಅದರದೇ ಆದ ಮಿತಿಗಳೂ ಇವೆ. ದೇಸೀ ಸಂಸ್ಕೃತಿ ಎನ್ನುವುದು ಕೇವಲ ಕನ್ನಡ ಸಿನಿಮಾಗಳಿಗಷ್ಟೇ ಅನ್ವಯಿಸುವುದಿಲ್ಲ. ಎಲ್ಲಾ ದೇಶ-ಭಾಷೆಯ ಸಿನಿಮಾಗಳಲ್ಲೂ ಆಯಾ ಪ್ರದೇಶಕ್ಕೆ ಸಂಬಂಧಪಟ್ಟಂತೆ ದೇಸೀ ಸಂಸ್ಕೃತಿಯ ಅಂಶಗಳು ಅಭಿವ್ಯಕ್ತವಾಗಬಹುದು. ಆದರೆ ಅವನ್ನೆಲ್ಲಾ ಅಧ್ಯಯನಕ್ಕೆ ಒಳಪಡಿಸಲು ಇಲ್ಲಿ ಅವಕಾಶವಿಲ್ಲ. ಕನ್ನಡ ಸಿನಿಮಾಗಳನಷ್ಟೇ ಪ್ರಮುಖ ಅಧ್ಯಯನ ವಿಷಯವಾಗಿಟ್ಟು ಕೊಂಡು ಪ್ರಾಸಂಗಿಕವಾಗಿ ಮಾತ್ರ ಅಲ್ಲಲ್ಲಿ ಇತರ ಭಾಷಾ ಚಿತ್ರಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಹಾಗಂತ ಕನ್ನಡದಲ್ಲಿ ನಿರ್ಮಾಣಗೊಂಡ ಎಲ್ಲಾ ಸಿನಿಮಾಗಳನ್ನು ಪರಿಪೂರ್ಣವಾಗಿ ಅಧ್ಯಯನಕ್ಕೊಳಪಡಿಸುವುದು ಇಲ್ಲಿ ಕಷ್ಟಸಾಧ್ಯ. 'ದೇಸೀ ಸಂಸ್ಕೃತಿ' ಪರಿಕಲ್ಪನೆಗೆ ಅನ್ವಯವಾಗುವ ಕೆಲವು ಪ್ರಾತಿನಿಧಿಕ ಚಿತ್ರಗಳನ್ನಷ್ಟೇ ಇಲ್ಲಿ ಅಧ್ಯಯನಕ್ಕೆ ಮೂಲ ಆಕರಗಳಾಗಿ ಬಳಸಿಕೊಳ್ಳಲಾಗಿದೆ.

ಚಿತ್ರಗಳ ಆಯ್ಕೆಯ ಸಂದರ್ಭದಲ್ಲಿ ಕಾಲಮಿತಿಯನ್ನೇನೂ ಹಾಕಿಕೊಂಡಿಲ್ಲ. ಪ್ರಾರಂಭಿಕ ಘಟ್ಟದಿಂದ (೧೯೩೪) ತೊಡಗಿ ತೀರಾ ಇತ್ತೀಚಿನವರೆಗೆ (೨೦೦೭) ಬಿಡುಗಡೆಗೊಂಡ ಒಟ್ಟಾರೆ ಚಿತ್ರಗಳಲ್ಲಿ ಪ್ರಸ್ತುತ ಅಧ್ಯಯನ ವಿಷಯದ ಪರಿಕಲ್ಪನೆಗೆ ಸರಿ ಹೊಂದುವ ಚರ್ಚೆಗೆ ಅವಶ್ಯವಿರುವ ಕೆಲವನ್ನಷ್ಟೇ ಇಲ್ಲಿ ಆಯ್ದು ಕೊಳ್ಳಲಾಗುವುದು. ಕಾಲಮಿತಿಯನ್ನಾ ಧರಿಸಿಯೂ ಪರಿಕಲ್ಪನಾತ್ಮಕ ಚರ್ಚೆ ಸಾಧ್ಯವಾಗಬಹುದು. ಆದರೆ 'ದೇಸೀ ಸಂಸ್ಕೃತಿ' ಎಂಬುದು ಪ್ರಾರಂಭಿಕ ಹಂತದಿಂದಲೇ ನಮ್ಮ ಸಿನಿಮಾಗಳಲ್ಲಿ ಕಾಣಿಸಿಕೊಳ್ಳ ತೊಡಗಿರುವುದರಿಂದ ಕಾಲಾನು ಕ್ರಮದಲ್ಲಿ ಅದರ ಅಭಿವ್ಯಕ್ತಿ ಸ್ವರೂಪದಲ್ಲಾದ ಬದಲಾವಣೆಯನ್ನು ಗುರುತಿಸುವ ಸಲುವಾಗಿ ಇಷ್ಟು ವ್ಯಾಪಕವಾದ ಕಾಲಾವಧಿಯನ್ನು ಇರಿಸಿಕೊಳ್ಳಲಾಗಿದೆ. ಐತಿಹಾಸಿಕವಾಗಿ ಕನ್ನಡ ಸಿನಿಮಾಗಳಲ್ಲಿ ಅಭಿವ್ಯಕ್ತಿಗೊಂಡಿರುವ 'ದೇಸೀ ಸಂಸ್ಕೃತಿ' ಯ ಸ್ವರೂಪಕ್ಕೆ ಸಂಬಂಧಪಟ್ಟ ತಾತ್ವಿಕ ಚರ್ಚೆಯೊಂದು ಇದರಿಂದ ಸಾಧ್ಯವಾಗಬಹುದೆಂಬ ನಿರೀಕ್ಷೆಯನ್ನು ಇಟ್ಟುಕೊಳ್ಳಲಾಗಿದೆ.

ಅಧ್ಯಾಯ-೨

ಪ್ರಸ್ತಾವನೆ - ವಿಷಯ ಪ್ರವೇಶ

(ಸಿನಿಮಾ ನಡೆದು ಬಂದ ದಾರಿ)

ರಂಗಭೂಮಿಯನ್ನೇ ಭದ್ರ ಬುನಾದಿಯನ್ನಾಗಿಸಿಕೊಂಡು ಕರ್ನಾಟಕದ ನೆಲದ ಮೇಲೆ ಹಂತ ಹಂತವಾಗಿ ಬೆಳೆದ ಕನ್ನಡ ಚಲನ ಚಿತ್ರರಂಗಕ್ಕೆ ಸುಮಾರು ಮುಕ್ಕಾಲು ಶತಮಾನದಷ್ಟು ಇತಿಹಾಸವಿದೆ. ಇದರ ಆರಂಭಿಕ ಹಂತದಲ್ಲಿ ಮುಂಬೈ, ಮದ್ರಾಸ್, ರಾಜ್ಯಗಳನ್ನು ಅವಲಂಬಿಸಬೇಕಾಗಿದ್ದ ಕನ್ನಡ ಚಿತ್ರರಂಗ ಈಗ ಸ್ವ ಸಾಮರ್ಥ್ಯಗಳಿಂದ ಬೇರೆ ಭಾಷಾ ಚಿತ್ರರಂಗದವರಿಗೆ ಮಾದರಿಯಾಗುವಂತಿದೆ.

ಫ್ಯಾರಿಸ್‌ನಲ್ಲಿ ೧೮೯೫ರಲ್ಲಿ ಚಲನಚಿತ್ರ ಉದಯವಾಯಿತು. ಇದಕ್ಕೆ ಕಾರಣ ಕರ್ತರು ಫ್ರಾನ್ಸಿನ ಲ್ಯುಮಿಯೆರ್ ಸೋದರರು. ೧೮೮೧ರಲ್ಲಿ ಛಾಯಚಿತ್ರದ ಬೆಳವಣಿಗೆಗೆ ಸಹಾಯಕವಾದ 'ಡ್ರೈಪ್ಲೇಟ್' ಕಂಡು ಹಿಡಿದ ನಂತರ ಫ್ಯಾರಿಸ್‌ನಲ್ಲಿ 'ಕಿನಿಟೊಸ್ಕೋಪ್'ನ ಪದರ್ಶನ ಏರ್ಪಟ್ಟಿತು. ಕಿನಿಟೊಸ್ಕೋಪ್ ಇದು ಒಮ್ಮೆ ಒಬ್ಬರೇ ವೀಕ್ಷಿಸಬಹುದಾಗಿದ್ದ ಚಲನಚಿತ್ರ ವ್ಯವಸ್ಥೆ. ಈ ಕ್ಯಾಮರಾ ಭಾರಿಗಾತ್ರದ ಉಪಕರಣವಾಗಿತ್ತು. ಇದನ್ನು ಸ್ಟುಡಿಯೋದಿಂದ ಹೊರಗಡೆ ಉಪಯೋಗಿಸಲು ಸಾಧ್ಯವಾಗುತ್ತಿರಲಿಲ್ಲ. ಇಂತಹ ಸಂದರ್ಭದಲ್ಲಿ ೧೮೯೫ರ ವರ್ಷಾರಂಭದ ವೇಳೆಗೆ ಲ್ಯುಮಿಯರ್ ಸಹೋದರರು ತಮ್ಮದೇ ಆದ ಯಂತ್ರ ಸಾಧನವನ್ನು ರೂಪಿಸಿದರು. ಛಾಯಾಗ್ರಹಣ, ಮುದ್ರಣ ಮತ್ತು ಪ್ರೇಕ್ಷಣ ಈ ಮೂರು ಕಾರ್ಯವನ್ನು ಒಟ್ಟಿಗೆ ನಿರ್ವಹಿಸುವ ಸಾಧನವಾಗಿದ್ದು ಎಲ್ಲೆಂದರಲ್ಲಿ ಕೊಂಡೊಯ್ಯಬಹುದಾದ ಯಂತ್ರವಾಗಿತ್ತು. ಇದಕ್ಕೆ 'ಸಿನಿಮಾಟೊಗ್ರಾಫಿ' ಎಂದು ಕರೆದರು. ಈ ಯಂತ್ರ ಬಳಸಿ ಮೊದಲು ೫೦ ಕಿರು ಚಿತ್ರಗಳನ್ನು ಸಿದ್ಧಪಡಿಸಿದರು.

ಇಪ್ಪತ್ತನೆಯ ಶತಮಾನಕ್ಕೆ ನಾಲ್ಕು ವರ್ಷಗಳಿರುವಂತೆ ತಾನು ಜಗತ್ತಿನಲ್ಲಿ ಕಣ್ಣು ಬಿಟ್ಟು ಆರು ತಿಂಗಳ ಒಳಗಾಗಿಯೇ ಸಿನಿಮಾ ಭಾರತಕ್ಕೆ ಬಂದಿತು. ಲ್ಯೂಮಿಯೆರ್ ಪತ್ರಿನಿಧಿ ಮಾರಿಸ್ ಸೆಸ್ಟಿಯರ್ ೧೮೯೬ನೇ ಜೂಲೈ ೭ ರಂದು ಮುಂಬಯಿಯ (ಗೇಟ್‌ವೇ ಆಫ್ ಇಂಡಿಯಾ) ಪ್ರಸಿದ್ಧ ವಾಟ್ಸನ್ ಹೋಟೆಲಿನಲ್ಲಿ ಭಾರತದಲ್ಲಿ ಮೊದಲ ಪ್ರದರ್ಶನ ನೀಡಿದ. ಮೊದಲು ಪ್ರದರ್ಶನ ನೀಡಿದ ಕಿರು ಚಿತ್ರಗಳು 'ಎಂಟ್ರಿ ಆಫ್ ಸಿನಿಮಾಟೊಗ್ರಾಫಿ' 'ಅರ‍್ರೈವಲ್ ಆಫ್ ಎ ಟ್ರೈನ್, ಎಡೆಮಾಲಿಷನ್, ಲೀವಿಂಗ್ ದಿ ಫ್ಯಾಕ್ಟರಿ, ಲೇಡೀಸ್ ಅಂಡ್ ಸೋಲ್ಜರ್ಸ್ ಆನ್ ದಿ ವೀಲ್ಸ್. ಈ ಚಿತ್ರ ವ್ಯವಸ್ಥೆಯು ಎಲ್ಲರಿಗೂ ತಲುಪದಾದಾಗ ಸಂಚಾರಿ ಸಿನಿಮಾದ ವ್ಯವಸ್ಥೆಯು ಬಂದಿತು. ಮುಂಬಯಿಗೆ ಕಾಲಿಟ್ಟ ಸಿನಿಮಾ ಕಲ್ಕತ್ತಾ ಹಾಗೂ ಮದರಾಸಿಗೂ ಕಾಲಿಡಲು ತಡವಾಗಲಿಲ್ಲ. ೧೯೧೯ ರಿಂದ ೧೯೩೧ರ ಅವಧಿಯಲ್ಲಿ ಮದನ್ ಥಿಯೇಟರ್ಸ್ ೮೨ ಸಿನಿಮಾಗಳನ್ನು ನಿರ್ಮಿಸಿತು. ಮದನ್ ಕಲ್ಕತ್ತಾದಲ್ಲಿ ಎಲ್‌ಫಿನ್‌ಸ್ಟನ್ ಪಿಕ್ಚರ್ ಪ್ಯಾಲೆಸ್ ಕಟ್ಟಿದ. ಇದೇ ಭಾರತದ ಮೊದಲ ಚಿತ್ರಮಂದಿರ. ಭಾರತಕ್ಕೆ ಸಿನಿಮಾ ೧೮೯೬ರ ವೇಳೆಗೆ ಕಾಲಿಟ್ಟರೂ ಇಲ್ಲಿ ಕೆಲವು ಸಾಕ್ಷ್ಯ ಚಿತ್ರಗಳು ಮತ್ತು ಸುದ್ದಿಚಿತ್ರಗಳ ತಯಾರಿಕೆ ನಡೆಯುತ್ತಿತ್ತು. ಕಥಾ ರೂಪದ ಚಿತ್ರ ನಿರ್ಮಾಣಕ್ಕೆ ಸುಮಾರು ೧೫ ವರ್ಷಗಳ ಕಾಲ ಬೇಕಾಯಿತು. ೧೯೧೩ರಲ್ಲಿ ಭಾರತದಲ್ಲಿ ಮೊದಲ ಕಥಾಚಿತ್ರ ತಯಾರಾಯಿತು. ೧೯೧೮ರ ನಂತರ

ಪರಿಸ್ಥಿತಿಯೇ ಬದಲಾಯಿತು. ಚಿತ್ರಮಂದಿರಗಳ ಸಂಖ್ಯೆ ೪೦ ಇದ್ದದ್ದು ೯೮ಕ್ಕೇರಿತು. ನಿರ್ಮಾಣವಾದ ಚಿತ್ರಗಳ ಸಂಖ್ಯೆ ಎರಡರಿಂದ ಎಂಟಕ್ಕೆ ಏರಿತು.

ಭಾರತೀಯ ಸಿನಿಮಾದ ಹಾಗೂ ಪ್ರಾದೇಶಿಕ ಸಿನಿಮಾದ, ಮುಖ್ಯವಾಗಿ ದಕ್ಷಿಣಭಾರತದ ಪ್ರಾದೇಶಿಕ ಭಾಷೆಗಳ ಚಲನಚಿತ್ರಗಳ ಬೆಳವಣಿಗೆಯ ವಿಕಾಸಕ್ಕೆ ಅಗತ್ಯವಾದ ತಂತ್ರಜ್ಞರ ತಂತ್ರ ವಿಧಾನಗಳು ವಿಕಾಸಗೊಂಡಿದ್ದು ಮುಂಬಯಿಯಲ್ಲೇ . ಮುಂಬಯಿಯಲ್ಲಿ ೧೯೧೩ರಲ್ಲಿ ಪ್ರಥಮ ಕಥಾಚಿತ್ರ ತಯಾರಾಯಿತು. ಸಿನಿಮಾ ಬಾರತಕ್ಕೆ ಬಂದ ೧೭ ವರ್ಷಗಳ ನಂತರ ದಕ್ಷಿಣಭಾರತದಲ್ಲಿ ತಯಾರಾದ ಮೊದಲ ಚಿತ್ರ 'ಕೀಚಕವಧಾ'. ದಕ್ಷಿಣ ಭಾರತಕ್ಕೆ ಬಂದ ಸಿನಿಮಾ ಕರ್ನಾಟಕ್ಕೆ ೧೩ ವರ್ಷ ತಡವಾಗಿ ಬಂದಿತು. ೧೮೯೬ ರಿಂದ ೧೯೧೨ರವರೆಗಿನ ಕಾಲವನ್ನು ಚಲನಚಿತ್ರದ ಉದಯ ಕಾಲ ಎನ್ನಬಹುದು.

ಈ ಅವಧಿಯಲ್ಲಿ ಭಾರತದಲ್ಲಿ ಸಾಕ್ಷ್ಯಚಿತ್ರ ಮತ್ತು ಕಿರುಚಿತ್ರಗಳ ಪ್ರಯೋಗ ನಡೆದಿತ್ತು. ೧೯೧೨ರಿಂದ ೧೯೩೪ ಮೂಕಿ ಚಿತ್ರಗಳ ಕಾಲ. ಈ ಸಮಯದಲ್ಲಿ ನಾಟಕವನ್ನು ನೋಡುವ ಜನರು ಕಡಿಮೆಯಾಗಿ ಚಲನ ಚಿತ್ರವು ಬೆಳೆಯಲಾರಂಭಿಸಿತು. ನಾಟಕದಲ್ಲಿ ಅಭಿನಯಿಸುತ್ತಿದ್ದ ನಟರು ಚಲನ ಚಿತ್ರಗಳಿಗೆ ಸೇರಿಕೊಳ್ಳಲಾರಂಭಿಸಿದರು. ಈ ರೀತಿಯ ಬೆಳವಣಿಗೆಯಲ್ಲಿ ೨೨ ವರ್ಷಗಳಲ್ಲಿ ಭಾರತದಲ್ಲಿ ೧೨೭೯ ಮೂಕಿ ಚಿತ್ರಗಳು ತಯಾರಾದವು. ಇದರಲ್ಲಿ ಕರ್ನಾಟಕದಲ್ಲಿ ೧೭೫ ಮೂಕಿ ಚಿತ್ರಗಳು ತಯಾರಾಗಿಬಹುದು ಎಂದು ಅಂದಾಜು ಮಾಡಲಾಗಿದೆ. ೧೯೨೯ರಲ್ಲಿ ಕರ್ನಾಟಕದಲ್ಲಿ ಮೊದಲ ಮೂಕಿ ಚಿತ್ರ ತಯಾರಾಯಿತು ಎಂದು ಹೇಳಲಾಗುತ್ತದೆ. ಆದರೆ ಇದಕ್ಕೂ ಮೊದಲು ಕನ್ನಡದಲ್ಲಿ ಎರಡು ಮೂಕಿ ಚಿತ್ರಗಳು ತಯಾರಾದ ಉದಾಹರಣೆಗಳಿವೆ. ೧೯೨೧ರಲ್ಲಿ ತಯಾರಾದ ನಿರುಪಮಾ ಹಾಗೂ ೧೯೨೫ರಲ್ಲಿ ತಯಾರಾದ ಮಾಹಾತ್ಮ ಕಬೀರ ಇವು ೧೯೨೯ಕ್ಕಿಂತ ಮುಂಚೆ ತಯಾರಾದ ಮೂಕಿ ಚಿತ್ರಗಳು. ಇದೇ ಅವಧಿಯಲ್ಲಿ 'ಸೂರ್ಯ ಫಿಲಂ' ಕಂಪನಿಯು ಮೂಕಿ ಚಿತ್ರಗಳ ತಯಾರಿಕೆಯಲ್ಲಿ ತೊಡಗಿ ಸುಮಾರು ೪೦ ಮೂಕಿ ಚಿತ್ರಗಳನ್ನು ತಯಾರಿಸಿತು. ಇದರಲ್ಲಿ ೧೯೨೬ರಲ್ಲಿ ತಯಾರಾದ 'ರಾಜಹೃದಯ' ಮೊದಲ ಚಿತ್ರ. ೧೯೨೭-೨೮ರಲ್ಲಿ ಮೂಕಿ ಚಿತ್ರಗಳ ಯುಗ ಆರಂಭವಾಯಿತು. ಈ ಸಮಯದಲ್ಲಿ ಮುಂಬಯಿ ಪ್ರಮುಖ ಕೇಂದ್ರವಾಗಿತ್ತು. ಸೂರ್ಯಫಿಲಂ ಕಂಪನಿ ಯಶಸ್ಸಿನ ನಂತರ ಕರ್ನಾಟಕದಲ್ಲಿ 'ಕರ್ನಾಟಕ ಪಿಕ್ಚರ್ಸ್

ಕಾರ್ಪೊರೇಷನ್' ಸ್ಥಾಪನೆಯಾಯಿತು. 'ಹಿಸ್‌ಲವ್ ಅಫೇರ್' 'ಸಾಮಗ್ ಆಫ್ ಲೈಫ್' 'ಹರಿಮಾಯಿ' ಎಂಬ ಮೂರು ಚಿತ್ರಗಳನ್ನು ತಯಾರಿಸಿತು. ೧೯೩೦-೩೧ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ಶಿವರಾಮ ಕಾರಂತರು 'ಭೂತರಾಜ' ಮತ್ತು 'ಡೊಮಿಂಗೊ' ಎಂಬ ಎರಡು ಮೂಕ ಚಿತ್ರಗಳನ್ನು ತಯಾರಿಸಿದ್ದರು. ೧೯೩೧ರ ವೇಳೆಗೆ ಭಾರತದಲ್ಲಿ ಪ್ರಥಮ ಮಾತನಾಡುವ ಚಿತ್ರ 'ಆಲಂಆರಾ' ತೆರೆಕಾಣುವುದರೊಂದಿಗೆ ಮೂಕಿ ಚಿತ್ರಗಳ ಯುಗ ಕೊನೆಗೊಂಡಿತು. ಈ ವೇಳೆಗಾಗಲೇ ಕನ್ನಡದಲ್ಲಿ ಟಾಕಿ ಚಿತ್ರಗಳು ತಯಾರಾಗುತ್ತಿದ್ದವು ೧೯೩೪ರಲ್ಲಿ ತಯಾರಾದ 'ಸತಿ ಸುಲೋಚನ' ಪ್ರಥಮ ವಾಕ್ಚಿತ್ರ ವಾಯಿತು.

ಭಾರತದ ಪ್ರಥಮ ವಾಕ್ಚಿತ್ರ ಹಿಂದಿ ಭಾಷೆಯ 'ಆಲಂಅರಾ' ೧೯೩೧ರಲ್ಲಿ ತೆರೆಕಂಡಿತು. ಎ.ವಿ.ವರದಾಚಾರ್ಯ ಮೆಮೋರಿಯಲ್ ಟ್ರಸ್ಟ್ ನಿರ್ಮಿಸಿಕೊಂಡು ೧೯೩೨ರಲ್ಲಿ ವಾಕ್ಚಿತ್ರ ನಿರ್ಮಾರ್ಣಕ್ಕೆ ಮನಸ್ಸು ಮಾಡಿ 'ಭಕ್ತಧ್ರುವ' ಚಿತ್ರದ ನಿರ್ಮಾಣ ಆರಂಭಿಸಿದರು. ೧೯೩೨ರಲ್ಲಿ ತಯಾರಾದ 'ಭಕ್ತಧ್ರುವ' ಮೊದಲ ಚಿತ್ರವಾದರೂ ತೆರೆಕಂಡದ್ದು ೧೯೩೪ರಲ್ಲಿ 'ಸತಿ ಸುಲೋಚನ'ದ ನಂತರ. ಆದಕ್ಕಾಗಿಯೇ 'ಸತಿಸುಲೋಚನ' ಮೊದಲ ವಾಕ್ಚಿತ್ರ ಎನಿಸಿಕೊಂಡಿತು. ಸತಿ ಸುಲೋಚನವನ್ನು ತಯಾರಿಸಲು ಮುಂದಾದವರು ಉತ್ತರ ಭಾರತದ ವ್ಯಾಪಾರಸ್ಥ ಚಮನ್‌ಲಾಲ್ ಡೊಂಗಾಜಿ. ಸೌತ್ ಇಂಡಿಯಾ ಮೂವಿ ಟೋನ್ ಲಾಂಛನದಲ್ಲಿ ಕನ್ನಡ ವಾಕ್ಚಿತ್ರ ತಯಾರಿಕೆಗೆ ಕೈಹಾಕಿದರು. ಈ ಸಮಯದಲ್ಲಿ ವೈ. ವಿ. ರಾವ್ ನಿರ್ದೇಶಿಸಿದ್ದು ಎರಡು ಚಿತ್ರಗಳನ್ನು ಮಾತ್ರ ೧೯೫೬ರಲ್ಲಿ ಭಾಗ್ಯ ಚಕ್ರಹಾಗೂ ೧೯೬೧ರಲ್ಲಿ ನಾಗಾರ್ಜುನ ಕನ್ನಡದ ಮೊದಲ ವಾಕ್ಚಿತ್ರವನ್ನು ಪ್ರದರ್ಶಿಸಿದ ಕರ್ನಾಟಕದ ಪ್ರಥಮ ಚಿತ್ರಮಂದಿರ ಪ್ಯಾರಾಮೌಂಟ್ ೭೦ ವರ್ಷಗಳ ಕಾಲ ಅಸ್ತಿತ್ವದಲ್ಲಿತ್ತು. ೧೯೩೪ರಲ್ಲಿ ಈ ಚಿತ್ರವನ್ನು ಪ್ರದರ್ಶಿಸಲಾಯಿತು. ಈ ವಾಕ್ಚಿತ್ರಗಳ ಭರಾಟೆಯ ನಡುವೆಯೂ ೧೯೮೭ರಲ್ಲಿ 'ಪುಷ್ಪಕ ವಿಮಾನ' ಎಂಬ ಮೂಕಿ ಚಿತ್ರವು ತೆರೆಕಂಡಿತು. ಮೂಕಿ ಚಿತ್ರಗಳ ತಯಾರಿಕೆಯಲ್ಲಿ ಕರ್ನಾಟಕ ಪಿಕ್ಚರ್ಸ್ ಕಾರ್ಪೋರೇಷನ್, ಶಿವರಾಂ ಕಾರಂತರ ಸೂರ್ಯಫಿಲಂ ಕಂಪನಿ ಇವುಗಳ ಪಾತ್ರವು ವಿಶೇಷವಾಗಿತ್ತು.

೧೯೩೪ರಲ್ಲಿ ತಯಾರಾದ ಸತಿಸುಲೋಚನ ಹಾಗೂ ಭಕ್ತಧ್ರುವ ಮೂಲಕ ಮೈಸೂರು ರಾಜ್ಯದಲ್ಲಿ ಕನ್ನಡ ಚಲನಚಿತ್ರ ಲೋಕ ತೆರೆಕಂಡಿತು. ೧೯೩೫ರಲ್ಲಿ 'ಸದಾರಮೆ' ೧೯೩೬ರಲ್ಲಿ 'ಸಂಸಾರನೌಕ' ಚಿತ್ರಗಳು ತೆರೆಕಂಡವು. ಈ ಸಮಯದಲ್ಲಿ ಹೆಚ್ಚು ಚಿತ್ರಗಳು ನಿರ್ಮಾಣವಾಗಲಿಲ್ಲ ಹೀಗಾಗಿ ಕನ್ನಡ ಚಿತ್ರರಂಗದ ಆರಂಭದ ದಿನಗಳು ಮಂದಗತಿಯಲ್ಲಿದ್ದವು. ೧೯೩೫ರಿಂದ ೧೯೪೫ರ ಅವಧಿಯಲ್ಲಿ ಒಟ್ಟು ೧೪ ಚಿತ್ರಗಳು ಬಿಡುಗಡೆಯಾದವು. ಈ ಅವಧಿಯು ಕನ್ನಡ ಚಿತ್ರರಂಗದ ಬೆಳವಣಿಗೆಯ ಕಾಲವಾಗಿತ್ತು. ಈ ಸಮಯದಲ್ಲಿ ಕನ್ನಡ ಚಿತ್ರರಂಗಕ್ಕೆ ಭದ್ರ ಬುನಾದಿ ಹಾಕುವಂತೆ ಕವಿಗಳು, ಸಾಹಿತಿಗಳು, ಸಂಗೀತಗಾರರು ಚಿತ್ರರಂಗ ಪ್ರವೇಶಿಸಿದರು. ಇವೆ ಜೊತೆಗೂಡಿ ತಯಾರಾದ ಕೆಲವೇ ಚಿತ್ರಗಳು ದಕ್ಷಿಣ ಭಾರತದಲ್ಲೇ ದಾಖಲೆ ಸ್ಥಾಪಿಸಿ ಕನ್ನಡ ಚಿತ್ರರಂಗ ಬೆಳೆದು ಬಂದ ದಾರಿಯಲ್ಲಿ ಈಗಲೂ ಮೈಲಿಗಲ್ಲುಗಳಾಗಿವೆ.

ಸಿನಿಮಾಗಳಲ್ಲಿ ವಾಣಿಜ್ಯ ಸಿನಿಮಾ, ಕಲಾತ್ಮಕ ಸಿನಿಮಾ, ಪ್ರಾದೇಶಿಕ ಸಿನಿಮಾ, ಮಕ್ಕಳ ಸಿನಿಮಾದ ಪರಿಕಲ್ಪನೆಗಳನ್ನು ನಾವು ಕಾಣಬಹುದು ಹಾಗೆಯೇ ವಸ್ತು ದೃಷ್ಟಿಯಿಂದ ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ಚಿತ್ರಗಳನ್ನು ಕಾಣಬಹುದು. ೧೯೩೬ರಲ್ಲಿ ತಯಾರಾದ 'ಸಂಸಾರನೌಕ' ದಕ್ಷಿಣ ಭಾರತದ ಪ್ರಥಮ ಸಾಮಾಜಕ ಚಿತ್ರ. ೧೯೩೭ರಲ್ಲಿ ತಯಾರಾದ ರಾಜ ಸುಯಾಗ ಸಂಪೂರ್ಣವಾಗಿ ಕರ್ನಾಟಕದಲ್ಲೇ ತಯಾರಾದ ಕನ್ನಡ ಚಿತ್ರ. ೧೯೪೧ರ ತಯಾರಾದ 'ವಸಂತಸೇನ' ಇಡೀ ಭಾರತದಲ್ಲಿ ಇದುವರೆಗೆ ತಯಾರಾದ ಚಿತ್ರಗಳಲ್ಲಿ ತಾಂತ್ರಿಕವಾಗಿ ಅತ್ಯುತ್ತಮ ಚಿತ್ರ ಎಂದು ಪರಿಗಣಿಸಲಾಯಿತು. ಎಂ.ವಿ.ರಾಜಮ್ಮ ೧೯೪೩ರಲ್ಲಿ 'ರಾಧಾರಮಣ' ಚಿತ್ರ ನಿರ್ಮಿಸಿ ಕನ್ನಡದ ಪ್ರಥಮ ಮಹಿಳಾ ನಿರ್ಮಾಪಕಿ ಎನಿಸಿದರು. ೧೯೪೩ರಲ್ಲಿಯೇ 'ಸತ್ಯ ಹರಿಶ್ಚಂದ್ರ' ಚಿತ್ರ ರಜತೋತ್ಸವ ಆಚರಿಸಿದ ಪ್ರಥಮ ಕನ್ನಡ ಚಿತ್ರ ಎಂಬ ದಾಖಲೆ ನಿರ್ಮಿಸಿತು. ಅಲ್ಲದೆ ತಮಿಳಿಗೆ ಡಬ್ ಆದ ಭಾರತದ ಮೊದಲ ಡಬ್‌ಚಿತ್ರ ಎನಿಸಿತು. ಇದೇ ಸಮಯದಲ್ಲಿ ಎರಡನೇ ಮಹಾಯುದ್ಧ ನಡೆದಿದ್ದರಿಂದ ಅದರ ಬಿಸಿ ಕನ್ನಡ ಚಿತ್ರರಂಗಕ್ಕೂ ತಟ್ಟಿತು. ಹೀಗಾಗಿ ೧೯೩೮-೧೯೪೬ ಈ ಅವಧಿಯಲ್ಲಿ ಐದು ವರ್ಷ ಐದು ವರ್ಷಗಳ ಕಾಲ ಕನ್ನಡ ಚಿತ್ರರಂಗ ಸ್ಥಬ್ಧವಾಗಿತ್ತು. ಈ ಸಮಯದಲ್ಲಿ ಗುಬ್ಬಿ ವೀರಣ್ಣನವರು ಸಲ್ಲಿಸಿದ ಸೇವೆ ಸ್ಮರಣೀಯ. ವಾಕ್ಚಿತ್ರದ ಆರಂಭದಲ್ಲಿ

ತಯಾರಾದ ೧೪ ಚಿತ್ರಗಳ ಪೈಕಿ ಗುಬ್ಬಿ ವೀರಣ್ಣನವರು ತಯಾರಿಸಿದ ಚಿತ್ರಗಳೇ ನಾಲ್ಕು. ೧೯೩೫ರಲ್ಲಿ ಸುದಾರಮೆ, ೧೯೪೧ರಲ್ಲಿ ಸುಭದ್ರ, ೧೯೪೨ರಲ್ಲಿ ಜೀವನ ನಾಟಕ, ೧೯೪೫ರಲ್ಲಿ ಹೇಮರೆಡ್ಡಿ ಮಲ್ಲಮ್ಮ ಚಿತ್ರಗಳನ್ನು ಗುಬ್ಬಿಫಿಲಂಸ್ ತಯಾರಿಸಿತು. ನೂರು ವರ್ಷಗಳ ಇತಿಹಾಸ ಹೊಂದಿರುವ ಗುಬ್ಬಿಕಂಪನಿ, ಸಾಂಸ್ಕೃತಿಕ ಹಾಗೂ ಮನರಂಜನಾ ಕ್ಷೇತ್ರದಲ್ಲಿ ಕನ್ನಡ ಹಾಗೂ ಕರ್ನಾಟಕ ವೈಭವವನ್ನು ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸಿತು.

ಚಿತ್ರರಂಗದ ಬೆಳವಣಿಗೆಯಲ್ಲಿ ಸ್ಟುಡಿಯೋಗಳ ಪಾತ್ರವು ಮಹತ್ವದ್ದೆನ್ನಬಹುದು. ಚಿತ್ರರಂಗ ಇದು ಬೃಹತ್ ಉದ್ಯಮವಾಗಿ ಬೆಳೆಯಲು ಹಲವಾರು ಕಾರಣಗಳಿವೆ. ವಾಕ್ಚಿತ್ರ ಆರಂಭದ ಕಾಲದಲ್ಲಿ ಪ್ರತಿಯೊಂದು ವಿಷಯಕ್ಕೂ ನೆರೆ ರಾಜ್ಯಗಳಲ್ಲಿನ ಸೌಲಭ್ಯವನ್ನು ಅವಲಂಬಿಸಬೇಕಾದ ಪರಿಸ್ಥಿತಿ ಕರ್ನಾಟಕದಲ್ಲಿತ್ತು.

ಆದಕ್ಕಿಂತ ಮುಂಚೆ ಮೂಕಿ ಚಿತ್ರಗಳ ತಯಾರಿಕೆ ಕಾಲದಲ್ಲೂ ಅದೇ ಪರಿಸ್ಥಿತಿ ಇತ್ತು. ಆರ್ಥಿಕ ಹಿಂಜರಿತ ಪರಿಸ್ಥಿತಿಯಲ್ಲೂ ಕೊಲ್ಲಾಪುರ, ಮದರಾಸು, ಮುಂಬೈಗಳಿಗೆ ತೆರಳಿ ಚಿತ್ರ ತಯಾರಿಸುವುದು ಕನ್ನಡ ಚಿತ್ರ ನಿರ್ಮಾಪಕರಿಗೆ ಸಂಕಟದ ವಿಷಯವಾಗಿತ್ತು. ಇಂತಹ ಸ್ಥಿತಿಯಲ್ಲಿ ನಮ್ಮಲ್ಲೇ ಸ್ಟುಡಿಯೋ ಸ್ಥಾಪಿಸುವ ಸಾಧ್ಯತೆಯನ್ನು ಉದ್ಯಮಿಗಳು ಹಿಂದಿನಿಂದಲೂ ಚಿಂತಿಸಿದ್ದರು. ಆದರೆ ಮೂಕಿ ಚಿತ್ರಗಳ ಕಾಲದಿಂದ ಈ ಪ್ರಯತ್ನ ನಡೆಯುತ್ತಾ ಬಂದಿತು.

೧೯೨೮ರಲ್ಲಿ ಕರ್ನಾಟಕದಲ್ಲಿ ಚಲನಚಿತ್ರ ತಯಾರಿಕೆಯ ಮೊದಲ ಸ್ಟುಡಿಯೋ ಅಸ್ತಿತ್ವಕ್ಕೆ ಬಂದಿತು. ಮೂಕಿ ಚಿತ್ರಗಳ ಕಾಲದಲ್ಲಿ ಆಗ ಇಂತಹ ಚಿತ್ರಗಳ ತಯಾರಿಕೆಗೆ ಮುಂಬೈ ಕೇಂದ್ರ ಸ್ಥಾನವಾಗಿತ್ತು. 'ಶಾರದಾ ಫಿಲಂ ಕಂಪನಿ' ಮೂಕಿ ಚಿತ್ರಗಳ ತಯಾರಿಕೆಯಲ್ಲಿ ಅಗ್ರಸ್ಥಾನ ಪಡೆದಿತ್ತು. ೧೯೨೮ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿತವಾದ ಮೊದಲ ಸ್ಟುಡಿಯೋ ಸೂರ್ಯ ಫಿಲಂ ಕಂಪನಿ. ಇದಕ್ಕೆ ಸನ್‌ಲೈಟ್ ಎಂದು ಹೆಸರಿಡಲಾಯಿತು. ಸೂರ್ಯ ಫಿಲಂ ಕಂಪನಿಯು ತನ್ನದೇ ಆದ ಕೈಯಿಂದ ತಿರುಗಿಸಿ ಫಿಲಂ ಚಾಲನೆ ಮಾಡುತ್ತಿದ್ದ ಕ್ಯಾಮರಾಗಳನ್ನು ಹೊಂದಿತ್ತು. ಈ ಕಂಪನಿಯು ಸುಮಾರು ೪೦ ಮೂಕಿ ಚಿತ್ರಗಳನ್ನು ನಿರ್ಮಿಸಿತು. ಈ ಕಂಪನಿಯ ಮೊದಲ ಚಿತ್ರ ೧೯೨೯ರಲ್ಲಿ ನಿರ್ಮಾಣವಾದ 'ರಾಜಹೃದಯ'. ಸೂರ್ಯ ಫಿಲಂ ಕಂಪನಿ ಹಾಗೂ ಸ್ಟುಡಿಯೋ ಪಡೆದ ಯಶಸ್ಸು ಹಾಗೂ ಜನಪ್ರಿಯತೆ ಸ್ಥಳೀಯರನ್ನೂ ಸ್ಟುಡಿಯೋ ನಿರ್ಮಿಸುವಂತೆ ಪ್ರಚೋದಿಸಿತು.

ಸಾಹಿತ್ಯ ನಾಟ್ಯ, ನಾಟಕ, ಮತ್ತು ಸಾಂಸ್ಕೃತಿಕ ರಂಗದಲ್ಲಿ ಒಳ್ಳೆಯ ಹೆಸರು ಪಡೆದವರೆಲ್ಲಾ ಸ್ಟುಡಿಯೋ ಸ್ಥಾಪನೆಗೆ ಮುಂದಾದರು. ಸೂರ್ಯ ಫಿಲಂ ಕಂಪನಿ ಸ್ಥಾಪನೆಯಾದ ನಂತರ ೧೯೩೬ರಲ್ಲಿ ಮೈಸೂರು ಸೌಂಡ್ ಸ್ಟುಡಿಯೋಸ್ ಆರಂಭವಾಯಿತು. 'ರಾಜಸುಯಾಗ' ಚಿತ್ರವು ಸಂಪೂರ್ಣವಾಗಿ ಈ ಸ್ಟುಡಿಯೋದಲ್ಲೇ ಚಿತ್ರೀಕರಣಗೊಂಡಿತು. ಇದು ಸ್ಥಳೀಯವಾಗಿ ತಯಾರಾದ ಪ್ರಥಮ ಕನ್ನಡ ಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಇದಾದ ನಂತರ ೧೯೪೬ರಲ್ಲಿ ಮೈಸೂರು ನಗರದಲ್ಲಿ 'ನವಜ್ಯೋತಿ ಸ್ಟುಡಿಯೋ' ಆರಂಭವಾಯಿತು. ಈ ಸ್ಟುಡಿಯೋದಲ್ಲಿ ೩೦ಕ್ಕೂ ಹೆಚ್ಚು ಚಿತ್ರಗಳು ತಯಾರಾದವು. ಈ ಸ್ಟುಡಿಯೋ ಆರಂಭವಾದ ನಂತರ ಮದರಾಸನ್ನೇ ನಂಬಿ ಅಲ್ಲೇ ನೆಲೆಯೂರಿದ್ದ ಕನ್ನಡ ಚಿತ್ರರಂಗದ ಚಟುವಟಿಕೆಗಳು ಮೈಸೂರಿಗೆ ವಾಪಸ್ಸಾದವು.

ನಂತರದಲ್ಲಿ ಸ್ಥಾಪನೆಯಾದ ನವಜ್ಯೋತಿ ಸ್ಟುಡಿಯೋ ದಲ್ಲಿ ತಯಾರಾದ ಮೊದಲ ಚಿತ್ರ 'ಕೃಷ್ಣಲೀಲಾ'. ಈ ಚಿತ್ರವು ಕನ್ನಡ ಚಿತ್ರರಂಗಕ್ಕೆ ಸ್ವದೇಶಿ ಕಳೆ ತಂದಿತು. ಸಿ.ವಿ.ರಾಜು ನಿರ್ದೇಶನದ ಈ ಚಿತ್ರ ಬೆಂಗಳೂರಿನ ಶಾರದಾ ಚಿತ್ರಮಂದಿರದಲ್ಲಿ ಶತದಿನೋತ್ಸವ ಆಚರಿಸಿತು. ನಾಗಕನ್ನಿಕೆ, ಜಗನ್ಮೋಹಿನಿ, ಭಕ್ತರಾಮದಾಸ, ದಲ್ಲಾಳಿ, ಭಾರತಿ, ಕಲಾವಿದ, ಬೇರೆ ಭಾಷೆಯ ಚಿತ್ರಗಳೂ ಸೇರಿದಂತೆ ಸುಮಾರು ೩೦ ಚಿತ್ರಗಳು ತಯಾರಾದವು. 'ನಾಗಕನ್ನಿಕೆ' ಚಿತ್ರವು ಕನ್ನಡದ ಪ್ರಥಮ ಜಾನಪದ ಚಿತ್ರವಾಗಿ ತೆರೆಕಂಡಿತು. ಈ ಸ್ಟುಡಿಯೋ ಆರ್ಥಿಕ ಮುಗ್ಗಟ್ಟಿನಿಂದ ನೆಲಕ್ಕಚಿದನಂತರ ಮತ್ತೇ ಚಿತ್ರಗಳು ಮದರಾಸಿನಲ್ಲಿ ಚಿತ್ರೀಕರಣಗೊಳ್ಳಲು ಪ್ರಾರಂಭವಾದವು.

೧೯೫೪ರಲ್ಲಿ ಮೈಸೂರಿನಲ್ಲಿ ಮತ್ತೊಂದು ಸ್ಟುಡಿಯೋ ಆರಂಭವಾಯಿತು. ಈ ಸ್ಟುಡಿಯೋ ತಯಾರಿಸಿದ ಮೊದಲ ಚಿತ್ರ ಸ್ತ್ರೀ ರತ್ನ ಕರ್ನಾಟಕ ಏಕೀಕರಣವಾದ ಸಮಯದಲ್ಲಿ ಕನ್ನಡ ಚಿತ್ರೋದ್ಯಮಕ್ಕೆ ರಾಜ್ಯ ಸರ್ಕಾರ ಹಲವಾರು ರೀತಿಯಲ್ಲಿ ನೆರವು ನೀಡಿತು. ಈ ಸಂದರ್ಭದಲ್ಲಿಯೇ ಕಂಠೀರವ ಸ್ಟುಡಿಯೋ ಹುಟ್ಟಿಕೊಂಡಿತು.

ದ್ವಿತೀಯ ಮಹಾಯುದ್ಧದ ಪರಿಣಾಮ ಭೀಕರವಾಗಿದ್ದರೂ ೧೯೪೧ರ ವೇಳೆಗೆ ಕನ್ನಡ ಚಿತ್ರರಂಗ ಪುನಶ್ಚೇತನಗೊಂಡಿತು. ೧೯೪೧ರಿಂದ ೧೯೪೪ರವರೆಗಿನ ಅವಧಿಯಲ್ಲಿ ಹಲವಾರು ಚಿರಸ್ಮರಣೀಯ ಕಲಾಕೃತಿಗಳನ್ನು ತಯಾರಿಸಿ ಇಡೀ ದಕ್ಷಿಣ ಭಾರತದ ಚಿತ್ರರಂಗದ ಗಮನ ಸೆಳೆಯಿತು. ಇದೇ ಅವಧಿಯಲ್ಲಿ ಹಲವಾರು ಚಿರಸ್ಮರಣೀಯ ಚಿತ್ರಗಳನ್ನು ತಯಾರಿಸಿ ಇಡೀ ದಕ್ಷಿಣ ಭಾರತದ ಚಿತ್ರರಂಗದ ಗಮನ ಸೆಳೆಯಿತು. ಅವಧಿಯಲ್ಲಿ ಹಲವು ಹೊಸ ತಾಂತ್ರಿಕ ಪ್ರಯೋಗಗಳು ಕನ್ನಡದಲ್ಲಿ ನಡೆದು. ಅವು ನಂತರದ ಅವಧಿಯಲ್ಲಿ ದಕ್ಷಿಣದ ಇತರ ಭಾಷಾ ಉದ್ಯಮಗಳ ಪ್ರಗತಿಗೆ ನೆರವಾದವು. ಈ ಕಾಲದಲ್ಲೇ ಎಂ.ವಿ.ಸುಬ್ಬಯ್ಯ ನಾಯ್ಡು, ಆರ್.ನಾಗೇಂದ್ರರಾವ್ ಮತ್ತು ಲಕ್ಷ್ಮೀಬಾಯಿ ಅವರ ಎಸ್. ಎಸ್. ಎಸ್. ನಾಟಕ ಮಂಡಳಿಯ ತ್ರಿವಳಿಗಳು ಕನ್ನಡ ಚಿತ್ರರಂಗವನ್ನು ಪ್ರವೇಶಿಸಿದರು. ಪ್ರಗತಿ ಪಿಕ್ಚರ್ಸ್ ನೆರವಿನೊಡನೆ ಅವರು ತಯಾರಿಸಿದ 'ವಸಂತಸೇನ' ಅತ್ಯುತ್ತಮ ಚಿತ್ರ ಎಂದು ಪ್ರಶಂಸೆಗೆ ಪಾತ್ರವಾಯಿತು. ಚಾರುದತ್ತನ ಪಾತ್ರದಲ್ಲಿ ಎಂ.ವಿ.ಸುಬ್ಬಯ್ಯನಾಯ್ಡು,

ವಸಂತಸೇನೆಯಾಗಿ ಲಕ್ಷ್ಮೀಬಾಯಿ, ಶಕಾರನಾಗಿ ಆರ್.ನಾಗೇಂದ್ರರಾವ್ ಉನ್ನತಮಟ್ಟದ ಅಭಿನಯ ಸಾಮರ್ಥ್ಯವನ್ನು ಮೆರೆದಿದ್ದರು. ಶೂದ್ರಕ ಎಂಬ ಸಂಸ್ಕೃತ ನಾಟಕಕಾರನ 'ಮೃಚ್ಛಕಟಿಕ' ನಾಟಕದ ಪಾತ್ರಗಳಲ್ಲೊಂದಾರ ''ವಸಂತ ಸೇನ'' ಕಥೆ ೧೯೨೮ರಲ್ಲೇ ಮೂಕಿ ಚಿತ್ರವಾಗಿ ತೆರೆಕಂಡಿತು. ವಾಕ್ಚಿತ್ರ ಯುಗವಾದ ೧೯೪೧ರಲ್ಲಿ ತಯಾರಾಗಿ ದಕ್ಷಿಣ ಭಾರತ ಚಿತ್ರರಂಗದಲ್ಲಿ ಐತಿಹಾಸಿಕ ದಾಖಲೆಯೊಂದನ್ನು ನಿರ್ಮಿಸಿತು.

ದೇಶಕ್ಕೆ ಸ್ವಾತಂತ್ರ್ಯ ಸಿಗುವವರೆಗೆ ಫಿಲಂಗಳ ರೇಷನಿಂಗ್‌ನಿಂದಾಗಿ ಕನ್ನಡ ಚಲನಚಿತ್ರ ಬೆಳವಣಿಗೆ ಕುಂಠಿತವಾಗಿತ್ತು. ಸ್ವಾತಂತ್ರ್ಯ ದೊರಕಿದ ಕೂಡಲೇ ಲೈಸನ್ಸ್ ಪಡೆಯಲೇ ಬೇಕಾದ ಕಾನೂನು ರದ್ದಾಯಿತು. ೧೯೩೪ರಲ್ಲಿ ಆರಂಭವಾದ ವಾಕ್ಚಿತ್ರಯುಗ ಮಂದಗತಿಯಲ್ಲಿ ಸಾಗುತ್ತಿದ್ದುದು ಅಲ್ಲಿವರೆಗಿನ ಬೆಳವಣಿಗೆ, ಸ್ವಾತಂತ್ರ್ಯ ಹೋರಾಟ ಕನ್ನಡ ಚಿತ್ರರಂಗದ ಪಾಲಿಗೆ ವಸ್ತುವಾಗಲೇ ಇಲ್ಲ. ೧೯೩೪ ರಿಂದ ೧೯೪೭ ರವರೆಗೆ ಹದಿನಾರು ಚಿತ್ರಗಳು ಬಿಡುಗಡೆಯಾಗಿದ್ದರೂ ಯಾವೊಂದು ಚಿತ್ರವೂ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆ, ಬ್ರಿಟೀಷರ ದಬ್ಬಾಳಿಕೆ, ಆಂಗ್ಲರ ಶೋಷಣೆಯನ್ನು ಕುರಿತದ್ದಾಗಿರಲಿಲ್ಲ. ೧೯೪೭ರಲ್ಲಿ ಬಿಡುಗಡೆಯಾದ 'ಮಹಾತ್ಮ ಕಬೀರ್' ಮಾತ್ರ

ಹಿಂದೂ ಏಕತೆ ಪ್ರತಿಪಾದಿಸುವ ಸಮಕಾಲೀನ ಸಮಸ್ಯೆಯತ್ತ ದೃಷ್ಟಿ ಬೀರಿದ ವಸ್ತುವನ್ನುಳ್ಳ ಚಿತ್ರವಾಗಿತ್ತು. ಈ ಮುಂಚೆ ತಯಾರಾದ ಸಾಮಾಜಿಕ ಚಿತ್ರಗಳಲ್ಲಿ ಸಾಮಾಜಿಕ ಸಮಸ್ಯೆ, ವರದಕ್ಷಿಣೆ ಕಿರುಕುಳ, ನಿರುದ್ಯೋಗ ಸಮಸ್ಯೆಗಳನ್ನು ಚಿತ್ರಿಸಲಾಗಿತ್ತು. ಆರಂಭದ ಇಪ್ಪತ್ತು ವರ್ಷಗಳ ಹಾದಿಯಲ್ಲಿ ಕನ್ನಡ ಚಲನಚಿತ್ರರಂಗದಲ್ಲಿ ತಯಾರಾಗಿರುವುದು ಕೇವಲ ೩೯ ಚಿತ್ರಗಳು ಎಂಬುದನ್ನು ಗಮನಿಸಿದಾಗ, ಈ ಹೆಜ್ಜೆ ಗುರುತುಗಳು ಮಂದಗತಿಯಲ್ಲಿದ್ದವು ಎಂಬುದು ಅರಿವಾಗುತ್ತದೆ.

ವಾಕ್ಚಿತ್ರ ಆರಂಭಕಾಲದ ಪ್ರಭಾವವೇ ಈ ಇಪ್ಪತ್ತು ವರ್ಷಗಳ ಕಾಲವೂ ಅನುರಣಗೊಳ್ಳುತ್ತಿದ್ದರಿಂದ ಚಿತ್ರಕಥೆ ಆಯ್ಕೆಯೂ ಕೂಡ ಅದೇ ಪೌರಾಣಿಕ ಜಾನಪದಗಳ ಸುತ್ತ ಗಸ್ತು ಹೊಡೆಯುತ್ತಾ ಅಲ್ಲೊಂದು ಇಲ್ಲೊಂದು ಸಾಮಾಜಿಕ ಕಥಾನಕಗಳು ಮಿಂಚುತ್ತಾ ಇದ್ದವು.

ಇಂತಹ ಪರಿಸ್ಥಿತಿ ೧೯೫೪ರ ನಂತರದ ದಿನಗಳಲ್ಲಿ ಕ್ರಮೇಣವಾಗಿ ಬದಲಾಗುತ್ತಾ ಬಂದದ್ದು ಹಾಗೂ ಕ್ಷಿಪ್ರಗತಿಯ ಕೆಲವು ಘಟನೆಗಳು ಚಿತ್ರರಂಗದ ದಿಕ್ಕನ್ನೇ ಬದಲಿಸಿದ್ದು ಇತಿಹಾಸ ಗಮನಿಸಬೇಕಾದ ಕುತೂಹಲದ ಸಂಗತಿ. ೧೯೫೪ರ ನಂತರದ ದಿನಗಳಲ್ಲಿ ಕ್ರಮೇಣವಾಗಿ ಬದಲಾಗುತ್ತಾ ಬಂದಿದ್ದು ಹಾಗೂ ಕ್ಷಿಪ್ರಗತಿಯ ಕೆಲವು ಘಟನೆಗಳು ಚಿತ್ರರಂಗದ ದಿಕ್ಕನ್ನೇ ಬದಲಿಸಿದ್ದು ಇತಿಹಾಸ ಗಮನಿಸಬೇಕಾದ ಕುತೂಹಲದ ಸಂಗತಿಯಾಗಿದೆ. ೧೯೫೪ ರಿಂದ ೧೯೬೪ರ ದಶಕದಲ್ಲೇ ಪ್ರತ್ಯೇಕವಾಗಿ ಗಮನಿಸಿದರೆ ಈ ಅಂಶ ಗೋಚರವಾಗುತ್ತದೆ. ಇಡೀ ಚಲನಚಿತ್ರ ರಂಗದಲ್ಲಿ ವೇಗ ಕಾಣಿಸಿಕೊಂಡದ್ದೇ ಈ ಅವಧಿಯಲ್ಲಿ. ಹಿಂದಿನ ಆರಂಭದ ಇಪ್ಪತ್ತು ವರ್ಷಗಳಲ್ಲಿ ಕೇವಲ ೩೬ ಚಲನಚಿತ್ರಗಳನ್ನಷ್ಟೇ ತಯಾರಿಸಲು ಸಾಧ್ಯವಾದರೆ ಮುಂದಿನ ಹತ್ತೇ ವರ್ಷಗಳಲ್ಲಿ ೧೨೫ ಚಿತ್ರಗಳು ತಯಾರಾಗಿವೆ.

ಈ ವೇಗದ ಜತೆಗೆ ತಾಂತ್ರಿಕ ಪರಿಷ್ಕರಣೆ, ಗುಣಮಟ್ಟದ ಸುಧಾರಣೆ, ಬಣ್ಣದ ಪ್ರಯೋಗ, ಹೊಸ ನಟಿನಟಿಯರ ಉದಯ ಎಲ್ಲವೂ ಸಮ್ಮಿಳನಗೊಂಡಿದೆ. ಅಲ್ಲದೇ, ಕನ್ನಡ ಪ್ರೇಕ್ಷಕರ ನಿಜವಾದ ಒಲವು ಚಿತ್ರರಂಗಕ್ಕೆ ದೊರಕಿದೆ. ಅಂತಹ ವಾತಾರಣ ಸೃಷ್ಟಿಯಾದದ್ದು, ಪ್ರವಾಹ ಪರಿಹಾರ ನಿಧಿಗಾಗಿ ಕಲಾವಿದರು ಜನರ ಮಧ್ಯೆ ಹೋಗಿದ್ದು, ಅದಕ್ಕೆ ಜನರಿಂದ ದೊರೆತ ಪ್ರೋತ್ಸಾಹ ತೋರಿದ ಆತ್ಯಾದರ ಇವೆಲ್ಲಾ ಚಿತ್ರರಂಗದವರನ್ನು ಮತ್ತಷ್ಟು ಕ್ರಿಯಾಶೀಲರನ್ನಾಗಿ ಮಾಡಲು

ಸಹಕಾರಿಯಾದವು. ನಿರ್ಮಾಪಕರು, ಕಲಾವಿದರಿಗೆ ಈ ಘಟನೆ ಮಾನಸಿಕ ಸ್ಥೈರ್ಯ ನೀಡಿತು. ಕನ್ನಡ ಚಿತ್ರಗಳ ಹೆಸರು ರಾಷ್ಟ್ರ ಪ್ರಶಸ್ತಿಗಳ ಸಾಲಿನಲ್ಲಿ ಕಾಣಿಸಿ ಕೊಂಡಿದ್ದು ಹೊಸ ಅಲೆಯ ದಿಕ್ಕಿನಲ್ಲಿ ನಡೆದ ನಾಂದಿ ಚಿತ್ರದ ತಯಾರಿಕೆಯಿಂದ. ಇವೆಲ್ಲಾ ಕನ್ನಡ ಚಿತ್ರರಂಗದಲ್ಲಿ ಪರಿವರ್ತನೆಯ ಪರ್ವವನ್ನು ಆರಂಭಿಸಿದವು. ಆದ್ದರಿಂದಲೇ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ೧೯೫೪ರಿಂದ ೧೯೬೪ರ ಅವಧಿ ಬಹಳ ಮಹತ್ವದ ಘಟ್ಟವಾಗಿದೆ. ಈ ಘಟ್ಟವನ್ನು ಕನ್ನಡ ಚಿತ್ರರಂಗದ ಪರಿವರ್ತನಾಯುಗ ಎಂದು ಕರೆಯಬಹುದು. ನಾಯಕ ನಟಕ ಪೀಳಿಗೆಯೇ ಹಂತಹಂತವಾಗಿ ಈ ಕಾಲಾವದಿಯಲ್ಲಿಯೇ ಬದಲಾಗುತ್ತಾ ಬಂದಿತು. ವಾಕ್ಚಿತ್ರ ಆರಂಭದ ದಿನಗಳಿಂದ ರಜತಪರದೆಯ ನಾಯಕರಾಗಿದ್ದ ಎಂ.ವಿ.ಸುಬ್ಬಯ್ಯ ನಾಯ್ಡು, ಆರ್.ನಾಗೇಂದ್ರರಾವ್,

ಡಿ.ಕೆಂಪರಾಜು ಅರಸು ಮುಂತಾದವರು ಪರದೆಯ ಹಿಂದೆ ಸರಿದು ಹೊಸ ನಾಯಕ ನಟರಾದ ರಾಜ್‌ಕುಮಾರ್, ಕಲ್ಯಾಣ್‌ಕುಮಾರ್, ಉದಯ್‌ಕುಮಾರ್ ಮುಂತಾದವರು ಬೆಳ್ಳಿತೆರೆಗೆ ಬಂದರು. ೧೯೫೪ರಿಂದ ೧೯೬೪ರ ಕಾಲಾವಧಿಯಲ್ಲಿ ನಿರ್ಮಾಣಗೊಂಡ ೧೨೫ ಚಿತ್ರಗಳಲ್ಲಿ ರಾಜ್‌ಕುಮಾರ್ ಅವರೇ ೫೩ ಚಿತ್ರಗಳಲ್ಲಿ ನಾಯಕರಾಗಿದ್ದರು. ೧೯೫೪ರಲ್ಲಿ ಬೇಡರ ಕಣ್ಣಪ್ಪದಲ್ಲಿ ರಾಜ್‌ಕುಮಾರ, ೧೯೫೪ರಲ್ಲಿ ತೆರೆಕಂಡ ನಟಶೇಖರ ಚಿತ್ರದಲ್ಲಿ ಕಲ್ಯಾಣ್ ಕುಮಾರ್, ೧೯೫೬ರಲ್ಲಿ ಭಾಗ್ಯೋದಯ ಚಿತ್ರದ ಮೂಲಕ ಉದಯಕುಮಾರ್ ನಾಯಕ್ ನಟರಾಗಿ ಚಿತ್ರರಂಗ ಪ್ರವೇಶಿಸಿದರು.

ಒಂದೆಡೆ ನಾಯಕ ನಟರ ಪ್ರಾಬಲ್ಯ ಬೆಳೆಯುತ್ತಾ ಕನ್ನಡ ಚಿತ್ರರಂಗ ತನ್ನ ಹಿರಿಮೆಯನ್ನು ಬೆಳೆಸಿಕೊಂಡಿತು. ಇನ್ನೊಂದೆಡೆ ಪ್ರಾದೇಶಿಕ ಚಿತ್ರೋದ್ಯಮಕ್ಕೆ ಉತ್ತೇಜನ ನೀಡುವ ದೃಷ್ಟಿಯಿಂದ ಕೇಂದ್ರ ಸರ್ಕಾರ ರಾಷ್ಟ್ರ ಮಟ್ಟದಲ್ಲಿ ಪ್ರಾದೇಶಿಕ ಚಿತ್ರಗಳಿಗೆ ಪ್ರಶಸ್ತಿ ನೀಡುವ ಸಂಪ್ರದಾಯವನ್ನು ಆರಂಭಿಸಿತು. ಇದುಕೂಡ ಕನ್ನಡ ಚಿತ್ರಗಳ ಗುಣಮಟ್ಟ ಸುಧಾರಣೆಗೆ ಪ್ರಮುಖ ಅಂಶವಾಯಿತು. ಪ್ರಶಸ್ತಿಯನ್ನು ಆರಂಭಿಸಿದ ೧೯೫೪ ವರ್ಷದಲ್ಲೇ 'ಬೇಡರ ಕಣ್ಣಪ್ಪ' ಈ ಪ್ರಶಸ್ತಿಯನ್ನು ಪಡೆದ ಮೊದಲ ಚಿತ್ರವಾಯಿತು. ರಾಜ್‌ಕುಮಾರ್ ಅವರನ್ನು ತೆರೆಗೆ ತಂದ ಮೊದಲ ಚಿತ್ರ ಎಂಬ ದಾಖಲೆಯ ಜತೆಗೆ, ಕೇಂದ್ರ ಪ್ರಶಸ್ತಿ ಪಡೆದ ಮೊದಲ ಚಿತ್ರ ಎಂಬ ದಾಖಲೆಯೂ ಈ ಚಿತ್ರಕ್ಕೆ ಸಲ್ಲುತ್ತದೆ.

ಕನ್ನಡ ಚಲನಚಿತ್ರಗಳು ಬಣ್ಣದ ಯುಗಕ್ಕೆ ಕಾಲಿಟ್ಟಿದ್ದು ೧೯೫೫ರಲ್ಲಿ ತೆರೆಕಂಡ ಸ್ತ್ರೀರತ್ನ ಚಿತ್ರದ ಮೂಲಕ. ಸ್ತ್ರೀರತ್ನ ಚಿತ್ರದ ಎರಡು ರೀಲನ್ನು ಬಣ್ಣದಲ್ಲಿ ತಯಾರಿಸಲಾಯಿತು. ಇದರ ನಂತರ ೧೯೬೦ರಲ್ಲಿ ಬಿ. ಆರ್. ಪಂತುಲು, ಪದ್ಮಿನಿ ಪಿಕ್ಚರ್ಸ್ ಲಾಂಛನದಲ್ಲಿ ನಿರ್ಮಿಸಿದ 'ಮಕ್ಕಳ ರಾಜ್ಯ' ಕೂಡ ಭಾಗಶಃ ವರ್ಣದಲ್ಲಿತ್ತು. ೧೯೬೪ರಲ್ಲಿ 'ಅಮರಶಿಲ್ಪಿ ಜಕಣಾಚಾರಿ' ಚಿತ್ರ ಬಿಡುಗಡೆಯಾಗುವವರೆಗೆ ಕನ್ನಡ ವಾಕ್ಚಿತ್ರಗಳ ಪೈಕಿ ನಾಲ್ಕು ಚಿತ್ರಗಳಷ್ಟೇ ಭಾಗಶಃ ವರ್ಣದಲ್ಲಿದ್ದವು. ವಾಕ್ಚಿತ್ರ ಆರಂಭವಾದ ೩೦ ವರ್ಷಗಳ ನಂತರ ಕನ್ನಡದಲ್ಲಿ 'ಅಮರಶಿಲ್ಪಿ ಜಕಣಾಚಾರಿ' ಮೊದಲ ವರ್ಣ ಚಿತ್ರವಾಯಿತು. ಬಿ. ಎಸ್. ರಂಗಾ ಇದರ ನಿರ್ಮಾಪಕರಾಗಿದ್ದರು. ೧೯೬೪ರಲ್ಲಿ ತಯಾರಾಗಿರುವ 'ನಾಂದಿ' ಕನ್ನಡ ಚಿತ್ರರಂಗದಲ್ಲಿ ಹೊಸ ಅಲೆಯ ಚಿತ್ರ ಪರಂಪರೆಗೆ ನಾಂದಿಯಾಯಿತು.

ವಿಭಿನ್ನ ಕತೆಯೊಂದನ್ನು ವಿಭಿನ್ನ ರೀತಿಯಲ್ಲಿ ಎನ್.ಲಕ್ಷ್ಮೀನಾರಾಯಣ ನಿರ್ಮಿಸಿದರು. ೧೯೬೫ರ ವೇಳೆಗೆ ಕನ್ನಡ ಚಿತ್ರರಂಗ ಒಂದು ಪ್ರಬುದ್ಧ ಸ್ಥಿತಿಗೆ ತಲುಪಿತ್ತು. ಬಣ್ಣದ ಚಿತ್ರಗಳೂ ಬಂದಿದ್ದವು. ಈ ವೇಳೆಗೆ ಕನ್ನಡ ಚಿತ್ರಗಳಿಗೆ ಮಾರುಕಟ್ಟೆಯೊಂದನ್ನು ಸೃಷ್ಟಿಸಲು ಚಿತ್ರರಂಗದ ಗಣ್ಯರು ಶ್ರಮಿಸಿದ್ದರು. ಸೀಮಿತ ಮಾರುಕಟ್ಟೆ ಕನ್ನಡದ ಪಾಲಿಗೆ ಇರುವಂತೆ ಮಾಡಿದ್ದರು. ಸದಭಿರುಚಿಯ ಚಿತ್ರ ತಯಾರಿಕೆಯ ಮೂಲಕ ಕನ್ನಡ ಪ್ರೇಕ್ಷಕ ವರ್ಗವೊಂದನ್ನು ಸೃಷ್ಟಿಸಿದ ಕೀರ್ತಿ ಅರವತ್ತರ ದಶಕದ ನಿರ್ಮಾಪಕ, ನಿರ್ದೇಶಕರಿಗೆ ಸಲ್ಲುತ್ತದೆ.

ಕನ್ನಡ ಚಿತ್ರರಂಗದ ಪರಿಸ್ಥಿತಿ ಅರಿತ ರಾಜ್ಯ ಸರ್ಕಾರ ಸಬ್ಸಿಡಿ ನೀಡುವ ನೀತಿಯನ್ನು ತರುವ ಮೂಲಕ ೧೯೬೭ರಲ್ಲಿ ಕನ್ನಡ ಚಿತ್ರರಂಗಕ್ಕೆ ಆಸರೆ ನೀಡಿತು. ಇದು ಕನ್ನಡ ಚಿತ್ರರಂಗದ ಏರು ಮುಖಕ್ಕೆ ಪ್ರಮುಖ ಕಾರಣವಾಗಿದೆ, ರಾಜ್ಯದಲ್ಲೇ ತಯಾರಾದ ಚಿತ್ರಗಳಿಗೆ ಸಹಾಯ ಧನ ನೀಡುವ ನೀತಿಯನ್ನು, ಕನ್ನಡ ಚಿತ್ರರಂಗ ಕರ್ನಾಟಕದಲ್ಲೇ ತಳ ಊರುವಂತೆ ಮಾಡಿತು. ೧೯೬೫ ರಿಂದ ೧೯೮೫ ರವರೆಗಿನ ಕನ್ನಡ ಚಿತ್ರರಂಗ ೨೦ ವರ್ಷಗಳ ಹಾದಿಯಲ್ಲಿ ಈ ಆಸರೆಗಳು ನೆರವಿಗೆ ಬಂದು ಕನ್ನಡ ಚಿತ್ರರಂಗ ಸುವರ್ಣಯುಗವನ್ನು ಕಂಡಿತು. ೧೯೬೫ರ ನಂತರದ ಮಹತ್ವದ ಬೆಳವಣಿಗೆ ಎಂದರೆ ಸಾಹಿತ್ಯ ಮತ್ತು ಸಾಹಿತಿಗಳನ್ನು ಚಿತ್ರರಂಗ ಗೌರವಿಸಿದ್ದು. ವಾಕ್ಚಿತ್ರದ ಆರಂಭದ

ವರ್ಷಗಳಿಂದಲೂ ಕನ್ನಡ ಚಿತ್ರರಂಗಕ್ಕೂ ಸಾಹಿತಿಗಳಿಗೂ ನಿಕಟ ಸಂಪರ್ಕವಿದೆ. 'ಸತಿ ಸಲೋಚನ'ದ ಬೆಳ್ಳಾವೆ ನರಹರಿ ಶಾಸ್ತ್ರಿಗಳು, ಎರಡನೆಯ ವಾಕ್ಚಿತ್ರದ ಸಾಹಿತಿ ದೇವುಡು ನರಸಿಂಹ ಶಾಸ್ತ್ರಿ ಮುಂತಾದವರನ್ನು ಉದಾಹರಿಸಬಹುದು. ೧೯೬೫ರ ನಂತರ ಈ ಪ್ರವೃತ್ತಿ ಹೆಚ್ಚಾಯಿತು. ಹೆಸರಾಂತ ಸಾಹಿತಿಗಳ ಕೃತಿಗಳನ್ನು ಚಲನಚಿತ್ರಕ್ಕೆ ಅಳವಡಿಸಲು ನಿರ್ಮಾಪಕರು ನಿರ್ದೇಶಕರು ಮುಂದಾದರು. ಕತೆ, ಕಾದಂಬರಿ, ನಾಟಕಗಳನ್ನು, ಸಿನಿಮಾಕ್ಕೆ ಅಳವಡಿಸುವ ಕೆಲಸ ನಡೆಯಿತು. ೧೯೬೦ರ ದಶಕದಲ್ಲೇ ಕೃಷ್ಣಮೂರ್ತಿ ಪುರಾಣಿಕರ 'ಧರ್ಮ ದೇವತೆ' ಕಾದಂಬರಿ ಆಧರಿಸಿ ಟಿ.ವಿ.ಸಿಂಗ್‌ಠಾಕೂರ್ 'ಕರುಣೆಯೇ ಕುಟುಂಬದ ಕಣ್ಣು' ಚಿತ್ರವನ್ನು ನಿರ್ದೇಶಿಸಿದರು. ಕನ್ನಡ ಕಾದಂಬರಿಯನ್ನು ಆಧರಿಸಿ ತಯಾರಿಸಿದ ಮೊದಲ ವಾಕ್ಚಿತ್ರ ಇದಾಯಿತು. ೧೯೬೩ರಲ್ಲಿ ಮತ್ತೇ ಕೃಷ್ಣಮೂರ್ತಿ ಪುರಾಣಿಕರದೇ ಆದ 'ಕುಲವಧು' ಚಲನ ಚಿತ್ರವಾಗಿ ತೆರೆಕಂಡಿತು.

ಈ ಪರಂಪರೆ ಸುವರ್ಣಯುಗದಲ್ಲಿ ಮತ್ತಷ್ಟು ಮುಂದುವರೆಯಿತು. ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿಗಳಾದ ಕುವೆಂಪು, ದ.ರಾ.ಬೇಂದ್ರೆ, ಶಿವರಾಮ್‌ಕಾರಂತ್, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಯು.ಆರ್.ಅನಂತಮೂರ್ತಿ ಅವರುಗಳಲ್ಲದೆ ಜನಪ್ರಿಯ ಸಾಹಿತಿಗಳಾದ ಭೈರಪ್ಪ, ತೇಜಸ್ವಿ, ಕೃಷ್ಣಮೂರ್ತಿ ಪುರಾಣಿಕ, ಅ.ನ.ಕೃ, ತರಾಸು, ಚದುರಂಗ, ಎಂ.ಕೆ. ಇಂದಿರಾ, ತ್ರಿವೇಣಿ, ಜಿ.ಎಸ್.ಶಿವರುದ್ರಪ್ಪ, ಶ್ರೀಕೃಷ್ಣ ಆಲನಹಳ್ಳಿ ಮುಂತಾದವರ ಕೃತಿಗಳು, ಕವನಗಳು ಒಂದಲ್ಲಾ ಒಂದು ಚಿತ್ರದಲ್ಲಿ ಸೇರಿದವು. ಕನ್ನಡ ಚಲನ ಚಿತ್ರಗಳಿಗೆ ಸಾಹಿತ್ಯ ಸ್ಪರ್ಶ ನೀಡುವ ಈ ಪ್ರವೃತ್ತಿಯಿಂದಾಗಿ ಕನ್ನಡ ಚಿತ್ರಗಳಲ್ಲಿ ಗುಣಾತ್ಮಕ ಬೆಳವಣಿಗೆ ಕಂಡು ಬಂದಿತು.

ಈ ಕಾಲಾವಧಿಯಲ್ಲಿ ಪೌರಾಣಿಕ, ಜಾನಪದ ಚಿತ್ರಗಳ ತಯಾರಿಕೆ ಇಳಿಮುಖವಾಗಿ ಸಾಮಾಜಿಕ ಚಿತ್ರಗಳ ತಯಾರಿಕೆ ಹೆಚ್ಚಿತು. ಸಾಮಾಜಿಕ ಚಿತ್ರ ತಯಾರಿಕೆ ಹೆಚ್ಚಾದಂತೆ ನಡು ನಡುವೆ ಬಂದ ಒಂದೊಂದು ಪೌರಾಣಿಕ, ಐತಿಹಾಸಿಕ ಚಿತ್ರಗಳೂ ಕೂಡ ಮತ್ತೆ ಜನಪ್ರಿಯವಾದವು. ೧೯೬೫ರ ನಂತರದ ಅವಧಿಯ ಮತ್ತೊಂದು ಮಹತ್ವದ ಬೆಳವಣಿಗೆ ಎಂದರೆ ಚಲನಚಿತ್ರ ನಿರ್ದೇಶನ

'ಮಾಧ್ಯಮ' ಎಂಬುದನ್ನು ಪುಟ್ಟಣ್ಣ ಕಣಗಾಲ ರುಜುವಾತು ಪಡಿಸಿದ್ದು. ೧೯೬೭ರಲ್ಲಿ 'ಬೆಳ್ಳಿ ಮೋಡ' ಚಿತ್ರದ ಮೂಲಕ ತಮ್ಮ ಪ್ರತಿಭೆ ಪ್ರದರ್ಶಿಸಿದ ಪುಟ್ಟಣ್ಣ ಕಣಗಾಲ್ ತಾರಾ ಮೌಲ್ಯವಿಲ್ಲದೆ ಸತ್ವಶಾಲಿ ಕಥೆಯನ್ನು ನಂಬಿದರೆ ಯಶಸ್ಸು ಖಚಿತ ಎಂಬುದನ್ನು ಸಾಧಿಸಿದರು. ಅವರ ಚಿತ್ರಗಳಲ್ಲಿ ಕಥೆಯೇ ನಾಯಕ ಅಗಿರುತ್ತಿತ್ತು. ಆದ್ದರಿಂದ ಚಿತ್ರರಂಗದ ಇತಿಹಾಸದಲ್ಲಿ ಅವರ ಹೆಸರು ಸ್ಥಿರವಾಗಿದೆ.

ಉತ್ತಮ ಸಾಂಸಾರಿಕ ಚಿತ್ರಗಳ ನಿರ್ದೇಶನಕ್ಕೆ ಹೆಸರಾದ ಸಿದ್ಧಲಿಂಗಯ್ಯ ಈ ಅವಧಿಯಲ್ಲಿದ್ದರು. ಹಲವಾರು ಚಿತ್ರಗಳಲ್ಲಿ ಸಹಾಯಕ ನಿರ್ದೇಶಕರಾಗಿ ದುಡಿಯುತ್ತಿದ್ದ ಸಿದ್ಧಲಿಂಗಯ್ಯ ದ್ವಾರಕಾ ಫಿಲಿಂಸ್ ಲಾಂಛನದಲ್ಲಿ ೧೯೬೯ರ ಮೇಯರ್ ಮುತ್ತಣ್ಣ ಚಿತ್ರವನ್ನು ನಿರ್ದೇಶಿಸಿದರು. ಟಿ.ಕೆ.ರಾಮರಾವ್ ಕಾದಂಬರಿ ಆಧಾರಿತ 'ಬಂಗಾರದ ಮನುಷ್ಯ' ೧೦೪ ವಾರಗಳ ಕಾಲ ಪ್ರದರ್ಶನಗೊಂಡು ದಾಖಲೆ ನಿರ್ಮಿಸಿತು. ಕನ್ನಡ ಚಿತ್ರರಂಗದ ಮತ್ತೊಬ್ಬ ನಿರ್ದೇಶಕ ಕೆ.ಎಸ್.ಎಲ್.ಸ್ವಾಮಿ (ರವೀ) ೧೯೬೫ರಲ್ಲಿ ಹರಿಶ್ಚಂದ್ರ ಚಟರ್ಜಿಯವರ 'ಚಂದ್ರನಾಥ' ಕಥೆ

ಆಧರಿತ 'ತೂಗುದೀಪ' ಚಿತ್ರವನ್ನು ನಿರ್ದೇಶಿಸಿದರು. ಈ ಸಮಯದಲ್ಲೇ ಚಿತ್ರರಂಗಕ್ಕೆ ಒಬ್ಬ ಖಳನಟನಾದ ಶ್ರೀನಿವಾಸ್ ಅವರ ಅಭಿನಯ ರಂಗಕ್ಕೆ ಬಂದು ತೂಗುದೀಪ ಶ್ರೀನಿವಾಸ ಎಂದೇ ಹೆಸರಾದರು. ೧೯೭೭ರ 'ನಾಗರಹೊಳೆ' ಚಿತ್ರದ ಮೂಲಕ ಪ್ರಖ್ಯಾತಿಗೆ ಬಂದ ಎಸ್.ವಿ.ರಾಜೇಂದ್ರಸಿಂಗ್ ಬಾಬು ಕನ್ನಡದ ಮತ್ತೊಬ್ಬ ಗಮನಾರ್ಹ ನಿರ್ದೇಶಕ. ೧೯೭೮ರಲ್ಲಿ ತೆರೆಕಂಡ 'ಕಿಲಾಡಿಜೋಡಿ' ಚಿತ್ರ ನಿರ್ದೇಶಿಸಿದ ತಾಂತ್ರಿಕವಾಗಿ ಶ್ರೀಮಂತ ಚಿತ್ರಗಳನ್ನು ತೆಗೆಯುವುದರಲ್ಲಿ ನಿಸ್ಸೀಮರೆನಿಸಿದರು. ೧೯೮೦ರಲ್ಲಿ 'ಅಂತ' ಚಿತ್ರದ ಮೂಲಕ ಕನ್ನಡ ಚಿತ್ರಗಳ ಟ್ರೆಂಡನ್ನೇ ಬದಲಿಸಿದರು.

ಕನ್ನಡ ಚಿತ್ರರಂಗದ ಸುವರ್ಣಯುಗದಲ್ಲಿ ಕನ್ನಡ ಚಿತ್ರರಂಗಕ್ಕೆ ನಿರ್ದೇಶಕರುಗಳ ಅವ್ಯಾಹತ ಆಗಮನವೇ ಆಯಿತು. ಹಳಬರ ಜತೆ ಹೊಸಬರು ಸೇರಿಕೊಂಡು ಕನ್ನಡ ಚಿತ್ರರಂಗಕ್ಕೆ ಹೊಸ ಸೊಬಗನ್ನು ತಂದರು.

ಹೊಸ ಅಲೆ ಎನ್ನುವುದು ಕನ್ನಡ ಚಿತ್ರರಂಗದ ಮಹತ್ವದ ಬದಲಾವಣೆಯ ಕಾಲವಾಗಿತ್ತು. ಇದಕ್ಕೂ ಮುಂಚೆ ೧೯೬೪ರಲ್ಲಿ ತಯಾರಾಗಿರುವ ''ನಾಂದಿ'' ಕನ್ನಡ ಚಿತ್ರರಂಗದಲ್ಲಿ ಹೊಸ ಅಲೆಯ ಚಿತ್ರ ಪರಂಪರೆಗೆ ನಾಂದಿಯಾಗಿತ್ತು. ಆದರೂ ''ಹೊಸ ಅಲೆಯನ್ನು ೧೯೭೦ರ 'ಸಂಸ್ಕಾರ' ಚಿತ್ರದ ಮೂಲಕ ಗುರುತಿಸಲಾಗಿದೆ. ಹೊಸಅಲೆ ಎಂಬುದನ್ನು ಖಚಿತವಾಗಿ ಹೇಳಲು ಸಾಧ್ಯವಾಗಿಲ್ಲ. ಆದರೆ ಚಿತ್ರಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಕಮರ್ಷಿಯಲ್ ಚಿತ್ರಗಳಿಗಿಂತ ವಿಭಿನ್ನವಾಗಿ ನಿಲ್ಲುವ ಚಿತ್ರ ಎಂಬ ವಿಂಗಡಣೆ ಮಾಡಲಾಗುತ್ತದೆ. ಹೊಸ ಅಲೆಯ ಚಿತ್ರ ನಿರ್ದೇಶಕರಲ್ಲಿ ಪ್ರತಿಭಾವಂತ ಹಾಗೂ ಹೊಸ ವಿಚಾರಗಳ ಮೂಲ ಹೆಸರಾಗಿರುವ ಗಿರೀಶ್ ಕಾಸರವಳ್ಳಿ ಅವರು ಹೊಸ ಅಲೆಯ ಚಿತ್ರ ಪರಂಪರೆಯಲ್ಲಿ ಮಹತ್ವದ ಚಿತ್ರಗಳನ್ನು ನೀಡಿದ್ದಾರೆ. ಕನ್ನಡದಲ್ಲಿ ಹೊಸ ಅಲೆಯ ಚಿತ್ರ ಪರಂಪರೆಯ ಬಗ್ಗೆ ಅವರು ಹೀಗೆ ಅಭಿಪ್ರಾಯ ಪಟ್ಟಿದ್ದಾರೆ''. ೬೦ರ ದಶಕದಲ್ಲಿ ಫ್ರಾನ್ಸ್‌ನಲ್ಲಿ ಕಂಡ ಚಿತ್ರಶೈಲಿ 'ಹೊಸಅಲೆ' ಯಂತೆ ಜೀವನದ ಬಗೆಗಿನ ಹತಾಶೆ, ಪ್ರಕ್ಷುಬ್ಧಿತೆ ನಿರಾಶತನವನ್ನು ತಾತ್ವಿಕವಾಗಿ ಗ್ರಹಿಸುತ್ತಾ, ಅದಕ್ಕೆ ಪ್ರತಿರೂಪವಾಗಿ ಸಿನಿಮಾ ಭಾಷೆಯನ್ನು ರೂಢಿಸುವ ಕಾಳಜಿ ನಮ್ಮ ಚಿತ್ರ ನಿರ್ದೇಶಕರದಾಗಿರಲಿಲ್ಲ ಅಥವಾ ೭೦ರ ದಶಕದಲ್ಲಿ ಜರ್ಮನಿಯ ತರುಣ ನಿರ್ದೇಶಕರೆಲ್ಲ ಒಬೇರ

ಹೌಸ್‌ನ ಚಿತ್ರೋತ್ಸವದಲ್ಲಿ ಸೇರಿ ಒಂದು ಪ್ರಣಾಳಿಕೆ ಸಿದ್ಧ ಮಾಡಿಕೊಂಡಂತೆ ಇಲ್ಲಿ ಯಾವುದೇ ಪ್ರಯತ್ನಗಳ ಅಡಿಯಾಳಾಗಿ ನಮ್ಮ ಕನ್ನಡದ ಹೊಸ ಅಲೆ ಬರಲಿಲ್ಲ, ಹಾಗಾಗಿ 'ಸಂಸ್ಕಾರ'ದಿಂದ ಈ ಚಿತ್ರಪಂಥ ಆರಂಭಗೊಂಡಿತು ಎಂದು ಹೇಳಹೊರಟರೆ ಆ ಚಿತ್ರಕ್ಕಿಂತ ಮೊದಲ ಕಾಣಿಸಿಕೊಂಡಿದ್ದ ಎನ್.ಲಕ್ಷ್ಮೀನಾರಾಯಣ್ ಅವರ 'ನಾಂದಿ'ಯಾಗಲೀ, ಎಂ.ವಿ. ಕೃಷ್ಣಸ್ವಾಮಿಯವರ 'ಸುಬ್ಬಾಶಾಸ್ತ್ರಿ' ಯಾಗಲಿ, ಚದುರಂಗ ಅವರ 'ಸರ್ವಮಂಗಳಾ' ಚಿತ್ರವನ್ನಾಗಲಿ ಯಾಕೆ ಈ ಗುಂಪಿಗೆ ಸೇರಿಸಬಾರದು ಎಂದು ಯೋಚಿಸುವ ಸಾಧ್ಯತೆಗಳಿವೆ. ಹೊಸ ಅಲೆ ಎಂಬುದು ಗಿರೀಶ್ ಕಾಸರವಳ್ಳಿ ಹೇಳುವಂತೆ ಖಚಿತ ಚಳುವಳಿಯ ಹಿನ್ನೆಲೆಯಲ್ಲಿ ಬಂದಿಲ್ಲ. ಆದುದರಿಂದ ಇದು ಇನ್ನೂ ಅನುಕರಣ ಶೈಲಿಯಲ್ಲಿಯೇ ಉಳಿದುಕೊಂಡು ಬಂದಿರುವುದು ಅಂತಹ ಚಿತ್ರಗಳ ತೌಲನಿಕ ವಿಶ್ಲೇಷಣೆ, ವಿಮರ್ಶೆಗಳಿಂದ ಕಾಣಬರುತ್ತದೆ. ೧೯೭೦ ರಿಂದ ೮೦ರ ದಶಕದಲ್ಲಿಕಾಣುವ ಹೊಸ ಅಲೆಯ ಚಿತ್ರಗಳು ಬೇರೆ ಬೇರೆಯೇ ಆದ ವಿಭಿನ್ನ ಮಜಲುಗಳಲ್ಲಿ ನಿಲ್ಲುತ್ತವೆ. ಆರಂಭದ ಚಿತ್ರಗಳಿಗೆ ಸತ್ಯಜಿತ್‌ರಾಯ್ ಅವರ ಪ್ರಭಾವವಿದ್ದಂತೆ ೮೦ರ ದಶಕದ ಚಿತ್ರಗಳಿಗೆ ೭೦ರ ದಶಕದ ಚಿತ್ರಗಳು ಪ್ರಭಾವ ಬೀರಿವೆ.

೧೯೭೦ರಲ್ಲಿ ಸಂಸ್ಕಾರ ಯಶಸ್ವಿಯಾಗುತ್ತಿದ್ದಂತೆಯೇ 'ಸಂಸ್ಕಾರ' ಚಿತ್ರ ತಂಡದಲ್ಲಿದ್ದವರೆಲ್ಲ ಬೇರೆ ಬೇರೆಯಾಗಿ ಅದೇ ಪರಂಪರೆಯ ಚಿತ್ರಗಳನ್ನು ನಿರಂತರವಾಗಿ ತಯಾರಿಸುತ್ತಾ ಬಂದರು. ೧೯೭೨ರಲ್ಲಿ ಗಿರೀಶ್ ಕಾರ್ನಾಡ್, ೧೯೭೩ರಲ್ಲಿ ಪಿ.ವಿ.ನಂಜರಾಜ್ ಅರಸು, ೧೯೭೫ರಲ್ಲಿ ಬಿ.ವಿ.ಕಾರಂತ, ೧೯೭೬ರಲ್ಲಿ ಪಿ.ಲಂಕೇಶ್, ೧೯೭೭ರಲ್ಲಿ ಸಿ.ಆರ್. ಸಿಂಹ, ಎಂ. ಎಸ್. ಸತ್ಯು ಗಿರೀಶ್ ಕಾಸರವಳ್ಳಿ, ೧೯೭೮ರಲ್ಲಿ ಬರಗೂರು ರಾಮಚಂದ್ರಪ್ಪ ಇವರುಗಳು 'ಸಂಸ್ಕಾರ'ರದ ನಂತರದ ದಿನಗಳನ್ನು ಸತತ ಹೊಸ ಅಲೆಯ ಚಿತ್ರಗಳ ನಿರ್ಮಾಣದಲ್ಲಿ ತೊಡಗಿಸಿ ಇದೊಂದು ಸಂಘಟಿತ ಹೊಸ ಪಂಥದ ಚಳುವಳಿಯೇನೋ ಎಂಬಂತೆ ಮುಂದುವರೆಸಿ, ಹೊಸ ಅಲೆಯನ್ನು ಉಳಿಸಿದರು.

೧೯೭೦ರ ನಂತರ ಆರಂಭವಾದ ಹೊಸ ಅಲೆಯ ವೇಗದೊಳಗೆ ಎನ್.ಲಕ್ಷ್ಮೀನಾರಾಯಣ್ ಅವರೂ ಸೇರಿಕೊಂಡು ಮೂರು ಚಿತ್ರಗಳನ್ನು ನಿರ್ದೇಶಿಸಿದರು ಉಯ್ಯಾಲೆ, ಮುಕ್ತಿ, ಅಬಚೂರಿನ ಪೋಸ್ಟ್ ಆಫೀಸು, ಹೊಸ ಆಲೆಯಲ್ಲಿ ಕಾಣಿಸಿಕೊಂಡ ಚಿತ್ರಗಳು ಸಂಸ್ಕಾರದ ನಂತರ ಎನ್.ಲಕ್ಷ್ಮೀನಾರಾಯಣ್ ಅವರ ಉಯ್ಯಾಲೆ ೧೯೬೯, ಮುಕ್ತಿ ೧೯೭೦,

ಅಬಚೂರಿನ ಪೋಸ್ಟ್ ಆಫೀಸ್ ೧೯೭೩-೧೯೭೭ರಲ್ಲಿ ಪಟ್ಟಾಭಿರಾಮ ರೆಡ್ಡಿಯವರ ಚಂಡಮಾರುತ ಗಿರೀಶ್ ಕಾರ್ನಾಡರ ವಂಶವೃಕ್ಷ, ೧೯೭೩ರಲ್ಲಿ ಪಿ.ವಿ.ನಂಜರಾಜ ಅರಸು ಅವರ ಸಂಕಲ್ಪ, ೧೯೭೪ರಲ್ಲಿ ಕಾಡು ಇದೇ ಅವಧಿಯಲ್ಲಿ ಬಸವರಾಜ್ ಕಟ್ಟೀಮನಿ ಕಾದಂಬರಿ ಆಧರಿಸಿದ ಮಾಡಿ ಮಡಿದವರು ಚಿತ್ರವನ್ನು ಕೆ.ಎಂ.ಶಂಕರಪ್ಪ ನಿರ್ದೇಶಿಸಿದರು. ೧೯೭೫ರಲ್ಲಿ ಬಿ.ವಿ.ಕಾರಂತರು ಚೋಮನದುಡಿ ಚಿತ್ರವನ್ನು ತಯಾರಿಸಿದರು. ೧೯೭೬ರಲ್ಲಿ ಲಂಕೇಶ್ ಅವರ ಪಲ್ಲವಿ, ೧೯೭೭ರಲ್ಲಿ ಅನುರೂಪ, ಖಂಡವಿದೆಕೋ ಮಾಂಸವಿದೆಕೋ ೧೯೭೯, ಎಲ್ಲಿಂದಲೋ ಬಂದವರು ೧೯೮೯ರಲ್ಲಿ ತೆರೆಕಂಡಿತು.

೧೯೭೭ರಲ್ಲಿ 'ಘಟಶ್ರಾದ್ಧ' ನಿರ್ದೇಶಿಸುವುದರೊಂದಿಗೆ ಗಿರೀಶ್ ಕಾಸರವಳ್ಳಿ ಹೊಸಅಲೆ ಚಿತ್ರ ನಿರ್ಮಾಣಕ್ಕೆ ಹೊಸ ಆಯಾಮ ನೀಡಿದರು. ಇದರ ನಂತರ ಕಾಸರವಳ್ಳಿಯವರು ೧೯೮೦ ರಲ್ಲಿ ಆಕ್ರಮಣ, ಮೂರುದಾರಿಗಳು ೧೯೮೧, ತಬರನ ಕಥೆ ೧೯೮೭, ಬಣ್ಣದ ವೇಷ ೧೯೮೮, ಮನೆ ೧೯೯೦, ಕ್ರೌರ್ಯ ಚಿತ್ರಗಳನ್ನು ನಿರ್ದೇಶಸಿದರು. ಇವುಗಳೆಲ್ಲವೂ ಹೊಸ ಅಲೆಯಲ್ಲಿ ಮೂಡಿಬಂದ ಚಿತ್ರಗಳಾಗಿವೆ.

೧೯೭೭ರಲ್ಲಿ ವಿ. ಆರ್. ಕೆ. ಪ್ರಸಾದ್ ಅವರ ಋಷ್ಯಶೃಂಗ ತೆರೆಕಂಡಿತು. ಮಾಸ್ತಿಯವರ ಕಾಕನಕೋಟೆಯನ್ನು ಸಿ. ಆರ್. ಸಿಂಹ, ಭೈರಪ್ಪನವರ ತಬ್ಬಲಿಯು ನೀನಾದೆ ಮಗನೆ ಚಿತ್ರವನ್ನು ಬಿ.ವಿ.ಕಾರಂತರು ಹಾಗೂ ಗಿರೀಶ್ ಕಾರ್ನಾಡ್ ನಿರ್ದೇಶಿಸಿದರು. ಎ. ಎಸ್. ಸತ್ಯು ಅನಂತಮೂರ್ತಿಯವರ ಕಾದಂಬರಿ ಆಧರಿಸಿ 'ಬರ' ಚಿತ್ರವನ್ನು ನಿರ್ದೇಶಿಸಿದರು. ವಾಣಿಜ್ಯ ಚಿತ್ರಗಳಗಿಂತ ತೀರಾ ಭಿನ್ನವಾದ ವಸ್ತು, ಭಿನ್ನವಾದ ನಿರೂಪಣೆ ಇರುವ ಇಂತಹ ಚಿತ್ರಗಳಿಗೆ ಪ್ರೇಕ್ಷಕ ವರ್ಗ ಕಡಿಮೆ ಇದ್ದರೂ ಅದೊಂದು ಪ್ರತ್ಯೇಕವಾದ ಪ್ರೇಕ್ಷಕ ವರ್ಗವು ಹುಟ್ಟಿಕೊಂಡಿತು.

೧೯೯೦ರಿಂದ ಬದಲಾವಣೆ ಕಾಣಲು ಆರಂಭಿಸಿದ ಕನ್ನಡ ಚಿತ್ರರಂಗ, ಹತ್ತೇ ವರ್ಷಗಳಲ್ಲಿ ಜಾಗತಿಕ ವಲಯದಲ್ಲಿ ನಡೆದ ಕ್ಷಿಪ್ರ ಪ್ರಗತಿ, ಕನ್ನಡ ಚಿತ್ರರಂಗದ ಮೇಲೂ ಪರಿಣಾಮ ಬೀರಿತು. ಆರಂಭದಿಂದ ಹೆಜ್ಜೆ ಹೆಜ್ಜೆಗೂ ಸವಾಲುಗಳನ್ನು ಎದುರಿಸುತ್ತಲೇ ಬಂದ ಕನ್ನಡ ಚಿತ್ರರಂಗ

ಮತ್ತೊಂದು ಸವಾಲನ್ನು ಎದುರಿಸಬೇಕಾಗಿ ಬಂದಿತು. ೨೧ನೇ ಶತಮಾನದಲ್ಲಿ ಕನ್ನಡ ಚಾನೆಲ್‌ಗಳು ಒಡ್ಡುತ್ತಿರುವ ಸ್ಪರ್ಧಾತ್ಮಕ ಸವಾಲು ಇದಾಗಿದೆ. ಇವುಗಳ ನಡುವೆ ಪಕ್ಕದ ರಾಜ್ಯಗಳಾದ ಕೇರಳ, ತಮಿಳುನಾಡು, ಆಂಧ್ರಪ್ರದೇಶಗಳಲ್ಲಿ ಆಯಾಭಾಷೆಯ ಚಿತ್ರಗಳು ಆಯಾ ರಾಜ್ಯಗಳಲ್ಲಿ ಬಿಡುಗಡೆಯಾಗುವ ದಿನದಂದೇ ಕರ್ನಾಟಕದಲ್ಲೂ ಬಿಡುಗಡೆಯಾಗುತ್ತಿರುವುದು. ಇದೂ ಸಹ ಕನ್ನಡ ಚಿತ್ರರಂಗ ಎದುರಿಸುತ್ತಿವ ಮತ್ತೊಂದು ದೊಡ್ಡ ಸವಾಲಾಗಿದೆ. ಇದೆಲ್ಲದರ ನಡುವೆಯೂ ಕನ್ನಡ ಚಿತ್ರರಂಗದಲ್ಲಿ ಶೀಘ್ರಗತಿಯ ಬೆಳವಣಿಗೆಯನ್ನು ಕಂಡಿತು. ೧೯೮೫ರಲ್ಲಿ ಕನ್ನಡ ಚಿತ್ರರಂಗಕ್ಕೆ ನುಗ್ಗಿದ ಹೊಸರಕ್ತದ ಮಹಾಪೂರ ಚಿತ್ರರಂಗದಲ್ಲಿ ನವಚೇತನವನ್ನು ತಂದಿತು.

ಆರಂಭದಲ್ಲಿ ಸುಬ್ಬಯ್ಯನಾಯ್ಡು, ಕೆಂಪರಾಜ್, ಇಂದುಶೇಖರ್, ಹೊನ್ನಪ್ಪಭಾಗವತರ್, ಈ ನಾಯಕರಿಂದ ಚಿತ್ರರಂಗ ಬೆಳೆಯಲು ಪ್ರಾರಂಭಿಸಿತು. ೧೯೫೪ರ ನಂತರ ರಾಜ್‌ಕುಮಾರ್, ಉದಯ್‌ಕುಮಾರ್, ಕಲ್ಯಾಣ್ ಕುಮಾರ್ ಇವರುಗಳ ಕಾಲ. ನಂತರದ ದಿನಗಳಲ್ಲಿ ರಾಜೇಶ್, ಗಂಗಾಧರ, ರಮೇಶ್, ಮುಂತಾದವರು ಕಾಣಿಸಿಕೊಂಡರು. ಇವರ ನಂತರದ ಪೀಳಿಗೆಯಲ್ಲಿ ಅಂಬರೀಷ್, ಶಂಕರ್‌ನಾಗ್, ಅನಂತನಾಗ್, ವಿಷ್ಣುವರ್ಧನ್ ಈ ನಟರು ತೆರೆಗೆ ಕಾಣಿಸಿಕೊಂಡರು. ಹೀಗೆ ಹೊಸ ನಾಯಕ - ನಾಯಕಿಯರ ಆಗಮನವು ಕನ್ನಡ ಚಿತ್ರರಂಗವನ್ನು ಉಳಿಸಿಕೊಂಡು,

ಬೆಳಸಿಕೊಂಡು ಬಂದಿತು. ಇತ್ತೀಚಿನ ದಿನಗಳಲ್ಲಿ ಬರುವ ಚಿತ್ರಗಳು ಭೂಗತ ಜಗತ್ತಿನ ವಸ್ತುವನ್ನುಳ್ಳ ಚಿತ್ರಗಳಾಗಿವೆ. ನಾಯಕನ ಕೈಯಲ್ಲಿ ಮಚ್ಚು. ಲಾಂಗುಗಳು ಇರುವ ದೃಶ್ಯಗಳು ಕಾಣಿಸಿಕೊಳ್ಳುತ್ತಿವೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಮೈಜಸ್ಟಿಕ್, ಜೋಗಿ, ಮಸ್ತಿ ಮುಂತಾದವುಗಳಾಗಿವೆ. ಇತ್ತೀಚಿಗೆ ತೆರೆಕಂಡ ದುನಿಯಾ ಹಾಗೂ ಮುಂಗಾರು ಮಳೆ ಚಿತ್ರಗಳು ಕನ್ನಡ ಚಿತ್ರರಂಗದ ದಿಕ್ಕನ್ನೇ ಬದಲಿಸಿವೆ. ತೆಲುಗು, ತಮಿಳು ಚಿತ್ರಗಳ ಹಾವಳಿಯಿಂದ ತಪ್ಪಿಸಿಕೊಂಡಂತಾಗಿದೆ. ತೆಲುಗು, ತಮಿಳು ಭಾಷೆಯ ಚಿತ್ರಗಳು ಕನ್ನಡದಲ್ಲಿ ಡಬ್ ಆಗಿ ಮೂಡಿ ಬರುತ್ತಿದ್ದವು. ಇಂತಹ ಸಮಯದಲ್ಲಿ ಪ್ರೇಕ್ಷಕರ ಮನಸ್ಸು ಸೂರೆಗೊಂಡ ಈ ಚಿತ್ರಗಳು ಗಲ್ಲಾ ಪಟ್ಟಿಗೆಯನ್ನು ತುಂಬಿಸುವುದರಲ್ಲಿ ಮೈಲುಗೈ ಸಾಧಿಸಿವೆ. ಪ್ರತಿಯೊಂದು ಊರಿನಲ್ಲೂ ಶತಕ ದಿನೋತ್ಸವವನ್ನು ಆಚರಿಸುತ್ತವೆ.

ಹೀಗೆ ಕನ್ನಡ ಚಿತ್ರರಂಗವು ರಂಗಭೂಮಿಯನ್ನು ಭದ್ರ ಬುನಾದಿಯನ್ನಾಗಿಸಿಕೊಂಡು ಸ್ಟುಡಿಯೋಗಳ ಮೂಲಕ, ಹೊಸನಾಯಕ - ನಾಯಕಿಯರೇ ಮೂಲಕ, ನಿರ್ದೇಶಕರ ಮೂಲಕ, ಹೊಸ ಅಲೆಯ ಮೂಲಕ, ಸಾಹಿತಿಗಳು ಮತ್ತು ಸಾಹಿತ್ಯದ ಮೂಲಕ, ನೆರೆ ರಾಜ್ಯದ ಚಿತ್ರದ ಹಾವಳಿಗಳ ನಡುವೆಯೂ ಬೆಳೆದು ಕೊಂಡು ಬಂದಿದೆ ಕಾಲ ಕಾಲಕ್ಕೆ ಚಿತ್ರದ ನಾಯಕರುಗಳ ಬದಲಾವಣೆ ನಿರ್ದೇಶಕರ ಬದಲಾವಣೆ ಹಾಗೆಯೇ ವಸ್ತು ತಂತ್ರಜ್ಞಾನ ಇವುಗಳ ಬದಲಾವಣೆಯು ಕನ್ನಡ ಚಿತ್ರರಂಗವನ್ನು ಬೆಳೆಸಿತು. ಒಟ್ಟಾರೆಯಾಗಿ ಕನ್ನಡ ಚಲನಚಿತ್ರ ರಂಗದ ದಶಕವಾರು ಬೆಳವಣಿಗೆಯನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ. ಪ್ರಾರಂಭದ ದಿನಗಳಲ್ಲಿ ಕನ್ನಡ ಚಿತ್ರರಂಗ ರಂಗಭೂಮಿಯೊಂದಿಗೆ ವಿಶೇಷ ನಂಟು ಹೊಂದಿತ್ತು. ರಂಗಭೂಮಿ ಕಲಾವಿದರು, ನಿರ್ದೇಶಕರು ಚಿತ್ರರಂಗದಲ್ಲಿ ತೊಡಗಿಕೊಂಡುದಲ್ಲದೆ. ನಾಟಕ ವಸ್ತುಗಳೇ ಸಿನಿಮಾಗಳಿಗೂ ವಸ್ತುಗಳಾದುವು. ಅದೇ ರೀತಿ ಪ್ರಾರಂಭದಲ್ಲಿ ಪೌರಾಣಿಕ ಚಿತ್ರಗಳೇ ಹೆಚ್ಚಾಗಿ ನಿರ್ಮಾಣವಾದುವು. ೬೦ರ ದಶಕ ಕನ್ನಡ ಚಲನಚಿತ್ರ ರಂಗಕ್ಕೆ ಹೊಸ ತಿರುವನ್ನು ಕೊಟ್ಟಿತು. ಐತಿಹಾಸಿಕ ಚಿತ್ರಗಳು ಹೆಚ್ಚಿನ ಪ್ರಮಾಣದಲ್ಲಿ ನಿರ್ಮಾಣವಾಗತೊಡಗಿದುದು ಈ ದಶಕದಲ್ಲಿ. ಅದೇ ರೀತಿ ಕಾದಂಬರಿಯನ್ನಾಧರಿಸಿ ಚಿತ್ರ ತಯಾರಾಗತೊಡಗಿದುದೂ ಇದೇ ದಶಕದಲ್ಲಿ (೧೯೬೪) ಕನ್ನಡದ ಪ್ರತಿಭಾನ್ವಿತ ನಿರ್ದೇಶಕರಾದ

ಪುಟ್ಟಣ್ಣ ಕಣಗಾಲ್, ಗೀತ ಪ್ರಿಯ - ಮುಂತಾದವರು, ರಾಜ್‌ಕುಮಾರ್, ಕಲ್ಯಾಣಕುಮಾರ್, ಉದಯಕುಮಾರ್ ರಂಥ ಕುಮಾರತ್ರಯರು ಚಿತ್ರರಂಗಕ್ಕೆ ಹೊಸ ಆಯಾಮವನ್ನು ತಂದು ಕೊಟ್ಟರು.

ದೇಸೀ ಸಂಸ್ಕೃತಿಯ ದೃಷ್ಟಿಯಿಂದ ಗಮನ ಸೆಳೆಯುವ ಗೀತಪ್ರಿಯ ನಿರ್ದೇಶನದ ಮಣ್ಣಿನ ಮಗ ಚಿತ್ರವೂ ಇದೇ ದಶಕ (೧೯೬೧)ರಲ್ಲಿ ತೆರೆಕಂಡಿತು ಗ್ರಾಮೀಣ ಜೀವನದ ವಿವರಗಳುಳ್ಳ ಹಳ್ಳಿಯ ಮಹತ್ವವನ್ನು ಹೇಳುವ ಈ ಚಿತ್ರ ೬೦ರ ದಶಕದ ಮುಖ್ಯ ಚಿತ್ರಗಳಲ್ಲೊಂದು. ಕನ್ನಡದ ಮೊದಲ ವರ್ಣಚಿತ್ರ ತೆರೆ ಕಂಡುದೂ ಇದೇ ದಶಕದಲ್ಲಿ (೧೯೬೫) ೭೦ರ ದಶಕ ಹೊಸ ಅಲೆಯ ಚಿತ್ರಗಳಾಗಿ ಮಹತ್ವ ಪಡೆದುಕೊಳ್ಳುತ್ತದೆ. ಪಟ್ಟಾಭಿರಾಮರೆಡ್ಡಿಯವರ 'ಸಂಸ್ಕಾರ' (೧೯೭೦) ಬಿ.ವಿ.ಕಾರಂತರು ನಿರ್ದೇಶಿಸಿದ 'ಚೋಮನ ದುಡಿ',

ಗಿರೀಶ್ ಕಾಸರವಳ್ಳಿ ನಿರ್ದೇಶನದ 'ಘಟ್ಟಶ್ರಾದ್ಧ' ದಂತಹ ಚಿತ್ರಗಳು ೭೦ರ ದಶಕದಲ್ಲಿ ತೆರೆ ಕಂಡವು ಈ ಚಿತ್ರಗಳು 'ಸ್ವರ್ಣ ಕಮಲ' ಪ್ರಶಸ್ತಿಯಿಂದಲೂ ಹೆಸರು ಪಡೆದವು. ಮೊದಲ ಸಿನಿಮಾ ಸ್ಕೋಪ್ ಚಿತ್ರವೂ ಇದೇ ದಶಕದಲ್ಲಿ ತೆರೆಕಂಡಿತು. ಸಿದ್ಧಲಿಂಗಯ್ಯ ನವರಂಥ ಇನ್ನೊರ್ವ ಪ್ರತಿಭಾವಂತ ನಿರ್ದೇಶಕರು ಈ ದಶಕದಲ್ಲಿ 'ಬಂಗಾರದ ಮನುಷ್ಯ' ದಂಥ ಮಹತ್ವದ ಚಿತ್ರವನ್ನು ನಿರ್ದೇಶಿಸಿದರು.

೮೦ರ ದಶಕದಲ್ಲಿ ಕನ್ನಡ ಚಿತ್ರರಂಗಕ್ಕೆ ಎರಡನೇಯ ಪೀಳಿಗೆಯ ನಟ-ನಟಿಯರ ಪ್ರವೇಶವಾಯಿತು. ವಾಣಿಜ್ಯಾತ್ಮಕ - ಕಲಾತ್ಮಕ ಚಿತ್ರಗಳು ನಿರ್ಮಾಣವಾಗುತ್ತಾ ಬಂದವು. ನಾಗಭರಣ, ಗಿರೀಶ್ ಕಾರ್ನಾಡ್ ಮುಂತಾದ ಕಲಾತ್ಮಕ ಚಿತ್ರ ನಿರ್ದೇಶಕರು, ಸುನೀಲ್ ಕುಮಾರ್ ದೇಸಾಯಿ, ರಾಜೇಂದ್ರಸಿಂಗ್, ಬಾಬುರಂಥ ಉತ್ತಮ ಕಲಾಭಿರುಚಿಯ ಚಿತ್ರ ನಿರ್ದೇಶಕರೂ ಕನ್ನಡ ಚಿತ್ರರಂಗಕ್ಕೆ ಹೊತನವನ್ನು ತಂದು ಕೊಟ್ಟರು.

೯೦ರ ದಶಕವೂ ಅದೇ ರೀತಿ ಮುಂದುವರೆಯಿತು. ಹಿರಿಯ ನಟಿ ಜಯಮಾಲಾ ಅವರು ಗಿರೀಶ್ ಕಾಸರವಳ್ಳಿಯವರ ನಿರ್ದೇಶಕಕತ್ವದಲ್ಲಿ ನಟಿಸಿ ನಿರ್ಮಿಸಿದ' 'ತಾಯಿಸಾಹೇಬ' ಹಲವಾರು ಪ್ರಶಸ್ತಿಗಳಿಂದ ಗಮನ ಸೆಳೆಯಿತು.

೨೧ನೆಯ ಶತಮಾನದ ಮೊದಲ ವರ್ಷಗಳಲ್ಲಿ ಹದಿ-ಹರೆಯದ ಹುಡುಗ-ಹುಡುಗಿಯರ ಕನ್ನಡ ಪ್ರೇಮಕ್ಕೆ ಸಂಬಂಧಪಟ್ಟ ಚಿತ್ರಗಳು ಅಂತಹುದೇ ಹದಿಹರೆಯದ ನಟ-ನಟಿಯರ ಚಿತ್ರರಂಗ ಪ್ರವೇಶ ಕನ್ನಡದಲ್ಲಿ ಕಾಣಿಸಿಕೊಂಡಿತು. ಇದರ ಜತೆ ಜತೆಗೇ 'ಯಜಮಾನ' ದಂಥ ಉತ್ತಮ ಕೌಟುಂಬಿಕ ಚಿತ್ರಗಳೂ ನಿರ್ಮಾಣವಾಗಿವೆ. 'ಆಪ್ತಮಿತ್ರ' ದಂಥ ಉತ್ತಮ ಅಭಿರುಚಿಯ ಚಿತ್ರಗಳೂ ತೆರೆಕಂಡಿವೆ.

ಅಧ್ಯಾಯ-೩

'ದೇಸೀ ಸಂಸ್ಕೃತಿ' ಪರಿಕಲ್ಪನೆ -ಅರ್ಥ ಮತ್ತು ವ್ಯಾಪ್ತಿ

ದೇಸೀ ಸಂಸ್ಕೃತಿ ಎಂಬ ಪರಿಕಲ್ಪನೆಯ ಕುರಿತು ಚರ್ಚಿಸುವುದಾದರೆ 'ದೇಶ' ಎಂಬ ಪದದಿಂದ ಅದನ್ನು ಪ್ರಾರಂಭಿಸಬೇಕಾಗುತ್ತದೆ. 'ದೇಶಿ' ಎಂದರೆ ಒಂದು ನಾಡಿನ ವಿವಿಧ ಪ್ರದೇಶಗಳಿಗೆ ಸಂಬಂಧಿಸಿದ ವಿಶಿಷ್ಟ ವಿಷಯಗಳೆಂದು ಸಾಮಾನ್ಯ ಅರ್ಥದಲ್ಲಿ ಹೇಳಬಹುದು. ಆದರೆ ಪರಂಪರಾಗತವಾಗಿ ಮೂಡಿ ಬಂದಿರುವ 'ದೇಶಿ'ಯ ಪರಿಕಲ್ಪನೆಯನ್ನು ಗನಿಸಿದಾಗ ಅದನ್ನು ಭಾಷೆ, ಸಾಹಿತ್ಯ, ಸಂಗೀತ, ನೃತ್ಯ ಮತ್ತಿತರ ಸಾಂಸ್ಕೃತಿಕ ನೆಲೆಗಳಿಗೆ ಅನ್ವಯಗೊಳಿಸುವಲ್ಲಿ ಕಂಡು ಬರುತ್ತದೆ. 'ದೇಶಿ' ಮತ್ತು 'ದೇಸಿ' ಇವೆರಡೂ 'ದೇಶ್ಯ' ಎನ್ನುವ ಪದದಿಂದಲೇ ಹುಟ್ಟಿವೆ. ಈ ಎರಡೂ ಪದಗಳು ಇಂಗ್ಲೀಷಿನ 'Nativity'ಗೆ ಸಮಾನಾರ್ಥವಾಗಿ ಬಳಕೆಯಾಗಿವೆ. ಆದರೆ 'ದೇಸೀ' ಎನ್ನುವುದು ಮೂಲತ: ಆಭಿವ್ಯಕ್ತಿಗೆ, ಭಷೆಯ ಬಳಕೆಗೆ ಸಂಬಂಧ ಪಟ್ಟ ಪದವಾಗಿದೆ. 'Nativity' ಎಂಬ ನಾಮ ಪದವನ್ನು ಸೂಚಿಸಲು 'ದೇಶಿ'ಯೇ ಸಮರ್ಥವಾಗಿದ್ದರೂ, ಇತ್ತೀಚಿನ ಕಾಲದಲ್ಲಿ 'ದೇಶೀಯತೆ' ಎಂಬ ಪದ ಸೃಷ್ಟಿಯಾಗಿದೆ. 'ದೇಶಿ' ಪರಿಕಲ್ಪನೆಯ ಬಗ್ಗೆ ವಿವೇಚನೆ ಮಾಡುವಾಗ ಇಲ್ಲಿ 'ಮಾರ್ಗ'ದ ಬಗ್ಗೆ ತಿಳಿಯುವುದು ಅವಶ್ಯವಾಗುತ್ತದೆ.

'ಮಾರ್ಗ' ಶಬ್ದ 'ಮೃಗ್' ಎಂಬ ಧಾತುವಿನಿಂದ ಉತ್ಪನ್ನವಾಗಿದೆ. ಇದಕ್ಕೆ 'ಹುಡುಕುವುದು' ಎಂದರ್ಥ. ವೇದಗಳಲ್ಲಿ ಹುಡುಕಿ ಹೊರತೆಗೆದದ್ದು 'ಮಾರ್ಗ'ವೆಂದು ಭಾವಿಸಲಾಗಿದೆ. ಸ್ವರ ಸಹಿತವಾಗಿ ವೇದಗಳನ್ನು ಧ್ಯಾನ ಮಾಡುವುದು, ಮಾರ್ಗ ವೈದಿಕ ಮಾರ್ಗವನ್ನು ಅನುಸರಿಸಿ ಹಾಡಿದ್ದು, ಬರೆದದ್ದು, ಮಾರ್ಗ ಎನಿಸಿಕೊಂಡಿದೆ. 'ಮಾರ್ಗ' ಮತ್ತು 'ದೇಶಿ' ಪದಗಳನ್ನು ವಿವೇಚನೆಗೆ ತೆಗೆದುಕೊಂಡು ನೋಡಿದಾಗ ಸಂಸ್ಕೃತಾವಲಂಬಿ ಗಾನಕ್ಕೆ 'ಮಾರ್ಗ' ವೆಂದು ಪ್ರಾಕೃತಾವಲಂಬಿ ಗಾನಕ್ಕೆ 'ದೇಶಿ'.

ಇಲ್ಲಿ ಮಾರ್ಗ ವಿಧಾನ ಎಂದರೆ ಹಾಡುವ ಶೈಲಿಯಾಗಿದೆ. ಈ ವಿವರಣೆಯನ್ನು ರಾಮಾಯಣದ ಗಾನವನ್ನು ಮತ್ತು ಅಥರ ವ್ಯಾಖ್ಯೆಯನ್ನು ಗಮನಿಸಿ ಹೇಳಲಾಗಿದೆ. ಮೂಲ ಭೂತವಾಗಿ ಮಾರ್ಗ-ದೇಶಿ ಎಂಬುವು ಸಂಗೀತಕ್ಕೆ ಸಂಬಂಧಿಸಿದ್ದು ನಂತರ ನಾಟ್ಯ, ಭಾಷೆ, ಸಾಹಿತ್ಯಗಳಿಗೆ ಅನ್ವಯಿಸಲಾಗಿದೆ.

ಮಾರ್ಗ-ದೇಶಿ ಎಂಬ ಪದಗಳು ಮೊದಲು ಉಲ್ಲೇಖಿತಗೊಂಡಿದ್ದು ಸಂಗೀತದಲ್ಲಿ, ಶಾರ್ಙ್ಗದೇವ ತನ್ನ ಸಂಗೀತ ರತ್ನಾಕರದಲ್ಲಿ ಬ್ರಹ್ಮಾದಿ ದೇವತೆಗಳಿಂದ ಮಾರ್ಗಿತವಾಗಿ (ಹುಡುಕಲ್ಪಟ್ಟು) ವ್ಯವಸ್ಥಿತವಾಗಿ ರೂಪಿತವಾದುದು, ಭರತಾದಿಗಳಿಂದ ಪ್ರಯೋಗಗೊಂಡದ್ದು ಮಾರ್ಗವೆಂದು, ದೇಶ ದೇಶಗಳ ಜನರಿಗೆ ಹೃದಯ ರಂಜಕವಾಗುವಂತೆ ರೂಪುಗೊಂಡು ಶ್ರುತಿ ಸ್ವರ ಗ್ರಾಮ, ಜಾತ್ಯಾದಿ ನಿಯಮಗಳಿಲ್ಲದೆ ವೈವಿಧ್ಯದಿಂದ ಕೂಡಿದ್ದು 'ದೇಶಿ' ಎನಿಸಿಕೊಂಡಿದೆ. ಶಾರ್ಙ್ಗದೇವನು 'ಸಂಗೀತ ರತ್ನಾಕರ'ದ ಪ್ರಬಂದಾಧ್ಯಯದಲ್ಲಿ ಮಾರ್ಗ-ದೇಶಿ ಸಂಗೀತಗಳಿಗೆ ಗಾಂಧರ್ವ ಗಾನ ಎಂಬ ಹೆಸರುಗಳಿರುವುದಾಗಿಯೂ ಹೇಳಿದ್ದಾನೆ. ಸಂಗೀತ ಶಾಸ್ತ್ರಕಾರರ ದೃಷ್ಟಿಯಲ್ಲಿ ಮಾರ್ಗ ಮತ್ತು ದೇಶಿ ಎರಡು ವೈದೃಶ್ಯ ಸಂಪ್ರದಾಯಗಳನ್ನು ಪ್ರತಿನಿಧಿಸುತ್ತವೆಂಬುದು ಸ್ಪಷ್ಟ.ಬ್ರಹ್ಮಾದಿಗಳಿಂದ ಮಾರ್ಗಿತವಾದುದು, ನಿಯಮ ಸಹಿತವಾದುದು, ಅನಾದಿ ಸಂಪ್ರದಾಯ ಸಿದ್ಧವಾದುದು, ಪಂಡಿತ ಜನರಂಜಕವಾದುದು ಮಾರ್ಗ ಸಂಗೀತ ಅಥವಾ ಗಾಂಧರ್ವ. ನಾನಾದೇಶ ಜನರ ಅಭಿರುಚಿಗೆ ತಕ್ಕಂತೆ ರೂಪುಗೊಂಡಿದ್ದು ಸ್ಥಿರ ನಿಯಮಗಳು ಇಲ್ಲದಿರುವುದು. ಕಾಲಾನುಸಾರವಾಗಿ ರೂಪುಗೊಳ್ಳುವಂಥದ್ದು, ಸಾಮಾನ್ಯ ಜನ ರಂಜಕವಾದುದು ದೇಶಿ ಸಂಗೀತ ಅಥವಾ ಗಾನ. ಮಾರ್ಗ ಲಕ್ಷಣ ಪ್ರಧಾನವಾದರೆ, ದೇಶಿ ಲಕ್ಷ್ಯ ಪ್ರಧಾನವಾಗಿದೆ.

ನಾಟ್ಯದ ವಿಷಯದಲ್ಲೂ ಮಾರ್ಗ-ದೇಶಿ ವ್ಯತ್ಯಾಸ ಇರುವುದನ್ನು ಸಂಗೀತ ರತ್ನಾಕರನೇ ಗುರುತಿಸಿದ್ದಾನೆ. 'ನಾಟ್ಯಶಾಸ್ತ್ರ' ದಲ್ಲಿ ಗರ್ಭ ಸಂಧಿಯ ಅಂಗವಾದ 'ಮಾರ್ಗ'ವನ್ನು ಕುರಿತು ಹೇಳುತ್ತಾ ತತ್ತ್ವವನ್ನು ತಿಳಿಸುವ ವಚನವೇ 'ಮಾರ್ಗ' ಎನ್ನಲಾಗಿದೆ. ನಾಟ್ಯ ಪ್ರಯೋಗದಲ್ಲಿ ಪ್ರಾಕೃತ ಪಾಠ್ಯವನ್ನು ಕುರಿತು ಹೇಳುವಾಗ ದೇಶೀ ಗತವಾದ ಪಾಠ್ಯವನ್ನು ಸಂಸ್ಕೃತ ಪಾಠ್ಯಕ್ಕೆ ಭಿನ್ನವೆಂದು ಸ್ಪಷ್ಟಗೊಳಿಸಲಾಗಿದೆ. 'ದಶರೂಪಕ'ವನ್ನು ಇಂಗ್ಲೀಷ್‌ಗೆ ಅನುವಾದ ಮಾಡಿದ ಪ್ರೊ.ಹ್ಯಾಸ್ 'ಮಾರ್ಗ' ಎಂದರೆ 'Higher Style' ಎಂದೂ ದೇಶಿ ಎಂದರೆ 'Lower Style' ಎಂದೂ ಬರೆದಿರುವುದನ್ನು

ಇಲ್ಲಿ ಗಮನಿಸಬಹುದು. ಸಂಸ್ಕೃತ ಮತ್ತು ಸಂಸ್ಕೃತಕ್ಕೆ ಸಂಬಂಧಿಸಿದ ಭಾಷಾ ಸಂಸ್ಕೃತಿಗಳು 'ಮಾರ್ಗ' ಎಂದೂ ಪ್ರಾಕೃತ ಮತ್ತಿತರ ದೇಶ ಭಾಷೆಗಳಿಗೆ ಸಂಬಂಧಿಸಿದ ಭಾಷಾ ಸಂಸ್ಕೃತಿಗಳು 'ದೇಶೀ' ಎಂದೂ ಭಾವಿಸಲಾಗಿದೆ. ಪ್ರಾಕೃತ ಮತ್ತು ದೇಶಭಾಷೆಗಳ ದೃಷ್ಟಿಯಿಂದ ನೋಡಿದಾಗ ಲೌಕಿಕ ಸಂಸ್ಕೃತದ ಶಾಸ್ತ್ರಗಳು ಮತ್ತು ಸಾಹಿತ್ಯ 'ಮಾರ್ಗ' ಉಳಿದುದೆಲ್ಲ 'ದೇಶಿ'. ತಮಿಳಿನ ಪಂಚ ಮಹಾಕಾವ್ಯಗಳಲ್ಲಿ ಒಂದಾದ 'ಶಿಲಪ್ಪದಿಕಾರಮ್'ನ ರಂಗ ಪ್ರವೇಶದ ಅಧ್ಯಾಯದಲ್ಲಿ ಮಾಧವಿ ನಾಟ್ಯವಾಡುವ ದೃಶ್ಯದಲ್ಲಿ ಎರಡು ತರಹದ ನೃತ್ಯಗಳ ಲಕ್ಷಣ ತಿಳಿದಿತ್ತೆಂದು ಹೇಳಲಾಗಿದೆ. ''ಶಿಲಪ್ಪದಿಕಾರ'ದ ವ್ಯಾಖ್ಯಾನವನ್ನು ಬರೆದ 'ಅಡಿಯಾಲತ್ತು ನಲ್ಲಾಲ್ ಇಯಲ್ಬುಕ್ಕೂತ್ತು ಮತ್ತು ದೇಶಿಕ್ಕೂತ್ತು' ಎಂಬುದನ್ನು 'ಮಾರ್ಗ' ಮತ್ತು 'ದೇಶಿ' ಗಳಿಗೆ ಸಮಾನಾರ್ಥಕಗಳೆಂದು ಸೂಚಿಸಿದ್ದಾನೆ''(ಸುಂದರಂ ಆರ್ವಿಯಸ್; ೨೦೦೩ ಪುಟ೫). ಪ್ರಾಚೀನ ಕನ್ನ ಸಾಹಿತ್ಯದಲ್ಲಿ ಮಾರ್ಗ ಮತ್ತು ದೇಶಿಗಳ ಬಗ್ಗೆ ಉಲ್ಲೇಖಗಳಿವೆ. ಕವಿರಾಜ ಮಾರ್ಗದಲ್ಲಿ 'ದೇಸಿ' ಮತ್ತು 'ಮಾರ್ಗ'ಗಳ ಬಗ್ಗೆ ಇರುವ ಉಲ್ಲೇಖಗಳನ್ನು ಗಮನಿಸಿದಾಗ ಮಾರ್ಗ-ದೇಸಿಗಳು ಕೇವಲ ಭಾಷಾ ಪ್ರಭೇದಗಳೆಂದು ಅರ್ಥವನ್ನು ಸೀಮಿತಗೊಳಿಸಿಲ್ಲ ಎನ್ನುವುದು ತಿಳಿಯುತ್ತದೆ.

ದೇಶೀಗತವಾದ 'ಪಾಠ್ಯ'ದ ಬಗ್ಗೆ ಮೊದಲು ಹೇಳಿದವನು 'ನಾಟ್ಯಶಾಸ್ತ್ರ'ದ ಭರತ ಇಲ್ಲಿ 'ದೇಶಿ' ಎಂಬುದು ಭಾಷಾ ಬೇಧವನ್ನು ಸೂಚಿಸುತ್ತದೆ. ಆ ಭಾಷೆಯನ್ನು ಮಾತನಾಡುವವರು ಆರ್ಯೇತರರು. ಸಂಗೀತದಲ್ಲಿ ದೇಶಿಯನ್ನು ಗುರುತಿಸಿದ ಶಾಸ್ತ್ರಕಾರರು ಅದನ್ನು ಆನಂತರ ಕಾಲದಲ್ಲಿ ನೃತ್ಯ ಪದ್ಧತಿಗಳಿಗೂ ಅನ್ವಯಿಸುತ್ತಿದ್ದರು. ಇದಕ್ಕೆ ಉದಾಹರಣೆ ಚಾಯಪಸೇನಾನಿ ೧೩ನೇಯ ಶತಮಾನದಲ್ಲಿ ಬರೆದ 'ನೃತ್ಯ ರತ್ನಾವಳಿ' ಯಲ್ಲಿ ಅನೇಕ ದೇಶೀ ಕುಣಿತಗಳನ್ನು ದಾಖಲಿಸಲಾಗಿದೆ. ಈ ಕೃತಿಯ ೫ನೇ ಅಧ್ಯಾಯದಲ್ಲಿ 'ದೇಶೀ ಸ್ಥಾನಕಕರಣ ಭ್ರಮರೀ ಲಕ್ಷಣ' ಈ ಕೃತಿಯು ಆಂಧ್ರದಲ್ಲಿ ಪ್ರಚಲಿತವಾಗಿದ್ದ ದೇಶೀ ಕುಣಿತಗಳನ್ನು ಕಲಾ ರೂಪಗಳನ್ನು ವಿವರಿಸುವುದರಿಂದ ವಿವಿಧ ಪ್ರದೇಶಗಳಲ್ಲಿ ವಿಶಿಷ್ಟವಾಗಿರುವ ಕಲಾ ಮಾಧ್ಯಮಗಳನ್ನು ಶಾಸ್ತ್ರಕಾರರು ಇದರಿಂದ ಗುರುತಿಸಿದ್ದಾರೆ. ಪೇರಣಿ, ಚರ್ಚರಿ, ಕೋಲಾಟ, ಬಹುರೂಪ, ಚಿಂದು ಮುಂತಾದ ಕಲಾರೂಪಗಳ ವಿವರಣೆ ಈ ಕೃತಿಯಲ್ಲಿದೆ.

ಬಾಷೆ. ಸಂಗೀತ, ನೃತ್ಯ ಮತ್ತು ಇತರ ಕಲಾರೂಪಗಳಿಗೆ ದೇಶೀಯನ್ನು ಅನ್ವಯಿಸಿದ ಶಾಸ್ತ್ರಕಾರರು ಅದನ್ನು ಸಾಹಿತ್ಯಕ್ಕೆ ಅನ್ವಯಿಸಲು ಪ್ರಾರಂಭಿಸಿದ್ದು ಪಂಪನಕಾಲದಿಂದ. ದೇಶೀಯನ್ನು ಸಾಹಿತ್ಯಕ್ಕೆ ಅನ್ವಯಿಸಿದ ಪಂಪ 'ಕಾವ್ಯಬಂಧ'ದ ಬಗ್ಗೆಯೇ ನೇರವಾಗಿ ಪ್ರಸ್ತಾಪಿಸಿದ. ಪಂಪ ಹೇಳಿರುವ 'ಕಾವ್ಯಬಂಧ'ವು ಕೇವಲ ಭಾಷೆಗೆ ಸಂಬಂಧಿಸಿದ್ದಾಗಿರದೆ ಕಾವ್ಯ ಶೈಲಿಯ ವಿಷಯವಾಗಿದೆ. ಪಂಪನ ನಂತರ ''ರನ್ನ ಕವಿ ತನ್ನ 'ಗದಾಯುದ್ಧ' ಕಾವ್ಯದಲ್ಲಿ ಮನ ಸೆಳೆಯುವ ರಸದ ಬಗ್ಗೆ ಒಡಂಬಡುವ ಮಾರ್ಗದ ಬಗ್ಗೆ ಹೇಳಿ 'ದೇಸಿ ಕಬ್ಬಮಂ ಬಗೆಗೊಳಲ್' ಎನ್ನುತ್ತಾನೆ ಇದರಿಂದ ಕಾವ್ಯದಲ್ಲಿ ಇರಬೇಕಾದ ದೇಸೀಯನ್ನುರನ್ನ ಸ್ಪಷ್ಟಪಡಿಸಿದ್ದಾನೆ. ಮೇಲಿನ ಉಲ್ಲೇಖಗಳಿಂದ ದೇಶಿಯನ್ನು ಕಾವ್ಯ ಕಲೆಗೆ ಅನ್ವಯಿಸಿ ಅದನ್ನುಬಳಸಬೇಕಾದ ಆನಿವಾರ್ಯತೆಯನ್ನು ಕನ್ನಡದ ಕವಿಗಳು ಗುರುತಿಸಿರುವುದು ತಿಳಿಯುತ್ತದೆ''(ಅದೇ; ಪುಟ೧೩).

'ದೇಶೀ' ಎಂಬ ಶಬ್ದ 'ದೇಶ'ಕ್ಕೆ ಸಂಬಂಧಿಸಿದ್ದು, 'ದೇಶ' ಎಂಬುದು 'ದಿಕ್ಕು' ಎಂಬ ಅರ್ಥ ಇರುವ 'ದಿಶ್' ಎಂಬ ಮೂಲದಿಂದ ಬಂದುದು. 'ದೇಶಿ' ಮತ್ತು 'ದೇಶ್ಯ' ಎಂಬ ಎರಡೂ ಪದಗಳು 'ದೇಶ'ದಿಂದ ಉತ್ಪನ್ನವಾಗಿವೆ. ಆದರೆ 'ದೇಶೀ' ಕೇವಲ ಭಾಷಾ ಸಂಬಂಧವನ್ನು ಉಳಿಸಿಕೊಳ್ಳದೆ ಸಾಂಸ್ಕೃತಿಕ ವ್ಯಾಪ್ತಿಯನ್ನು ಪಡೆದಿದೆ 'ದೇಶ್ಯ' ಎಂಬುದು ಭಾಷಾ ಸಂಬಂಧ ಅರ್ಥವನ್ನು ಉಳಿಸಿಕೊಂಡಿದೆ. 'ದೇಸಿ ' ಪದ 'ದೇಶಿ'ಯ ತದ್ಭವ ರೂಪ. ಆದರೆ ಕೆಲವು ವಿದ್ವಾಂಸರು 'ದೇಸಿ' ಬೇರೆ 'ದೇಶಿ' ಬೇರೆ ಎಂದು ಹೇಳಿದರೂ ಆದಕ್ಕೆ ಆಧಾರಗಳು ಅಷ್ಟಾಗಿ ದೊರೆತಿಲ್ಲ. 'ಮಾರ್ಗ'ವನ್ನು ಸಂಸ್ಕೃತದಿಂದ ತತ್ಸಮವಾಗಿ ಸ್ವೀಕರಿಸಿದ ಕನ್ನಡ ಕವಿಗಳು 'ದೇಶಿ'ಯನ್ನು ಸ್ವೀಕರಿಸಿದ್ದಾರೆ. 'ದೇಸಿ'ಯು ತದ್ಭವವಾಗಿ ರೂಪಗೊಂಡಿದ್ದರೆ ಅದು ನಮ್ಮ ಭಾಷೆಗಳಿಗೆ ಸಹಜವೇ ಹೊರತು ಅರ್ಥ ವ್ಯತ್ಯಾಸ ಆಗಿರುವುದಕ್ಕೆ ಆಧಾರವಿಲ್ಲ. 'ದೇಶಿ' ಪದವು ಸಾಂಸ್ಕೃತಿಕ ಅನನ್ಯತೆಯನ್ನು ಪ್ರತಿನಿಧಿಸುವ ಪದವಾಗಿದೆ. ''ಸ್ವಾತಂತ್ರ್ಯ ಪೂರ್ವದ ವಸಾಹತುಶಾಹಿ ಸಂದರ್ಭದಲ್ಲಿ ರಾಷ್ಟ್ರೀಯತೆ ಎಂಬ ಒಗ್ಗಟ್ಟಿನ ಮನೋಭಾವದ ಹಿನ್ನೆಲೆ 'ರಾಷ್ಟ್ರೀಯತೆ'ಗೆ ಸಮಾನಾರ್ಥಕವಾಗಿ 'ದೇಶಿಯತೆ' ಎಂಬ ಪದವೂ ಬಳಕೆಯಾಗತೊಡಗಿತು. ಇಂಗ್ಲೀಷಿನಲ್ಲಿ Nation ಮತ್ತು Country ಎಂಬ ಪದಗಳಿರುವಂತೆ ಕನ್ನಡದಲ್ಲೂ ರಾಷ್ಟ್ರ ಮತ್ತು ದೇಶ ಎಂಬ ಪದಗಳಿವೆ.

ಈ ಎರಡು ಪದಗಳನ್ನು ಹಿಂದಿನಿಂದಲೂ 'ನಾಡು' ಎಂಬ ಅರ್ಥದಲ್ಲಿ ಬಳಸುತ್ತಿದ್ದರು. ಹೀಗಾಗಿ ಸ್ವಾತಂತ್ರ್ಯ ಪೂರ್ವದ ಕಾಲಘಟ್ಟದಲ್ಲಿ ರಾಷ್ಟ್ರೀಯತೆಯ ಜೊತೆ ಜೊತೆಗೆ ದೇಶೀಯತೆ ಎಂಬ ಪದವೂ ಸೃಷ್ಟಿಯಾಯಿತು''(ಅದೇ; ಪುಟ ೫೩).

ಕನ್ನಡ ಸಾಹಿತ್ಯದಲ್ಲಿ ದೇಸೀಯತೆ ಎಂಬ ವಿಷಯದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಅಂದರೆ ವಸಾಹತುಶಾಹಿ ಸಂದರ್ಭದಲ್ಲಿ ನಮ್ಮತನದ ಬಗ್ಗೆ ಹುಡುಕಾಟ ನಡೆಯಿತು. ಅದು ದೇಶಿಯತೆಯ ಹುಡುಕಾಟವಾಗಿತ್ತು. ಅಂದರೆ ಇಲ್ಲಿ ರಾಜಕೀಯದ ಪ್ರಭಾವವಿದ್ದುದರಿಂದ ದೇಶೀಯತೆಯು ರಾಜಕೀಯ ಪ್ರೇರಿತವಾಗಿತ್ತು. ಹಾಗಾಗಿ ಇಲ್ಲಿ 'ದೇಶೀ' ಗಿಂತ 'ದೇಸೀ' ಮುಖ್ಯವಾಗಿದೆ. ವಸಾಹತುಶಾಹಿಯ ಸಂದರ್ಭದಲ್ಲಿ 'ಭರತ ಖಂಡ' ಮತ್ತು 'ಭಾರತ ದೇಶ' ಎಂಬ ಶಬ್ದಗಳು ಅನೇಕ ಪ್ರಾಂತ್ಯಗಳ ಸಮೂಹದಿಂದ ಕೂಡಿದ್ದ ದೊಡ್ಡ ರಾಷ್ಟ್ರವನ್ನು ಸೂಚಿಸುವ ಪದಗಳು. ಅನೇಕ ಸಂಸ್ಕೃತಿಗಳು, ಭಾಷೆಗಳ ಮತ್ತು ಪ್ರದೇಶಗಳ ಜನರನ್ನು ಒಗ್ಗೂಡಿಸಿ ಚಳುವಳಿಯನ್ನು ನಡೆಸುವ ಸಂದರ್ಭದಲ್ಲಿ ದೇಶೀಯತೆ ಮತ್ತು ಸ್ವದೇಶಿ ಎಂಬ ಪದಗಳಿಗೆ ವಿಶೇಷವಾದ ಅರ್ಥ ಬಂದಿದೆ.

''ಒಂದೇ ಸಂಸ್ಕೃತಿಗೆ ಸೇರಿದವರೆಂದು ಗುರುತಿಸಿಕೊಂಡ ಜನ ಬೇರೆ ಬೇರೆ ಕಾರಣಗಳಿಂದಾಗಿ ಛಿದ್ರ ಛಿದ್ರವಾಗಿ ಮತ್ತೊಮ್ಮೆ ಏಕೀಕರಣದ ಪ್ರಯತ್ನಗಳಿಗೆ ತೊಡಗಿದ ಅನೇಕ ಸಂದರ್ಭಗಳಿವೆ. ಇಂಥ ಭಾವನಾತ್ಮಕ ಸನ್ನಿವೇಶ ರಮ್ಯವಾದ ಮತ್ತು ರಾಷ್ಟ್ರೀಯವಾದ ಎಂಬ ಪರಿಕಲ್ಪನೆಗಳಿಗೆ ಕಾರಣವಾಯಿತು''(ಅದೇ; ಪುಟ ೫೫). ''ರಾಷ್ಟ್ರೀಯತೆಯನ್ನು ವೈಭವೀಕರಿಸಲು ದೇಶೀಯತೆಯ ಬೇರುಗಳನ್ನು ಹುಡುಕುವುದು ಅಗತ್ಯ'ವೆಂದು ಹರ್ಡರ್ ಸೂಚಿಸಿದ'' (ಅದೇ ಪುಟ ೫೬). ದೇಶೀಯತೆಯ ಪರಿಕಲ್ಪನೆಯನ್ನು ರಾಷ್ಟ್ರವನ್ನುಕಟ್ಟುವ, ಏಕತೆಯನ್ನು ಬೆಳೆಸುವ ಸಮಾನತೆಗೆ ಮಹತ್ವ ನೀಡುವ ಪ್ರಾಮಾಣಿಕ ಪ್ರಯತ್ನಕ್ಕಾಗಿ ಬಳಸುತ್ತಾರೆ.

ಭಾರತದಂತಹ ದೇಶದಲ್ಲಿ ಮಾರ್ಗ-ದೇಶಿ-ದೇಸಿ-ದೇಸೀಯಂತೆ ಮುಂತಾದವನ್ನು ಸರಳಗೊಳಿಸಿ 'ಹೀಗೆ' ಎಂದು ಹೇಳಲು ಸಾಧ್ಯವಿಲ್ಲ ಏಕೆಂದರೆ ಭಾರತದಲ್ಲಿ ವೈವಿಧ್ಯ, ವೈಪುಲ್ಯ ಮತ್ತು ಸಂಕೀರ್ಣತೆಗಳು ಹೆಚ್ಚು. ಇದು ಭೌಗೋಳಿಕವಾಗಿ ಅಷ್ಟೇ ಅಲ್ಲದೆ ಸಮಾಜ, ಸಂಸ್ಕೃತಿ, ಭಾಷೆ,

ಜಾನಪದ, ಸಂಪ್ರದಾಯ ಎಲ್ಲ ವಿಷಯಗಳಿಗೂ ಅನ್ವಯಿಸುತ್ತದೆ. ಇದರ ಜೊತೆಗೆ ಬೇರೆ ಬೇರೆ ಕಾಲಘಟ್ಟಗಳಲ್ಲಿ ಭಾರತೀಯರು ನಡೆಸುತ್ತಾ ಬಂದಿರುವ ಪರ್ಯಾಯ ನೆಲೆಗಳ ಶೋಧ ಸಾಂಸ್ಕೃತಿಕ ವಿಕಾಸದಲ್ಲಿ ಸಂಕೀರ್ಣತೆಗೆ ಕಾರಣವಾಗಿದೆ. ಇದು ಸ್ವಾತಂತ್ರ್ಯ ಪೂರ್ವ ಘಟ್ಟಕ್ಕೂ ಅನ್ವಯವಾಗುತ್ತದೆ.

ಸ್ವಾತಂತ್ರ್ಯ ಪೂರ್ವ ಘಟ್ಟವೆಂದರೆ ಇಲ್ಲಿ ನಮಗೆ ಮುಖ್ಯವಾಗುವುದು ವಸಾಹತುಶಾಹಿಯ ಸ್ಥಿತಿ. ಯಾವುದೇ ನಾಡಿನ ಜನತೆ ರಾಜಕೀಯ, ಸಾಮಾಜಿಕ, ಆರ್ಥಿಕ ಸಮಸ್ಯೆಗಳಿಂದ ಪಾರುಗುವುದು ಕಷ್ಟವಾದರೂ ಅಸಾಧ್ಯವಲ್ಲ. ಆದರೆ ಬಲವಾದ ಮನಸ್ಥಿತಿಯಿಂದ ಪಾರಾಗುವುದು ಕಷ್ಟತರ. 'ವಸಾಹತುಶಾಹಿಯಿಂದ ಬಿಡುಗಡೆ ಪಡೆಯಲು ನಾವು ನಮ್ಮದೇ ಆದ ದೇಶೀಯ ನೆಲೆಗಳಿಗೆ, ದೇಶೀ ಮೂಲಗಳಿಗೆ, ಮರಳಬೇಕು ಎಂದಾಗ ಆ 'ದೇಶಿ' ನೆಲೆಗಳು/ಮೂಲಗಳು ಯಾವುವು? ಎಂಬ ಯಾವ ಸರಳ ಉತ್ತರವೂ ಸಾಧ್ಯವಿಲ್ಲದ ಪ್ರಶ್ನೆಯೇಳುತ್ತದೆ. ಇಂಗ್ಲೀಷ್ ಎದುರು ಹಿಂದಿ, ಹಿಂದಿ ಎದುರು ಕನ್ನಡ, ಕನ್ನಡ ಎದುರು ತುಳು, ತುಳು ಎದುರು ಮಾಳ್ವಾ ಹೀಗೆ ಪ್ರಧಾನ ಅಧೀನ ಘಟಕಗಳು ಮತ್ತು ಅವುಗಳ ಸಂಬಂಧ ಬದಲಾಗುತ್ತ ಸಾಪೇಕ್ಷವಾಗುತ್ತಾ ಹೋಗುತ್ತದೆ.

''ರಾಷ್ಟ್ರೀಯತೆ ಅಥವಾ ದೇಶೀಯತೆ ಎಂಬುದು ಒಂದು ಭೌತಿಕ ಸ್ಥಿತಿ ಎನ್ನುವುದಕ್ಕಿಂತ ಮಾನಸಿಕ ಸ್ಥಿತಿ ಎನ್ನುವುದೇ ಸರಿ. ಕೆಲವು ಭೌಗೋಳಿಕ ಪರಿಸ್ಥಿತಿಗಳಿಗೆ ಒಳಪಟ್ಟವರು ಒಂದೇ ಆಡಳಿತದಲ್ಲಿದ್ದರೆ ಅಂಥವರು ಒಂದು ರಾಷ್ಟ್ರದ ಅಥವಾ ದೇಶದ ಜನರೆನಿಸಿಕೊಳ್ಳುತ್ತಾರೆ. ಆದರೆ ಭಾರತದಲ್ಲಿ ಇಂಥ ದೇಶಗಳು ಹಲವಾರಿದ್ದ ಕಾಲದಲ್ಲೂ ಭಾರತೀಯರ ಮಾನಸಿಕ ಸ್ಥಿತಿ ಇವೆಲ್ಲ ಜಂಬೂದ್ವೀಪದ, ಭರತ ವರ್ಷದ, ಭರತ ಖಂಡದ ಭಾಗಗಳೆಂಬುದನ್ನು ಒತ್ತಿ ಹೇಳುತ್ತಿತ್ತು. ಆದರೆ ಇಂಥ ಮಾನಸಿಕ ಸ್ಥಿತಿ ಇದ್ದ ಸಾಂಸ್ಕೃತಿಕ ವಲಯ ಬಹಳ ಚಿಕ್ಕದು ಎಂಬುದನ್ನು ಮರೆಯಬಾರದು'' (ಅದೇ; ಪುಟ ೫೯).

ಈ ದೇಶದಲ್ಲಿ ದೇಶೀಯ ಸಂಸ್ಕೃತಿಗೆ ಸೇರಿದವರು ಗ್ರಾಮೀಣರು, ಅವಿದ್ಯಾವಂತರು, ಜಾನಪದರು, ಮುಗ್ಧರು ಮತ್ತು ಸೀಮಿತ ಸಾಂಸ್ಕೃತಿಕ ವಲಯದ ಪ್ರತಿನಿದಿಗಳು,

ಅವರನ್ನು ಭಾರತೀಯತೆ, ದೇಶೀಯತೆ, ರಾಷ್ಟ್ರೀಯತೆ ಮುಂತಾದ ಪದಗಳ ಅರಿವಿಗೆ ಒಳಪಡಿಸುವ ಸಾಧ್ಯತೆಗಳು ಬಹಳ ಕಡಿಮೆ ಪ್ರಮಾಣದಲ್ಲಿವೆ. ''ಹೊರಗಿನ ಒತ್ತಡಗಳು ಅಥವಾ ಅಪಾಯಗಳು ಜಾಸ್ತಿಯಾದಾಗ ರಾಷ್ಟ್ರೀಯ ಅಥವಾ ದೇಶೀಯತೆಯ ಭಾವನೆ ಪ್ರಚೋದನೆಗೊಳ್ಳುತ್ತದೆ. ಇದು ವಿಭಿನ್ನ ಸ್ಥಳೀಯ ಸಂಸ್ಕೃತಿಗಳ ಜನರನ್ನು ಒಗ್ಗೂಡಿಸುತ್ತದೆ'' (ಅದೇ; ಪುಟ ೬೦).

ಸ್ವಾತಂತ್ರ್ಯ ಸಮರದ ಕಾಲದಲ್ಲಿ ದೇಶ, ಸ್ವದೇಶಿ, ದೇಶೀಯತೆ, ದೇಶಭಕ್ತಿ ಮುಂತಾದವುಗಳಿಗೆ ವಿಶಿಷ್ಟಾರ್ಥ ಬಂದಂತೆಯೇ ದೇಶಮಾತೆ ಎಂಬ ಪರಿಕಲ್ಪನೆ ಬೃಹದಾಕಾರ ತಾಳಿ ಜನರ ಮನಸೂರೆಗೊಳ್ಳಲು ನೆರವಾಯಿತು. 'ಸ್ವದೇಶ ಮಾತೆ', 'ದೇಶಿ ವಸ್ತ್ರ' ದಂಥ ಪದಗಳು ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಪಾರಿಭಾಷಿಕತೆಯನ್ನು ಗಳಿಸಿ ಕೊಂಡವು. 'ಸ್ವದೇಶಿ' ಚಳುವಳಿ ಕೈಗಾರೀಕರಣದ ಮುಖ್ಯ ಉತ್ಪನ್ನವಾಗಿದ್ದ ಬಟ್ಟೆಗಳ ವಿಷಯದಲ್ಲಿ ಕೇಂದ್ರೀಕೃತವಾಗಿತ್ತು. ಖಾದಿ ದೇಶಭಕ್ತಿಯ ಸಂಕೇತವಾಯಿತ್ತು. ಪರದೇಶದ ಬಟ್ಟೆಯನ್ನು ಸುಟ್ಟವನು ದೇಶಬಂಧು ಎನಿಸಿಕೊಳ್ಳುತ್ತಿದ್ದ. ಈ ಉದಾಹರಣೆಗಳನ್ನು ನೋಡಿದಾಗ 'ರಾಷ್ಟ್ರ' 'ದೇಶ' ಎಂಬ ಪ್ರಬುದ್ಧ ಭಾವನೆಗಳನ್ನು ಕೆಳಸ್ತರದ ಜನವರ್ಗಗಳಿಗೂ ವಿಸ್ತರಿಸಿ ಅವರವೇ ಆದ ಮಾಧ್ಯಮಗಳ ಮೂಲಕ ಪ್ರಚಾರ ಮಾಡುವ ಪ್ರಯತ್ನಗಳು ಗೋಚರಿಸುತ್ತವೆ. ಈ ಸಮಯದಲ್ಲಿ 'ದೇಶೀಯತೆ' ಎನ್ನುವುದು ಎಲ್ಲ ಜನ ವರ್ಗದಲ್ಲೂ ಮೂಡಿ ವಿಸ್ತೃತ ಪರಧಿಯ ಪರಿಕಲ್ಪನೆಯನ್ನು ಮೂಡಿಸಿತು.

'ಸ್ವದೇಶಿ' ಎಂಬ ಪರಿಕಲ್ಪನೆಯ ಉಗಮಕ್ಕೆ ಬ್ರಿಟೀಷರು ಕಾರಣರಾದರು. ಇವರ ಒಡೆದು ಆಳುವ ನೀತಿಯಿಂದಾಗಿ ಮೂಡಿ ಬಂದಿತು. ಸ್ವಾತಂತ್ರ್ಯ ಸಮರದ ಮುಖ್ಯ ಘಟ್ಟಗಳಲ್ಲಿ ಒಂದಾಗ ದಂಡಿ ಸತ್ಯಾಗ್ರಹ ದೇಶೀಯತೆಯ ಮುಖ್ಯ ಪ್ರತೀಕವಾಗಿದೆ. ಉಪ್ಪು ತಯಾರು ಮಾಡುವುದು ದೇಶೀಯವದ ಹಕ್ಕು ಎಂಬುದನ್ನು ಪ್ರಕಟಿಸುವುದೇ ಸ್ವಾತಂತ್ರ್ಯ ಸಮರದ ಒಂದು ಆಯುಧವನ್ನಾಗಿ ಮಾಡಿಕೊಂಡಿದ್ದು ದಂಡಿ ಸತ್ಯಾಗ್ರಹದ ವೈಶಿಷ್ಟ್ಯ.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ದೇಶೀಯತೆ, ಸ್ವದೇಶಿ, ವಿದೇಶಿ, ಭಾರತೀಯ ಮುಂತಾದ

ಪದಗಳಿಗೆ ವಿಶೇಷಾರ್ಥಗಳು ಲಭಿಸಿವೆ. ಒಂದು ಕಾಲದಲ್ಲಿ ದೇಶೀಯತೆ ರಾಷ್ಟ್ರೀಯತೆಯ ಸಮಾನಾರ್ಥಕವಾಗಿ ಒಂದು ಆದರ್ಶ ಸಾಧನೆಯ ದಾರಿಯಾಗಿತ್ತು. ಆದರೆ ಬರುಬರುತ್ತಾ 'ದೇಶ' ವೆಂಬ ಹೆಸರು ಸ್ವಾರ್ಥ ರಾಜಕೀಯಗಳಲ್ಲಿ ಬಳಕೆಯಾಗಿ, ರಾಜಕೀಯ ಪಕ್ಷಗಳ ಹೆಸರಾಗಿ, ಜನರಲ್ಲಿ ಒಡಕನ್ನು ಸೃಷ್ಟಿಸುವ ಆಯುಧವಾಗಿ ಬಳಕೆಯಾಗತೊಡಗಿತು. ಈಗ ಸ್ವದೇಶಿ ಒಂದು ಹುಸಿ ನುಡಿಯಾಗಿದೆ. ಜನರಲ್ಲಿ ಮತಾವೇಶ ಕೋಮುಭಾವನೆ ಬೆಳೆಸಲು ಉಪಯೋಗಿಸುವ ಆಯುಧವಾಗಿದೆ.

ಇದೇ ಸಂದರ್ಭದಲ್ಲಿ ನಮಗೆ 'ದೇಶೀವಾದ' ವೆಂಬ ಪರಿಕಲ್ಪನೆಯೂ ಪ್ರಸ್ತುತವೆನಿಸುತ್ತದೆ. 'ದೇಶೀವಾದ' ವೆಂದರೆ ''ಒಂದು ಸಾಹಿತ್ಯದ ಪ್ರಾದೇಶಿಕ ಸತ್ವವನ್ನು ಆ ಸಾಹಿತ್ಯವು ಹುಟ್ಟಿಕೊಳ್ಳುವ ಭಾಷಾ ಸಮುದಾಯದ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಪ್ರದಾಯದ ವಿಶಿಷ್ಟ ಒಲವುಗಳನ್ನು, ಆ ಸಮುದಾಯದ ಸಾಂಸ್ಕೃತಿಕ ಅನನ್ಯತೆಯನ್ನು ಮತ್ತು ಆ ಸಾಹಿತ್ಯಕ್ಕಿರುವ ತನ್ನದೇ ಆದ ಸ್ವಾಯತ್ತತೆಯನ್ನು ಗುಣಾತ್ಮಕವೆಂದು ಒಪ್ಪಿಕೊಳ್ಳುವ ಧೋರಣೆ ಅಥವಾ ಸಿದ್ಧಾಂತ''(ಅದೇ; ಪುಟ ೬೬) ಇಲ್ಲಿ ದೇಶೀವಾದವನ್ನು ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸುವ ಒಂದು ಧೋರಣೆ ಅಥವಾ ಸಿದ್ಧಾಂತವೆಂದು ಗುರುತಿಸಲಾಗಿದೆ. ದೇಶೀವಾದದ ವಿಷಯದಲ್ಲಿ 'ದೇಶಿ' ವಸ್ತು ಸ್ಥಿತಿ ಎಂಬುದನ್ನು ಒಪ್ಪಿಕೊಂಡರೆ ಅದರ ಬಗೆಗಿನ ಆಲೋಚನಾ ಧೋರಣೆ ಮತ್ತು ಸಿದ್ಧಾಂತಗಳಿಗೆ 'ದೇಶಿವಾದ' ಎನ್ನಬಹುದು. 'ದೇಶಿ' ಎಂಬುದು ಒಂದು ಪ್ರದೇಶದ, ಒಂದು ಭಾಷೆಯ, ಒಂದು ಸಾಹಿತ್ಯದ ಅಥವಾ ಒಂದು ಸಂಸ್ಕೃತಿಯ ಅವನ್ಯತೆಯನ್ನು ಸ್ವಂತಿಕೆಯನ್ನು ಪ್ರತಿಬಿಂಬಿಸುತ್ತದೆ.

ದೇಶೀಯತೆ, ಸ್ವದೇಶಿ ಅಥವಾ ರಾಷ್ಟ್ರೀಯತೆ ಈ ಪರಿಕಲ್ಪನೆಗಳು ದೇಶೀವಾದದಿಂದ ಭಿನ್ನವಾದವು. ರಾಷ್ಟ್ರೀಯತೆ ಎನ್ನುವುದು ಅಥವಾ ದೇಶೀಯತೆ ಎನ್ನುವುದು ವ್ಯಾಮೋಹ, ಭಕ್ತಿ, ಆವೇಶ, ಅನನ್ಯತೆಯೆಡೆಗೆ ಮುಖಮಾಡಿ ನಿಲ್ಲುವ ಸ್ವರೂಪದ್ದಾದರೆ, ದೇಶೀವಾದ ಈ ಕಟ್ಟೆಯನ್ನು ಒಡೆದು ಹೊರಬರುವಂತಹುದು. ತಪ್ಪು ಒಪ್ಪುಗಳೆರಡನ್ನೂ ತನ್ನದೆಂದು ಸ್ವೀಕರಿಸಿ ಹೆರವರನ್ನು ಆಕ್ರಮಿಸದೆ, ತನ್ನನ್ನು ಇತರರು ಆಕ್ರಮಿಸದಂತೆ ಎಚ್ಚರವಹಿಸಿ ಅಭಿವೃದ್ಧಿಯ ಪಥದತ್ತ

ಮುನ್ನುಗ್ಗುವುದು. ದೇಶೀಯತೆ, ಸ್ವದೇಶೀ ರಾಷ್ಟ್ರೀಯತೆಯಂಥವು ಭಾವನಾತ್ಮಕವಾಗಿ ಭಿನ್ನ ಭಿನ್ನ ರೀತಿಯಲ್ಲಿ ವಿಕಾಸಗೊಂಡ ಧೋರಣೆಗಳಾಗಿರಬಹುದು. ಆದರೆ ಇವೆಲ್ಲದರ ಹಿಂದೆ 'ನಮ್ಮದನ್ನು ಕಾಪಾಡಿಕೊಳ್ಳಬೇಕೆಂಬ' ಮೂಲಭೂತ ಪ್ರವೃತ್ತಿ ಅಡಗಿದೆ.

'ದೇಸೀ ಸಂಸ್ಕೃತಿ' ಪರಿಕಲ್ಪನೆಯ ಚರ್ಚೆಯಲ್ಲಿ 'ದೇಶೀವಾದ' ರಾಷ್ಟ್ರೀಯತೆ ಈ ಪರಿಕಲ್ಪನೆಗಳು ಮುಖ್ಯವಾದಂತೆ 'ಪ್ರಾದೇಶಿಕತೆ' ಎನ್ನುವ ಅರ್ಥದಲ್ಲೂ 'ದೇಶೀಯತೆ'ಯನ್ನು ಬಳಸಲಾಗುವುದರಿಂದ ಪ್ರಾದೇಶಿಕತೆಯನ್ನು ಚರ್ಚಿಸಲಾಗುವುದು.

'ದೇಶ' ಮತ್ತು 'ಪ್ರದೇಶ' ಒಂದೇ ಮೂಲದಿಂದ ಹುಟ್ಟಿದ ಪದಗಳಾದರೂ 'ಪ್ರ' ಎಂಬ ಉಪಸರ್ಗವನ್ನು ಬಳಸುವುದರಿಂದ ಅದಕ್ಕೆ 'ಪ್ರಾಂತ್ಯ' ಅಥವಾ ಒಂದು ಭೌಗೋಳಿಕ ಚೌಕಟ್ಟಿನೊಳಗಿರುವ ಭೂಭಾಗವೆನ್ನುವ ಅರ್ಥ ಬರುತ್ತದೆ. ಸಾಮಾನ್ಯವಾದ ಅರ್ಥದಲ್ಲಿ ಪ್ರದೇಶ ಎಂದರೆ 'ಒಂದು ಸ್ಥಳ' ಭಾರತ ದೇಶವನ್ನು ಕೆಲವು ರಾಜ್ಯಗಳನ್ನಾಗಿ ವಿಭಜಿಸುವಾಗ ದೇಶದ ಭಾಗಗಳಿಗೆ 'ಪ್ರದೇಶ' ಎಂಬ ಹೆಸರನ್ನಿಟ್ಟರು. ಪ್ರಾದೇಶಿಕತೆ ಎಂಬುದು ಒಂದೊಂದು ರಾಜ್ಯದ ಭೌಗೋಳಿಕ ಪರಿಸರಕ್ಕೆ ಭಾಷೆಗೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ವಿಷಯ ಎಂಬ ಅರ್ಥ ಬರುತ್ತದೆ. 'ದೇಶಿ' ಭಾಷಾಸಾಹಿತ್ಯಗಳು ಸಂಸ್ಕೃತಿ ಮುಂತಾದವುಗಳ ಕಡೆ ಒತ್ತು ಕೊಟ್ಟರೆ ಪ್ರಾದೇಶಿಕತೆ, 'ಭೌಗೋಳಿಕ ಪ್ರದೇಶ', ಅದರಲ್ಲಿ ವಾಸ ಮಾಡುವ ಜನ, ಅವರ ಭಾಷೆ ಮುಂತಾದವುಗಳ ಕಡೆ ಒತ್ತು ಕೊಡುತ್ತದೆ. ಪ್ರಾದೇಶಿಕತೆ ಭೌಗೋಳಿಕ ಮೂಲವಾದುದು. ಇದರಿಂದ ಒಂದು ಸ್ಥಳ ಅಥವಾ ವಾಸಸ್ಥಾನ ಇಲ್ಲಿ ಮುಖ್ಯ ಆಗಿ ಅದರ ಮೂಲಕ ಅಲ್ಲಿಯ ಜನರ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಲಾಗುತ್ತದೆ. ಕರ್ನಾಟಕದ ದೇಶಿ ಬಗ್ಗೆ ಹೇಳುವಾಗ ಕೊಡವರ ದೇಶಿ, ತುಳುಭಾಷೆಯನ್ನಾಡುವವರ ದೇಶಿ, ಬುಡಕಟ್ಟು ಜನಾಂಗಗಳ ದೇಶಿ ಇವೆಲ್ಲವೂ ಸೇರುತ್ತವೆ. ಆದರೆ ಕನ್ನಡಿಗರ ದೇಶಿಯ ಬಗ್ಗೆ ಮಾತನಾಡುವಾಗ ಕರ್ನಾಟಕದಲ್ಲಿರುವ ಕನ್ನಡಿಗರಲ್ಲದೆ ಮಹಾರಾಷ್ಟ್ರದಲ್ಲಿ, ತಮಿಳುನಾಡಿನಲ್ಲಿ, ಆಂಧ್ರದಲ್ಲಿ, ಅಮೇರಿಕೆಯಲ್ಲಿ ಇರುವ ಕನ್ನಡಿಗರ ದೇಶಿಯೂ ಸೇರುತ್ತದೆ. ಆಗ ಪ್ರಾದೇಶಿಕತೆಗಿಂತ ಆ ಭಾಷೆಯನ್ನಾಡುವ, ಆ ಸಂಸ್ಕೃತಿಗೆ ಸೇರಿದ ಎಲ್ಲ ಪ್ರದೇಶಗಳ ಜನರನ್ನೂ ಅದು ಒಳಗೊಳ್ಳುತ್ತದೆ.

'ದೇಶಿ' ಎಂಬ ಪರಿಕಲ್ಪನೆಯ ಇತಿಹಾಸವನ್ನು ಗಮನಿಸಿದಾಗ 'ಪ್ರಾದೇಶಿಕ' ಎಂಬ ಅರ್ಥಕ್ಕಿಂತ ಇಡೀ ದೇಶದಲ್ಲಿರುವ ಪ್ರಧಾನವಾದ ಶಿಷ್ಟ ಸಂಸ್ಕೃತಿಗೆ ಭಿನ್ನವಾಗಿರುವ ಸಾಂಸ್ಕೃತಿಕ ವಾಹಿನಿ ಎಂಬ ಅರ್ಥವೇ ಇದ್ದಂತೆ ಕಾಣುತ್ತದೆ. ಶೈಲಿಗಳ ವಿಷಯವನ್ನು ಪ್ರಸ್ತಾಪಿಸಿದಾಗಲೂ ಅಲಂಕಾರಿಕರು ಪ್ರಾದೇಶಿಕ ಶೈಲಿಗಳನ್ನು ವೈದರ್ಭಿ, ಆವಂತಿ ಮುಂತಾದ ಹೆಸರುಗಳಿಂದ ಕರೆಯುತ್ತಿದ್ದರು. ಅಂಥ ಪ್ರಾದೇಶಿಕ ಶೈಲಿಗಳು ದೇಶಿ ಶೈಲಿಗಳೇ ಆಗಿರಬೇಕಾದ ಅವಶ್ಯಕತೆ ಇಲ್ಲವೆನಿಸುತ್ತದೆ. ಒಡಿಸ್ಸಿ, ಮಣಿಪುರಿ, ಕೂಚಿಪುಡಿ ಮುಂತಾದವು ಪ್ರಾದೇಶಿಕ ನೃತ್ಯ ಶೈಲಿಗಳಾದರೂ ದೇಶಿ ಮಾರ್ಗಗಳ ಸಮನ್ವಯ ಲಕ್ಷಣಗಳೇ ಅವುಗಳಲ್ಲಿ ಹೆಚ್ಚಾಗಿ ಕಾಣಬಹುದು. ಹೀಗಾಗಿ ದೇಶಿ ಎನ್ನುವುದು ಒಂದು ಪ್ರದೇಶಕ್ಕೆ ಸೀಮಿತವಾದುದು ಎಂಬ ಅರ್ಥಕ್ಕಿಂತ ಆಯಾ ಪ್ರದೇಶಗಳಲ್ಲಿ ವಿಶಿಷ್ಟವಾಗಿರುವ ಸಾಮಾನ್ಯ ಜನರ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಅಂಶಗಳಿಂದ ಕೂಡಿದ್ದು ಎನ್ನಬಹುದಾಗಿದೆ.

ಮನುಷ್ಯ ಸಂಸ್ಕೃತಿಯು ರೂಪುಗೊಳ್ಳುವಾಗ ವಿವಿಧ ಕಾರಣಗಳಿಂದ ವಿಂಗಡಣೆಗೊಳಗಾದ ಮನುಷ್ಯ ಸಮಾಜ, ತನ್ನ ವಿಭಜಿತ ನೆಲೆಗಳಿಗನುಗುಣವಾಗಿ ವಿಭಿನ್ನ ಸಂಸ್ಕೃತಿಗಳನ್ನು ರೂಪಿಸಿಕೊಳ್ಳುತ್ತ ಬಂದಿದೆ. ಇದುವೇ ಉಪಸಂಸ್ಕೃತಿ, ಪ್ರಧಾನ ಸಂಸ್ಕೃತಿಯು ಯಾವುದೇ ಒಂದು ದೇಶ-ಪ್ರದೇಶದ ಜೀವನ ವಿಧಾನವಾಗಿರುವಾಗ ಇದಕ್ಕೆ ಹೊರತಾಗಿ ಅಥವಾ ಪ್ರಧಾನ ನೆಲೆಯಿಂದ ನಿರ್ಲಕ್ಷಿತವಾಗಿ ಬದುಕುತ್ತಿರುವ ಸಂಸ್ಕೃತಿಗಳು 'ಉಪಸಂಸ್ಕೃತಿ' ಪರಿಕಲ್ಪನೆಗೆ ಬರುತ್ತವೆ. ಉಪಸಂಸ್ಕೃತಿ ಎಂದು ಕರೆಯಲಾಗುವ ಈ ಸಂಸ್ಕೃತಿಗಳು ಈ ನಾಡಿನ ಮೂಲನಿವಾಸಿಗಳಿಗೆ ಸೇರಿದವು ಆದ್ದರಿಂದ ಇವನ್ನು 'ಮೂಲ ಸಂಸ್ಕೃತಿ'ಗಳು ಎಂದು ಯಾಕೆ? ಕರೆಯಬಾರದು ಎಂಬ ಪ್ರತಿವಾದಗಳು ಮಂಡನೆಯಾಗಿವೆ, ಪ್ರತಿ ಸಂಸ್ಕೃತಿ ಸಮಾಜದಲ್ಲಿ ದುಡಿಯುವ ವರ್ಗದ ಬದುಕಿನಲ್ಲಿ ಅನೇಕ ಬಗೆಯ ನಂಬಿಕೆಗಳಿವೆ. ಇದರಲ್ಲಿ ಕೆಲವು ಯಜಮಾನಿಕೆಯನ್ನು ಒಪ್ಪಿಕೊಂಡಂತವು, ಇನ್ನೂ ಕೆಲವು ವಿರೋಧಿಸುವಂತಹವು ಇದನ್ನು ಆಧುನಿಕ ವೈಚಾರಿಕತೆ ಹಾಗೂ ರಾಜಕೀಯ ಪ್ರಜ್ಞೆಯೊಂದಿಗೆ ಕೂಡಿಸಿ, ಆಧುನಿಕ ಸಮಾಜದ ಸಮಸ್ಯೆಗಳನ್ನು ಮುಖಾಮುಖಿ ಮಾಡಲು ಬಳಸುವ ಹೊಸ ಸಮಾಜವಾದಿ ಸಮಾಜವನ್ನು ಕಟ್ಟುವ ಪ್ರಯತ್ನವನ್ನು ಮಾಡಬಹುದು. ಇದನ್ನು 'ಪ್ರತಿ ಸಂಸ್ಕೃತಿ' ಎಂದು ಕರೆಯಬಹುದು.

ದೇಸೀ ಸಂಸ್ಕೃತಿಯನ್ನು ಭಾಷೆ, ಸಂಗೀತ, ನೃತ್ಯ ಮತ್ತು ಇತರ ಕಲಾರೂಪಗಳಿಗೆ ಅನ್ವಯಿಸಿದ ಶಾಸ್ತ್ರಕಾರರು ಅದನ್ನು ಸಾಹಿತ್ಯಕ್ಕೆ ಅನ್ವಯಿಸಲು ಪ್ರಾರಂಭಿಸಿದ್ದು ಪಂಪನಕಾಲದಿಂದ, ಪಂಪನಿಗಿಂತ, ಮೊದಲೇ ದೇಶಿಯನ್ನು ಕವಿರಾಜಮಾರ್ಗಕಾರ ಗುರುತಿಸಿ ಅದೊಂದು ಭಾಷಾ ಭೇದವೆಂದು ಹೇಳಿದ್ದಾನೆ. ಈ ರೀತಿಯಾಗಿ ದೇಶೀಯನ್ನು ಮಾರ್ಗ-ದೇಶಿಗಳ ಮೂಲಕ ಮೊದಲು ಸಂಗೀತದಲ್ಲಿ ನಂತರ ನೃತ್ಯಭಾಷೆ ಸಾಹಿತ್ಯಗಳಲ್ಲಿ ಗುರುತಿಸಿರುವುದನ್ನು ಕಾಣಬಹುದು. ದೇಶ ಎಂಬ ಪದವು 'ರಾಷ್ಟ್ರ' ಎಂಬ ಅರ್ಥದಲ್ಲಿ ಬಳಕೆಗೆ ಬಂದಿದೆ. ಈ 'ದೇಶ' ಮತ್ತು ಎಬುದರಿಂದ ನಂತರದಲ್ಲಿ ಇತರ ಪದ-ಪರಿಕಲ್ಪನೆಗಳು ಹುಟ್ಟಿಕೊಂಡವು. ರಾಜಕೀಯ ಚಳುವಳಿಗಳ ಸಂದರ್ಭದಲ್ಲಿ ಇವು ಪ್ರಮುಖ ಪಾತ್ರ ವಹಿಸಿದವು. ಆದರೆ ದೇಶ-ದೇಶ್ಯ-ದೇಶೀಯ-ದೇಶೀ-ದೇಸೀ ಈ ಅನುಕ್ರಮದಲ್ಲಿ ಬೆಳೆದು ಬಂದ ಪದ-ಪರಿಕಲ್ಪನೆ ಆಧುನಿಕ ಸಾಂಸ್ಕೃತಿಕ ಸಾಹಿತ್ಯಕ ಚಿಂತನೆ, ವಿಮರ್ಶೆಯಲ್ಲಿ ಹೊಸತೊಂದು ಮಾರ್ಗವನ್ನೇ ತೆರೆದವು. ಗ್ರಾಮೀಣ ಸಂಸ್ಕೃತಿ, ಅನನ್ಯ ಸಂಸ್ಕೃತಿ, ವಿಶಿಷ್ಟ ಸಂಸ್ಕೃತಿ, ಪರ್ಯಾಯ ಸಂಸ್ಕೃತಿ, ಪ್ರಾದೇಶಿಕತೆ, ಮೌಖಿಕ ಸಾಹಿತ್ಯ ಪಾರಂಪರಿಕ ಜ್ಞಾನ, ಸಾಮುದಾಯಿಕ ಸಂಸ್ಕೃತಿ, ಕೃಷಿ ಸಂಸ್ಕೃತಿ, ವೃತ್ತಿ ಸಂಸ್ಕೃತಿ, ಶ್ರಮಿಕ ಸಂಸ್ಕೃತಿ ಮುಂತಾದ ಹತ್ತು ಹಲವು ಅರ್ಥಗಳಲ್ಲಿ ಅನ್ವಯವಾಗುವ 'ದೇಸಿ ಸಂಸ್ಕೃತಿ' ಎಂಬ ಪರಿಕಲ್ಪನೆಗೆ ಆಧುನಿಕ ಸಂಸ್ಕೃತಿ ಚಿಂತನೆಯಲ್ಲಿ ಮಹತ್ವದ ಸ್ಥಾನವಿದೆ.

ದೇಸಿ ಎಂಬ ಹ್ರಸ್ವರೂಪವು ಭಾವನಾಮವಾಗಿ ಬಳಕೆಯಾದರೆ 'ದೇಸೀ' ಎಂಬ ದೀರ್ಘ ರೂಪವು ನಾಮ ವಿಶೇಷಣವಾಗಿ ಬಳಕೆಯಾಗುತ್ತದೆ. ಉದಾಹರಣೆಗೆ 'ಪಂಪನ ದೇಸಿ' ಎಂಬಲ್ಲಿ ನಾವು ಭಾವನಾಮ ರೂಪವನ್ನು ಕಾಣುತ್ತೇವೆ. 'ದೇಸೀ ಸಂಸ್ಕೃತಿ' ಎಂಬಲ್ಲಿ ನಾಮ ವಿಶೇಷಣವನ್ನು ಕಾಣುತ್ತೇವೆ. ಇದರಿಂದಲೇ ಸಂಸ್ಕೃತಿ ಚಿಂತನೆಯಲ್ಲಿ ದೇಸೀವಾದ, ದೇಸಿಯಂತೆ ಎಂಬ ಪರಿಕಲ್ಪನೆಯೂ ಕಲೆ, ಸಾಹಿತ್ಯ ಸಂದರ್ಭದಲ್ಲಿ ಪ್ರಾಚೀನವಾದುದೆಂದು ಹೇಳಬಹುದು. ಸಾಹಿತ್ಯ ಸಂದರ್ಭದಲ್ಲಿ ಮಾರ್ಗದೇಸೀಗಳ ಕಲ್ಪನೆ ಬಹು ಹಿಂದಿನಿಂದಲೇ ಬೆಳೆದು ಬಂದಿದೆ. ಸಂಸ್ಕೃತ ಕಾವ್ಯ ಮಾರ್ಗವನ್ನುನುಸರಿಸಿ ಶಾಸ್ತ್ರ ಬದ್ಧವಾಗಿ, ಶಾಸ್ತ್ರೀಯವಾಗಿ, ಪ್ರೌಢವಾಗಿ ರಚನೆಯಾದ ಪ್ರಾಚೀನ ಕನ್ನಡ ಕಾವ್ಯಗಳು 'ಮಾರ್ಗ ಕಾವ್ಯ' ಗಳೆನಿಸಿದರೆ, ಆ ಶಾಸ್ತ್ರ ಬದ್ಧತೆಯನ್ನು ಸ್ವಲ್ಪಮಟ್ಟಿಗೆ

ಸಡಲಿಸಿಕೊಂಡು ರೂಪ, ಸ್ವರೂಪ, ಸಂವೇದನೆ, ಸಂವಹನಗಳಲ್ಲಿ ಕನ್ನಡತನವನ್ನು ಪ್ರಾದೇಶಿಕತೆಯನ್ನು ಮೈಗೂಡಿಸಿಕೊಂಡು ರಚನೆಯಾದ ಕಾವ್ಯಗಳು 'ದೇಸೀ ಕಾವ್ಯ' ಗಳೆನಿಸಿದವು ಹಾಗಾಗಿ ನಮ್ಮ ಇಂದಿನ 'ದೇಸೀಸಂಸ್ಕೃತಿ' ಚಿಂತನೆಯ ಬೇರು ಅಲ್ಲಿರುವುದನ್ನು ನಾವು ಗುರುತಿಸಲೇ ಬೇಕಾಗುತ್ತದೆ. ಆಧುನಿಕ ಸಂಸ್ಕೃತಿ ಚಿಂತನೆಯಲ್ಲಿ 'ದೇಶ' ಎಂಬುದು 'ಗ್ರಾಮ' 'ಪ್ರದೇಶ' ಎಂಬುದಕ್ಕೆ ಸಂವಾದಿಯಾಗಿ 'ದೇಸೀ' ಎಂಬುದು ಗ್ರಾಮೀಣ, 'ಪ್ರಾದೇಶಿಕ' ಎಂಬ ಅರ್ಥಗಳಲ್ಲಿ ಬಳಕೆಯಾಗುತ್ತದೆ. ಹಾಗೆಂದ ಮಾತ್ರಕ್ಕೆ 'ದೇಶ'ದ ಅರ್ಥವ್ಯಾಪ್ತಿ ಕುಗ್ಗಿದೆಯೆಂದು ಭಾವಿಸಬಾರದು. ಭಾರತದ ಯಾವುದೊ ಒಂದು ಮೂಲೆಯಲ್ಲಿರುವ ಹಳ್ಳಿಯ ಅಥವಾ ಗುಡ್ಡಗಾಡಿನ ಸಂಸ್ಕೃತಿಯು 'ಗ್ರಾಮೀಣ ಭಾರತ'ದ ಸಂಸ್ಕೃತಿಯೂ ಆಗುತ್ತದೆ. ಒಟ್ಟಿನಲ್ಲಿ ಗ್ರಾಮೀಣ ಸಂಸ್ಕೃತಿ, ಪ್ರಾದೇಶಿಕತೆ, ಸಾಮುದಾಯಿಕ ಸಂಸ್ಕೃತಿ, ಪಾರಂಪರಿಕ ಸಂಸ್ಕೃತಿ ಇತ್ಯಾದಿ ಅರ್ಥಗಳಲ್ಲಿ ನಾವು 'ದೇಸೀ ಸಂಸ್ಕೃತಿ' ಪರಿಕಲ್ಪನೆಯನ್ನು ಪರಿಭಾವಿಸಬೇಕಾಗುತ್ತದೆ.

ಪ್ರತಿಯೊಂದು ಪ್ರದೇಶದಲ್ಲೂ ಅವರದ್ದೇ ಆದ ಜೀವನ ಕ್ರಮವಿದೆ, ಪ್ರತಿಯೊಂದು ಜನ ಸಮುದಾಯಕ್ಕೂ ತನ್ನದೇ ಆದ ಸಂಸ್ಕೃತಿಯಿದೆ. ಭಾಷೆಯಲ್ಲಿ ಆಹಾರ ಪದ್ಧತಿಯಲ್ಲಿ, ಉಡುಗೆ ತೊಡುಗೆಯಲ್ಲಿ ಬಂಧುತ್ವ ಪರಿಕಲ್ಪನೆಯಲ್ಲಿ, ವಾರ್ಷಿಕಾ ವರ್ತನ - ಜೀವನಾವರ್ತನೆ ಆಚರಣೆಗಳಲ್ಲಿ ಒಟ್ಟಾರೆ ಬದುಕಿನ ರೀತಿಯಲ್ಲಿ ಪ್ರತಿಯೊಂದು ಪ್ರದೇಶ ಸಮುದಾಯಗಳು ಅನನ್ಯವಾಗಿವೆಯಂದೇ ಹೇಳಬೇಕು. ಇಂತಹ ಅನನ್ಯವಾದ ಪ್ರದೇಶ - ಸಮುದಾಯಗಳ ಸಾಂಸ್ಕೃತಿಕ ಸಂಗತಿಗಳನ್ನೂ ಅಂಶಗಳನ್ನೂ 'ದೇಸೀ ಸಂಸ್ಕೃತಿ' ಎಂದು ಕರೆಯಬಹುದು.

ಒಟ್ಟಾರೆಯಾಗಿ 'ದೇಸೀ ಸಂಸ್ಕೃತಿ' ಎಂಬ ಪರಿಕಲ್ಪನೆಯನ್ನು ನಾವು ಮಾರ್ಗದೇಶಗಳಿಂದ ಹಿಡಿದು ರಾಜ್ಯಶಾಹಿಯ ವಿರುದ್ಧ, ವೈದಿಕ ಪರಂಪರೆಯ ವಿರುದ್ಧ ವಸಾಹತು ಶಾಹಿಯ ವಿರುದ್ಧ ಇದನ್ನು ಗುರುತಿಸುವ ಪ್ರಯತ್ನವನ್ನು ಮಾಡಿದರೂ, ಕೊನೆಗೆ ಗ್ರಾಮೀಣ, ಪ್ರಾದೇಶಿಕತೆ, ಸಾಮುದಾಯಿಕ ಪಾರಂಪರಿಕ ಎಂಬ ನೆಲೆಯಲ್ಲಿ ನಾವು ದೇಸೀ ಸಂಸ್ಕೃತಿಯನ್ನು ಗುರುತಿಸಬಹುದಾಗಿದೆ.

ಪ್ರಸ್ತುತ ಜಾಗತಿಕರಣದ ಸಂದರ್ಭದಲ್ಲಿ ದೇಸೀ ಸಂಸ್ಕೃತಿಯನ್ನು ನಮ್ಮ ಸಂಸ್ಕೃತಿ, ಸ್ಥಳೀಯ ಸಂಸ್ಕೃತಿ ಎಂಬ ಅನನ್ಯತೆಯ ನೆಲೆಯಲ್ಲಿ ಪರಿಭಾವಿಸಲಾಗುತ್ತದೆ. ಈ ಎಲ್ಲ ಅರ್ಥ ವ್ಯಾಪ್ತಿಗಳ ಹಿನ್ನೆಲೆಯಲ್ಲಿ ಭಾರತೀಯ ಅಥವಾ ಕನ್ನಡ ಸಿನಿಮಾಗಳನ್ನು ನಾವು ಗಮನಿಸಬೇಕಾಗುತ್ತದೆ. ಜಾಗತಿಕ ಪರಿಪ್ರೇಕ್ಷವುಳ್ಳ ವಿದೇಶಿ ಮೂಲದ ಸಿನಿಮಾ ಮಾಧ್ಯಮವು ನಮ್ಮಲ್ಲಿ ಹುಟ್ಟಿ ಬೆಳೆದು ಬಂದ ಬಗೆಯನ್ನು ಅವಲೋಕಿಸಿದಾಗ ಅದರಲ್ಲಿ ದೇಸೀ ಸಂಸ್ಕೃತಿ ಅನ್ನುವುದು ಕೇವಲ ಪ್ರಾದೇಶಿಕತೆಗೆ ಅಷ್ಟೇ ಸೀಮಿತಗೊಳ್ಳುವುದಿಲ್ಲ. 'ಪ್ರಾದೇಶಿಕತೆ' ಎಂಬ ಕನಿಷ್ಠ ತಮ್ಮ ಸಂಸ್ಕೃತಿ ಘಟಕದಿಂದ ಹಿಡಿದು ಭಾರತೀಯತೆ ಎಂಬ ವ್ಯಾಪಕ ಸಂಸ್ಕೃತಿ ಗ್ರಹಿಕೆಯವರೆಗೆ ಇಲ್ಲಿ ಇದರ ಅರ್ಥ ವ್ಯಾಪ್ತಿಯಿದೆ. ಹಾಗಾಗಿ 'ಕನ್ನಡ ಸಿನಿಮಾ ಮತ್ತು ದೇಸೀ ಸಂಸ್ಕೃತಿ' ಎಂಬ ವಿಷಯದ ಸಂದರ್ಭದಲ್ಲಿ ಭಾರತೀಯ ಪುರಾಣ, ಇತಿಹಾಸ, ಸ್ವಾತಂತ್ರ್ಯ ಚಳುವಳಿ, ರಾಷ್ಟ್ರೀಯ ಪ್ರಜ್ಞೆ, ಕನ್ನಡನಾಡು ನುಡಿಯ ಬಗೆಗಿನ ಪ್ರಜ್ಞೆ, ಕನ್ನಡದ ಜನತೆ ಮತ್ತು ಜಾನಪದ ಇವೆಲ್ಲ ದೇಸೀ ಸಂಸ್ಕೃತಿಯ ಭಾಗಗಳಾಗುತ್ತವೆ.

ಹೀಗೆ 'ದೇಸೀ ಸಂಸ್ಕೃತಿ' ಎಂಬ ಪರಿಭಾಷೆ ಪರಿಕಲ್ಪನೆಗಳು ಸಮಕಾಲೀನವಾದವುಗಳಾದರೂ ಹೆಚ್ಚು ಕಡಿಮೆ ತತ್ಸಬಂಧವಾದ ಈ ಅರ್ಥಗ್ರಹಿಕೆಗಳು ನಮ್ಮಲ್ಲಿ ಬಹು ಹಿಂದಿನಿಂದಲೇ ಇತ್ತೆನ್ನಬಹುದು. ಪ್ರಾಚೀನ ಕಲೆ ಸಾಹಿತ್ಯ ಸಂದರ್ಭದಲ್ಲಿ ಮಾರ್ಗ ಕಲ್ಪನೆಗೆ ಪ್ರತಿಯಾಗಿ ಇದ್ದ ದೇಸೀ ಕಲ್ಪನೆ, ನಂತರದ ಅರಸಾಡಳಿತ ಕಾಲಘಟ್ಟದಲ್ಲಿ ವಿದೇಶೀ ಕಲ್ಪನೆಗೆ ಪ್ರತಿಯಾಗಿ ಇದ್ದ ಸ್ವದೇಶಿ ಕಲ್ಪನೆ, ಮುಂದೆ ವಸಾಹತುಶಾಹಿ ಸಂದರ್ಭದಲ್ಲಿ ಪಾಶ್ಚಾತ್ಯ ಅಥವಾ ವಿದೇಶೀ ಕಲ್ಪನೆಗೆ ಪ್ರತಿಯಾಗಿ ಪ್ರಚಲಿತವಿದ್ದ ಸ್ವದೇಶಿ ಕಲ್ಪನೆ ಅದೇ ಸಂದರ್ಭದಲ್ಲಿ ಕ್ರಿಯಾಶೀಲವಾಗಿದ್ದ ರಾಷ್ಟ್ರೀಯ ಪ್ರಜ್ಞೆ ಇವೆಲ್ಲ ಈ ದೇಸೀ ಸಂಸ್ಕೃತಿ ಪರಿಲ್ಪನೆಗೆ ಹೆಚ್ಚು ಕಡಿಮೆ ಪೂರಕವಾದಂಥ ಅರ್ಥ ಗ್ರಹಿಕೆಗಳೇ ಆಗಿವೆ ಎನ್ನಬಹುದು.

ಹಾಗಾಗಿ ಈ ಎಲ್ಲಾ ಪ್ರಜ್ಞೆ - ಸಂವೇದನೆಗಳ ಜೊತೆಗೆ ಭಾರತೀಯ ಪುರಾಣ ಇತಿಹಾಸ, ಕನ್ನಡ ನಾಡಿನ ಪ್ರಾದೇಶಿಕ ಚರಿತ್ರೆ, ಕನ್ನಡ ನಾಡು ನುಡಿಯ ಬಗೆಗಿನ ಪ್ರಜೆ, ಕನ್ನಡ ಜನತೆ ಅವರ ಜಾನಪದ ಇವೆಲ್ಲಾ ಸಿನಿಮಾದ ಸಂದರ್ಭದಲ್ಲಿ ದೇಸೀ ಸಂಸ್ಕೃತಿಯ ಅಂಶಗಳೆನಿಸುತ್ತವೆ. ಕನ್ನಡ ಸಿನಿಮಾಗಳಲ್ಲೂ ಈ ಎಲ್ಲಾ ಅಂಶಗಳು ಒಂದಲ್ಲಿ ಒಂದು ರಿತಿಯಲ್ಲಿ ಅಭಿವ್ಯಕ್ತವಾಗಿರುತ್ತವೆ.

'ದೇಸೀ' ಎನ್ನುವ ವಿಶೇಷಣವು ವಿವಿಧ ಸಂದರ್ಭ ಸನ್ನಿವೇಶಗಳಲ್ಲಿ ವಿಭಿನ್ನ ಅರ್ಥಗಳನ್ನು ಪಡೆದು ಕೊಳ್ಳುತ್ತದೆ. ನಮ್ಮ ಸ್ಥಳೀಯ, ಪ್ರಾದೇಶಿಕ ಇತ್ಯಾದಿ ಅರ್ಥಗಳನ್ನು ಧ್ವನಿಸುವ ಈ ಪದವು ಕೆಲವಡೆಗಳಲ್ಲಿ 'ಜಾನಪದೀಯ' ಅಥವಾ 'ಜನಪದ' ಎಂಬ ವಿಶೇಷಣವಾಗಿಯೂ ಬಳಕೆಯಾಗುವುದುಂಟು.

'ನಮ್ಮ' ಎಂಬ ವಿಶೇಷಣಾರ್ಥದಲ್ಲಿ ಇದನ್ನು ಪರಿಗಣಿಸಿದಾಗ ಇಲ್ಲಿನ 'ನಾವು' ಯಾರೆಂಬುದು ಮುಖ್ಯ ವಾಗುತ್ತದೆ. 'ಸ್ಥಳೀಯ' ಎಂಬ ವಿಶೇಷಣಾರ್ಥ ದಲ್ಲಿ ಇದನ್ನು ಬಳಸಿದಾಗ ಇಲ್ಲಿನ ಸ್ಥಳ ಯಾವುದೆಂಬುದು ಮುಖ್ಯವಾಗುತ್ತದೆ. ಅದೇ ರೀತಿ 'ಪ್ರಾದೇಶಿಕ' ಎಂಬ ವಿಶೇಷಣಾರ್ಥದಲ್ಲಿ ಇದನ್ನು ಪರಿಗಣಿಸಿದಾಗ ಇಲ್ಲಿನ 'ಪ್ರದೇಶ' ಯಾವುದೆಂಬುದು ಮಹತ್ವವನ್ನು ಪಡೆದುಕೊಳ್ಳುತ್ತದೆ. ಅದರಂತೆ 'ಅಖಂಡ ದೇಶ' ಎಂಬ ಪರಿಕಲ್ಪನೆಯನ್ನಿಟ್ಟು ಕೊಂಡಾಗ ನಮಗೆ 'ಭಾರತೀಯ' ಎಂಬುದು 'ದೇಸೀ' ಎಂಬುದಕ್ಕೆ ಸಂವಾದಿಯಾಗಬಲ್ಲುದು . ರಾಜ್ಯಕ್ಕೆ ಸೀಮಿತಗೂಳಿಸಿ ಕೊಂಡಾಗ 'ಕರ್ನಾಟಕ' ಎಂಬುದು ನಮಗೆ 'ದೇಸೀ' ಎಂಬುದಕ್ಕೆ ಸಂವಾದಿ ಎನಿಸುತ್ತದೆ.

ಮಾತ್ರವಲ್ಲದೆ ಈಗಾಗಲೇ ಗಮನಿಸಿದಂತೆ ಭಾರತವು ಹಳ್ಳಿಗಳ ನಾಡೆಂಬ ಅಭಿಪ್ರಾಯ ವಿರುವುದರಿಂದ 'ದೇಸೀ ಸಂಸ್ಕೃತಿ' ಎಂದರೆ 'ಹಳ್ಳಿಗಾಡಿನ ಸಂಸ್ಕೃತಿ' ಗ್ರಾಮೀಣ ಸಂಸ್ಕೃತಿ' ಎಂಬ ಅರ್ಥವೂ ಗ್ರಾಹ್ಯವಾಗುತ್ತದೆ. ಈ ಎಲ್ಲಾ ಬಗೆಯ ಅರ್ಥದ ನೆಲೆಗಳನ್ನು ಪುರಸ್ಕರಿಸಿ ನಾವು 'ದೇಸೀ ಸಂಸ್ಕೃತಿ' 'ದೇಸೀ ಸಂಸ್ಕೃತಿ' ಪರಿಕಲ್ಪನೆಯನ್ನು 'ಭಾರತೀಯ ಸಂಸ್ಕೃತಿ' 'ಕನ್ನಡ ನಾಡಿನ ಸಂಸ್ಕೃತಿ' 'ಗ್ರಾಮೀಣ ಸಂಸ್ಕೃತಿ' 'ಪ್ರಾದೇಶಿಕ ಸಂಸ್ಕೃತಿ' 'ಸ್ಥಳೀಯ ಸಂಸ್ಕೃತಿ' ಎಂಬ ವಿವಿಧ ಅರ್ಥಗಳಿಗೆ ಅನ್ವಯಿಸಿಕೊಳ್ಳಬೇಕಾಗುತ್ತದೆ. ಆದೇ ವೇಳೆ 'ಜನಪದ ಸಂಸ್ಕೃತಿ' 'ಮೌಖಿಕ ಸಂಸ್ಕೃತಿ' ಎಂಬ ಅರ್ಥ ಪರಿಕಲ್ಪನೆಗಳಿಗೂ ಅನ್ವಯಿಸಿಕೊಳ್ಳಬೇಕಾಗುತ್ತದೆ.

ಇಲ್ಲಿ 'ಭಾರತೀಯ' ಎಂಬುದು ತುಂಬಾ ವಿಶಾಲವೂ ಅಮೂರ್ತವೂ ಆದ ಕಲ್ಪನೆಯಾಗಬಹುದು'ಕರ್ನಾಟಕ' ಎಂಬುದೂ ಇಂತಹ ಕಲ್ಪನೆಗೆ ಹೊರತಾದುದಲ್ಲ. ಬಹುತ್ವವನ್ನೂ ಒಪ್ಪಿಕೊಳ್ಳುವ ನಮಗೆ ಪ್ರತಿಯೊಬ್ಬ ಭಾರತೀಯ ಪ್ರಜೆ ವಾಸಿಸುವ ಪ್ರದೇಶವೂ 'ಭಾರತ'ವೆನಿಸುತ್ತದೆ. ಅದೇ ರೀತಿ ಪ್ರತಿಯೊಬ್ಬ ಭಾರತೀಯ ಪ್ರಜೆ ವಾಸಿಸುವ ಪ್ರದೇಶವೂ 'ಭಾರತ' ವೆನಿಸುತ್ತದೆ.

ಅದೇ ರೀತಿ ಪ್ರತಿಯೊಬ್ಬ ಕರ್ನಾಟಕದ ಪ್ರಜೆ ಬದುಕುತ್ತಿರುವ ಪ್ರದೇಶವೂ ಕರ್ನಾಟಕವೆನಿಸುತ್ತದೆ. ಹೀಗಿರುವುದರಿಂದ 'ಕರ್ನಾಟಕ ಸಂಸ್ಕೃತಿ' 'ಭಾರತೀಯ ಸಂಸ್ಕೃತಿ' ಎಂಬುದನ್ನು ನಾವು ಬಿಡಿ ಬಿಡಿಯಾಗಿ ಗ್ರಹಿಸಿಬೇಕೇ ಹೊರತೂ, ಇಡಿಯಾಗಿ ಗ್ರಹಿಸಲು ಬರುವುದಿಲ್ಲ.

ಈ ಹಿನ್ನಲೆಯಲ್ಲಿ ನಾವು 'ದೇಸೀ ಸಂಸ್ಕೃತಿ' ಎಂಬುದನ್ನು ಸ್ಥಳೀಯ ಸಂಸ್ಕೃತಿ, ಪ್ರಾದೇಶಿಕ ಸಂಸ್ಕೃತಿ, ಗ್ರಾಮೀಣ ಸಂಸ್ಕೃತಿ ಹಾಗೂ ಜನಪದ ಸಂಸ್ಕೃತಿ ಎಂಬರ್ಥಗಳಲ್ಲಿ ಬಳಸಬಹುದಾಗಿದೆ. ಇಲ್ಲಿನ 'ಸ್ಥಳೀಯ' ಎಂಬುದಕ್ಕೆ ನಮ್ಮ ಸಂದರ್ಭದ ವಿಶಾಲವಾದ ಪರಿಪ್ರೇಕ್ಷದಲ್ಲಿ ಭಾರತೀಯ ಎಂಬರ್ಥವೂ ಪ್ರಾಪ್ತವಾಗುತ್ತದೆ.

ಪ್ರಸ್ತುತ ಅಧ್ಯಯನ ವಿಷಯ ಸಂದರ್ಭದಲ್ಲಿ 'ದೇಸೀ ಸಂಸ್ಕೃತಿ' ಎಂಬುದು 'ಕನ್ನಡ ಸಿನಿಮಾ' ಎಂಬ ಇನ್ನೊಂದು ಘಟಕದ ಜತೆಗೆ ಸೇರಿಕೊಂಡು ಬಳಕೆಯಾಗಿದೆ. ಕನ್ನಡ ಸಿನಿಮಾಗಳಲ್ಲಿ ಜಗತ್ತಿನ ಎಲ್ಲಾ ಸಂಗತಿಗಳೂ, ಸಂಸ್ಕೃತಿಗಳೂ ಬಿಂಬಿತವಾಗಬಹುದು. ಅದೇ ರೀತಿ ದೇಶದ ವಿವಿಧಡೆಗಳ ಸಂಗತಿಗಳೂ ಹಾಸು ಹೊಕ್ಕಾಗಿರಬಹುದು. ಅಥವಾ ವಸ್ತುವಾಗಿರಬಹುದು. ಆಯಾ ಪ್ರದೇಶಗಳ ಜನರಿಗೆ ಅವು ಅವರವರ 'ದೇಸೀ ಸಂಸ್ಕೃತಿ'ಯ ಅಂಶಗಳಾಗಿರಬಹುದು.

'ಕನ್ನಡ ಸಿನಿಮಾ ಮತ್ತು ದೇಸೀ ಸಂಸ್ಕೃತಿ' ಎಂಬ ಶೀರ್ಷಿಕೆಯಲ್ಲಿನ 'ಕನ್ನಡ' ಎಂಬುದನ್ನು 'ದೇಸೀ ಸಂಸ್ಕೃತಿ'ಗೆ ಅನ್ವಯಿಸಿಕೊಳ್ಳದೆ, ಸಿನಿಮಾಕ್ಕಷ್ಟೇ ಅನ್ವಯಿಸಿಕೊಂಡು ಇಲ್ಲಿ ಅಧ್ಯಯನ ನಡೆಸಲಾಗುವುದು. 'ಕನ್ನಡದ ದೇಸೀ ಸಂಸ್ಕೃತಿ' ಎಂಬ ಪರಿಕಲ್ಪನೆಯನ್ನಿಟ್ಟುಕೊಂಡು, ಕನ್ನಡ ಸಿನಿಮಾಗಳಲ್ಲಿ ಕನ್ನಡದ 'ದೇಸೀ ಸಂಸ್ಕೃತಿ' ಯನ್ನು ಹುಡುಕುವುದು - ಗುರುತಿಸುವುದು ಸಾಧ್ಯವಾದರೂ ಅದಷ್ಟೇ ಪ್ರಸ್ತುತ ಅಧ್ಯಯನದ ಉದ್ದೇಶವಲ್ಲ ವೆಂಬುದನ್ನು ಈಗಾಗಲೇ ಸ್ಪಷ್ಟ ಪಡಿಸಲಾಗಿದೆ. ಈ ಹಿನ್ನಲೆಯಲ್ಲಿ 'ದೇಸೀ ಸಂಸ್ಕೃತಿ ಪರಿಕಲ್ಪನೆ'ಗಿರುವ ಎಲ್ಲಾ ಅರ್ಥದ ಮಗ್ಗುಲುಗಳಿಂದಲೂ ನಮ್ಮ ಸಿನಿಮಾಗಳನ್ನಿಲ್ಲಿ ಪರಿಭಾವಿಸಬೇಕಾಗುತ್ತದೆ. ಅದರಂತೆ ಕನ್ನಡ ನಾಡಿನ ಮತ್ತು ಭಾರತ ದೇಶದ 'ಬಹುಮುಖೀ' ಸಂಸ್ಕೃತಿಯನ್ನೇ ಇಲ್ಲಿ ವ್ಯಾಪಕವಾದ ಅರ್ಥದಲ್ಲಿ 'ದೇಸೀ ಸಂಸ್ಕೃತಿ' ಎಂದು ಪರಿಗಣಿಸಲಾಗಿದೆ. ಜತೆಗೆ ಭಾರತೀಯ ಸಂಸ್ಕೃತಿ, ಕನ್ನಡ ಸಂಸ್ಕೃತಿ, ಅನನ್ಯ ಸಂಸ್ಕೃತಿ, ಪ್ರಾದೇಶಿಕ ಸಂಸ್ಕೃತಿ, ಸ್ಥಳೀಯ ಸಂಸ್ಕೃತಿ, ನಮ್ಮ ಸಂಸ್ಕೃತಿ

ಇತ್ಯಾದಿ ವಿವಿಧ ಅರ್ಥಗಳು 'ದೇಸೀ ಸಂಸ್ಕೃತಿ' ಪರಿಕಲ್ಪನೆಗೆ ಅನ್ವಯವಾಗುವುದರಿಂದಲೂ, ಕೆಲವೊಮ್ಮೆ ಇವೆಲ್ಲಾ ಪರಸ್ಪರ ಪೂರಕವೆಂಬಂತೆ ಭಾಸವಾಗುವುದರಿಂದಲೂ, ಕನ್ನಡ ಸಿನಿಮಾಗಳಲ್ಲಿ ಈ ಎಲ್ಲಾ ಬಗೆಯ ಸಾಂಸ್ಕೃತಿಕ ಅಂಶಗಳು ಹಾಸು ಹೊಕ್ಕಾಗಿರುವುದರಿಂದಲೂ ಮುಂದಿನ ಅಧ್ಯಾಯಗಳಲ್ಲಿ ಪ್ರಸ್ತುತ ಸಾಂಸ್ಕೃತಿಕ ಅಂಶಗಳನ್ನು ಗುರುತಿಸುವ ಪ್ರಯತ್ನವಿದೆ.

ಅಧ್ಯಾಯ-೪

ಕನ್ನಡ ಸಿನಿಮಾಗಳಲ್ಲಿ ದೇಸೀ ಸಂಸ್ಕೃತಿ ಅಭಿವ್ಯಕ್ತಿಯ ನೆಲೆಗಳು

ಕನ್ನಡ ಸಿನಿಮಾ ನಡೆದು ಬಂದ ದಾರಿಯನ್ನೂ, 'ದೇಸೀ ಸಂಸ್ಕೃತಿ' ಪರಿಕಲ್ಪನೆಯನ್ನೂ ಈಗಾಗಲೇ ಬೇರೆ ಬೇರೆ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ. ಆ ಚರ್ಚೆಯ ಹಿನ್ನೆಲೆಯಲ್ಲಿ ಐತಿಹಾಸಿಕವಾಗಿ ಕನ್ನಡ ಸಿನಿಮಾಗಳಲ್ಲಿ 'ದೇಸೀ ಸಂಸ್ಕೃತಿ' ಎಂಬುದು ಯಾವೆಲ್ಲಾ ಸ್ವರೂಪಗಳಲ್ಲಿ ಅಭಿವ್ಯಕ್ತಿಗೊಂಡಿದೆಯೆಂಬುದನ್ನು ಪ್ರಸ್ತುತ ಅಧ್ಯಾಯದಲ್ಲಿ ವಿವೇಚಿಸಲಾಗುವುದು.

ಐತಿಹಾಸಿಕವಾಗಿ ನೋಡಿದರೆ ಆರಂಭದ ದಿನಗಳಿಂದ ಇಂದಿನವರೆಗೆ ಹುಟ್ಟಿ ಬಂದ ಕನ್ನಡ ಸಿನಿಮಾಗಳಲ್ಲಿ ಕಾಲಕಾಲಕ್ಕೆ ಸಾಕಷ್ಟು ಬದಲಾವಣೆ ಬೆಳವಣಿಗೆಗಳಾಗಿವೆ. ಅದೇ ರೀತಿ ಸಂಸ್ಕೃತಿ ಚಿಂತನೆಯಲ್ಲೂ 'ದೇಸೀ ಸಂಸ್ಕೃತಿ' ಪರಿಕಲ್ಪನೆಯೆಂಬುದು ಕಾಲಕಾಲಕ್ಕೆ ವಿವಿಧ ಆಯಾಮಗಳನ್ನು ಪಡೆದು ಕೊಂಡು ಬೆಳೆದಿದೆ. ಸಿನಿಮಾ ನಿರ್ಮಾಣ ಹಾಗೂ ಸಂಸ್ಕೃತಿ ಚಿಂತನೆಗಳೆರಡರಲ್ಲೂ ನಾವು ಸಾಕಷ್ಟು ಮುಂದುವರೆದಿರುವುದಂತೂ ನಿಜ. ಹಾಗಂತ ಎರಡೂ ಸಂದರ್ಭಗಳಲ್ಲೂ ನಾವು ಇತಿಹಾಸವನ್ನು ಮರೆಯುವಂತಿಲ್ಲ. ಐತಿಹಾಸಿಕವಾದ ಬೆಳವಣಿಗೆಯ ಕ್ರಮದಲ್ಲಿ ಸಿನಿಮಾದಲ್ಲಿನ ಸಂಸ್ಕೃತಿ ಅಭಿವ್ಯಕ್ತಿಗೂ, ಸಂಸ್ಕೃತಿ ಚಿಂತನಾ ಮಾರ್ಗಕ್ಕೂ ಪೂರಕ ಸಂಬಂಧವಿದ್ದೇ ಇದೆ. ಸಮಕಾಲೀನ ಸಂಸ್ಕೃತಿ ಚಿಂತನೆಯ ಸಂದರ್ಭದಲ್ಲಿ 'ದೇಸೀ ಸಂಸ್ಕೃತಿ' ಎಂಬ ಪರಿಕಲ್ಪನೆ, ಪರಿಭಾಷೆ ಇತ್ತೀಚಿನದಾದರೂ ಅದಕ್ಕೆ ಹತ್ತಿರವಾದ ಸಂವಾದಿಯಾದ ಚಿಂತನಾಕ್ರಮ - ಪರಿಕಲ್ಪನೆ ನಮ್ಮಲ್ಲಿ ಬಹಳ ಹಿಂದೆಯೇ ಇತ್ತು. ಅದು ಮಾರ್ಗ x ದೇಸೀ ಪರಿಕಲ್ಪನೆಯಲ್ಲಿನ 'ದೇಸೀ' ಯಾಗಿರಬಹುದು. ಸ್ವದೇಶಿ x ವಿದೇಶಿ ಪರಿಕಲ್ಪನೆಯಲ್ಲಿನ 'ಸ್ವದೇಶೀ' ಯಾಗಿರಬಹುದು. ನಗರ x ಹಳ್ಳಿ ಪರಿಕಲ್ಪನೆಯಲ್ಲಿನ 'ಹಳ್ಳಿ'ಯಾಗಿರಬಹುದು. ಶಿಷ್ಟ x ಪರಿಶಿಷ್ಟ ಪರಿಕಲ್ಪನೆಯಲ್ಲಿನ 'ಪರಿಶಿಷ್ಟ' ವಾಗಿರಬಹುದು. ಇವೆಲ್ಲಾ ಇವತ್ತಿನ 'ದೇಸೀ ಸಂಸ್ಕೃತಿ' ಪರಿಕಲ್ಪನೆಗೆ ಸರಿ ಸುಮಾರು ಸಂವಾದಿಯೆನಿಸಬಲ್ಲ ಪರಿಲ್ಪನೆಗಳಾಗಿವೆ. ಸಂಸ್ಕೃತಿ ಬಗೆಗಿನ ಎಲ್ಲಾ ಕಾಲದ ಈ ಗ್ರಹಿಕೆಗಳನ್ನು

ಮನಸ್ಸಿನಲ್ಲಿಟ್ಟುಕೊಂಡು ಸಿನಿಮಾದಲ್ಲಿನ ದೇಸೀ ಸಂಸ್ಕೃತಿಯ ನೆಲೆಗಳನ್ನು ನಾವು ಐತಿಹಾಸಿಕವಾಗಿ ಗುರುತಿಸಬೇಕಾಗುತ್ತದೆ. ಅಂತಿಮವಾಗಿ ಸಮಕಾಲೀನ ಸಂಸ್ಕೃತಿ ಚಿಂತನೆಯಲ್ಲಿನ 'ದೇಸೀ ಸಂಸ್ಕೃತಿ' ಪರಿಕಲ್ಪನೆಗೆ ಹೆಚ್ಚಿನ ಒತ್ತು ನೀಡಬೇಕಾಗುತ್ತದೆ.

ತಂತ್ರಜ್ಞಾನ ಪ್ರಧಾನವಾದ ಸಿನಿಮಾ ಮೊತ್ತ ಮೊದಲು ಪ್ಯಾರಿಸ್ಸಿನಿಂದ ಮುಂಬಯಿಗೆ ಬಂದಾಗ ವಿದೇಶೀ ತಂತ್ರಜ್ಞಾನದ ಜನತೆಗೆ ಅಲ್ಪಸ್ವಲ್ಪ ವಿದೇಶೀ ಸಂಸ್ಕೃತಿಯನ್ನು ಹೊತ್ತು ತಂದಿತಾದರೂ ಮುಂದೆ ಅದು 'ಭಾರತೀಯ' ಸಂಸ್ಕೃತಿಯನ್ನು ಮೈಗೂಡಿಸಿ ಕೊಂಡೇ ಬೆಳೆಯಿತು. ಹಾಗಾಗಿ ಪ್ರಾರಂಭದ ಹಂತದಿಂದಲೇ ಒಂದು ಬಗೆಯ ದೇಸೀ ಸಂಸ್ಕೃತಿಯ ಅಭಿವ್ಯಕ್ತಿ ನಮ್ಮ ಸಿನಿಮಾಗಳಲ್ಲಿ ಇತ್ತೆಂಬುದನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಅದು ನಮ್ಮ ದೇಸೀ ರಂಗಭೂಮಿಯ ವಸ್ತು ವಿನ್ಯಾಸವನ್ನು ಸಿನಿಮಾಕ್ಕೆ ಅಳವಡಿಸಿಕೊಳ್ಳುವುದರಲ್ಲಾಗಿರಬಹುದು; ನಮ್ಮ ನಾಡಿನ ಪೌರಾಣಿಕ ಐತಿಹಾಸಿಕ ಅಥವಾ ಜಾನಪದೀಯ ವಸ್ತುಗಳನ್ನಾಧರಿಸಿ ಸಿನಿಮಾ ತೆಗೆಯುವುದರಲ್ಲಾಗಿರಬಹುದು; ನಮ್ಮ ಭಾಷೆ, ಜನ ಜೀವನವನ್ನು ಬಳಸುವುದರಲ್ಲಾಗಿರಬಹುದು; ನಮ್ಮ ನಾಡಿನ ಪರಿಸರ ನಿರ್ಮಾಣದಲ್ಲಾಗಿರಬಹುದು; ನಂತರದಲ್ಲಿ ಕಾಣಿಸಿಕೊಂಡ ರಾಷ್ಟ್ರೀಯ ಪ್ರಜ್ಞೆಯ ಅಭಿವ್ಯಕ್ತಿಯಲ್ಲಾಗಿರಬಹುದು; ನಾಡು-ನುಡಿಯ ಅಭಿಮಾನದ ಚಿತ್ರಣದಲ್ಲಾಗಿರಬಹುದು; ನಮ್ಮ ನಾಡಿನ ಆಚಾರ-ವಿಚಾರ ನಂಬಿಕೆ ಸಂಪ್ರದಾಯಗಳ ನಿರೂಪಣೆಯಲ್ಲಾಗಿರಬಹುದು; ನಮ್ಮ ವಿವಿಧ ಕಲಾ ಪ್ರಕಾರಗಳ ಅಳವಡಿಕೆಯಲ್ಲಾಗಿರಬಹುದು; ಹೀಗೆ ದೇಸೀ ಸಂಸ್ಕೃತಿಯೆಂಬುದು ಪ್ರಾರಂಭದಿಂದಲೇ ನಮ್ಮ ಸಿನಿಮಾಗಳಲ್ಲಿ ಕಾಣಿಸಿಕೊಳ್ಳತೊಡಗಿದೆಯೆನ್ನಬಹುದು.

ನಮ್ಮ ದೇಶಕ್ಕೆ ಸಿನಿಮಾ ಕಾಲಿರಿಸಿದಂದಿನಿಂದ ಇಂದಿನವರೆಗೆ ದೇಸೀ ಸಂಸ್ಕೃತಿಯ ವಿವಿಧ ನೆಲೆಗಳು ಸಿನಿಮಾಗಳಲ್ಲಿ ಅಭಿವ್ಯಕ್ತವಾಗುತ್ತಾ ಬಂದಿವೆ. ಕನ್ನಡ ಸಿನಿಮಾಗಳೂ ಇದಕ್ಕೆ ಹೊರತಲ್ಲ. 'ದೇಸೀ ಸಂಸ್ಕೃತಿ' ಪರಿಕಲ್ಪನೆಗೆ ಹಲವು ವ್ಯಾಖ್ಯೆಗಳಿವೆ. ಸಂಸ್ಕೃತಿ ಚಿಂತನೆಯ ವಿವಿಧ ಪಂಥಗಳು 'ದೇಸೀ ಸಂಸ್ಕೃತಿ' ಪರಿಕಲ್ಪನೆಯನ್ನು ಹಲವು ಬಗೆಯಾಗಿ ಗ್ರಹಿಸಿವೆ. 'ನಮ್ಮದು' ಎಂಬ ಅರ್ಥದಲ್ಲಿ 'ಗ್ರಾಮ'ದಿಂದ 'ದೇಶದ' ವರೆಗೆ ಅದರ ವ್ಯಾಪ್ತಿಯಿದೆ. ವಿದೇಶೀಯವಲ್ಲದುದು. ದೇಶೀಯವಾದುದು ಎಂಬ ಅರ್ಥವೂ ಇದೆ. ಬಹು ಸಂಸ್ಕೃತಿ ಅಥವಾ ಅನನ್ಯ ಸಂಸ್ಕೃತಿ ಪರಿಕಲ್ಪನೆಯ ಸಂದರ್ಭದಲ್ಲಿ ದೇಶ

[illegible]

[illegible]

ರಾಷ್ಟ್ರವನ್ನೆಲ್ಲ 'ಬಿಟ್ಟು ಸ್ಥಳೀಯ' ಎಂಬ ಅರ್ಥವನ್ನು ಇದು ಪಡೆದು ಕೊಳ್ಳುತ್ತದೆ. ಕೆಲವೊಮ್ಮೆ 'ಜಾನಪದೀಯ' ಎಂಬ ಅರ್ಥಕ್ಕೂ 'ದೇಸೀ' ಎಂಬುದು ಸಂವಾದಿಯಾಗುತ್ತದೆ. ಒಟ್ಟಾರೆಯಾಗಿ ದೇಶದಿಂದ ತೊಡಗಿ ಗ್ರಾಮದ ವರೆಗಿನ ಜನತೆ, ಜನಜೀವನ, ಭಾಷೆ, ಸಾಹಿತ್ಯ, ಕಲೆ ಇತ್ಯಾದಿಗಳೆಲ್ಲವನ್ನೂ ಈ ದೇಸೀ ಸಂಸ್ಕೃತಿ ಪರಿಕಲ್ಪನೆಗೆ ಒಳಗೊಳ್ಳುತ್ತದೆ.

ಒಟ್ಟಿನಲ್ಲಿ ಕನ್ನಡ ಸಿನಿಮಾ ಸಂದರ್ಭದಲ್ಲಿ ವಿದೇಶೀಯವಲ್ಲದ. ಸ್ವದೇಶೀಯವಾಗಿರುವ ಅಂಶಗಳೆಲ್ಲವೂ ದೇಸೀ ಸಂಸ್ಕೃತಿಯೆನಿಸಿಕೊಳ್ಳುತ್ತವೆ. ಅವುಗಳಲ್ಲಿ ಕೆಲವು ಕನ್ನಡ ನಾಡಿಗಷ್ಟೇ ವಿಶಿಷ್ಟವಾದ ಸಂಸ್ಕೃತಿಯಾಗಿರಬಹುದು; ಇನ್ನೂ ಕೆಲವು ದೇಶಕ್ಕೆಲ್ಲ ಸಾಮಾನ್ಯ ಅಥವಾ ಸಾರ್ವತ್ರಿಕವಾದ ಸಂಸ್ಕೃತಿಯಾಗಿರಬಹುದು; ಮತ್ತೆ ಕೆಲವು ಕನ್ನಡ ನಾಡಿಗಷ್ಟೇ ನಿರ್ದಿಷ್ಟವಾದ ಪ್ರದೇಶ, ಸಮುದಾಯ, ಭಾಷೆ - ಉಪಭಾಷೆಗೆ, ಸಂಬಂಧಪಟ್ಟ ಸಂಸ್ಕೃತಿಯಾಗಿರಬಹುದು; ಹಾಗಾಗಿ ಇಲ್ಲಿ ಭಾರತಕ್ಕೆಲ್ಲ ಸಾಮಾನ್ಯವಾದ ಪುರಾಣ- ಇತಿಹಾಸ - ಜಾನಪದಗಳ ಜತೆಗೆ ಕನ್ನಡ ನಾಡಿಗಷ್ಟೆ ವಿಶಿಷ್ಟವಾದ ಪುರಾಣ-ಇತಿಹಾಸಗಳ ಕಥೆಗಳೂ ಜನಪದ ಕಥ,ಕಾವ್ಯ,ಪುರಾನಣಗಳೂ ಸಿನಿಮಾಗಳಾಗಿವೆ. ಈ ಪುರಾಣ - ಇತಿಹಾಸ, ಜಾನಪದಗಳು ಒಂದಲ್ಲ ಒಂದು ರೀತಿಯಿಂದ ನಮ್ಮ ದೇಸೀ ಸಂಸ್ಕೃತಿಯ ಭಾಗಗಳೇ ಆಗಿವೆ. ಇವುಗಳಲ್ಲದೆ ನಮ್ಮ ಕನ್ನಡ ನಾಡಿನ ವಿವಿಧ ಗ್ರಾಮೀಣ ಸಮುದಾಯಗಳ, ಬುಡಕಟ್ಟುಗಳ ಪಾರಂಪರಿಕ ವೃತ್ತಿ ಗುಂಪುಗಳ ಜನಜೀವನವೂ ಸಿನಿಮಾಗಳಿಗೆ ವಸ್ತುವಾಗಿವೆ. ಕನ್ನಡದ ವಿವಿಧ ಪ್ರಾದೇಶಿಕ ಹಾಗೂ ಸಾಮಾಜಿಕ ಭಾಷಾ ಪ್ರಬೇಧಗಳು, ಗ್ರಾಮೀಣ ಕಲಾ ರೂಪಗಳು ಸಿನಿಮಾಗಳಲ್ಲಿ ಬಳಕೆಯಾಗಿವೆ. ಇವೆಲ್ಲಾ ದೇಸೀ ಸಂಸ್ಕೃತಿಯ ಪರಿಕರಗಳೇ.

ಕರ್ನಾಟಕದ ಪ್ರಾದೇಶಿಕ ಚರಿತ್ರೆ, ಪ್ರಾದೇಶಿಕ ಸಂಸ್ಕೃತಿ, ಜನಪದ ಸಂಸ್ಕೃತಿ, ಕನ್ನಡ ನಾಡು-ನುಡಿಯ ಬಗೆಗಿನ ಅಭಿಮಾನ, ಮಾನವೀಯ ಮೌಲ್ಯಗಳು, ಭಕ್ತಿ ನೀತಿಯ ಪ್ರತಿಪಾದನೆ ಬಂಧುತ್ವಕಲ್ಪನೆ ಇವೆಲ್ಲವುಗಳ ಚಿತ್ರಣ ಮುಖ್ಯವಾಗುತ್ತದೆ. ಈ ಎಲ್ಲಾ ಅಂಶಗಳು ಕನ್ನಡ ಸಿನಿಮಾಗಳಲ್ಲಿ ಕಾಲಕಾಲಕ್ಕೆ ಆಯಾ ಕಾಲದ ನಿರ್ದೇಶಕರ ಅರ್ಥಗ್ರಹಿಕೆಗೆ ತಕ್ಕಂತೆ ಅಭಿವ್ಯಕ್ತವಾಗಿವೆ. ಚಲನ ಶೀಲತೆ ಎಂಬುದು ಸಂಸ್ಕೃತಿಯೊಂದರ ಸಹಜ ಲಕ್ಷಣವಾಗಿರುವುದರಿಂದ ಭಿನ್ನ ಸಂಸ್ಕೃತಿಗಳೊಳಗಿನ ಪರಸ್ಪರ ಪ್ರಭಾವ, ಸಂದರ್ಭಗಳಲ್ಲಿನ ಮುಖಾಮುಖಿ,

ಸಂಘರ್ಷ ಮುಂತಾದ ಪ್ರಕ್ರಿಯೆಗಳು ಕನ್ನಡ ಸಿನಿಮಾಗಳಲ್ಲಿ ಹೇಗೆ ಕಾಣಿಸಿಕೊಂಡಿತೆಂಬುದನ್ನು ಇಲ್ಲಿ ವಿವೇಚಿಸಲಾಗುವುದು.

ಕನ್ನಡದ್ದಲ್ಲದ ಪೌರಾಣಿಕ-ಐತಿಹಾಸಿಕ-ಕಾಲ್ಪನಿಕ ಮಿಶ್ರಣವುಳ್ಳ ವಸ್ತುಗಳು ಕನ್ನಡದಲ್ಲಿ ಸಿನಿಮಾವಾದಾಗ ಕೆಲವೊಮ್ಮೆ ಅಲ್ಲಿನ ಭಾಷೆ ಸನ್ನಿವೇಶಗಳಿಂದಾಗಿ ಅಲ್ಲಿ ಕನ್ನಡತನದ ಸೊಗಡು ತಾನೇ ತಾನಾಗಿ ಕಾಣಿಸಿಕೊಳ್ಳುವುದುಂಟು. ಉದಾಹರಣೆಗೆ ಡಾ.ರಾಜ್‌ಕುಮಾರ್ ಅಭಿನಯದ 'ಕವಿರತ್ನ ಕಾಳಿದಾಸ' ಸಿನಿಮಾವನ್ನೇ ಗಮನಿಸಬಹುದು ಮೂಲತ: ಉತ್ತರ ಭಾರತದ ಕಥೆ. ರಾಜ್‌ಕುಮಾರ್ ಅವರ ಅಭಿನಯ, ಭಾಷಾ ಬಳಕೆ ಹಾಗೂ ಕೆಲವು ಸನ್ನಿವೇಶ ನಿರ್ಮಾಣಗಳಿಂದಾಗಿ ಅದರಲ್ಲಿ ಕನ್ನಡತನದ ದೇಸೀ ಸಂಸ್ಕೃತಿ ಎದ್ದು ಕಾಣುತ್ತದೆ. ಅಲ್ಲಿನ ಕುರುಬನ ಪಾತ್ರ ಮತ್ತು ಕುರುಬ ಸಂಸ್ಕೃತಿಯ ವಿವರಗಳನ್ನು ಗಮನಿಸಿದರೆ ಸಾಕು ಈ ಸಂಗತಿ ನಮಗೆ ಸ್ಪಷ್ಟವಾಗುತ್ತದೆ. ರಾಜ್‌ಕುಮಾರ್ ಹಾಡುವ ''ಬೆಳ್ಳಿ ಮೂಡಿತು ಕೋಳಿಕೂಗಿತು'' ಮತ್ತು 'ಅಲ್‌ಬ್ಯಾಡ್ಕ್‌ನೇ ಸುಮ್ಕಿರೇ' ಎಂಬ ಹಾಡುಗಳನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ ಅವುಗಳ ತುಂಬೆಲ್ಲಾ ಕನ್ನಡನಾಡಿನ ಕುರುಬ ಸಮುದಾಯದ ಸಾಂಸ್ಕೃತಿಕ ವಿವರಗಳೇ ತುಂಬಿಕೊಂಡಿವೆ. ನಮ್ಮ ದೇಸೀ ಸಂಸ್ಕೃತಿಯ ಒಂದು ಪ್ರಮುಖ ಅಂಶವಾದ ಕನ್ನಡ ಭಾಷೆಯನ್ನು ಸಿನಿಮಾಗಳಲ್ಲಿ ಸತ್ವಯುತವಾಗಿ ಬಳಸಿ ಬೆಳೆಸಿದ ನಟರಲ್ಲಿ ಡಾ. ರಾಜ್‌ಕುಮಾರ್ ಅವರು ಅದ್ವಿತೀಯರೆನಿಸುತ್ತಾರೆ.

೪.೧. ಸಿನಿಮಾದ ವಿವಿಧಾಂಗಗಳಲ್ಲಿ ದೇಸೀ ಸಂಸ್ಕೃತಿಯ ಅಭಿವ್ಯಕ್ತಿ

'ದೇಸೀ ಸಂಸ್ಕೃತಿ'ಯ ವಿವಿಧ ಅಂಶಗಳು ಸಿನಿಮಾದ ವಿವಿಧ ಅಂಗಗಳಲ್ಲಿ ಅಭಿವ್ಯಕ್ತವಾಗಿರುತ್ತವೆ. ಸಿನಿಮಾದ ಶೀರ್ಷಿಕೆ (ಹೆಸರು), ಕಥೆ (ಸಾಹಿತ್ಯ), ಸಂಭಾಷಣೆ (ಭಾಷೆ), ಹಾಡು-ಸಂಗೀತ, ನೃತ್ಯ, ವಸ್ತ್ರ ವಿನ್ಯಾಸ (ಉಡುಗೆ-ತೊಡುಗೆ), ಕಲಾವಿನ್ಯಾಸ, ವಾರ್ಷಿಕಾವರ್ತನ ಹಾಗೂ ಜೀವನಾವರ್ತನ ಆಚರಣೆಗಳ ಬಳಕೆಯ ಸಂದರ್ಭ, ಊಟ-ಉಪಚಾರದ ಸಂದರ್ಭ, ಒಟ್ಟಾರೆಯಾಗಿ ಸನ್ನಿವೇಶ ನಿರ್ಮಾಣ - ಇತ್ಯಾದಿ ಅಂಗಗಳಲ್ಲಿ 'ದೇಸೀ ಸಂಸ್ಕೃತಿ'ಯು ಬಳಕೆಯಾಗಬಹುದು. ಸಿನಿಮಾ ಮತ್ತು ದೇಸೀ ಸಂಸ್ಕೃತಿಗಳೊಳಗಿನ ಸಾಹಿತ್ಯಕ ಸಂಬಂಧವನ್ನು ಮುಂದಿನ ಅಧ್ಯಾಯದಲ್ಲಿ ಪ್ರತ್ಯೇಕವಾಗಿ ಚರ್ಚಿಸಲಾಗುವುದು. ದೇಸೀ ಸಾಹಿತ್ಯದ ಪ್ರತ್ಯಕ್ಷ ಹಾಗೂ ಪರೋಕ್ಷ ಸಂಬಂಧಗಳು ಸಿನಿಮಾ ಕಥೆ ಮತ್ತು ಹಾಡುಗಳಲ್ಲಿ ಹೇಗೆ ಕಾಣಿಸಿ ಕೊಂಡಿವೆಯೆಂಬುದನ್ನು ಅಲ್ಲಿ ವಿವರಿಸಲಾಗುವುದು. ದೇಸೀ ಸಂಸ್ಕೃತಿಯ ಅಂಶಗಳನ್ನು ಅಳವಡಿಸಿಕೊಂಡು ರಚಿತವಾದ ಶಿಷ್ಟ ಅಥವಾ ಮೌಖಿಕ ಸಾಹಿತ್ಯ ಕೂಡಾ ಸಿನಿಮಾ ಸಾಹಿತ್ಯವಾಗಿ ರೂಪುಗೊಂಡಿರುವ ಬಗೆಯನ್ನೂ ಅದೇ ಅಧ್ಯಾಯದಲ್ಲಿ ವಿಶ್ಲೇಷಿಸಲಾಗುವುದು. ಇವಿಷ್ಟೇ ಅಲ್ಲದೆ ಸಿನಿಮಾದ ಸಾಹಿತ್ಯೇತರ ಭಾಗಗಳಲ್ಲೂ ದೇಸೀ ಸಂಸ್ಕೃತಿ ಅಭಿವ್ಯಕ್ತವಾಗಬಹುದು.

ಅವುಗಳಲ್ಲಿ ಮೊದಲನೆಯದಾಗಿ ಸಿನಿಮಾದ ಹೆಸರುಗಳನ್ನೇ ಗಮನಿಸಬಹುದು. ಮುಂದೆ ದೇಸೀ ಸಂಸ್ಕೃತಿಯ ಅಂಶಗಳಲ್ಲೊಂದಾದ ಬಂಧುತ್ವ ಪರಿಕಲ್ಪನೆಯ ಕುರಿತು ವಿವರಿಸುವ ಸಂದರ್ಭದಲ್ಲಿ ಅಂತಹ ಕೆಲವು ಹೆಸರುಗಳ ಬಗೆಗೆ ವಿಶ್ಲೇಷಿಸಲಾಗುವುದು. ಅಂಥವುಗಳ ಜತೆಗೆ ದೇಸೀ ನುಡಿಗಟ್ಟು,ಗಾದೆ ಮಾತುಗಳನ್ನೇ ಹೆಸರಾಗುಳ್ಳ ಕೆಲವು ಸಿನಿಮಾಗಳನ್ನೂ ನಾವಿಲ್ಲಿ ಉದಾಹರಿಸಬಹುದಾಗಿದೆ. **ಅತ್ತೆಗೊಂದು ಕಾಲ ಸೊಸೆಗೊಂದು ಕಾಲ, ಆರು ಮೂರು ಒಂಬತ್ತು, ತಾಯಿಗಿಂತ ದೇವರಿಲ್ಲ, ಹಣಬಲವೋ ಜನಬಲವೋ, ಕಾಸಿದ್ರೆ ಕೈಲಾಸ, ದುಡ್ಡೇ ದೊಡ್ಡಪ್ಪ, ಯಾವ ಹೂವು ಯಾರ ಮುಡಿಗೊ, ಗುಣ ನೋಡಿ ಹೆಣ್ಣು ಕೊಡು,**

ಮನೇಲಿ ರಾಮಣ್ಣ ಬೀದೀಲಿ ಕಾಮಣ್ಣ, ಮನೇಲಿ ಇಲಿ ಬೀದೀಲಿ ಹುಲಿ, ಪ್ರಕ್ಸಟ್ಟೆ ಗಂಡ ಹೊಟ್ಟೆ ತುಂಬ ಉಂಡ, ಉಂಡುಹೋದ ಕೊಂಡು ಹೋದ, ಚೋರುಗುರು ಚಂಡಾಲ ಶಿಷ್ಯ, ಮಾರಿಕಣ್ಣು ಹೋರಿ ಮ್ಯಾಗೆ, ಮದುವೆ ಮಾಡಿನೋಡು, ಮನಸ್ಸಿದ್ದರೆ ಮಾರ್ಗ, ಮಕ್ಕಳೇ ಮನೆಗೆ ಮಾಣಿಕ್ಯ, ನಾರಿ ಮುನಿದರೆ ಮಾರಿ, ಒಂದೇ ರೂಪ ಎರಡು ಗುಣ, ಹೆಣ್ಣು ಸಂಸಾರದ ಕಣ್ಣು, ಬಯಸದೇ ಬಂದ ಭಾಗ್ಯ, ಕೂಡಿ ಬಾಳಿದರೆ ಸ್ವರ್ಗ ಸುಖ, ನಾರಿ ಸ್ವರ್ಗಕ್ಕೆದಾರಿ, ಮಕ್ಕಳಿರಲವ್ವ ಮನೆತುಂಬ, ಬ್ರಹ್ಮಗಂಟು, ಅಳಿಯಅಲ್ಲ ಮಗಳ ಗಂಡ, ಇತ್ಯಾದಿ.

ಸಂಭಾಷಣೆಯಲ್ಲಿ ನುಡಿಗಟ್ಟು, ಗಾದೆ ಮಾತು ಹಾಗೂ ದೇಸೀ ಭಾಷೆ ಬಳಕೆಯಾಗುವುದರ ಬಗೆಗೆ ಆಯಾ ಸಿನಿಮಾಗಳ ವಿಶ್ಲೇಷಣೆಯ ಸಂದರ್ಭದಲ್ಲಿ ಅಲ್ಲಲ್ಲಿ ಗಮನಿಸಲಾಗುವುದು. ಸಾಮಾನ್ಯವಾಗಿ ಹಳೇ ಮೈಸೂರು ಪ್ರದೇಶದ ಕನ್ನಡವನ್ನೇ ನಮ್ಮ ಬಹುಪಾಲು ಸಿನಿಮಾಗಳು ಪ್ರಮಾಣ ಭಾಷೆಯಾಗಿ ಬಳಸಿಕೊಂಡಿವೆ. ಪಾತ್ರಗಳ ಪ್ರಾದೇಶಿಕ-ಸಾಮಾಜಿಕ-ಆರ್ಥಿಕ-ಶೈಕ್ಷಣಿಕ ಸ್ಥಾನ ಮಾನಗಳಿಗೆ ಹೊಂದಿಕೊಂಡಂತೆ ಕೆಲವೆಡೆ ಭಾಷಾ ವೈವಿಧ್ಯವನ್ನು ತಂದುದೂ ಇದೆ. ಅಂದರೆ ಪಟ್ಟಣ ವಾಸಿಗಳು ಆಡುವ ಭಾಷೆ- ಗ್ರಾಮೀಣ ಪ್ರದೇಶಗಳವರು ಆಡುವ ಭಾಷೆ, ಮೇಲ್ಜಾತಿಯವರ ಭಾಷೆ-ಕೆಳಜಾತಿಯವರಭಾಷೆ, ಶ್ರೀಮಂತರು ಆಡುವ ಭಾಷೆ- ಬಡವರು ಅಥವಾ ಕೆಲಸದಾಳುಗಳು ಆಡುವ ಭಾಷೆ, ವಿದ್ಯಾವಂತರಾಡುವ ಭಾಷೆ- ಅವಿದ್ಯಾವಂತರಾಡುವ ಭಾಷೆ, ಹೀಗೆ ವೈವಿಧ್ಯಮಯ ಭಾಷಾ ಬಳಕೆಯಿರುವುದುಂಟು. ಉದಾಹರಣೆಗೆ ಕಾಮನಬಿಲ್ಲು ಚಿತ್ರದ ಪಂಚಾಯಿತಿ ಕಟ್ಟೆ ಸನ್ನಿವೇಶದಲ್ಲಿ ಬಳಕೆಯಾಗಿರುವ ಭಾಷೆ. ಕಿರಿಗೌಡ - ನೋಡ್ರಪ್ಪ, ನನ್ ಮೇಲಿರೋ ಕ್ವಾಪಕ್ಕೆ ಈ ಸೂರಪ್ಪ ನನ್ ಬಣವೆಗೆ ಬೆಂಕಿ ಇಟ್ಟನೇ. ಇದಕ್ಕೆ ಪಂಚಾಯಿತಿ ಎನ್ ತೀರ್ಮಾನ ಕೊಡುತ್ತೇಹೇಳಿ. ಹಿರಿಗೌಡ - ಲೇಮೂದೇವಿ ನಮ್ ಸೂರಪ್ಪ ಅಪ್ಪಟ... ಅಪ್ಪಟ ಚಿನ್ನಕನೋ ಅವ್ನು ಈ ಕೆಲ್ಸ ಮಾಡ್ತ ನಂದ್ರೆ, ನಾನ್ ನಂಬಕಿಲ್ಲ. ಕಿರಿಗೌಡ - ಓಹೋ ಈ ಸೂರಪ್ಪ ಆಕೆಲ್ಸ ಮಾಡಿಲ್ಲಂತ ಏನ್ ಸಾಕ್ಷೀ ಮಾದ, ಪಕ್ಕೀರನೇ ಕಣ್ಣಾರೆ ನೋಡ್ವರೆ ಇದಕ್ಕಿಂತ ಏನ್ ಸಾಕ್ಷಿ ಬೇಕು. ಹಿರಿಗೌಡ - ಏ... ಸಾಕು ಸುಮ್ನಿರ್ಲ ಕಂಡಿಯ್ವನಿ, ಪ್ರತ್ಯೇಕ್ಷವಾದರೂ ಪ್ರಮಾಣಿಸಿ ನೋಡು ಹಂಗೆ ಆ ಸೂರಪ್ಪನೆ ಕೇಳೋಣ

ಏನ್ ಸೂರಪ್ಪ ನೀನು ಕಿರಿಗೌಡನ ಬಣವೆಗೆ ಬೆಂಕಿ ಹಚ್ಚಿದ್ದು ನಿಜನಾ? ಹೇಳು ಯಾಕೆ ಮೌನದಿಂದ ನಿಂತಿದಿಯಾ ಸೂರಪ್ಪ ಹೇಳು. ಇತ್ಯಾದಿಗಳನ್ನು ಗಮನಿಸಬಹುದು.[೧]

ದೇಸೀ ಭಾಷೆಯೆಂದಾಗ ನುಡಿಗಟ್ಟು -ಗಾದಮಾತುಗಳ ಬಳಕೆಯೂ ಮುಖವಾಗುತ್ತದೆ. ನುಡಿಗಟ್ಟು - ಗಾದೆಮಾತುಗಳ ಬಳಕೆಯ ಆಡು ಭಾಷೆಯಲ್ಲಿ ಹೇಗೆ ಸಹಜವೋ ಹಾಗೆಯೇ ಆಡು ಭಾಷೆಯನ್ನಳವಡಿಸಿಕೊಂಡ ಸಿನಿಮಾ ಸಂಭಾಷಣೆಯಲ್ಲೂ ಸಹಜವಾಗಿರುತ್ತದೆ. ಭಾಷೆಯ ದೇಸೀ ಲಕ್ಷಣಗಳಲ್ಲಿ ಬೈಗುಳ ಕೂಡಾ ಒಂದೆನ್ನಬಹುದು. ಕನ್ನಡದ ಕೆಲವು ಸಿನಿಮಾ ಸಂಭಾಷಣೆಯಲ್ಲಿ ಗ್ರಾಮೀಣ ಬೈಗುಳಗಳು ಸಶಕ್ತವಾಗಿ ಬಳಕೆ ಗೊಂಡಿವೆ. ಅಂತಹ ಕೆಲವು ಮಾದರಿಗಳನ್ನು ಇಲ್ಲಿ ಗಮನಿಸಬಹುದು. ಭುಜಂಗಯ್ಯನ ದಶವತಾರ ಚಿತ್ರದಲ್ಲಿ ಭುಜಂಗಯ್ಯನ ಹೆಂಡತಿಯು ಎಕ್ಕುಟ್ಟೋಗ, ವಂಸ ನಿರ್ವಂಸವಾಗ, ಬೇವಾರ್ಸಿ, ಬಿಕ್ನಾಸಿ. ಯಾವ ದೊಣ್ಣೆ ನಾಯಕ್ನ ಅಪ್ಪಣೆನೂ ಬೇಕಾಗಿಲ್ಲ ಎಂದು ಬೈಯುವುದು. ನಾಗಮಂಡಲ ಚಿತ್ರದ ದೃಶ್ಯವೊಂದರಲ್ಲಿ ಅಪ್ಪಣನು ರಾಣಿಗೆ ಹಾದರಗಿತ್ತಿ ಎಂದು ಬೈಯುವುದು. ಸಿಂಗಾರೆವ್ವ ಚಿತ್ರದಲ್ಲಿ ಗೌಡನು ತನ್ನ ಹೆಂಡತಿಯರಿಗೆ ರಂಡ್ಯಾರು, ಎಂದು ಬೈಯುವುದು. ಸಂಗ್ಯಾಬಾಳ್ಯ ಚಿತ್ರದಲ್ಲಿ ಹೇ ಮಳ್ಳ ಹಳೇಮಳ್ಳ, ಕುಂತಲಗಿತ್ತಿ, ಬಡಿವಾಳಗಿತ್ತಿ, ಹಾದರ್‌ದಾಕಿ, ಹಲ್ಕಟ್ ಸೂಳೆಮಗ ಎಂದು ಬೈಯುವುದು ಇತ್ಯಾದಿ ಪದಗಳು ಬಳಕೆಗೊಂಡಿರುವುದನ್ನು ಕಾಣಬಹುದು.

ಹಾಡು ಮತ್ತು ಸಂಗೀತ ಭಾರತೀಯ ಸಿನಿಮಾದ ಬಹು ಮುಖ್ಯ ಅಂಗ. ನಮ್ಮಲ್ಲಿ ಸಿನಿಮಾಗಳಿಗಾಗಿಯೇ ಪ್ರತ್ಯೇಕ ಹಾಡುಗಳನ್ನು ರಚಿಸಿರುವಂತೆ ಈಗಾಗಲೇ ರಚನೆಗೊಂಡಿರುವ ಕೆಲವು ಪ್ರಸಿದ್ಧ ಕವಿಗಳ ಕವಿತೆಗಳನ್ನೂ ಸಿನಿಮಾಗಳಿಗೆ ಬಳಸಿಕೊಂಡುದಿದೆ. ಅದೇ ರೀತಿ ಜನಪದ ಗೀತೆಗಳನ್ನೂ ಅಲ್ಲಲ್ಲಿ ಬಳಸಿಕೊಳ್ಳಲಾಗಿದೆ. ಜನಪದ ಗೀತೆಗಳಿಗೆ ಅವುಗಳಿಗೇ ವಿಶಿಷ್ಟವಾಗಿರುವ

---

೧. ಆಡುಭಾಷೆಯ ಶಾಬ್ದಿಕ ಸ್ವರೂಪವನ್ನು ಅಕ್ಷರ ರೂಪದಲ್ಲಿ ಸಮರ್ಥವಾಗಿ ಹಿಡಿದಿಡುವುದು ಕಷ್ಟಸಾಧ್ಯ.

ಪಾರಂಪರಿಕ ಹಾಡಿನ ದಾಟಿ ಇದ್ದಾಗಲೂ, ಕೆಲವೊಮ್ಮೆ ಸಿನಿಮಾದ ಸಂಗೀತ ನಿರ್ದೇಶಕರೇ ರಾಗ ಸಂಯೋಜನೆ ಮಾಡುವುದುಂಟು ಕೆಲವು ಜನಪದ ಗೀತೆಗಳು ಯಥಾ ಪ್ರಕಾರ ಸಿನಿಮಾಗಳಲ್ಲಿ ಬಳಕೆಯಾದರೆ, ಮತ್ತೆ ಕೆಲವು ನಿರ್ದಿಷ್ಟ ಸಿನಿಮಾಗಳ ಸನ್ನಿವೇಶಕ್ಕೆ ತಕ್ಕಂತೆ ಬದಲಾದುದೂ ಇದೆ. ಹಾಡನ್ನನುಸರಿಸಿಕೊಂಡಿರುವ ಸಂಗೀತದ ಬಗೆಗೂ ಇಲ್ಲಿ ಪ್ರಸ್ತಾಪಿಸಬೇಕಾಗುತ್ತದೆ. ಸಿನಿಮಾಗಳಲ್ಲಿ ಜನಪದ ಸಂಗೀತ. ಶಾಸ್ತ್ರೀಯ ಸಂಗೀತಗಳೆರಡೂ ಬಕೆಯಾಗುತ್ತವೆ. ಅಲ್ಲದೆ ಇವೆರಡರ ಮಿಶ್ರಣದಿಂದ ಸಿನಿಮಾಕ್ಕೆಂದೇ ಸಂಯೋಜಿಸಿಕೊಂಡ ಸಂಗೀತ ಶೈಲಿಯೂ ಇದೆ. ಶಾಸ್ತ್ರೀಯ ಸಂಗೀತದಲ್ಲಿ ಪಾಶ್ಚಾತ್ಯಾ ಮತ್ತು ಭಾರತೀಯ ಎರಡೂ ಸಿನಿಮಾಗಳಲ್ಲಿ ಬಳಕೆಯಾಗಿವೆ. ಸಂಗೀತ ಕುರಿತಾದ ಚರ್ಚೆಯ ಸಂದರ್ಭದಲ್ಲಿ'ಹಿಂದೂಸ್ತಾನೀ' ಮತ್ತು 'ಕರ್ನಾಟಕ' ಎಂಬ ಶಾಸ್ತ್ರೀಯ ಸಂಗೀತದ ಶೈಲಿಗಳು 'ಮಾರ್ಗ' ಶೈಲಿ ಎನಿಸಿಕೊಂಡರೂ ಸಿನಿಮಾ ಸಂದರ್ಭದಲ್ಲಿ 'ಭಾರತೀಯ' ಎಂಬರ್ಥದಲ್ಲಿ ಅವು 'ದೇಸೀ' ಸಂಗೀತಗಳೇ ಆಗುತ್ತವೆ. ಹಾಗಾಗಿ ಕನ್ನಡ ಸಿನಿಮಾಗಳಲ್ಲಿ ಬಳಕೆಯಾದ ಭಾರತದ ಶಾಸ್ತ್ರೀಯ ಸಂಗೀತದ ಶೈಲಿಗಳನ್ನೂ ಜನಪದ ಸಂಗೀತದ ಶೈಲಿಗಳನ್ನೂ ಎರಡನ್ನೂ ದೇಸೀ ಸಂಗೀತವೆಂದೇ ಪರಿಗಣಿಸಬೇಕಾಗುತ್ತದೆ. ಇಂತಹ ಸಂಗೀತದ ಬಳಕೆಯುಳ್ಳ ಹಲವು ಸಿನಿಮಾಗಳನ್ನೂ ನಾವಿಲ್ಲಿ ಹೆಸರಿಸಬಹುದಾಗಿದೆ.

ಕನ್ನಡದ ಸಂಗೀತ ಪ್ರಧಾನ ಚಿತ್ರಗಳನ್ನು ಗಮನಿಸಿದರೆ ಅಲ್ಲಿನ ಬಹುಪಾಲು ಹಾಡುಗಳು ಕರ್ನಾಟಕ ಶಾಸ್ತ್ರೀಯ ಸಂಗೀತವನ್ನಾಧರಿಸಿಯೇ ಸಂಯೋಜನೆಗೊಂಡಿವೆ. ಹಿಂದೂಸ್ತಾನೀ ಸಂಗೀತವನ್ನಾಧರಿಸಿ ಸಂಯೋಜನೆ ಗೊಂಡವುಗಳು ಕಡಿಮೆಯೆಂದೇ ಹೇಳಬಹುದು. ಹಂಸಗೀತೆ, ಸಂಧ್ಯಾರಾಗ ಋತುಗಾನ, ಮಲಯಮಾರುತ ಮುಂತಾದ ಸಿನಿಮಾಗಳು ಸಂಗೀತ ಪ್ರಧಾನವಾದವುಗಳಾಗಿದ್ದು ಇಲ್ಲೆಲ್ಲಾ ಕರ್ನಾಟಕ ಸಂಗೀತವನ್ನಾಧರಿಸಿದ ಹಾಡುಗಳೇ ವಿಜೃಂಭಿಸಿವೆ. ಸಂಧ್ಯಾರಾಗ ಚಿತ್ರದ ನಂಬಿದೆ ನಿನ್ನ ನಾದದೇವತೆಯೇ, ಈ ಪರಿಯ ಸೊಬಗು ಇನ್ನಾವ ದೇವರಲಿ. ದೀನ ನಾಬಂದಿರುವೆ ಬಾಗಿಲೊಳು ನಿಂದಿರುವೆ, ತೇಲಿಸೋ ಇಲ್ಲಾ ಮುಳುಗಿಸೋ, ಗುರುವಿನ ಗುಲಾಮನಾಗುವ ತನಕ ,ಹಂಸಗೀತೆ ಚಿತ್ರದ ಮಾನಮಾಯೇ, ನಾದಿರತ್ನೈಯ್ಯ ತನತೋಂತ,

ಲಲಿತಲವಂಗ ಲತಾ ಇತ್ಯಾದಿ ಹಾಡುಗಳು ಋತುಗಾನ ಚಿತ್ರದ ಋತುಗಾನ ನವ ಋತುಮಾನ, ಅಭಿನಯ ರಸರಾಗ ರಂಜನೇ, ಮಲಯ ಮಾರುತ ಚಿತ್ರದ ಎಲ್ಲಲ್ಲೂ ಸಂಗೀತವೇ ...... ಮಲಯ ಮಾರುತಗಾನ, ಶಾರದೇ ದಯೆ ತೋರಿದೇ, ನಟನವಿಶಾರದ ನಟಶೇಖರ ಮುಂತಾದ ಹಾಡುಗಳನ್ನಿಲ್ಲಿ ಉದಾಹರಿಸಬಹುದು. ಇವಲ್ಲದೆ ಇತರ ಕೆಲವು ಸಿನಿಮಾಗಳಲ್ಲೂ ಕರ್ನಾಟಕ ಸಂಗೀತವನ್ನಾಧರಿಸಿ ಸಂಯೋಜನೆಗೊಂಡ ಗೀತೆಗಳು ಹೇರಳವಾಗಿ ಕಂಡುಬರುತ್ತವೆ. 'ನೋಡಿ ಸ್ವಾಮಿ ನಾವಿರೋದು ಹೀಗೆ', ಗಾನಯೋಗಿ ಪಂಚಾಕ್ಷರಿಗವಾಯಿ' ಹೀಗೆ ಕೆಲವೇ ಕೆಲವು ಚಿತ್ರಗಳಲ್ಲಿ ಹಿಂದೂಸ್ತಾನಿ ಶೈಲಿಯ ಒಂದೆರಡು ಹಾಡುಗಳು ಬಳಕೆಯಾಗಿವೆ. ಪ್ರಾರಂಭಿಕ ಹಂತದಲ್ಲಿ ಕನ್ನಡ ಸಿನಿಮಾಗಳೆಲ್ಲಾ ದಕ್ಷಿಣದ ಮದರಾಸಿನಲ್ಲಿ ನಿರ್ಮಾಣಗೊಳ್ಳುತ್ತಿದ್ದುದೂ, ನಂತರದಲ್ಲಿ ಹಿಂದೂಸ್ತಾನೀ ಸಂಗೀತವು ಪ್ರಚಲಿತವಿರುವ ಉತ್ತರ ಕರ್ನಾಟಕ ಭಾಗದಲ್ಲಿ ನಿರ್ಮಾಣಗೊಳ್ಳದಿರುವುದೂ ಇದಕ್ಕೆ ಕಾರಣವೆನ್ನಬಹುದು.

ಶಾಸ್ತ್ರೀಯ ಸಂಗೀತದ ಶೈಲಿಯಂತೆ ಜನಪದ ಸಂಗೀತದ ಶೈಲಿಯೂ ಕನ್ನಡ ಸಿನಿಮಾಗಳಲ್ಲಿ ಬಳಕೆಯಾಗಿವೆ. ಸೇವಂತಿ ಸೇವಂತಿ ಹಾಗೂ ಜನಪದ ಚಿತ್ರಗಳಲ್ಲಿ ಜನಪದ ಸಂಗೀತದ ಶೈಲಿಯು ಹೆಚ್ಚಾಗಿ ಬಳಕೆಯಾಗಿವೆ. ಇವುಗಳನ್ನು ಹೊರತು ಪಡಿಸಿಯೂ ಹಲವು ಸಿನಿಮಾಗಳಲ್ಲಿ ಜನಪದ ಸಂಗೀತ ಶೈಲಿ ಬಳಕೆಯಾಗಿರುವುದನ್ನು ನಾವು ಕಾಣಬಹುದು.[೧]

ಭಾರತೀಯ ಸಿನಿಮಾಗಳಲ್ಲಿ ನೃತ್ಯಕ್ಕೆ ಮಹತ್ವದ ಸ್ಥಾನವಿದೆ. ಸಂಗೀತದಂತೆ ನೃತ್ಯದಲ್ಲೂ ಪಾಶ್ಚಾತ್ಯ, ಮತ್ತು ಭಾರತೀಯ ಎನ್ನಬಹುದಾದ ಎರಡೂ ನೃತ್ಯ ಪ್ರಕಾರಗಳೂ ನಮ್ಮ ಸಿನಿಮಾಗಳಲ್ಲಿ ಬಳಕೆಯಾಗಿವೆ. ಭಾರತೀಯ ನೃತ್ಯದಲ್ಲಿ ಮತ್ತೆ 'ಶಾಸ್ತ್ರೀಯ' ಮತ್ತು 'ಜನಪದ' - ಎಂಬ ಪ್ರಭೇದಗಳಿದ್ದು, ಅವೆರಡೂ ಬೇರೆ ಬೇರೆಯಾಗಿ ಅಥವಾ ಮಿಶ್ರ ರೂಪದಲ್ಲಿ 'ಸಿನಿಮಾಗಳಲ್ಲಿ ಅಳವಡಿಕೆಯಾಗಿವೆ. ಶಾಸ್ತ್ರೀಯ ನೃತ್ಯದಲ್ಲಿ ಭರತನಾಟ್ಯ, ಕೂಚುಪುಡಿ, ಕಥಕ ತಾಂಡವ ನೃತ್ಯ ಮುಂತಾದ ಪ್ರಕಾರಗಳು ಬಳಕೆಯಾದುದಿದೆ.

೧.ತತ್ಸಂಬಂಧವಾದ ಉದಾಹರಣೆಗಳನ್ನು ದೇಸೀ ಸಂಸ್ಕೃತಿ ಹಿನ್ನೆಲೆಯಲ್ಲಿ ಸಾಹಿತ್ಯ ಮತ್ತು ಸಿನಿಮಾ ಸಂಬಂಧ ಮುಂದಿನ ಅಧ್ಯಾಯದ ಮೌಖಿಕ ಸಾಹಿತ್ಯ ಮತ್ತು ಸಿನಿಮಾ ಎಂಬ ಭಾಗದಲ್ಲಿ ಕೊಡಲಾಗಿದೆ.

ಕನ್ನಡ ಸಿನಿಮಾಗಳ ಮಟ್ಟಿಗೆ ಹೇಳುವುದಿದ್ದರೆ ಶಾಸ್ತ್ರೀಯ ನೃತ್ಯಗಳ ಪೈಕಿ ಭರತನಾಟ್ಯವೇ ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಾಗಿದೆಯೆನ್ನಬಹುದು. ಜನಪದ ಕುಣಿತಗಳಲ್ಲಿ ಕನ್ನಡ ನಾಡಿಗೇ ವಿಶಿಷ್ಟವಾದ ಹಲವು ಪ್ರಭೇದಗಳು ನಮ್ಮ ಸಿನಿಮಾಗಳಲ್ಲಿ ಕಾಣಿಸಿಕೊಂಡಿವೆ. ಇವುಗಳ ಬಗೆಗೆ ಇದೇ ಅಧ್ಯಾಯದಲ್ಲಿ ಮುಂದೆ ವಿಸ್ತೃತವಾಗಿ ಚರ್ಚಿಸಲಾಗುವುದು.

ಸಂಗೀತದಂತೆ ನೃತ್ಯದಲ್ಲೂ ಸಿನಿಮಾಕ್ಕೇ ವಿಶಿಷ್ಟವಾದ ಮಾದರಿಯೊಂದಿದೆ. ಶಾಸ್ತ್ರೀಯ ಮತ್ತು ಜನಪದ ಶೈಲಿಗಳ ಪ್ರಭಾವದಿಂದ ಅದನ್ನು ರೂಪಿಸಿಕೊಂಡಿರಬಹುದಾದರೂ ಅದು 'ಸಿನಿಮಾ ಸಂಸ್ಕೃತಿ'ಯ ಒಂದು ಭಾಗವಾಗುತ್ತದೆಯೇ ಹೊರತು 'ದೇಸೀ ಸಂಸ್ಕೃತಿ'ಯ ಭಾಗವೆನಿಸುವುದಿಲ್ಲ. ಹಾಗಾಗಿ ಸಿನಿಮಾಗಳಲ್ಲಿ ಬಳಕೆಯಾದ ಶಾಸ್ತ್ರೀಯ ಮತ್ತು ಜನಪದ ಸಂಗೀತ ನೃತ್ಯಗಳಷ್ಟೇ 'ದೇಸೀ ಸಂಸ್ಕೃತಿ'ಯ ಅಂಶಗಳೆನಿಸುತ್ತವೆ.

ವಸ್ತ್ರ ವಿನ್ಯಾಸ, ಉಡುಗೆ -ತೊಡುಗೆಗಳಲ್ಲಿಯೂ 'ದೇಸೀ ಸಂಸ್ಕೃತಿ' ಬಿಂಬಿತವಾಗಿರುವುದು ಸಿನಿಮಾದ ಇನ್ನೊಂದು ಅಂಗವಾಗಿದೆ. ಪುರುಷರಿಗೆ ಕಚ್ಚೆ-ಪಂಚೆ-ಶಲ್ಯ, ಸ್ತ್ರೀಯರಿಗೆ ಸೀರೆ-ರವಿಕೆ ಇವು ಸಾಮಾನ್ಯವಾಗಿ 'ಭಾರತೀಯ'ವೆಂದು ಪರಿಗಣಿತವಾದ ಸಾಂಪ್ರದಾಯಿಕ ಉಡುಗೆಗಳು. ಇವುಗಳನ್ನು ವಿನ್ಯಾಸಗೊಳಿಸುವ ಮತ್ತು ಉಡುವ ವಿಧಾನದಲ್ಲಿ 'ಭಾರತ'ದೊಳಗಣ ಪ್ರದೇಶದಿಂದ ಪ್ರದೇಶಕ್ಕೆ, ಸಮುದಾಯದಿಂದ ಸಮುದಾಯಕ್ಕೆ ಭಿನ್ನತೆ-ವೈವಿಧ್ಯಗಳಿವೆ. ಅದೇ ರೀತಿ ವಿಶಿಷ್ಟ ಸಂದರ್ಭಗಳಿಗೆ ತಕ್ಕಂತೆಯೂ ನಮ್ಮಲ್ಲಿ ಉಡುಗೆ-ತೊಡುಗೆಗಳು ಬದಲಾಗುತ್ತವೆ. ಈ ಎಲ್ಲಾ ವೈವಿಧ್ಯಗಳನ್ನೂ ನಮ್ಮ ಸಿನಿಮಾಗಳಲ್ಲಿ ತರಲಾಗಿದೆಯೇ? ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದು ಕಷ್ಟ. ಬಹುಮಟ್ಟಿಗೆ 'ಇಲ್ಲ'ವೆಂಬ ಉತ್ತರವೇ ಸಿಗಬಹುದೇನೋ. ಕನ್ನಡ ನಾಡನ್ನಷ್ಟೇ ತೆಗೆದುಕೊಂಡರೂ ಇಲ್ಲಿನ ಎಲ್ಲಾ ಪ್ರದೇಶಗಳ ಎಲ್ಲಾ ಜನ ಸಮುದಾಯಗಳ ಉಡುಗೆ ತೊಡುಗೆಯನ್ನಾಗಲಿ, ಒಟ್ಟಾರೆ ಜೀವನ ಕ್ರಮವನ್ನಾಗಲಿ ಸಿನಿಮಾಗಳಲ್ಲಿ ಅಳವಡಿಸುವುದು

ಕಷ್ಟಸಾಧ್ಯ. ಆದರ ಅನಿವಾರ್ಯತೆಯೂ ಸಿನಿಮಾ ನಿರ್ಮಾಪಕ - ನಿರ್ದೇಶಕರಿಗಿರುವುದಿಲ್ಲ. ಆದರೆ ಕೆಲವು ವಿಶಿಷ್ಟ ಸಮುದಾಯಗಳ ಪಾತ್ರಗಳು ಬರುವಂಥ ಸಿನಿಮಾಗಳಲ್ಲಿ ಈ ತೆರೆನಾದ ವೈವಿಧ್ಯವನ್ನು ಕೆಲಮಟ್ಟಿಗೆ ತರಲಾಗಿದೆ.

ಪ್ರಾರಂಭದಿಂದಲೂ ಕನ್ನಡ ಸಿನಿಮಾಗಳಲ್ಲಿ ನಮ್ಮ ನಾಡಿನ ಕೆಲವಾದರೂ ದೇಸೀ ಸಮುದಾಯಗಳ ಪಾತ್ರಗಳು ಕಾಣಿಸಿಕೊಂಡಿವೆ. ಕುರುಬ, ಲಂಬಾಣಿ, ಬೆಸ್ತ, ಮಲೆಕುಡಿಯ ಮುಂತಾದ ಜನ ಸಮುದಾಯಗಳಲ್ಲದೆ ಇತರ ಕೆಲವು ಬುಡುಕಟ್ಟು ಹಾಗೂ ದಲಿತ ಸಮುದಾಯಗಳ ಪಾತ್ರಗಳು ಅಲ್ಲಲ್ಲಿ ಬಳಕೆಯಾಗಿವೆ. ಅಂತಹ ಪಾತ್ರಗಳ ಉಡುಗೆ-ತೊಡುಗೆಗಳನ್ನು ಆಯಾ ಸಮುದಾಯಗಳಿಗೆ ವಿಶಿಷ್ಟವೆಂಬಂತೆ ಕೆಲವು ಸಿನಿಮಾಗಳಲ್ಲಿ ವಿನ್ಯಾಸಗೊಳ್ಳಸಲಾಗಿದೆ. ಆದರೆ ಬುಡಕಟ್ಟುಗಳ, ದಲಿತರ ವೇಷ ಭೂಷಣಗಳನ್ನು ವಿನ್ಯಾಸಗೊಳಿಸುವಾಗ ನಮ್ಮ ಸಿನಿಮಾಗಳಲ್ಲಿ ನಿರ್ದಿಷ್ಟ ಪ್ರದೇಶದ ಸಮುದಾಯಗಳ ಉಡುಗೆ-ತೊಡುಗೆಗಳನ್ನು ಅನುಸರಿಸಲಾಗುತ್ತಿದೆ. ಎನ್ನುವಂತಿಲ್ಲ. ದೇಶ-ವಿದೇಶಗಳ ಬೇರೆ ಬೇರೆ ಬುಡಕಟ್ಟುಗಳ ವೇಷ-ಭೂಷಣಗಳ ಪ್ರಭಾವವನ್ನು ಅಲ್ಲಿ ಕಾಣಲು ಸಾಧ್ಯ. ಪ್ರಾದೇಶಿಕವಾಗಿಯೂ ಹೇಳುವುದಾದರೆ ಕರ್ನಾಟಕದ ಬೇರೆ ಬೇರೆ ಪ್ರದೇಶಗಳ ಉಡುಗೆ-ತೊಡುಗೆಗಳನ್ನು ನಮ್ಮ ಸಿನಿಮಾಗಳು ತಕ್ಕ ಮಟ್ಟಿಗಾದರೂ ಬಳಸಿಕೊಂಡುದಿದೆ [೧]. ಹೆಣ್ಣು ಮಕ್ಕಳ ಉಡುಗೆಗಳಲ್ಲಿ ಇಳಕಲ್ ಸೀರೆಯ ಬಳಕೆ ಕೆಲವು ಸಿನಿಮಾಗಳಲ್ಲಿ ವಿಶಿಷ್ಟವಾಗಿ ಕಂಡುಬರುತ್ತದೆ. ಆಯಾ ಪ್ರದೇಶಗಳಿಗೆ ತಕ್ಕಂತೆ ಸೀರೆಯನ್ನು ಕಚ್ಚೆಹಾಕಿ ಉಡುವ ಮತ್ತು ನೆರಿಗೆ ಹಿಡಿದು ಉಡುವ ಪದ್ಧತಿಗಳನ್ನೂ ಅಳವಡಿಸಿಕೊಳ್ಳಲಾಗಿದೆ. ಪುರಷರ ಉಡುಗೆಗಳಲ್ಲೂ ಪಂಚೆಯನ್ನು ಕಚ್ಚೆಹಾಕಿ ಮತ್ತು ನೆರಿಗೆ ಹಿಡಿದು ಉಡುವ ಭಿನ್ನ ಸಂಪ್ರದಾಯಗಳನ್ನು ಕೆಲವು ಸಿನಿಮಾಗಳಲ್ಲಿ ಕಾಣಬಹುದಾಗಿದೆ. ಮುನ್ನುಡಿಯಂಥ ಇತ್ತೀಚಿನ ಕೆಲವು ಸಿನಿಮಾಗಳಲ್ಲಿ ಮಂಗಳೂರು ಪರಿಸರದ ಬ್ಯಾರಿ ಸಮುದಾಯದ ಮಹಿಳೆಯರು ಮತ್ತು ಪುರುಷರು ಬಳಸುವ ಉಡುಗೆ-ತೊಡುಗೆಗಳ ವಿನ್ಯಾಸವಿದೆ.

೧.''ಕನ್ನಡ ಸಿನಿಮಾ ಮತ್ತು ದೇಸೀ ಸಮುದಾಯಗಳ ಸಂವೇದನೆಗಳು'' ಎಂಬ ೬ನೇಯ ಅಧ್ಯಾಯದಲ್ಲಿ ತತ್ಸಂಬಂಧವಾದ ವಿಸ್ತೃತ ಚರ್ಚೆಯಿರುತ್ತದೆ.

೪.೨ ಭಾಷೆಯ ಬಳಕೆ

ಮೇಲೆ ಗಮನಿಸಿದಂತೆ ಟಾಕಿ ಚಿತ್ರಗಳ ಯುಗ ಪ್ರಾರಂಭವಾದಾಗಿನಿಂದಲೂ ಚಲನ ಚಿತ್ರಗಳಲ್ಲಿ ಭಾಷೆಗೆ ಪ್ರಮುಖಸ್ಥಾನ ಪ್ರಾಪ್ತವಾಗಿದೆ. ಹಾಡು ಮತ್ತು ಸಂಭಾಷಣೆಗಳೆರಡಲ್ಲೂ ಅಲ್ಲಿ ಭಾಷೆ ಬಳಕೆಯಾಗಿರುತ್ತದೆ. ಸಿನಿಮಾವೊಂದು 'ನಮ್ಮ' ಭಾಷೆಯಲ್ಲಿ ನಿರ್ಮಾಣಗೊಂಡಾಗಲೇ ಅಲ್ಲಿ 'ದೇಸೀಭಾಷೆ' ಬಳಕೆಯಾಯಿತೆಂದು ಹೇಳಬಹುದು. ಆದರೆ ಕೇವಲ ಸಂವಹನ ಸಾಮರ್ಥ್ಯವಷ್ಟೇ ಭಾಷೆಯೊಂದರ ದೇಸೀ ಲಕ್ಷಣವಲ್ಲ. ನಿರ್ದಿಷ್ಟ ಪ್ರದೇಶ ಮತ್ತು ಸಮುದಾಯದ ಸಾಂಸ್ಕೃತಿಕ ಲಕ್ಷಣಗಳನ್ನೂ ಮೈಗೂಡಿಸಿಕೊಳ್ಳುವಲ್ಲಿ ನಿಜವಾದ ದೇಸೀತನವಿದೆ. ಹಳೇ ಮೈಸೂರು ಪ್ರದೇಶದ ಕನ್ನಡವನ್ನು ಬಹುಮಟ್ಟಿಗೆ ಪ್ರಮಾಣ ಭಾಷೆಯಾಗಿರಿಸಿಕೊಂಡು ನಮ್ಮ ಸಿನಿಮಾಗಳು ಪ್ರಾರಂಭದಿಂದಲೂ ಇತರ ಪ್ರದೇಶಗಳ, ಸಮುದಾಯಗಳ ಗ್ರಾಮ್ಯ ಅಥವಾ ಉಪಭಾಷೆಗಳನ್ನು ಅಲ್ಲಲ್ಲಿ ಬಳಸಿಕೊಂಡುದಿದೆ. ಇಂಥ ಗ್ರಾಮ್ಯ ಭಾಷೆಗಳ ಬಳಕೆಯ ಸಂದರ್ಭದಲ್ಲೂ ಮೈಸೂರು, ಬೆಂಗಳೂರು ಸುತ್ತಮುತ್ತಣ ಗ್ರಾಮಾಂತರ ಪ್ರದೇಶಗಳ ಭಾಷಾ ಮಾದರಿಗಳನ್ನೇ ಹೆಚ್ಚಾಗಿ ಅನುಸರಿಸಿದ ನಮ್ಮ ಸಿನಿಮಾಗಳು ಬರಬರುತ್ತಾ ಹಾಸ್ಯ-ತಮಾಷೆಗೆಂಬಂತೆ ಉತ್ತರ ಕರ್ನಾಟಕ (ಧಾರವಾಡ) ಮತ್ತು ಮಂಗಳೂರು ಕನ್ನಡಗಳನ್ನೂ ಆಗಾಗ ಬಳಸತೊಡಗಿದುವು.

ಆದರೆ ಇತ್ತೀಚಿನ ವರ್ಷಗಳಲ್ಲಿ ಪ್ರಾದೇಶಿಕ ಅಥವಾ ಗ್ರಾಮೀಣ ಭಾಷೆಯನ್ನೇ ಅರ್ಥ ಪೂರ್ಣವಾಗಿ ಬಳಸಿಕೊಂಡು ಚಿತ್ರ ನಿರ್ಮಿಸುವ ಕೆಲವು ಗಂಭೀರ ಪ್ರಯತ್ನಗಳೂ ನಮ್ಮಲ್ಲಿ ನಡೆದಿವೆ. ಒಂದಾನೊಂದು ಕಾಲದಲ್ಲಿ, ಸಂಗ್ಯಾಬಾಳ್ಯ, ಕಡ್ಡಿಮಟ್ಟಿ ಸ್ಟೇಷನ್ ಮಾಸ್ಟರ್, ನಾಗಮಂಡಲ ತಾಯಿ ಸಾಹೇಬ, ಅಲೆಮಾರಿ ಸಂಗೊಳ್ಳಿರಾಯಣ್ಣ, ಸಿಂಗಾರೆವ್ವ ಮುಂತಾದ ಚಿತ್ರಗಳಲ್ಲಿ ಉತ್ತರ ಕರ್ನಾಟಕದ ಪ್ರಾದೇಶಿಕ ಉಪಭಾಷೆಯ ಸೊಗಡಿದೆ. ಸಂಗ್ಯಾಬಾಳ್ಯದಲ್ಲಿ ಗೆಳೆಯರಿಬ್ಬರ ಸಂಭಾಷಣೆಯ ಭಾಗವಾಗಲಿ, ಪರವ್ವಳು ತನ್ನ ಕುಡುಕಗಂಡ, ಸಂಗ್ಯಾ-ಬಾಳ್ಯಾ ಮತ್ತು ಗಂಗವ್ವಳೊಂದಿಗೆ ಮಾಡನಾಡುವ ಸಂದರ್ಭವಾಗಲಿ ಈ ದೃಷ್ಟಿಯಿಂದ ಮಹತ್ವದ್ದೆನಿಸುತ್ತವೆ. ದೇಸೀ ಗಾದೆ-ನುಡಿಗಟ್ಟುಗಳ ಬಳಕೆ ಸಿನಿಮಾದ ಒಟ್ಟಾರೆ ಸನ್ನಿವೇಶಕ್ಕೆ ಇನ್ನಷ್ಟು ಅರ್ಥಪೂರ್ಣತೆಯನ್ನು

ತಂದು ಕೊಟ್ಟಿದೆ. 'ನಾಗಮಂಡಲ' ಸಿನಿಮಾವನ್ನು ಇಲ್ಲಿ ಉಲ್ಲೇಖಿಸಬಹುದು. 'ಗದಿಯ ಬೇಕು ಮಗಳಾ' 'ಕಂಬದ ಮ್ಯಾಲಿನ ಗೊಂಬೆಯೇ' 'ಹುಡುಗಿ ಹೊಹುಡುಗಿ ನಿನಗ್ಯಾಕ ಈ ಮಲ್ಲಿಗೆ' ಮುಂತಾದ ಹಾಡುಗಳಾಗಲಿ, ಕುರುಡವ್ವ ಅರ್ಥಪೂರ್ಣ ನುಡಿಗಟ್ಟುಗಳನ್ನು ಬಳಸಿ ಅಪ್ಪಣ್ಣನಿ ಹೇಳುವ ಮಾತುಗಳಾಗಲಿ 'ಈ ಅಂಗ್ಳ ರಂಗೋಲಿ ಬೇಡ್ತೈತಿ ಈ ಪಟ್ಟಿ ಚಿತ್ತಾರ ಬೇಡ್ತೈತಿ' ಇತ್ಯಾದಿ. ಇನ್ನಿತರ ಸಂಭಾಷಣೆಗಳಾಗಲಿ ಅಪ್ಪಟ ಗ್ರಾಮೀಣ ಪರಿಸರದ ಕುರುಹುಗಳು. ಸಂಗ್ಯಾಬ್ಯಾಳ್ಯ ಚಿತ್ರದಲ್ಲಿ ಪರವ್ವಳು ತನ್ನ ಗಂಡನನ್ನು ಕುರಿತು ಹೇಳುವ ಮಾತುಗಳು 'ಹೆಡಿಗಿ ಅತ್ತಿ ಗಡಿಗಿ ಮಾವ' 'ಆರಣಿ ಅಗಡಿಮನ್ಯಾಗಾ ಪಾವಲಿ ಪಡಸಾಲ್ಯಾಗ', ಗಂಗಾ ಪರವ್ವನ ಮುಂದೆ ಹೇಳುವ ಮಾತು 'ಒಂದ ಒಂದು ಕೂಸು ಇದ್ದಿದ್ರ ಬಮಡಿಮುಂದಿನ ಬಂಗಾರದ ಕಳಾಸ ಇದ್ದಾಂಗ' ಹಾಗೂ ಊರಿನ ಜನ ಗಂಗಿಯ ಗಂಡ ಶೆಟ್ರು ಮುಂದೆ ಹೇಳುವ ಮಾತು 'ಲಗಳ್ಯಾರ ಮನಿ ಆಗಳಿ ಅಳಗ್ಯಾಡಕತ್ಯಾತಂತ' 'ಚಿಲಕಬಲಕ್ ಬಿದ್ದ ಗಿಲಕ್ ಅನ್ನಾಕತ್ಯಾತಂತ' ಮುಂತಾದ ನಡಿಗಟ್ಟುಗಳ ಬಳಕೆಯಾಗಿರುವುದನ್ನು ಕಾಣಬಹುದು. 'ಮುನ್ನುಡಿ'ಯಂಥ ಸಿನಿಮಾಗಳಲ್ಲಿ ದಕ್ಷಿಣ ಕನ್ನಡ ಪರಿಸರದ ಪ್ರಾದೇಶಿಕ ಕನ್ನಡವನ್ನೂ ಬಳಸುವ ಗಂಭೀರ ಪ್ರಯತ್ನ ನಡೆದಿದೆ.

ಮೈಸೂರು, ಬೆಂಗಳೂರು ಸುತ್ತಮುತ್ತಣ ಗ್ರಾಮ್ಯ ಭಾಷೆ ಅನೇಕ ಸಿನಿಮಾಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಅಥವಾ ಭಾಗಶ:ವಾಗಿ ಬಳಕೆಯಾಗಿದೆ.

ಹೀಗೆ ನಮ್ಮ ಸಿನಿಮಾಗಳಲ್ಲಿ ಭಾಷೆಯು ಕೇವಲ ಸಂವಹನ ಮಾಧ್ಯಮವಾಗಿಯಷ್ಟೇ ಅಲ್ಲದೆ ಮಣ್ಣಿನ ಸತ್ವವನ್ನು ಮೈಗೂಡಿಸಿಕೊಂಡು ಬಳಕೆಯಾಗಿದೆ. 'ದೇಸೀ' ಸಂಸ್ಕೃತಿ ಅಭಿವ್ಯಕ್ತಿಯ ಸಂದರ್ಭದಲ್ಲಿ ಇಂತಹ ಪ್ರಯತ್ನ ಮುಖ್ಯವೆನಿಸುತ್ತದೆ.

೪.೩ ಪುರಾಣ ಮತ್ತು ದೈವಭಕ್ತಿ

ಕನ್ನಡ ಸಿನಿಮಾ ತನ್ನ ಪ್ರಾರಂಭಿಕ ದೆಸೆಯಿಂದಲೇ ರಂಗ ಭೂಮಿಯ ನಂಟಿನೊಂದಿಗೆ ಬೆಳೆದು ಬಂದಿದೆ. ಹಾಗಾಗಿ ರಂಗಭೂಮಿಯಲ್ಲಿ ಹೇಗೆ ಸಾಮಾಜಿಕ ವಸ್ತುಗಳ ಜತೆಗೆ ನಮ್ಮ ಪುರಾಣ ಇತಿಹಾಸಗಳ ಕಥೆಗಳು ವಿಜೃಂಭಿಸಿದ್ದವೋ ಹಾಗೆಯೇ ಸಿನಿಮಾಗಳಲ್ಲೂ ಪೌರಾಣಿಕ,

ಐತಿಹಾಸಿಕ ಕಥೆಗಳು ಕಾಣಿಸಿಕೊಂಡವು ರಾಮಾಯಣ, ಮಹಾಭಾರತ, ಭಾಗವತ, ಶಿವಪುರಾಣ, ದೇವೀ ಪುರಾಣ ಮುಂತಾದ ಪುರಾಣಗಳ ವಿವಿಧ ಕಥಾನಕಗಳು, ಅಖ್ಯಾನ, ಉಪಾಖ್ಯಾನಗಳನ್ನಾಧರಿಸಿ ಸಿನಿಮಾಗಳು ನಿರ್ಮಾಣಗೊಂಡವು .ಅಷ್ಟೇ ಅಲ್ಲದೆ ಜನಪದ ಕಥೆಗಳೋಪಾದಿಯ ಕೆಲವು ಕಾಲ್ಪನಿಕ ಪುರಾಣಗಳೂ ಸಿನಿಮಾಗಳಿಗೆ ವಸ್ತುಗಳಾದವು ದೇವತೆಗಳು, ರಾಕ್ಷಸರು, ಋಷಿ- ಮುನಿಗಳು, ದೇವ-ಮಾನವರು, ಇವರೆಲ್ಲರ ಮಹಿಮೆ, ಕಾರಣಿಕ, ಪವಾಡ, ಸಾಹಸ ಕಥೆಗಳು ಭಕ್ತಿ ಭಾವ ತುಂಬಿ ಸಿನಿಮಾಗಳಲ್ಲಿ ಮೂಡಿ ಬಂದವು. ೧೯೩೪ರಲ್ಲಿ ತೆರೆಕಂಡ 'ಸತಿ ಸುಲೋಚನ' ದಿಂದ ಹಿಡಿದು ಇತ್ತೀಚಿನ 'ಶ್ರೀ ಮಂಜುನಾಥ' ದ ವರೆಗೆ ಸುಮಾರು ೫೦ ಕ್ಕೂ ಹೆಚ್ಚಿನ ಪೌರಾಣಿಕ ಚಿತ್ರಗಳು ಕನ್ನಡದಲ್ಲಿ ನಿರ್ಮಾಣವಾಗಿವೆ. ಈ ಸಂಖ್ಯೆಯನ್ನು ಗಮನಿಸಿದರೆ ಪೌರಾಣಿಕ ಚಿತ್ರಗಳ ಜನಪ್ರಿಯತೆ ಎಷ್ಟೆಂಬುದು ನಮಗೆ ಅರಿವಾಗುತ್ತದೆ. ಅಂತಹ ಕೆಲವು ಚಿತ್ರಗಳನ್ನು ಇಲ್ಲಿ ಗಮನಿಸಬಹುದಾಗಿದೆ.

ಕನ್ನಡದ ಮೊದಲ ಪೌರಾಣಿಕ ಚಿತ್ರವಾದ **ಸತಿ ಸುಲೋಚನಾ** ಇದು ೧೯೩೪ರಲ್ಲಿ ತೆರೆಕಂಡಿತು. ಈ ಚಿತ್ರವನ್ನು ವೈ.ವಿ.ರಾವ್ ನಿರ್ದೇಶಿಸಿದರು. ಈ ಚಿತ್ರದ ಕಥಾ ವಸ್ತು ಇಂತಿದೆ. ರಾವಣನ ಸೊಸೆ ಸುಲೋಚನೆಗೆ ರಾಮ-ರಾವಣರ ಯುದ್ಧವನ್ನು ನಿಲ್ಲಿಸಿ, ಸೀತೆಯನ್ನು ಕ್ಷೇಮವಾಗಿ ಕಳುಹಿಸಬೇಕೆಂಬ ಹಂಬಲ. ಪತಿ ಇಂದ್ರಜಿತು ಈ ಮಾತನ್ನು ಪರಿಗಣಿಸದೆ, ಶಕ್ತಿವಶೀಕರಣ ಯಾಗ ಮಾಡಿ ಅದ್ಭುತ ಶಕ್ತಿ ಸಂಪಾದಿಸುತ್ತಾನೆ. ಆ ಶಕ್ತಿಯಿಂದ ಲಕ್ಷ್ಮಣನನ್ನು ಮೂರ್ಛೆ ಹೋಗುವಂತೆ ಮಾಡುತ್ತಾನೆ. ಹನುಮಂತ ಸಂಜೀವಿನಿ ಮೂಲಿಕೆ ತಂದು ಲಕ್ಷ್ಮಣನನ್ನು ಎಚ್ಚರಿಸುತ್ತಾನೆ. ಇಂದ್ರಜಿತು ಸೀತೆಯನ್ನು ರೂಪಿಸಿತಂದು ಲಕ್ಷ್ಮಣ ಮುಂದೆ ಕೊಲ್ಲುತ್ತಾನೆ. ವಿಭೀಷಣನಿಂದ ನಿಜ ತಿಳಿದ ಲಕ್ಷ್ಮಣ

ಇಂದ್ರಜಿತುವನ್ನು ಸಂಹರಿಸುತ್ತಾನೆ. ಸುಲೋಚನಾ ಪತಿಯೊಡನೆ ಅಗ್ನಿ ಪ್ರವೇಶ ಮಾಡಿ ಸತಿಯಾಗುತ್ತಾಳೆ.

೧೯೩೪ರಲ್ಲೇ ತೆರೆಕಂಡ ಮತ್ತೊಂದು ಚಿತ್ರವೆಂದರೆ **ಭಕ್ತಧ್ರುವ** ಅಥವಾ **ಧ್ರುವ ಕುಮಾರ.** ಈ ಚಿತ್ರವನ್ನು ಪಾರ್ಶ್ವನಾಥ ಅಲ್ಟೇಕರ್ ನಿರ್ದೇಶಿಸಿದರು. ಉತ್ತಾನಪಾದ ರಾಜನ ಹಿರಿಯ ಹೆಂಡತಿ ಸುನೀತಿಯ ಮಗ ಧ್ರುವ. ರಾಜನ ಪಟ್ಟದರಸಿ ಸುರುಚಿಯ ಮಗ ಉತ್ತಮನು ರಾಜನ ತೊಡೆಯ ಮೇಲೆ ಕುಳಿತಿದ್ದಾಗ, ಧ್ರುವನೂ ತೊಡೆ ಏರಲು ಹೋದ. ಆಗ ಸುರುಚಿ 'ಕಾಡಿಗೆ ಹೋಗಿ ತಪಸ್ಸು ಮಾಡಿ ತನ್ನ ಬಸಿರಲ್ಲಿ ಜನಸಿ ಬಂದರೆ ಮಾತ್ರ ಸಿಂಹಾಸನ ಏರುವ ಭಾಗ್ಯ ನಿನಗೆ ಬರುವುದು ಎಂದಳು. ಧ್ರುವ ಅಳುತ್ತಾ ತನ್ನ ತಾಯಿಯ ಬಳಿ ವಿಷಯ ತಿಳಿಸಿ, ಯಮುನಾ ನದಿತೀರಕ್ಕೆ ಬಂದು ಸಪ್ತ ಋಷಿಗಳಿಂದ ಮಂತ್ರೋಪದೇಶ ಹೊಂದಿ ಘೋರ ತಪಸ್ಸನ್ನು ಆಚರಿಸಿದ ವಿಷ್ಣುವನ್ನು ಪ್ರತ್ಯಕ್ಷ ಮಾಡಿಕೊಂಡು, ನಾರಾಯಣನ ಅನುಗ್ರಹದಿಂದ ಭೂಲೋಕದಲ್ಲಿ ಏಕ ಚಕ್ರಾಧಿಪತ್ಯವನ್ನು, ದೀರ್ಘಾಯುಷ್ಯವನ್ನು ಪಡೆದು. ಪರಲೋಕದಲ್ಲಿ ತನ್ನ ಹೆಸರಿನಿಂದಲೇ ಪ್ರಸಿದ್ಧವಾದ ಧ್ರುವ ಮುಕುಲವೆಂಬ ಶಾಶ್ವತಸ್ಥಾನ ಪಡೆಯುವನು.

ರಾಜಸುಯಾಗ ;೧೯೩೭ರಲ್ಲಿ ಟಿ.ದ್ವಾರಕನಾಥ್ ನಿರ್ದೇಶಿಸಿದ ಚಿತ್ರ. ಖಾಂಡವ ವನವನ್ನು ದಹಿಸಿ ಪಾಂಡವರು ಇಂದ್ರಪ್ರಸ್ಥ ನಗರವನ್ನು ನಿರ್ಮಿಸುತ್ತಾರೆ. ಅಲ್ಲಿ ವೈಭವಯುತ ಅರಮನೆ ನಿರ್ಮಿಸಿ ರಾಜಸುಯಯಾಗವನ್ನು ಮಾಡುತ್ತಾರೆ. ಅತಿಥಿಯಾಗಿ ಆಗಮಿಸಿದ ದುರ್ಯೋಧನ ಪಾಂಡವರ ವೈಭವವನ್ನು ಕಂಡು ಹೊಟ್ಟೆಯುರಿ ಪಡುತ್ತಾನೆ. ಆ ಅರಮನೆಯಲ್ಲಿ ದ್ರೌಪದಿಯ ಮುಂದೆ ಅವಮಾನಕ್ಕೀಡಾಗುವ ಪ್ರಸಂಗವೂ ಬರುತ್ತದೆ. ಅವನಲ್ಲಿ ರೋಷದ ಬೀಜ ಬಿತ್ತಿಕೊಂಡು ಹೆಮ್ಮರವಾಗುತ್ತದೆ. ಇದು ರಾಜಸೂಯಯಾಗವ ಕಥೆ.

ಸುಭದ್ರಾ ;ಚಿತ್ರದಲ್ಲಿ ಸುಭದ್ರ ಶ್ರೀಕೃಷ್ಣನ ಸೋದರಿ. ಈಕೆಯನ್ನು ಅರ್ಜುನನಿಗೆ ಕೊಟ್ಟು ವಿವಾಹ ಮಾಡಬೇಕೆಂದು ಕೃಷ್ಣನ ಮನಸ್ಸು. ಆದರೆ ಬಲರಾಮನಿಗೆ ಇದು ಇಷ್ಟವಿಲ್ಲ. ಸುಭದ್ರೆಗೂ ಅರ್ಜುನನ ಮೇಲೆ ಪ್ರೀತಿಯಿರುತ್ತದೆ.

ಶ್ರೀ ಕೃಷ್ಣನ ತಂತ್ರಗಳಿಂದ ಅರ್ಜುನನೇ ಸುಭದ್ರಳನ್ನು ವಿವಾಹವಾಗುತ್ತಾನೆ.

ಪ್ರಹ್ಲಾದ ; ಚಿತ್ರದಲ್ಲಿ ಹರಿಭಕ್ತ ಪ್ರಹ್ಲಾದ ಇವನ ತಂದೆ ಹಿರಣ್ಯಕಶಿಪು ಹರಿಯ ಕಡುವೈರಿ. ತಂದೆ-ಮಕ್ಕಳ ನಡುವಿನ ಸಂಘರ್ಷ ನಡೆಯುತ್ತದೆ. ಹರಿಯು ಬಾಲಕನ ಭಕ್ತಿಗೇ ಒಲಿದು ನರಸಿಂಹಾವತಾರದಲ್ಲಿ ಕಂಭದಿಂದ ಸೀಳಿ ಬಂದು ಹಿರಣ್ಯಕಶಿಪುವನ್ನು ಸಂಹರಿಸುವ ಪೌರಾಣಿಕ ಕಥೆ.
ಹರಿಶ್ಚಂದ್ರ ; ಚಿತ್ರದಲ್ಲಿ ಹರಿಶ್ಚಂದ್ರ ಮಹಾರಾಜ ಸತ್ಯಕ್ಕಾಗಿ ರಾಜ್ಯ, ಕೋಶ, ಹೆಂಡತಿ, ಮಕ್ಕಳನ್ನು ಬಿಟ್ಟು ಕಷ್ಟಪಡುವ ಪೌರಾಣಿಕ ಕಥಾನಕವೇ ಈ ಚಿತ್ರದ ಸಾರಾಂಶ. ವಿಶ್ವಾ ಮಿತ್ರವನ್ನು ಖಳನಾಯಕನಂತೆ ಚಿತ್ರಿಸದೇ ತಮ್ಮಲ್ಲಿನ ತಪಃ ಶಕ್ತಿಯನ್ನು ಹರಿಶ್ಚಂದ್ರನಿಗೆ ಧಾರೆಯೆರೆಯಲು ಪರೀಕ್ಷಿಸುವ ಸಲುವಾಗಿ ಈ ಕಠಿಣ ಪರೀಕ್ಷೆಗಳನ್ನು ಒಡ್ಡುವಂತೆ ಚಿತ್ರನಾಟಕ ರಚಿತವಾಗುತ್ತದೆ.
ರಾಧಾರಮಣ; ಈ ಚಿತ್ರದಲ್ಲಿ ರಾಧಾ-ಕೃಷ್ಣರ ಪ್ರಣಯದ ನಿಷ್ಕಳಂಕತೆಯನ್ನು ಹೇಳುವ ಕಥೆ. ರಾಧೆಯ ಪತಿ ಅನಯನಿಗೆ ಆಕೆಯ ಮೇಲೆ ಸಂಶಯ. ಕೃಷ್ಣನ ಜನ್ಮ ರಹಸ್ಯ ತಿಳಿದ ಮೇಲೆ ಕೃಷ್ಣನ ವೈರಿ ಕಂಸನೊಂದಿಗೆ ಸೇರಿ ಆ ಮೂಲಕ ರಾಧಾ-ಕೃಷ್ಣರನ್ನು ದೂರ ಮಾಡುವುದು ಉದ್ದೇಶವಾಗಿರುತ್ತದೆ. ಆದರೆ ನಂತರದ ಘಟನೆಗಳಲ್ಲಿ ಅನಯನು ತನ್ನ ಸಂಶಯವನ್ನು ನಿವಾರಿಸಿಕೊಂಡು ರಾಧೆಯ ಪತಿನಿಷ್ಠೆಯನ್ನು ಅರ್ಥ ಮಾಡಿಕೊಳ್ಳುತ್ತಾನೆ.

ಚಂದ್ರಹಾಸ; ಚಿತ್ರದಲ್ಲಿ ಅನಾಥ ಬಾಲಕ ರಾಜನಾಗುವ ಅದೃಷ್ಟ ಹೊಂದಿರುತ್ತಾನೆ. ಇದನ್ನರಿತ ಮಂತ್ರಿ ದುಷ್ಟ ಬುದ್ಧಿ ಆ ಬಾಲಕನಿಗೆ ನಾನಾ ಹಿಂಸೆ ನೀಡುತ್ತಾನೆ. ಮಂತ್ರಿಯು ಕುಯುಕ್ತಿಯಿಂದ ಚಂದ್ರಹಾಸನಿಗೆ ವಿಷ ನೀಡಲು ವ್ಯವಸ್ಥೆ ಮಾಡುತ್ತಾನೆ. ಆದರೆ ಆ ಮಂತ್ರಿಯ ಮಗಳು 'ವಿಷಯ' ಚಂದ್ರಹಾಸನನ್ನು ವಿವಾಹವಾಗುತ್ತಾಳೆ. ದುಷ್ಟಬುದ್ಧಿಯ ಕೆಟ್ಟ ಯೋಚನೆಗಳು ಬಯಲಿಗೆ ಬರುತ್ತವೆ. ಚಂದ್ರಹಾಸ ರಾಜನಾಗುತ್ತಾನೆ.

ಕೃಷ್ಣ ಲೀಲಾ ; ಚಿತ್ರದಲ್ಲಿ ಶ್ರೀ ಕೃಷ್ಣನು ಕಂಸನನ್ನು ಸಂಹರಿಸಲೆಂದೇ ಜನ್ಮ ತಳೆದದ್ದು, ಕೃಷ್ಣ ಜನನ ಪೂರ್ವದ ಅನಂತರದ ವಿವರಗಳು, ಕೃಷ್ಣಲೀಲೆಯ ವಿವರಗಳು ಮತ್ತು ಕಂಸಾಧಿಗಳ

[illegible]

[illegible]

[illegible]

[illegible]

ವಧೆಯ ಪ್ರಸಂಗಕ್ಕೆ ಆದ್ಯತೆ ಪೂರ್ವಾರ್ಧದಲ್ಲಿದ್ದರೆ ಉತ್ತಾರಾರ್ಧದಲ್ಲಿ ರಾಜಕಾರಣಿ ಕೃಷ್ಣನು ಪಾಂಡವ ಪಕ್ಷ ವಹಿಸಿ ಕೌರವರನ್ನು ನಾಶ ಮಾಡಿದ ಕಥೆಯಿದೆ.

ಮಹಿರಾವಣ; ಕಾಳಿಕಾದೇವಿಯ ವರದಿಂದ ಸಮಸ್ತವನ್ನು ಗೆದ್ದವನು ಮಹಿರಾವಣ. ಮಹಿರಾವಣನಿಗೆ ಒಲಿಯದ ನಾಗಕನ್ಯೆ ಚಂದ್ರಸೇನೆ ರಾಮನಭಕ್ತಳು. ಲಂಕೆಗೆ ಬಂದ ರಾಮಲಕ್ಷ್ಮಣರನ್ನು ಕಾಳಿಗೆ ಬಲಿಕೊಡಲಿದ್ದ ಮಹಿರಾವಣನನ್ನು ಪ್ರತಿ ಭಟಿಸುತ್ತಾಳೆ. ರಾಮನ ಭಂಟ ಹನುಮಂತನಿಂದ ಸಮಸ್ಯೆಗಳೆಲ್ಲ ಪರಿಹಾರವಾಗುತ್ತವೆ.

ಭೂಕೈಲಾಸ; ಚಿತ್ರದಲ್ಲಿ ರಾವಣ ಆತ್ಮಲಿಂಗಕ್ಕಾಗಿ ಶಿವನನ್ನು ಒಲಿಸಿಕೊಂಡು ಪಾರ್ವತಿಯನ್ನೂ ಕೇಳುತ್ತಾನೆ. ಪಾರ್ವತಿಯನ್ನು ಕರೆದುಕೊಂಡು ಹೋಗುತ್ತಿರುವಾಗ ಆಕೆ ತನ್ನ ಘೋರ ರೂಪ ದರ್ಶನ ಮಾಡಿಸುತ್ತಾಳೆ. ಹೆದರಿ ಹಿಂತಿರುಗಿದ ರಾವಣ ಮತ್ತೆ ಆಕೆಯನ್ನು ಹುಡುಕಲು ಪಾತಾಳಕ್ಕೆ ಹೋಗುತ್ತಾನೆ. ಅಲ್ಲಿ ಪಾರ್ವತಿಯೆಂದು ಬಗೆದು ಮಂಡೋದರಿಯನ್ನು ವಿವಾಹವಾಗುತ್ತಾನೆ. ಪಾರ್ವತಿಯನ್ನು ಮೋಹಿಸಿದ್ದಕ್ಕಾಗಿ ಪಶ್ಚಾತ್ತಾಪ ಪಟ್ಟು ಶಿವನಿಗೆ ತನ್ನ ತಲೆಯನ್ನೇ ಅರ್ಪಿಸುತ್ತಾನೆ. ಶಿವ ಆತನ ಭಕ್ತಿಗೆ ಮೆಚ್ಚಿ ಆತನಿಗೆ ಜೀವದಾನ ಮಾಡಿ ತನ್ನ ಆತ್ಮಲಿಂಗವನ್ನು ನೀಡುತ್ತಾನೆ. ದಾರಿ ಮಧ್ಯೆ ಸಂಧ್ಯಾವಂದನೆಗೆ ತೆರಳಲು ದನಗಾಹಿ ರೂಪದ ಗಣಪತಿಯ ಕೈಗೆ ಲಿಂಗವನ್ನು ನೀಡುತ್ತಾನೆ. ಅವನು ಅದನ್ನು ಭೂಮಿಗಿಡಲು ಲಿಂಗ ಅಲ್ಲಿಯೇ ಪ್ರತಿಷ್ಠಾಪಿತವಾಗುತ್ತದೆ. ಮುಂದೆ ಇದೇ ಭೂಕೈಲಾಸವೆಂದು ಪ್ರಖ್ಯಾತವಾಗುತ್ತದೆ.

ಶ್ರೀ ಕೃಷ್ಣಗಾರುಡಿ; ಶ್ರೀ ಕೃಷ್ಣನು ಗಾರುಡಿಯ ವೇಷದಲ್ಲಿ ಒಂದು ಭಿಮಾರ್ಜುನರ ಗರ್ವಭಂಗ ಮಡುವ ಮಹಾಭಾರತದ ಸನ್ನಿವೇಶವೊಂದರ ಸುತ್ತ ಹೆಣೆದ ಕಥೆ.

ಮಹಿಷಾಸುರ ಮರ್ದಿನಿ; ಚಿತ್ರದಲ್ಲಿ. ರಾಕ್ಷಸ ರಾಜ ರಂಭೇಷನ ತಮ್ಮನನ್ನು ಇಂದ್ರ ಸಂಹರಿಸಿದಾಗ ರಂಭೇಷ ಚಿರಂಜೀವಿಯಾಗಲು ನಾಗಲೋಕಕ್ಕೆ ಹೊರಡುತ್ತಾನೆ. ಇಂದ್ರ ಎಮ್ಮೆಯನ್ನು ಸುಂದರಿಯನ್ನಾಗಿಸಿ ರಂಭೇಷ ಮೋಹಿಸುವಂತೆ ಮಾಡುತ್ತಾನೆ.

ಮಹಿಷಾಸುರ ಅವಳಿಂದ ಜನಿಸುತ್ತಾನೆ. ಬ್ರಹ್ಮನಿಂದ ಅಜೇಯತ್ವದವರ ಪಡೆದ ಮಹಿಷನ ಉಪಟಳ ಹೆಚ್ಚುತ್ತದೆ. ಬ್ರಹ್ಮ-ವಿಷ್ಣು-ಮಹೇಶ್ವರರು ತಮ್ಮ ಶಕ್ತಿಯನ್ನು ಧಾರೆ ಎರೆದು ಆದಿಶಕ್ತಿಯನ್ನು ಚಾಮುಂಡಿಯಾಗಿಸಿ ಕಳುಹಿಸುತ್ತಾರೆ. ಈಕೆ ಮಹಿಷನನ್ನು ಸಂಹಾರ ಮಾಡುತ್ತಾಳೆ. ಅದೇ ರೀತಿ 'ದಶಾವತಾರ' ಚಿತ್ರದಲ್ಲಿ ವಿಷ್ಣು ಲೋಕ ಕಲ್ಯಾಣಕ್ಕಾಗಿ ಮತ್ಸ್ಯ, ವರಾಹ, ನರಸಿಂಹ, ವಾಮನ, ಪರಶುರಾಮ ಕೃಷ್ಣ, ಬುದ್ಧ ಹಾಗೂ ಕಲ್ಕಿ ಅವತಾರಗಳನ್ನು ಎತ್ತುವ ಕಥೆ ಇದಾಗಿದೆ.

ಶ್ರೀ ಶೈಲ ಮಹಾತ್ಮೆ; ಚಿತ್ರದಲ್ಲಿ ದೂರ್ವಾಸರಿಂದ ಶಪಿಸಲ್ಪಟ್ಟ ಪಾರ್ವತಿ ಯಕ್ಷಕನ್ಯೆಯೊಬ್ಬಳಿಂದ ಶಪಿಸಲ್ಪಟ್ಟ ಋಷಿ ಪುತ್ರ ಇಬ್ಬರೂ ಭೂಲೋಕದಲ್ಲಿ ಜನಿಸುವರು. ಪಾರ್ವತಿ ಭೂಮಿಯಲ್ಲಿ ಯಕ್ಷಕನ್ಯೆಯಿಂದ ಶಪಿಸಲ್ಪಟ್ಟ ವ್ಯಕ್ತಿಯ ಸಾಕುಮಗಳಾಗಿ ಆತನ ಪಟ್ಟದ ರಾಣಿಯಿಂದ ಬೆಳೆಯುವಳು. ಯುದ್ಧದಿಂದ ಹಿಂತಿರುಗಿದ ರಾಜ ತನ್ನ ಸಾಕುಮಗಳನ್ನೇ ಮದುವೆಯಾಗಲು ಹಠ ಹಿಡಿಯುವನು. ಆಕೆ ರಾಜ್ಯ ಪರಿತ್ಯಾಗ ಮಾಡಿ ಶ್ರೀಶೈಲಕ್ಕೆ ತೆರಳಿ ತಪೋ ಮಗ್ನಳಾಗಿ ಶಿವನನ್ನು ಹೊಂದುವಳು.

ನಾಗಾರ್ಜುನ; ಉಲೂಚಿ-ಅರ್ಜುನರು ಗಾಂಧರ್ವ ವಿವಾಹವಾಗುತ್ತಾರೆ. ಶಾಪದಿಂದಾಗಿ ಅರ್ಜುನ ಉಲೂಚಿಯನ್ನು ಮರೆಯುತ್ತಾನೆ. ನಾಗಾರ್ಜುನ ಇವರ ಪುತ್ರ. ಇವನಿಗೆ ಶಿರದಲ್ಲಿ ಶೃಂಗವಿರುತ್ತದೆ. ಪಾಂಡು ರಾಜನಿಗೆ ಸ್ವರ್ಗ ಪ್ರಾಪ್ತಿಯಾಗಲು ಶೃಂಗಶಿರದ ಬಾಲಕನ ಬಲಿ ಅನಿವಾರ್ಯವಾಗುತ್ತದೆ. ಇಂತಹ ಬಾಲಕನ ಹುಡುಕಾಟದಲ್ಲಿ ಅರ್ಜುನಿದ್ದಾಗ ನಾಗಾರ್ಜುನನ ಪರವಾಗಿ ಪಾರ್ವತಿ, ಅರ್ಜುನನ ಪರವಾಗಿ ಕೃಷ್ಣ ನಿಲ್ಲುತ್ತಾರೆ. ಅರ್ಜುನ ಸೋತು ಅಗ್ನಿ ಪ್ರದೇಶಕ್ಕೆ ಸಿದ್ಧನಾದಾಗ ನಾಗಾರ್ಜುನ ತಾನೇ ತಲೆ ಕತ್ತರಿಸಿಕೊಂಡು ಪಾಂಡುರಾಜನ ಸ್ವರ್ಗಾರೋಹಣಕ್ಕೆ ಕಾರಣನಾಗುತ್ತಾನೆ.

ಶ್ರೀ ರಾಮಾಂಜನೆಯ ಯುದ್ಧ; ಚಿತ್ರದಲ್ಲಿ ಭಕ್ತಿ ಹಾಗೂ ಶಕ್ತಿಯ ನಡುವಿನ ವ್ಯತ್ಯಾಸವನ್ನು ತಿಳಿಸುವ ಕಥಾತಿರುಳನ್ನು ಹೊಂದಿರುವ ಚಿತ್ರ ಚಂದ್ರಭಾನು ಮಹಾರಾಜ ಜಿಂಕೆಯೊಂದಕ್ಕೆ ಬಾಣ ಬಿಟ್ಟನೆಂಬ ಕಾರಣಕ್ಕೆ ಅವನನ್ನು ಶಿಕ್ಷಿಸಲು ರಾಮನಿಗೆ ಆದೇಶ ನೀಡುವಾಗ,

ಚಂದ್ರಭಾನು ಹನುಮಂತನಲ್ಲಿ ಶರಣಾಗುತ್ತಾನೆ. ರಾಮ ಹನುಮಂತರಿಗೆ ಘೋರ ಯುದ್ಧ ನಡೆಯುತ್ತದೆ.

ಮಹಾಸತಿ ಅನಸೂಯ ; ಅತ್ರಿ ಮುನಿಯ ಪತ್ನಿ ಅನಸೂಯ ಮಹಾಸಾಧ್ವಿ, ಪತಿವ್ರತೆ, ಇವಳನ್ನು ಪರೀಕ್ಷಿಸಲು ಲಕ್ಷ್ಮೀ, ಸರಸ್ವತಿ, ಪಾರ್ವತಿ ಮಾಡುವ ತಂತ್ರಗಳಿಂದಾಗಿ ಬ್ರಹ್ಮ, ವಿಷ್ಣು, ಮಹೇಶ್ವರರು ಪರೀಕ್ಷಿಸಲು ಬರುತ್ತಾರೆ. ಅನಸೂಯ ಅವರನ್ನೇ ಮಕ್ಕಳಾಗಿ ಪರಿವರ್ತಿಸಿಬಿಡುತ್ತಾಳೆ. ಇದು ದತ್ತಾತ್ರೇಯ ಅವತಾರದ ಕಥೆ.

ಸತಿ ಸಾವಿತ್ರಿ; ಸಾಳ್ವ ದೇಶದ ರಾಜಕುಮಾರ ಚಿತ್ತಾಶ್ವ ಅರಣ್ಯಕ್ಕೆ ಬಂದಾಗ ಮದ್ರದೇಶದ ರಾಜಕುಮಾರಿ ಸಾವಿತ್ರಿಯಲ್ಲಿ ಅನುರಕ್ತನಾಗಿ ವಿವಾಹವಾಗುತ್ತಾನೆ. ಸಾಳ್ವ ರಾಜ ಶತ್ರು ದಾಳಿಗೆ ಸಿಲುಕಿ ದೇಶ ಭ್ರಷ್ಟನಾಗುತ್ತಾನೆ. ಅಲ್ಪಾಯುಷಿಯಾದ ಸತ್ಯವಾನ ಸಾಯುತ್ತಾನೆ. ಸಾವಿತ್ರಿ ಪ್ರಾಣ ಒಯ್ಯಲು ಬಂದ ಯಮನ ಹಿಂದೆ ಹೋಗಿ ಪತಿಯ ಪ್ರಾಣವನ್ನು ಹಿಂದಕ್ಕೆ ಪಡೆದು ಬರುತ್ತಾಳೆ.

ಶ್ರೀ ಕನ್ನಿಕಾ ಪರಮೇಶ್ವರಿ ಕಥಾ; ಈ ಚಿತ್ರದಲ್ಲಿ ಶಾಪಾಗ್ರಸ್ತ ಗಂಧರ್ವನೊಬ್ಬ ರಾಜನಾಗಿ ಹುಟ್ಟುತ್ತಾನೆ. ಅವನ ಸ್ಪರ್ಶದ ಕಾರಣ ಪಾರ್ವತಿ ಮಾನವಳಾಗಿ ಜನಿಸುತ್ತಾಳೆ. ಅವಳನ್ನು ನೋಡಿ ಆತ ಕಾಮುಕನಾಗಿ ಆಕೆಯನ್ನು ಬಯಸುತ್ತಾನೆ. ಆಕೆ ವಿವಾಹವಾಗಲು ನಿರಾಕರಿಸಲು ರೊಚ್ಚಿಗೆದ್ದು ಧ್ವಂಷ ಮಾಡಲು ತೊಡಗುತ್ತಾನೆ. ರಾಜಕುಮಾರಿ ಆತನಿಂದ ತಪ್ಪಿಸಿಕೊಳ್ಳಲು ಅಗ್ನಿಗೆ ಆಹುತಿಯಾಗುತ್ತಾಳೆ. ಅವನೂ ಅಗ್ನಿಗೆ ಹಾರುತ್ತಾನೆ. ಆಕೆ ಕನ್ನಿಕಾ ಪರಮೇಶ್ವರಿಯಾಗಿ ನೆಲಸುತ್ತಾಳೆ.

ಪಾರ್ವತಿ ಕಲ್ಯಾಣ; ದಕ್ಷಬ್ರಹ್ಮ ಮರ್ಧನ, ಪಾರ್ವತಿಕಲ್ಯಾಣ, ತಾರಕಾಸುರ ಸಂಹಾರ, ಗಣೇಶನ ಜನನ ಮುಂತಾದ ಪೌರಾಣಿಕ ಅಂಶಗಳನ್ನು ಆಧರಿಸಿ ಈ ಚಿತ್ರದ ಕಥೆ ಹೆಣೆಯಲಾಗಿದೆ. ಶಿವನ ಪತ್ನಿ ಸತಿದೇವಿಗೆ ಆಹ್ವಾನ ನೀಡದೇ ತಂದೆ ದಕ್ಷಬ್ರಹ್ಮ ಯಜ್ಞವೊಂದನ್ನು ಕೈಗೊಂಡಿರುತ್ತಾನೆ. ಆಹ್ವಾನವಿಲ್ಲದೆ ಬಂದ ಮಗಳನ್ನು ಅವಮಾನಿಸುತ್ತಾನೆ.

ನೊಂದ ಸತಿದೇವಿ ಯಜ್ಞ ಕುಂಡದಲ್ಲೇ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಸಿಟ್ಟಾದ ಶಿವ ವೀರಭದ್ರನಿಂದ ದಕ್ಷ ಬ್ರಹ್ಮನನ್ನು ಸಂಹಾರ ಮಾಡಿಸುತ್ತಾನೆ. ಸತಿದೇವಿ ಪರ್ವತರಾಜನ ಮಗಳು ಪಾರ್ವತಿಯಾಗಿ ಜನಿಸಿ ಶಿವನನ್ನು ವಿವಾಹ ಮಾಡಿಕೊಳ್ಳುತ್ತಾಳೆ.

ಗಂಗೆಗೌರಿ; ಚಿತ್ರದಲ್ಲಿ ಶನಿದೇವರು ಪರಮೇಶ್ವರನ ಪಟ್ಟವನ್ನು ಹೊಂದುವ ಪ್ರಯತ್ನ ಮಾಡುತ್ತಾನೆ. ಶಿವನ ಸಾನಿಧ್ಯದಲ್ಲಿದ್ದ ಗಂಗೆ-ಗೌರಿಯರು ತಾವು ಮಾಡಿದ ಸಂವಾದದಿಂದಾಗಿ ಭೂಲೋಕದಲ್ಲಿ ಜನಿಸುತ್ತಾರೆ. ಪರಮೇಶ್ವರನೂ ಭೂಲೋಕಕ್ಕೆ ಬಂದು ಜನಗಳಲ್ಲಿ ದೈವಭಕ್ತಿ ಶ್ರದ್ಧೆ ಉಂಟು ಮಾಡುತ್ತಾನೆ.

ಶ್ರೀ ರೇಣುಕಾದೇವಿ ಮಹಾತ್ಮೆ; ಇದು ರೇಣುಕಾದೇವಿಯ ಮಹಿಮೆಯ ಕತೆ. ಸುದರ್ಶನನ ಅಹಂಕಾರವಿಳಿಸಲು ನಾರದ ಮಾಡಿದ ಉಪಾಯದಿಂದ ಅವನು ಭೂಲೋಕದಲ್ಲಿ ಕಾರ್ತವೀರ್ಯಾರ್ಜುನನಾಗಿ ಜನ್ಮ ತೆಳೆಯಬೇಕಾಗುತ್ತದೆ. ರಾಜಕುಮಾರಿ ರೇಣುಕಾದೇವಿಯು ಜಮದಗ್ನಿ ಮುನಿಯನ್ನು ಪ್ರೇಮಿಸಿ, ಆತನ ಕಠಿಣ ಪರೀಕ್ಷೆಗಳನ್ನೆಲ್ಲಾ ಎದುರಿಸಿ ಆ ಮುನಿಯ ಕೈಹಿಡಿಯುವಳು. ರಾವಣನನ್ನು ಗೆದ್ದ ಕಾರ್ತ ವೀರ್ಯಾರ್ಜುನ ಯಜ್ಞಯಾಗಾದಿಗಳನ್ನು ನಿಷೇಧಿಸಿ ಋಷಿ ಮುನಿಗಳಿಗೆ ಹಿಂಸೆ ನೀಡುವನು. ಜಮದಗ್ನಿ ಅವನನ್ನು ಎದುರಿಸಿ ಜಯಶಾಲಿಯಾಗುವನ್ನು. ಪರಶುರಾಮ ಜಮದಗ್ನಿ-ರೇಣುಕೆಯರ ಮಗನಾಗಿ ಜನಿಸುವನು. ಚಂಚಲ ಮನದ ಆರೋಪ ಹೊತ್ತ ತಾಯಿಯ ಶಿರವನ್ನೇ ಪರಶುರಾಮ ಛೇದಿಸಬೇಕಾಗಿ ಬಂದಾಗ, ಪಿತೃವಾಕ್ಯ ಪರಿಪಾಲನೆಮಾಡಿದ ಪರಶುರಾಮ ತಾಯಿ ಹಾಗೂ ಸೋದರರನ್ನು ಬದುಕಿಸಿಕೊಳ್ಳುವನು. ರೇಣುಕಾದೇವಿ ಎಲ್ಲಮ್ಮನಾಗಿ ಭಕ್ತರ ಕೋರಿಕೆ ಈಡೇರಿಸುವ ದೇವತೆಯಾಗುವಳು.

ಚಾಮುಂಡೇಶ್ವರಿ ಮಹಿಮೆ; ಚಿತ್ರದಲ್ಲಿ ಮಹಿಷಾಸುರನ ಅಟ್ಟಹಾಸವನ್ನು ತಡೆಯಲು ಆದಿಶಕ್ತಿಯ ನವರೂಪವನ್ನು ತಾಳಿ ಚಾಮುಂಡೇಶ್ವರಿಯು ಮಹಿಮೆಯನ್ನು ಸಾರುವ ಚಿತ್ರಣ. ಮಹಾಸತಿ ಅರುಂಧತಿಯಲ್ಲಿ ಪೌರಾಣಿಕ ಕಥೆಯಲ್ಲಿ ಬರುವ ಆದರ್ಶ ದಂಪತಿಗಳಾದ ವಶಿಷ್ಠ ಮತ್ತು ಅರುಂಧತಿಯರ ಕಥೆ ಅಸ್ಪೃಶ್ಯತೆಯನ್ನು ವಿರೋಧಿಸುವ ವಸ್ತು.

ರೇಣುಕಾ ಮಹಾತ್ಮೆ ಚಿತ್ರದಲ್ಲಿ ರೇಣುಕಾಸುರನ ಮಗಳಾಗಿ ಹುಟ್ಟಿದ ರೇಣುಕಾ. ನಾನಾ ಕಷ್ಟಗಳಿಗೆ ತುತ್ತಾಗಿ ಬೆಳೆಯುತ್ತಾಳೆ. ಜಮದಗ್ನಿಯಲ್ಲಿ ಅನುರಕ್ತಳಾಗಿ, ಅವರ ಅಣತಿಯಂತೆ ಹಸಿಮರಳಿನಿಂದ ಕೊಡ ಮಾಡಿ ಅದೇ ಕೊಡದಲ್ಲಿ ದೇವರ ಪೂಜೆಗೆ ನೀರನ್ನು ತಂದು ಅವರ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ ಜಮದಗ್ನಿಯೊಡನೆ ವಿವಾಹವಾಗುತ್ತಾಳೆ. ಮಹಾವಿಷ್ಣು, ರೇಣುಕೆಯ ಉದರದಲ್ಲಿ ಜನಿಸಿ ಪರಶುರಾಮನೆಂದು ಹೆಸರಾಗುತ್ತಾನೆ. ರೇಣುಕೇ ನೀರು ತರಲೆಂದು ಹೋದಾಗ ವಿಲಾಸದಲ್ಲಿ ಮಗ್ನರಾಗಿದ್ದ ಗಂಧರ್ವರನ್ನು ನೋಡುತ್ತ ಮೈಮರೆತು ಜಮದಗ್ನಿಯ ಶಾಪಕ್ಕೆ ಗುರಿಯಾಗುತ್ತಾಳೆ. ಪರಶುರಾಮನಿಂದ ತಲೆ ಕಡಿಸಿಕೊಂಡರೂ ಮರಳಿ ಜೀವದಾನ ಪಡೆಯುತ್ತಾಳೆ. ಕಾಮಧೇನುವಿಗಾಗಿ ಕಾರ್ತ್ಯವೀರ್ಯಾರ್ಜುನನು ಜಮದಗ್ನಿಯನ್ನು ಕೊಲ್ಲುತ್ತಾನೆ. ಆಗ ರೇಣುಕಾ ಮಗನನ್ನು ಪ್ರಚೋದಿಸಿ, ದುಷ್ಟರ ಧ್ವಂಸ ಮಾಡಿ ಸಜ್ಜನರನ್ನು ಉದ್ಧರಿಸುತ್ತಾಳೆ.

ಹೀಗೆ ಪೌರಾಣಿಕ ಚಿತ್ರಗಳ ಪಟ್ಟಿಯನ್ನೂ ಅವುಗಳ ಕಥಾ ಸಾರವನ್ನು ಬೆಳೆಸುತ್ತಾ ಹೋಗಬಹುದು ಆದರೆ ಇಲ್ಲಿ ಮಾದಿರಗಾಗಿ ಕೆಲವನ್ನಷ್ಟೇ ಉದಾಹರಿಸಲಾಗಿದೆ. ಕೆಲವು ಆಧುನಿಕ ಸಿನಿಮಾಗಳು ಕೂಡ ಪುರಾಣ ಪಾತ್ರಗಳ, ಸನ್ನಿವೇಶಗಳ ಹೆಸರುಗಳನ್ನು ಹೊಂದಿರುವುದನ್ನು ನೋಡಿದರೆ ಪುರಾಣಗಳು ನಮ್ಮ ಸಿನಿಮಾದ ಮೇಲೆ ಎಷ್ಟರ ಮಟ್ಟಿಗೆ ಪ್ರಭಾವ ಬೀರಿದೆ ಎಂಬುದು ಸ್ಪಷ್ಟವಾಗುತ್ತದೆ. ಕರ್ಣ, ದ್ರೋಣ, ಬ್ರಹ್ಮ-ವಿಷ್ಣು ಮಹೇಶ್ವರ, ತ್ರಿಮೂರ್ತಿ, ನಾರದವಿಜಯ, ರಾಮ-ಲಕ್ಷ್ಮಣ, ಕೃಷ್ಣ -ರುಕ್ಮಿಣಿ ಇತ್ಯಾದಿ ಹೆಸರುಗಳನ್ನು ಇಲ್ಲಿ ಗಮನಿಸಬಹುದಾಗಿದೆ.

ಪೌರಾಣಿಕ ಚಿತ್ರಗಳ ಜತೆಯಲ್ಲೇ ಭಕ್ತಿ ಪ್ರಧಾನ ಚಿತ್ರಗಳನ್ನು ನಾವು ಪ್ರಸ್ತಾಪಿಸಬೇಕಾಗುತ್ತದೆ. ಪುರಾಣಕ್ಕೂ ಭಕ್ತಿಗೂ ಒಂದು ರೀತಿಯ ಅವಿನಾಭಾವ ಸಂಬಂಧವಿದೆ. ಭಕ್ತಿಯ ಕೇಂದ್ರಗಳಾಗಿರುವ ದೈವ ದೇವರುಗಳೆಲ್ಲ ಒಂದು ರೀತಿಯಲ್ಲಿ ಪೌರಾಣಿಕ ಪಾತ್ರಗಳೇ ಆಗಿವೆ. ಎಂಬುವನ್ನು ಮರೆಯುವಂತಿಲ್ಲ. ಹಾಗಾಗಿ ಈ ದೈವ ದೇವರುಗಳ ಮಹಿಮೆಗಳನ್ನು ವರ್ಣಿಸುವ ಸಿನಿಮಾಗಳು ಒಂದೆಡೆ ಪೌರಾಣಿಕ ಸಿನಿಮಾಗಳೆನಿಸಿದರೆ, ಇನ್ನೊಂದೆಡೆ ಭಕ್ತಿ ಪ್ರಧಾನ ಸಿನಿಮಾಗಳೆನಿಸುತ್ತವೆ. ಇವುಗಳ ಜೊತೆಗೆ ನಮ್ಮ ನಾಡಿನ ಇತಿಹಾಸದಲ್ಲಿ ಕಂಡು ಬರುವ ಹಲವಾರು ಶ್ರೇಷ್ಠ ಭಕ್ತರ ಜೀವನವನ್ನಾಧರಿಸಿದ ಚಿತ್ರಗಳು ಭಕ್ತಿ ಪ್ರಧಾನ ಚಿತ್ರಗಳೆನಿಸುತ್ತವೆ.

[illegible]

ರಂಗಭೂಮಿಯ ನಂಟಿನೊಂದಿಗೆ ಬೆಳೆದು ಬಂದ ನಮ್ಮ ಸಿನಿಮಾ ರಂಗದಲ್ಲಿ ಪುರಾಣ ಇತಿಹಾಸದ ಕಥೆಗಳನಾಧರಿಸಿದ ಸಿನಿಮಾಗಳಂತೆ ಭಕ್ತಿ ಪ್ರಧಾನ ಚಿತ್ರಗಳು ನಿರ್ಮಾಣವಾದವು. ಭಕ್ತಿಯ ಪ್ರತಿಪಾದನೆಯೇ ಇದರ ಮುಖ್ಯವಸ್ತು. ದೇವತೆಗಳು ಭಕ್ತರನ್ನು ಪರೀಕ್ಷಿಸಲು ಹಲವು ಕಷ್ಟಗಳನ್ನು ಒಡ್ಡುವುದು, ಆ ಕಷ್ಟಗಳನ್ನು ಎದುರಿಸಿ ತಾನು ನಂಬಿದ ದೈವವೇ ದೊಡ್ಡದೆಂದು ಸಾರುವುದು, ತಮ್ಮ ಭಕ್ತಿಯನ್ನು ಪ್ರತಿಪಾದಿಸುವುದು. ಇಲ್ಲಿ ಮುಖ್ಯವಾಗಿರುತ್ತವೆ. ಭಕ್ತಿಪ್ರಧಾನ ಚಿತ್ರಗಳು ಸಾಹಿತ್ಯಕ್ಕೆ ಹೊಂದಿಕೊಂಡಂತೆ ಇವೆ. ಅಂದರೆ ಮಧ್ಯಕಾಲಿನ ಸಾಹಿತ್ಯವು ಭಕ್ತಿಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿತ್ತು. ವೈಷ್ಣವ ಧರ್ಮದ ಅನುಯಾಯಿಗಳಾದ ದಾಸರುಗಳು ಪುರಂದರದಾಸ, ಕನ್ನಕದಾಸ, ರಾಮದಾಸ ಹೀಗೆ ದಾಸರುಗಳ ಭಕ್ತಿಯನ್ನು ಬಿಂಬಿಸುವ ಚಿತ್ರಗಳು ಇದರಲ್ಲಿವೆ. ಹಾಗೆಯೇ, ಶೈವ ಪಂಥದ ಶಿವಭಕ್ತರಾದ ಅಕ್ಕಮಹಾದೇವಿ, ಬಸವಣ್ಣ ಮುಂತಾದವರ ಚಿತ್ರಗಳು ಇವೆ. ಇವುಗಳನ್ನು ಹೊರತು ಪಡಿಸಿಯೂ ಹಲವು ಚಿತ್ರಗಳು ಕನ್ನಡದಲ್ಲಿ ಸಿನಿಮಾಗಳಾಗಿರುವುದುಂಟು. ಮಹಾತ್ಮ ಕಬೀರ್, ಸಂತತುಕಾರಾಂ ಕನ್ನಡ ನಾಡಿನವರಲ್ಲದ ಇತರ ಭಕ್ತರ, ಸಂತರ ಜೀವನ ಕಥೆಗಳೂ ಚಿತ್ರವಾಗಿರುವುದನ್ನು ನಾವು ಕಾಣಬಹುದಾಗಿದೆ. ಇಷ್ಟೇ ಅಲ್ಲದೆ ಗ್ರಾಮದೇವತೆಗಳನ್ನು ಪೂಜಿಸುವ ಹಲವು ಚಿತ್ರಗಳು ಮೂಡಿ ಬಂದಿವೆ.

ಪುರಂದರದಾಸ ಚಿತ್ರವು ೧೯೩೭ರಲ್ಲಿ ಬಿ.ಚವ್ಹಾಣ್ ನಿರ್ದೇಶಿಸಿದ ಚಿತ್ರ ಇದು. ಮೊದಲ ಭಕ್ತಿ ಪ್ರಧಾನ ಚಿತ್ರವಾಗಿದೆ. ಈ ಚಿತ್ರದ ಕಥಾಸಾರಾಂಶ ಹೀಗಿದೆ. ನವಕೋಟಿ ನಾರಾಯಣನಾಗಿ, ಜಿಪುಣನಾಗಿದ್ದ ಶ್ರೀನಿವಾಸ ನಾಯಕನಿಗೆ ದೈವ ಪ್ರೇರಣೆಯುಂಟಾಗಿ ಸಕಲವನ್ನು ದಾನಮಾಡಿ, ಭಗವನ್ನಾಮ ಸಂಕೀರ್ತನೆಯಲ್ಲಿ ತೊಡಗುವ ಪ್ರಚಲಿತವಾದ ಕಥೆ.

ಭಕ್ತರಾಮದಾಸ ; ಮತ ಸಹಿಷ್ಣುತೆ, ಸರ್ವಧರ್ಮ ಸಮನ್ವಯದಂಥ ದೊಡ್ಡ ತತ್ವವನ್ನು ಸಾರುವ ಕಥೆ, ಕಬೀರನ ಶಿಷ್ಯನಾದ ರಾಮದಾಸನು ಭಕ್ತ. ಅವನನ್ನು ದೈವದ ಹೆಸರಿನಲ್ಲಿ ತಪ್ಪುದಾರಿಗೆಳೆಯುವ ಕುತಂತ್ರಿಗಳು. ನ್ಯಾಯ ನಿಷ್ಠಯುಳ್ಳ ಅರಸ ತಾನೇಷನು ರಾಮದಾಸನಿಗೆ ಗೆಲ್ಲು ಶಿಕ್ಷೆ ನೀಡುತ್ತಾನೆ.

ಹತ್ತಾರು ಘಟನಾವಳಿಗಳ ಮೂಲಕ ಅಂತಿಮವಾಗಿ ಕಬೀರರೇ ಬಂದು ರಾಮ ಮಹಿಮೆಯನು ಸಾರುತ್ತಾರೆ. ಕುತಂತ್ರಿಗಳು ಪಶ್ಚಾತ್ತಾಪ ಪಡುತ್ತಾರೆ. ನಂತರ ರಾಮದರ್ಶನ ವಾಗುತ್ತದೆ. ಇತ್ಯಾದಿಗಳನ್ನು ವಿವರಗಳನ್ನು ಇಲ್ಲಿ ಬಳಿಸಿಕೊಳ್ಳಲಾಗಿದೆ. ಮಂದಿರ-ಮಸೀದಿಗಳನ್ನು ಜೊತೆಯಾಗಿ ಕಟ್ಟುವ ಕಾರ್ಯವು ಚಿತ್ರದಲ್ಲಿ ನಡೆಯುತ್ತದೆ.

ಭಕ್ತಕನಕದಾಸ ; ಪಾಳೇಗಾರ ವೀರನಾಯಕ ಹಾಗು ಹುಚ್ಚಮ್ಮ ದಂಪತಿಗಳ ಪುತ್ರನಾಗಿ ಜನಿಸಿದ ತಿಮ್ಮಪ್ಪ ನಾಯಕ ಮಲ್ಲಿನಾಯಕನ ಪುತ್ರಿ ಲಚ್ಚಿಯನ್ನು ಪ್ರೀತಿಸುತ್ತಾನೆ. ಶ್ರೀನಿವಾಸ ಕನಸಿನಲ್ಲಿ ಕಾಣಿಸಿಕೊಂಡು ನೀಡಿದ ಅಪ್ಪಣೆಯಂತೆ ಭೂಮಿಯನ್ನು ಅಗೆದಾಗ ಶ್ರೀನಿವಾಸ ವಿಗ್ರಹ ಹಾಗೂ ಹೇರಳ ಚಿನ್ನ ದೊರೆತು ಮುಂದೆ ಕನಕನಾಯಕನಾಗುತ್ತಾನೆ. ಲಚ್ಚಿಯ ವಿಷಯದಲ್ಲಿ ನಡೆದ ಹೊಡೆದಾಟದಿಂದ ಬೇಸತ್ತ ಕನಕನಾಯಕ ದೇಶ ಸಂಚಾರ ಹೋಗುತ್ತಾನೆ. ವ್ಯಾಸರಾಯರಿಂದ ಅನುಗ್ರಹಿತನಾಗಿ ವಿಷ್ಣು ಭಕ್ತನಾಗಿ ಕನಕದಾಸನಾಗುತ್ತಾನೆ. ಉಡುಪಿಯಲ್ಲಿ ಕೃಷ್ಣನೇ ಹಿಂದಕ್ಕೆ ತಿರುಗಿ ನಿಂತು ಕನಕದಾಸನಿಗೆ ದರ್ಶನ ನೀಡುತ್ತಾನೆ. ನಂತರ ಅಪೂರ್ವಸಾಹಿತ್ಯ ಸೃಷ್ಟಿ ಕನಕ ದಾಸರಿಂದಾಗುತ್ತದೆ.

ಶ್ರೀ ಪುರಂದರ ದಾಸರು; ಶ್ರೀಮಂತ ಸೀನಪ್ಪನಾಯಕ ಬಿಡಿಗಾಸುಬಿಚ್ಚದ ಜಿಪುಣ. ಈತ ನವಕೋಟಿ ನಾರಾಯಣನೆಂದೇ ಪ್ರಖ್ಯಾತ. ವಿಷ್ಣು ಇವನನ್ನು ಬದಲಾವಣೆ ಮಾಡುತ್ತಾನೆ. ನಾಯಕ ನಗನಾಣ್ಯ ಬಡವರಿಗೆ ಹಂಚಿ ಭಗವನ್ನಾಮಸ್ಮರಣೆ ಮಾಡುತ್ತ ಪುರಂದರದಾಸನಾಗಿ ಸಾವಿರಾರು ಕೀರ್ತನೆಗಳನ್ನು ರಚಿಸುತ್ತಾನೆ.

ಭಕ್ತಕುಂಬಾರ; ಪಾಂಡುರಂಗನ ಅನನ್ಯ ಭಕ್ತ. ತನ್ನ ಕುಂಬಾರ ವೃತ್ತಿಯಲ್ಲಿ ವಿಠಲನನ್ನು ಕಾಣುತ್ತಾನೆ. ಸಾಹಿತ್ಯ ಸರಳೀಕರಿಸಿದ್ದಕ್ಕಾಗಿ ತ್ಯಾಗರಾಜರೂ ಪ್ರಶಂಸೆ ಮಾಡುತ್ತಾರೆ. ಒಮ್ಮೆ ಪಾಂಡುರಂಗನ ಧ್ಯಾನ ಮಾಡುತ್ತಾ ಮಣ್ಣು ತುಳಿಯುತ್ತಿದ್ದಾಗ ತನಗೆ ಅರಿವಿಲ್ಲದಂತೆ ಅಲ್ಲಿಗೆ ಬಂದ ತನ್ನ ಮಗನನ್ನು ತುಳಿಯುವುದರಿಂದ ಮಗು ಮಣ್ಣಿನೊಳಗೆ ಮಣ್ಣಾಗುವುದು. ಅನಿವಾರ್ಯವಾಗಿ ತನ್ನ ನಾದಿನಿಯನ್ನೇ ವಿವಾಹವಾಗಬೇಕಾಗುತ್ತದೆ.

ತನ್ನ ಪತ್ನಿಯರನ್ನು ಮುಟ್ಟುವುದಿಲ್ಲವೆಂದು ಪಾಂಡುರಂಗದ ಮೇಲೆ ಆಣೆ ಮಾಡುತ್ತಾನೆ. ಪತ್ನಿಯರು ಮುಟ್ಟಿದಾಗ ತನ್ನೆರಡು ಕೈಗಳನ್ನು ಕತ್ತರಿಸಿಕೊಳ್ಳುತ್ತಾನೆ. ಪಾಂಡುರಂಗನೇ ಮನೆಗೆ ಬಂದು ಗೋರನ ಸೇವೆ ಮಾಡುತ್ತಾನೆ. ಈ ಚಿತ್ರದಲ್ಲಿ ಭಕ್ತಿಯೆಂಬುದು ಅವನ ಕಾಯಕದಲ್ಲಿ ವ್ಯಕ್ತವಾಗುತ್ತದೆ. ಕುಂಬಾರಕಾಯಕ ಮಾಡುತ್ತಲೇ ಪಾಂಡುರಂಗನನ್ನು ಒಲಿಸಿಕೊಳ್ಳುತ್ತಾನೆ.

ಭಕ್ತ ಮಲ್ಲಿಕಾರ್ಜುನ; ಚಿತ್ರದಲ್ಲಿಯೂ ಕುಂಬಾರ ಕಾಯಕದ ಬಗ್ಗೆ ಮೂಡಿ ಬಂದಿದೆ. ದುಡಿಮೆಗಿಂತ ದೇವರಿಲ್ಲ ಎಂಬುದು ಕುಂಬಾರ ಮಲ್ಲಣ್ಣನ ವಾದ. ಆತನ ಹೆಂಡತಿ ಮೀನಾಕ್ಷಿ ಮಹಾ ದೈವಭಕ್ತೆ, ಪತಿಯನ್ನು ದೈವ ಭಕ್ತಿಗೆ ಒಳಪಡಿಸಬೇಕೆಂಬುದು ಅವಳ ಇರಾದೆ. ಆ ಊರಿನ ದೇವದಾಸಿ ಕಾಮಿನಿಗೆ ಮಲ್ಲಣ್ಣನ ಮೇಲೆ ಆಕರ್ಷಣೆ, ಆತನ ಸಂಗಕ್ಕಾಗಿ ಹಾತೊರೆಯುತ್ತಾಳೆ. ಅವಳ ಮೋಹಕ್ಕೆ ಬಲಿಯಾದ ಮಲ್ಲಣ್ಣನನ್ನು ಮೀನಾಕ್ಷಿ ತಿರಸ್ಕರಿಸುತ್ತಾಳೆ. ನಂತರ ಮನಪರಿವರ್ತನೆಯಾಗಿನೊಂದ ಮಲ್ಲಣ್ಣ ಇನ್ನು ಮುಂದೆ ಯಾವ ಹೆಣ್ಣನ್ನು ಮುಟ್ಟುವುದಿರಲಿ, ಮನಸ್ಸಿನಲ್ಲೂ ಸ್ಮರಿಸುವುದಿಲ್ಲ ಎಂದು ಪ್ರಮಾಣ ಮಾಡುತ್ತಾನೆ. ಇದನ್ನರಿತ ಶಿವ ಪಾರ್ವತಿಯರು ಆತನ ಪ್ರಮಾಣವನ್ನು ಮುರಿಯಲು ಪ್ರಯತ್ನಿಸುತ್ತಾರೆ.

ಭಕ್ತಚೇತ; ಚಪ್ಪಲಿ ಮಾಡುವ ಕಾಯಕದಲ್ಲಿದ್ದ ಚೇತ ಮನೆ ಮಂದಿಯೆಲ್ಲ ಉಪವಾಸವಿದ್ದರೂ ಬರಿಗಾಲಿನಲ್ಲಿ ನಡೆಯುವ ಬ್ರಾಹ್ಮಣನಿಗೆ ಚಪ್ಪಲಿ ದಾನ ಮಾಡುತ್ತಾನೆ. ಗುರುವಿನಿಂದ ಉಪದೇಶ ಪಡೆದು ನಾರಾಯಣನ ಪೂಜೆ ಮಾಡಲಾರಂಭಿಸುತ್ತಾನೆ.

ಪರಮ ಪಂಡಿತನಾಗುತ್ತಾನೆ. ನಂತರ ಅಸ್ಪೃಶ್ಯವೆಂಬ ಕಾರಣಕ್ಕೆ ರಾಜ ಗುರುವಿನಿಂದ ನಾನಾತೊಂದರೆಗೆ ಸಿಲುಕಿ ಕಡೆಗೆ ವಿಷ್ಣುವಿನ ದಯೆಯಿಂದ ಪಾರಾಗಿ ಮಹಾಮಹಿಮನೆನಿಸುತ್ತಾನೆ.

ಬೇಡರ ಕಣ್ಣಪ್ಪ ; ಗಂಧರ್ವರಾದ ಮಣಿಮಂತ ಹಾಗೂ ಆತನ ಪತ್ನಿ ಶಾಪಗ್ರಸ್ತರಾಗಿ ಬೇಡ ಕುಟುಂಬದಲ್ಲಿ ದಿಣ್ಣ, ನೀಲರಾಗಿ ಜನಿಸುತ್ತಾರೆ. ದಂಪತಿಗಳಾದ ಇವರು ದೇಗುಲವೊಂದರ ಬಳಿ ಆಶ್ರಯ ಪಡೆದಿದ್ದಾಗ ದೇವರ ಆಭರಣಗಳನ್ನು ಕದ್ದರೆಂಬ ಆರೋಪವನ್ನು ದೇಗುಲದ ಅರ್ಚಕ ಕೈಲಾಸ ಶಾಸ್ತ್ರಿ ಮಾಡುತ್ತಾನೆ. ಶಿವನ ಪೂಜೆ ಮಾಡುವ ಅವಕಾಶವನ್ನು ಶಾಸ್ತ್ರಿಯ ಪುತ್ರಕಾಶಿ

ಮಾಡಿಕೊಡುತ್ತಾನಲ್ಲದೆ, ತನ್ನ ತಂದೆಯೇ ಆಭರಣಗಳನ್ನು ಕದ್ದ ಎಂಬುದನ್ನು ಹೇಳುತ್ತಾನೆ. ದಿಣ್ಣನಪೂಜೆಗೆ ಮೆಚ್ಚಿದ ಶಿವ ಅವನನ್ನು ನಾನಾ ಪರೀಕ್ಷೆಗಳಿಗೆ ಒಡ್ಡುತ್ತಾನೆ. ಶಿವಲಿಂಗದ ಎರಡೂ ಕಣ್ಣುಗಳಿಂದ ರಕ್ತ ಸುರಿದಾಗ ದಿಣ್ಣ ತನ್ನ ಕಣ್ಣುಗಳನ್ನೇ ಕಿತ್ತು ಅರ್ಪಿಸುತ್ತಾನೆ. ಶಿವ ಪ್ರತ್ಯಕ್ಷವಾಗಿ ದಿಣ್ಣನ ಕಷ್ಟಗಳನ್ನು ಪರಿಹರಿಸುತ್ತಾನೆ. ಮುಂದೆ ದಿಣ್ಣ 'ಬೇಡರ ಕಣ್ಣಪ್ಪನೆಂದೇ' ಪ್ರಖ್ಯಾತನಾಗುತ್ತಾನೆ.

ಹರಿಭಕ್ತ; ದೈವ ಭಕ್ತ ದಂಪತಿಗಳಿಗೆ ಜನಿಸಿದ ಪುಂಡರೀಕ ಅನಾಚಾರಿ, ದುಷ್ಟ ಬುದ್ಧಿಯವನು, ತಂದೆ-ತಾಯಿ, ಹೆಂಡತಿ, ಸ್ನೇಹಿತ ಎಲ್ಲವನ್ನೂ ದೂರ ಮಾಡಿ ವೇಶ್ಯೆಯೊಬ್ಬಳ ಸಹವಾಸದಿಂದ ಸರ್ವಸ್ವವನ್ನೂ ಕಳೆದುಕೊಳ್ಳುತ್ತಾನೆ. ಕಡೆಗೆ ಕುಕ್ಕುಟ ಮುನಿಯ ಶಾಪದಿಂದ ಕಾಲು ಕಳೆದುಕೊಂಡು, ಬುದ್ಧಿ ಕಲಿತು ಹರಿಯ ಪರಮಭಕ್ತನಾಗುವ ಕಥೆ.

ಓಹಿಲೇಶ್ವರ ;ರಾಜ ಪುತ್ರ ಸೋಮನಾಥ ಸುಖಭೋಗಗಳನ್ನು ಬಿಟ್ಟು ಕುಷ್ಟ ರೋಗಿಗಳ ಸೇವೆಗಯ್ಯುತ್ತಾ ಶಿವನ ಪೂಜೆಯಲ್ಲಿ ನಿರತನಾಗಿ ಓಹಿಲನೆಂದು ಪ್ರಖ್ಯಾತನಾಗುತ್ತಾನೆ. ಆಕಸ್ಮಿಕದಲ್ಲಿ ಪ್ರೀತಿ ಪಾತ್ರಳಾದ ಗೌರಿ ಸತ್ತಾಗ ಶಿವನನ್ನು ಪ್ರಾರ್ಥಿಸಿ ಅವಳಿಗೆ ಮತ್ತೆ ಜೀವ ತರಿಸುತ್ತಾನೆ.

ಪ್ರಭುಲಿಂಗಲೀಲೆ; ಕೈಲಾಸದಲ್ಲಿ ಶಿವಪಾರ್ವತಿಯರ ಪಂಥದಿಂದಾಗಿ ಪಾರ್ವತಿಯ ತಾಮಸ ಕಳೆಯಾದ ಮಾಯೆಯು ಭೂಲೋಕದಲ್ಲಿ ಜನಿಸುವಳು. ವಿರಕ್ತನಾಗಿ ಬೆಳೆದ ಅಲ್ಲಮನನ್ನು ಒಲಿಸಿಕೊಳ್ಳಲು ಶತಪ್ರಯತ್ನಮಾಡಿ ಅಲ್ಲಮನ ದೇಹಕಾಂತಿಯಿಂದ ಪ್ರಜ್ವಲಿಸುವ ಅಗ್ನಿಯಲ್ಲಿ ಭಸ್ಮವಾಗುತ್ತಾಳೆ. ಅಕ್ಕಮಹಾದೇವಿ, ಬಸವಣ್ಣ, ಸಿದ್ಧರಾಮಯ್ಯ ಮುಂತಾದವರ ಕತೆ ಬರುತ್ತದೆ. ಧರ್ಮವಿಜಯ ವಿಜಯ ಧರ್ಮದೇವತೆ ಅನ್ನಪೂರ್ಣ ದೇವಿಯ ಮಗ. ಈತ ಧರ್ಮಪುರಿ ರಾಜ್ಯದಲ್ಲಿರುತ್ತಾನೆ. ಅರ್ಥವಿಲ್ಲದ ಆಚರಣೆಗಳ ಬಗ್ಗೆ ಈತನ ವಿರೋಧ. ವಿಜಯನನ್ನು ದೇಶದ ರಾಜ ಧರ್ಮಭ್ರಷ್ಟ ಎಂದು ಸಾರಿ ದೇಶದಿಂದ ಹೊರಹಾಕುತ್ತಾನೆ. ವಿಜಯ ಮನೆಬಿಟ್ಟು ಹೋಗುತ್ತಾನೆ. ನಾನಾ ತೊಂದರೆಗಳನ್ನು ಅನುಭವಿಸಿದ ನಂತರ ಸತ್ಯದ ಅರಿವಾಗುತ್ತದೆ. ಧರ್ಮ ಅಮರವಾಗುತ್ತದೆ.

ಶಿವಲಿಂಗಸಾಕ್ಷಿ ;ಕೈಲಾಸದ ರುದ್ರ ಕನ್ಯೆ ಹಾಗೂ ಅವಳ ಪ್ರಿಯಕರ ಶಿವನಿಂದ ಶಾಪ ಪಡೆದು ಭೂಲೋಕದಲ್ಲಿ ಜನಿಸುವರು. ರುದ್ರ ಕನ್ಯೆ ದೇವದಾಸಿಯ ಮಗಳಾಗಿ ಬೆಳೆದರೆ, ಅವಳ ಪ್ರಿಯಕರ ಪೂಜಾರಿಯ ಮಗನಾಗಿ ಬೆಳೆಯುವನು. ಕಾಲಾಂತರದಲ್ಲಿ ಆಕೆಯ ಸೌಂದರ್ಯಕ್ಕೆ ಮರುಳಾದ ಊರಿನ ಶೆಟ್ಟಿಯ ಹಿಂಸೆಗೆ ಆಕೆ ಜಗ್ಗದೆ, ತನ್ನ ಪ್ರಿಯಕರನನ್ನು ಸೇರಲು ಪ್ರಯತ್ನಿಸುತ್ತಾಳೆ. ಈ ಮಧ್ಯೆ ಶೆಟ್ಟಿಯನ್ನು ಭೂತವೆಂದು ಕೊಲ್ಲುತ್ತಾನೆ. ಆ ಕೊಲೆಯ ಆಪಾದನೆ ಪ್ರಿಯಕರನ ಮೇಲೆ ಬರುತ್ತದೆ. ಕಡೆಗೆ ರುದ್ರ ಕನ್ಯೆಯ ಭಕ್ತಿಗೆ ಶಿವನೇ ಸಾಕ್ಷಿ ಹೇಳುತ್ತಾನೆ.

ಕೈವಾರ ಮಹಾತ್ಮೆ; ಕೋಲಾರ ಜಿಲ್ಲೆಯ ಕೈವಾರದಲ್ಲಿ ಜನಿಸಿದ ನಾರಾಯಣಪ್ಪ ಎಂಬ ವಿಷ್ಣು ಭಕ್ತನ ಕುರಿತ ಕತೆ. ದಾಸ ಸಾಹಿತ್ಯಕಾರರೂ, ತತ್ವಜ್ಞಾನಿಯೂ ಹಾಗೂ ಕಾಲಜ್ಞಾನಿಯೂ ಆದ ನಾರಾಯಣಪ್ಪನ ಮಹಿಮೆ ಕಥಾ ವಸ್ತು.

ಸ್ವರ್ಣಗೌರಿ ; ಮಾಲಿನಿಯ ನೃತ್ಯಕ್ಕೆ ಕಾಳಿಂಗ ಶಿವನ ಸನ್ನಿಧಿಯಲ್ಲಿ ಹಾಡುತ್ತಾನೆ. ಮಾಲಿನ ಕಾಳಿಂಗನ ಸ್ನೇಹ ಬಯಸಿದಾಗ ಅವನು ನಿರಾಕರಿಸುತ್ತಾನೆ. ಶಿವ-ಪಾರ್ವತಿ ಪಗಡೆಯಾಡಿ ಶಿವ ಸೋತಿದ್ದನ್ನು ಶಿವನ ಕೊರಳಿನಲ್ಲಿದ್ದ ಕಾಳಿಂಗ ನೋಡಿ ನಂದೀಶ್ವರನಿಗೆ ತಿಳಿಸಿದ್ದನ್ನು ಮಾಲಿನಿ ಕದ್ದು ಕೇಳುತ್ತಾಳೆ. ಅವಳು ಈ ವಿಷಯವನ್ನು ಜಗಜ್ಜಾಹೀರು ಮಾಡಿದಾಗ ಕಾಳಿಂಗನ ಮೇಲೆ ಶಿವನಿಗೆ ಅನುಮಾನಬಂದು ಭೂಲೋಕದಲ್ಲಿ ಜನಿಸಲು ಶಾಪ ನೀಡುತ್ತಾನೆ. ಭೂಲೋಕದಲ್ಲಿ ಮಣಿಪುರ ಅರಸನ ಮಗ ಚಂದ್ರಶೇಖರನಾಗಿ ಜನಿಸಿ, ಶಂಭುರಾಜನ ಪುತ್ರಿ, ಶಿವಭಕ್ತೆ ಗೌರಿಯನ್ನು ವಿವಾಹವಾಗುತ್ತಾನೆ. ವಿವಾಹಾವಾದ ನಂತರ ಮಾಲಿನಿಯ ಕುತಂತ್ರದಿಂದ ಗೌರಿ ಕಳಂಕಿನ ಪಟ್ಟ ಹೊರಬೇಕಾಗುತ್ತದೆ. ಗೌರಿ ತನ್ನ ಪಾತಿವ್ರತ್ಯ ಬಲದಿಂದ ಕಷ್ಟಗಳನ್ನೆಲ್ಲಾ ಎದುರಿಸುತ್ತಾಳೆ.

ನವಕೋಟಿ ನಾರಾಯಣ ;ಶ್ರೀನಿವಾಸ ನಾಯಕನೆಂಬ ಶ್ರೀಮಂತ ಅತಿ ಜಿಪುಣ. ಇವನಲ್ಲಿ ಭಗವಂತ ಮನಃ ಪರಿವರ್ತನೆ ಮಾಡುವನು ಹಣ ಸಂಪತ್ತನ್ನೆಲ್ಲ ದಾನಮಾಡಿ ಹರಿನಾಮ ಸ್ಮರಣೆ ಮಾಡುತ್ತಾ ದೇಶ ಸಂಚರಿಸಿದ ಈತ ಪುರಂದರ ದಾಸನಾದ. ಸಾವಿರಾರು ಕೀರ್ತನೆಗಳನ್ನು ರಚಿಸಿ, ವಿಠಲನ ಧ್ಯಾನ ಮಾಡುತ್ತಾ ಕೊನೆಗೆ ದೇವರಲ್ಲಿ ಲೀನವಾಗುತ್ತಾನೆ.

ಶಿವರಾತ್ರಿ, ಮಾಹಾತ್ಮೆ; ರಾಜನ ಮಗ ದುಶ್ಚಟಗಳ ದಾಸ. ಅಪ್ಪ ಅಮ್ಮ ಶಿವಭಕ್ತರು ಮಗನಾಸ್ತಿಕ, ಈನಾಸ್ತಿಕನಿಗೆ ಮದುವೆ ಮಾಡುತ್ತಾರೆ. ಅವಳು ಪತಿವ್ರತೆ ಹಾಗೂ ಮಹಾಶಿವಭಕ್ತೆ. ರಾಜಕುಮಾರ ತಂದೆತಾಯಿಯರನ್ನು ಸೆರೆಯಲ್ಲಿಟ್ಟು. ಹೆಂಡತಿಯನ್ನು ಕಾಡಿಗಟ್ಟಿ ನರ್ತಕಿಯ ಹಿಂದೆ ಬಿದ್ದಿರುತ್ತಾನೆ. ಮೋಹದ ಪೊರೆ ಕಳಚುವ ಹೊತ್ತಿಗೆ ಕುರುಡನಾಗಿರುತ್ತಾನೆ. ಮಹಾ ಸಾಧ್ವಿಯಾದ ಪತ್ನಿ ಶಿವನನ್ನು ಆರಾಧಿಸಿ ಒಲಿಸಿಕೊಳ್ಳುತ್ತಾಳೆ. ಗಂಡನಿಗೆ ಮರಳಿ ದೃಷ್ಟಿ ಬರುತ್ತದೆ ಕೊನೆಗೆ ಸುಖಾಂತವಾಗುತ್ತದೆ.

ಶಿವಗಂಗೆ ಮಹಾತ್ಮೆ ;ಧರ್ಮಪಾಲನೆಂಬ ರಾಜನನ್ನು ಸದ್ಗುಣನೆಂಬ ಸೇನಾಧಿಪತಿ ನಾನಾ ಹಿಂಸೆಗೆ ಗುರುಪಡಿಸುವನು. ರಾಣಿ ಹಾಗೂ ಚಿಕ್ಕಮಗುವನ್ನು ದೇಶಭ್ರಷ್ಟರನ್ನಾಗಿ ಮಾಡುವನು. ರಾಜ ಮತಿಹೀನನಾದಾಗ ತನ್ನ ಅನುಕೂಲಕ್ಕೆ ತಕ್ಕಂತೆ ಮೋಹಿನಿ ಎಂಬುವಳನ್ನು ತಂದು ರಾಜನಿಗೆ ವಿವಾಹಮಾಡಿದ. ಸೇನಾಧಿಪತಿಯ ಮಗ ದುರ್ಜಯ ಸಹ ಹಲವು ರೀತಿಯಲ್ಲಿ ಮೊಸ ಮಾಡುತ್ತಾನೆ. ಕಾಡು ಪಾಲಾಗಿದ್ದ ರಾಣಿಯು ತನ್ನ ಮಗ ಅಶೋಕನನ್ನು ಬೆಳೆಸುತ್ತಾಳೆ. ಅಶೋಕ ಬೆಳೆದು ದೊಡ್ಡವನಾಗುತ್ತಾನೆ. ಶಿವಗಂಗಾಗ ಕ್ಷೇತ್ರದ ಮಹಿಮೆಯಿಂದ ಅಶೋಕ ತನ್ನ ರಾಜ್ಯವನ್ನು ಮರಳಿ ಪಡೆದು, ನೆರೆಯಲ್ಲಿದ್ದ ತಂದೆಯನ್ನು ರಕ್ಷಿಸುತ್ತಾನೆ.

ಪಾಪಪುಣ್ಯ ; ಶಿವ ಮಾರುವೇಷದಲ್ಲಿ ಪಾರ್ವತಿ ಮತ್ತು ನಂದಿನಿಯರನ್ನು ಶ್ರೀಶೈಲ ಕ್ಷೇತ್ರಕ್ಕೆ ಕರೆದೊಯ್ಯುತ್ತಾನೆ. ಶಿವ ಪಾತಾಳಗಂಗೆಯಲ್ಲಿ ಮುಳುಗುತ್ತಾನೆ. ಶಿವನನ್ನು ರಕ್ಷಿಸಲು ಪಾರ್ವತಿಯು ಆರ್ತನಾದ ಮಾಡುತ್ತಾಳೆ. ರಕ್ಷಣೆಗೆ ಬಂದವರನ್ನು ಕುರಿತು ಪಾರ್ವತಿ, ಚಂದನ ಧರಿಸಿದವರಿಂದ ಮಾತ್ರ ಶಿವನನ್ನು ಉಳಿಸಲು ಸಾಧ್ಯವೆಂದೂ, ಪಾಪ-ಪುಣ್ಯಗಳನ್ನರಿತವರಿಗೆ ಮಾತ್ರ ಚಂದನ ಧಾರಣೆಯಿಂದ ಹಾನಿಯಿಲ್ಲವೆಂದೂ, ಅರಿಯದವರು ಧರಿಸಿದರೆ ಸಾವು ನಿಶ್ಚಿತವೆಂದೂ ಹೇಳುತ್ತಾಳೆ. ಈ ನೆಪದಲ್ಲಿ ಸಮಾಜದಲ್ಲಿ ಮುಖವಾಡಧಾರಿಗಳನ್ನನೇಕರನ್ನು ಬಯಲಿಗೆಳೆಯಲಾಗಿದೆ. ಮಾರು ವೇಷದಲ್ಲಿದ್ದ ದೇವದಾಸಿ ಕಮಲಾಸಾನಿ ಚಂದನ ಧರಿಸಿ ಶಿವನನ್ನು ರಕ್ಷಿಸುವ ಕಥೆ.

ಭಕ್ತ ಸಿರಿಯಾಳ; ಸಿರಿಯಾಳನೆಂಬ ಮಹಾನ್ ಶಿವಭಕ್ತ ಅವನ ಭಕ್ತಿಯ ಪರಾಕಾಷ್ಠತೆಯನ್ನು ಪರೀಕ್ಷಿಸಲು ಮಾರುವೇಷದಲ್ಲಿ ಬಂದು ಮಾನವ ಮಾಂಸದ ವಿಚಿತ್ರ ಭೋಜನ ಕೇಳುತ್ತಾನೆ. ಸಿರಿಯಾಳ ಮತ್ತು ಆತನ ಮಡದಿಯ ಮಾಂಸಗಳು ಒಂದೊಂದು ಕಾರಣಕ್ಕೆ ತ್ಯಾಜ್ಯವೆಂದು ಅವರ ಮಗನ ಮಾಂಸ ಕೋರುತ್ತಾನೆ. ಮಗನನ್ನು ಕೊಂದು ಅವನ ಮಾಂಸದ ಅಡುಗೆ ಮಾಡಿ ಬಡಿಸುತ್ತಾರೆ. ಒಲಿದ ಶಿವ ಮಗನನ್ನು ಮತ್ತೆ ಜೀವಂತ ಕರುಣಿಸುತ್ತಾನೆ.

ಶ್ರೀ ರಾಘ್ರವೇಂದ್ರ ವೈಭವ ;ಮಂತ್ರಾಲಯದ ರಾಘವೇಂದ್ರರ ಜೀವನ ಚಿತ್ರಣ ಹಾಗೂ ಅವರು ಮಠ ಸ್ಥಾಪನೆ ಮಾಡಿ ಜನರಿಗೆ ಉಪದೇಶ ಮಾಡಿದ ಹಾಗೂ ಕೆಲವು ಪವಾಡದಂಥ ಪ್ರಸಂಗಗಳು ಸೇರಿದಂತೆ ಚಿತ್ರಿಸಲಾದ ಭಕ್ತಿ ಪ್ರಧಾನ‌ಕಥಾ ಭಾಗ.

ಭಕ್ತಿ ಪ್ರಧಾನ ಚಿತ್ರಗಳಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಪವಾಡ ಪುರುಷ ಕಥೆಗಳು. ಇವುಗಳಲ್ಲಿ ಅವರು ಮಾಡಿರುವ ಪವಾಡಗಳನ್ನು ತೋರಿಸುವುದರ ಮೂಲಕ ಭಕ್ತಿಯನ್ನು ಬಿಂಬಿಸುವುದು. ಇಂತಹ ಚಿತ್ರಗಳಿಗೆ ಉದಾಹರಣೆ ಗುರು ಸಾರ್ವಭೌಮ, ಶ್ರೀ ರಾಘವೇಂದ್ರ ಕರುಣೆ, ಶ್ರೀ ಎಡೆಯೂರು ಸಿದ್ದಲಿಂಗೇಶ್ವರ ಮಹಾತ್ಮೆ, ಶ್ರೀ ಸಿದ್ಧಾರೂಢ ಮಹಾತ್ಮೆ, ಶ್ರೀಕ್ಷೇತ್ರ ಕೈವಾರ ತಾತಯ್ಯ ಮುಂತಾದ ಚಿತ್ರಗಳನ್ನು ಕಾಣಬಹುದು. ಒಟ್ಟಾರೆಯಾಗಿ ಹೇಳ ಬೇಕೆಂದರೆ ಪ್ರಾರಂಭಘಟ್ಟದಿಂದ ಹಿಡಿದು ಇಲ್ಲಿಯವರೆಗೂ ಸುಮಾರು ೫೦ಕ್ಕೂ ಹೆಚ್ಚು ಚಿತ್ರಗಳು ತೆರೆಕಂಡಿರುವುದನ್ನು ಕಾಣಬಹುದಾಗಿದೆ.

ಹೀಗೆ ಕನ್ನಡ ಸಿನಿಮಾಗಳಲ್ಲಿ ಭಕ್ತಿಗೆ ವಿಶಿಷ್ಟ ಸ್ಥಾನವಿದೆ. ಒಂದಾದರೂ ಭಕ್ತಿಯ ದೃಶ್ಯವಿಲ್ಲದ ಸಿನಿಮಾಗಳು ನಮ್ಮಲ್ಲಿ ವಿರಳವೆಂದೇ ಹೇಳಬೇಕು. ನಮ್ಮ ಬಹುಪಾಲು ಸಿನಿಮಾಗಳಲ್ಲಿ ಕಥಾರಂಭಕ್ಕೆ ಮುನ್ನ ದೇವತಾಸ್ತುತಿಯಿರುತ್ತದೆ. ಅಷ್ಟೇಯಾಕೆ ಚಿತ್ರ ನಿರ್ಮಾಣದ ಪ್ರಾರಂಬಿಕ ಹಂತವಾದ ಮುಹೂರ್ತದ ಸಂದರ್ಭದಲ್ಲೂ ಪೂಜಾವಿಧಿಗಳಿರುತ್ತವೆ. ಈ ರೀತಿ ನಮ್ಮ ಸಿನಿಮಾಗಳ ಒಳಗೂ ಹೊರಗೂ ಭಕ್ತಿಗೆ ಸ್ಥಾನ ಇದ್ದೇ ಇದೆ. ಕೆಲವು ಸಿನಿಮಾಗಳಲ್ಲಂತೂ ಈಗಾಗಲೇ ಗಮನಿಸಿದಂತೆ ಭಕ್ತಿಯೇ ಪ್ರಧಾನವಾಗಿರುತ್ತದೆ.

೪.೪ ಇತಿಹಾಸ ಮತ್ತು ದೇಶಭಕ್ತಿ

ನಮ್ಮ ನಾಡಿನ ಇತಿಹಾಸವನ್ನು ಕೂಡಾ ನಾವು ದೇಸೀ ಸಂಸ್ಕೃತಿಯ ಭಾಗವಾಗಿ ಪರಿಗಣಿಸುತ್ತೇವೆ. ರಾಜ್ಯ ಅಥವಾ ದೇಶವನ್ನಾಳಿದ ರಾಜ-ಮಹಾರಾಜರುಗಳ ಕಥೆಗಳಿಂದ ಹಿಡಿದು, ಸ್ವಾತಂತ್ರ್ಯ ಹೋರಾಟದ ಕಥೆಗಳ ವರೆಗಿನ ಐತಿಹಾಸಿಕ ಸಂಗತಿಗಳು ಕನ್ನಡ ಸಿನಿಮಾಗಳಿಗೆ ವಸ್ತುಗಳಾಗಿವೆ. ಇತಿಹಾಸ ಪುರಷರ ಶೌರ್ಯ, ಪರಾಕ್ರಮಗಳನ್ನು ದೃಶ್ಯಮಾಧ್ಯಮದಲ್ಲಿ ಹಿಡಿದಿಡುವ ಅಂಥ ಕೆಲವು ಚಿತ್ರಗಳು ದೇಶಪ್ರೇಮ ಹಾಗೂ ನಾಡು - ನುಡಿಯ ಮೇಲಿನ ಅಭಿಮಾನವನ್ನು ಬಿಂಬಿಸುವ ಆಶಯವನ್ನಿರಿಸಿಕೊಂಡಿವೆ. ಉದಾಹರಣೆಗೆ ಜಗಜ್ಯೋತಿ ಬಸವೇಶ್ವರ, ರಣಧೀರ ಕಂಠೀರವ, ಕಿತ್ತೂರು ಚೆನ್ನಮ್ಮ, ವೀರ ಸಂಕಲ್ಪ, ಸರ್ವಜ್ಞ ಮೂರ್ತಿ, ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ, ಮಾಡಿ ಮಡಿದವರು, ಇಮ್ಮಡಿ ಪುಲಿಕೇಶಿ, ಮಯೂರ, ಕಾಕನಕೋಟೆ, ವೀರಸಿಂಧೂರ ಲಕ್ಷ್ಮಣ, ಹೊಯ್ಸಳ, ಹುಲಿಯ ಹಾಲಿನ ಮೇವು, ಹಾಸ್ಯರತ್ನ ರಾಮಕೃಷ್ಣ, ಶಿವಯೋಗಿ ಅಕ್ಕಮಹಾದೇವಿ ಇತ್ತೀಚಿಗೆ ತೆರೆಕಂಡ ಗಂಡುಗಲಿ ಕುಮಾರರಾಮ ಹೀಗೆ ಬೆರಳೆಣಿಕೆಯ ಐತಿಹಾಸಿಕ ಚಿತ್ರಗಳಷ್ಟೇ ಕನ್ನಡದಲ್ಲಿ ಈ ಚಿತ್ರಗಳೆಲ್ಲವೂ ನಮ್ಮ ನಾಡಿನ ಇತಿಹಾಸವನ್ನು ಬಂದಿವೆ. ಕಥೆಯಾಗಿಸಿಕೊಂಡು ನಿರ್ಮಾಣವಾದ ಚಿತ್ರಗಳಾಗಿವೆ.

೧೯೫೯ರಲ್ಲಿ ಟಿ.ವಿ.ಸಿಂಗ್‌ಠಾಕೂರ್ ನಿರ್ದೇಶನದ **ಜಗಜ್ಯೋತಿ ಬಸವೇಶ್ವರ** ಇತಿಹಾಸ ಕಥಾವಸ್ತುವನ್ನುಳ್ಳ ಮೊದಲ ಚಿತ್ರ. ಈ ಚಿತ್ರದಲ್ಲಿ ಬಸವೇಶ್ವರನ ಬಾಲ್ಯದಿಂದ ಹಿಡಿದು ಬಿಜ್ಜಳನ ಬಳಿ ಮಹಾಮಂತ್ರಿಯಾಗಿ ಶಿವಶವಣರ ಸೇವೆ ಮಾಡಿ ಮೇಲು-ಕೀಳು ಎನ್ನದೆ ಎಲ್ಲಾ ಜಾತಿಗಳನ್ನು ಒಂದುಗೂಡಿಸುವವರೆಗೆ ಕಥಾಹಂದರ ಹರಡಿದೆ.

ರಣಧೀರ ಕಂಠೀರವ ಚಿತ್ರದಲ್ಲಿ ದಳವಾಯಿ ವಿಕ್ರಮರಾಯ ಶಕ್ತಿಶಾಲಿ. ಇವನ ಕುತಂತ್ರದಿಂದ ಇಮ್ಮಡಿ ರಾಜ ಒಡೆಯ ಕೊಲೆಯಾದ ನಂತರ ರಣಧೀರ ಕಂಠೀರವ ನರಸರಾಜ ಒಡೆಯರು ಪಟ್ಟಕ್ಕೆ ಬರುತ್ತಾರೆ. ತುಂಬಾ ಶಕ್ತಿಶಾಲಿಯಾದ ರಣಧೀರ ಕಂಠೀರವ ಬಿಜಾಪುರದ ರಣಮಲ್ಲ ಖಾನನೊಡನೆ ಹೋರಾಡಿ ಗೆಲ್ಲುತ್ತಾನೆ.

ಮೈಸೂರು ರಾಜ್ಯವನ್ನು ವಿಸ್ತರಿಸಿ, ಸಂಪತ್ತು - ಶಕ್ತಿಯನ್ನು ವರ್ಧಿಸುತ್ತಾನೆ. ತಿರುಚನಾಪಲ್ಲಿಯಲ್ಲಿ ಅಜೇಯ ಕುಸ್ತಿ ಪಟುವನ್ನು ಸೋಲಿಸುತ್ತಾನೆ. ನೃತ್ಯ ಗಾತಿ ದೊಡ್ಡಿಯನ್ನು ಅರಮನೆಗೆ ಕರೆತರುತ್ತಾನೆ. ರಾಜ ಹಾಗೂ ದೊಡ್ಡಿಯನ್ನು ಕೊಲೆ ಮಾಡಲು ದಳವಾಯಿ ಸಂಚು ಹೂಡುತ್ತಾನೆ. ಕಂಠೀರವ ಸಂಚಿನಿಂದ ಪಾರಾದರೂ ದೊಡ್ಡಿ ಹತ್ಯೆಗೀಡಾಗುತ್ತಾಳೆ. ಕಿತ್ತೂರು ಚೆನ್ನಮ್ಮ ಕಿತ್ತೂರು ಸಂಸ್ಥಾನದ ಮಲ್ಲಸರ್ಜನ ಎರಡನೇ ರಾಣಿಯಾಗಿ ಬಂದ ಚೆನ್ನಮ್ಮ, ಪತಿಯ ಮರಣಾನಂತರ ಏಕಾಂಗಿಯಾಗಿ ಬ್ರಿಟೀಷ್ ಚಕ್ರಾಧಿಪತ್ಯದ ವಿರುದ್ಧ ಹೋರಾಟ ನಡೆಸಿ ಕೊನೆಗೆ ಆಕೆಯ ದೇಹಾಂತದೊಂದಿಗೆ ಆಕೆಯ ಹೆಸರು ಚರಿತ್ರೆಯಲ್ಲಿ ಅಮರವಾಗುತ್ತದೆ.

ವೀರಸಂಕಲ್ಪ; ರಕ್ಕಸ ತಂಗಡಿಯ ಯುದ್ಧಾನಂತರ ಕರ್ನಾಟಕ ಸಾಮ್ರಾಜ್ಯವನ್ನು ವೆಂಕಟಪತಿ ಮಹಾರಾಜ ಚಂದ್ರಗಿರಿಯಿಂದ ಆಳುತ್ತಾರೆ. ಜಗರಾಯ ಎಂಬಾತ ರಾಜ ಕುಟುಂಬದ ವಿರುದ್ಧ ಹಗೆ ಸಾಧಿಸುತ್ತಾನೆ. ಅಂಗರಕ್ಷಕ ಲಕ್ಷ್ಮಣ ನಾಯಕ ರಾಜ ಕುಟುಂಬದವರನ್ನು ರಕ್ಷಿಸಲು ಎಷ್ಟು ಕಷ್ಟಪಟ್ಟರೂ ಜಗರಾಯ ಮೋಸದಿಂದ ಮಹಾರಾಜನ ಸಾಕು ಪುತ್ರ ಶ್ರೀರಂಗರಾಯನನ್ನು ಕೊಲ್ಲುವನು. ಲಕ್ಷ್ಮಣನಾಯಕ ರೊಚ್ಚಿಗೆದ್ದು ದ್ರೋಹಿಗಳನ್ನು ನಿರ್ನಾಮ ಮಾಡುವ ವೀರಸಂಕಲ್ಪ ತೊಟ್ಟು ತಮ್ಮ ಪ್ರತಿಜ್ಞೆಯನ್ನು ನೆರವೇರಿಸಿಕೊಳ್ಳುತ್ತಾನೆ.

ಸರ್ವಜ್ಞಮೂರ್ತಿ ಈ ಚಿತ್ರವು. ಕನ್ನಡ ನಾಡಿನ ದಾರ್ಶನಿಕ, ತತ್ವಜ್ಞಾನಿ, ಕವಿ, ಸಮಾಜ ಸುಧಾರಕ ಸರ್ವಜ್ಞನ ಜೀವನ ಆಧರಿತ ಚಿತ್ರವಾಗಿದೆ.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ; ರಾಯಣ್ಣ ಕಿತ್ತೂರು ಸಂಸ್ಥಾನದ ಸಾಮಾನ್ಯ ಪ್ರಜೆ. ಕಿತ್ತೂರಿನ ಹೋರಾಟದಲ್ಲಿ ಜೈಲುಸೇರಿ, ಹೊರಬಂದು ಬ್ರಿಟೀಷರ ವಿರುದ್ಧ ಸೆಣಸಾಡಲು ಸಾಹಸಿಗಳ ಗುಂಪನ್ನು ಕಟ್ಟಿದ, ಖಾನಾ ಪುರದಲ್ಲಿ ಬ್ರಿಟೀಷ್ ಸೈನ್ಯದ ಮೇಲೆ ದಾಳಿ ಮಾಡಿ, ಕಛೇರಿಗಳನ್ನು ಸುಟ್ಟು, ಠಾಣೆಗಳ ಮೇಲೆ ಎರಗಿದ, ಬ್ರಿಟೀಷರ ಸೈನ್ಯಕ್ಕೆ ಸಿಲುಕದೆ ನುಣುಚಿಕೊಳ್ಳುತ್ತಿದ್ದನು.

ಖಜಾನೆ ಲೂಟಿ ಮಾಡಿ ಬ್ರಿಟಿಷರಿಗೆ ಸಿಂಹ ಸ್ವಪ್ನನಾದ, ದೇಶದ್ರೋಹಿಗಳ ನೆರವಿನಿಂದ ರಾಯಣ್ಣನನ್ನೂ ಸೆರೆಹಿಡಿದು ಬ್ರಿಟೀಷರು ಗಲ್ಲಿಗೇರಿಸಿದರು.

ಇಮ್ಮಡಿ .ಪುಲಿಕೇಶಿ; ಚಾಲುಕ್ಯ ವಂಶದ ಶಕ್ತಿವಂತ. ತಂದೆ ಒಂದನೆಯ ಕೀರ್ತಿವರ್ಮ ಪುಲಿಕೇಶಿ ಹಾಗೂ ಗೂನ ವಿಷ್ಣುವರ್ಧನ ಸಹೋದರರು, ಬಾಲಕರಾಗಿದ್ದಾಗಲೇ ಮರಣ ಹೊಂದಿದ ಪುಲಿಕೇಶಿಯ ಚಿಕ್ಕಪ್ಪ ಮಂಗಳೇಶ ಚಾಲುಕ್ಯ ಸಾಮ್ರಾಜ್ಯ ವಿಸ್ತರಿಸಿದರೂ ಸ್ವಂತ ಮಕ್ಕಳಿಗೆ ಪಟ್ಟಕಟ್ಟುವ ದುರದ್ದೇಶದಿಂದ ಅಣ್ಣ-ತಮ್ಮಂದಿರಲ್ಲಿ ಮೈಮನಸ್ಸು ತರುವನು, ಚಿಕ್ಕಪ್ಪನನ್ನು ಎದುರಿಸಿ ರಾಜ್ಯ ವಶಪಡಿಸಿಕೊಂಡ ಇಮ್ಮಡಿ ಪುಲಿಕೇಶಿ ನಂತರ ಧರ್ಮರಾಜ್ಯ ಸ್ಥಾಪನೆ ಮಾಡಿದ. ಕಂದಬರೂ, ಮೌರ್ಯರು, ಕನೂಜಿನ ಹರ್ಷವರ್ಧನರನ್ನು ಸೋಲಿಸಿ ದಿಗ್ವಿಜಯ ಸ್ಥಾಪಿಸಿ ಚಾಲುಕ್ಯ ರಾಜ್ಯ ವಿಸ್ತರಿಸಿದ.

ಕಾಕನಕೋಟೆ ;ಗಿರಿಜನರ ಸಮುದಾಯವೊಂದು ಹೆಗ್ಗಡೆಯ ದಬ್ಬಾಳಿಕೆ, ಶೋಷಣೆಯ ವಿರುದ್ಧ ದನಿಯೆತ್ತಿ ದೊರೆಗೂ ದೂರು ನೀಡುತ್ತಾರೆ. ನ್ಯಾಯ ದೊರೆಯುತ್ತದೆ. ಗಿರಿಜನರು, ಕಾಡು ನಾಡಿನವರ ರಾಜ್ಯ ವ್ಯವಸ್ಥೆ, ಆಚರಣೆ, ವಿಧಿವಿಧಾನಗಳು ಸಂಪ್ರದಾಯಗಳ ಚಿತ್ರಣವಿದೆ.

ವೀರ ಸಿಂಧೂರ ಲಕ್ಷ್ಮಣ; ಸ್ವಾತಂತ್ರ್ಯ ಪೂರ್ವದ ಕಥೆ. ಬ್ರಿಟೀಷರ ವಿರುದ್ಧ ಏಕಾಂಗಿಯಾಗಿ ಹೋರಾಟ ನಡೆಸಿದ ಸಿಂಧೂರಿನ ವೀರ ಲಕ್ಷ್ಮಣನ ಜೀವನ ಕಥೆ.

ಹೊಯ್ಸಳ ಚಿತ್ರದಲ್ಲಿ ಸಾಮಾನ್ಯವಾದ 'ಸಳ' ಸಾಮರ್ಥ್ಯದಿಂದ ಅಧಿಕಾರ ವಹಿಸಿಕೊಂಡು 'ಹೊಯ್ಸಳ' ಪರಂಪರೆಗೆ ನಾಂದಿಯಾದದ್ದು. ಈ ಚಿತ್ರದ ಕಥೆಯಾಗಿದೆ.

ಹುಲಿಯ ಹಾಲಿನ ಮೇವು; ಕೊಡದ ರಾಜ್ಯ ದೊಡ್ಡ ವೀರಪ್ಪ ಪ್ರಭುಗಳ ಕಥೆ. ಅವರ ನಂಬಿಕಸ್ತ ಸೇವಕ ಚಂಗುಮಣಿಯ ಜೀವನವನ್ನು ಪರಿಚಯಿಸುವ ಕಥೆ.

ಹಾಸ್ಯರತ್ನ ರಾಮಕೃಷ್ಣ ;ತೆನಾಲಿ ರಾಮಕೃಷ್ಣನ ಪ್ರಸಂಗಗಳನ್ನು, ಬುದ್ಧಿ ಚಾತುರ್ಯಗಳನ್ನು ಹೇಳುತ್ತದೆ. ಸ್ವಾರಸ್ಯಕರ ಘಟನೆಗಳನ್ನು ಹೆಣೆದು ಸಿದ್ಧಮಾಡಲಾಗಿದೆ. ಅರಸ, ಗೆಳೆಯ ಸಂಬಂಧಗಳು ಬೆಸೆದು ಕೊಂಡಿವೆ. ಸರಸ-ವಿರಸಗಳು, ದುರಂತಗಳನ್ನು ಜಾಣ್ಮೆಯಿಂದ ನಿವಾರಿಸಿಕೊಳ್ಳುವುದು. ಮುಖ್ಯ ತಿರುಳು.

ಶ್ರೀ ಕೃಷ್ಣದೇವರಾಯ ; ವಿಜಯನಗರ ಸಾಮ್ರಾಜ್ಯದ ಮಹಾರಾಜನಾಗಿ ಪಟ್ಟವೇರಿದ ಶ್ರೀಕೃಷ್ಣ ದೇವರಾಯ ಮಹಾಮಂತ್ರಿ ತಿಮ್ಮರಸು ಹಾಗೂ ಕಮಲಾಂಬೆ ಅವರ ಬಳಿ ಕೃಷ್ಣನಾಗಿ ಬೆಳೆದಿರುತ್ತಾನೆ. ಆ ಸ್ಥಾನ ನರ್ತಕಿ ಚಿನ್ನಾಂಬೆಯನ್ನು ಮೋಹಿಸಿ ಮದುವೆಯಾಗುತ್ತಾನೆ. ಪಟ್ಟದರಸಿಯಾಗಿ ತಿರುಮಲಾಂಬೆ ಬರುತ್ತಾಳೆ. ಎರಡು ಹೆಣ್ಣು ಹಾಗೂ ಒಂದು ಗಂಡು ಮಗುವಾಗುತ್ತದೆ. ಚಿಕ್ಕಪ್ಪನ ಮಗ ಅಚ್ಯುತರಾಯ ಹೊಂಚುಹಾಕಿ ಯುವರಾಜನನ್ನು ಕೊಲೆ ಮಾಡುತ್ತಾನೆ. ತಿಮ್ಮರಸು ಈ ಮೋಸದಿಂದಾಗಿ ಮಂತ್ರಿ ಪದವಿ ಬಿಡುತ್ತಾನೆ. ಕೃಷ್ಣ ದೇವರಾಯ ಅಚ್ಯುತರಾಯನನ್ನು ಮಂತ್ರಿಯಾಗಿಯೂ ನೇಮಿಸುತ್ತಾನೆ. ಯುವರಾಜನನ್ನು ಕೊಲೆ ಮಾಡಿದ ಆರೋಪದ ಮೇಲೆ ತಿಮ್ಮರಸು ಕಣ್ಣುಗಳನ್ನು ಅಚ್ಯುತರಾಯ ಕೀಳಿಸುತ್ತಾನೆ. ತಿಮ್ಮರಸುವಿನ ಇಬ್ಬರು ಮಕ್ಕಳನ್ನು ಮರಣ ದಂಡನೆಗೆ ಒಳಪಡಿಸುತ್ತಾನೆ. ಕಮಲಾಂಬೆ ಎದೆಯೊಡೆದು ಸಾಯುತ್ತಾಳೆ. ಕೃಷ್ಣ ದೇವರಾಯನಿಗೆ ಈ ವಿಷಯವೆಲ್ಲ ತಿಳಿದು ಹಾಸಿಗೆ ಹಿಡಿಯುತ್ತಾನೆ. ತಿಮ್ಮರಸನ ನಿಧನದಿಂದಾಗಿ ಸ್ವಲ್ಪ ದಿನಗಳಲ್ಲಿ ಕೃಷ್ಣದೇವರಾಯ ಅದೇ ಕೊರಗಿನಲ್ಲಿ ಸಾಯುತ್ತಾನೆ.

ಮಯೂರ; ಕಾದಂಬರಿ ಆಧಾರಿತ ಚಿತ್ರ. ಕದಂಬ ವಂಶದ ಖ್ಯಾತ ಅರಸ ಮಯೂರ ವರ್ಮನ ಸಾಹಸಮಯ ಬದುಕನ್ನು ವರ್ಣಿಸುವ ಚಿತ್ರಕತೆ. ಕದಂಬ ರಾಜನನ್ನು ಮೋಸದಿಂದ ಕೊಂದ ಪಲ್ಲವರು ರಾಜ್ಯವನ್ನಾಕ್ರಮಿಸುವರು. ಕದಂಬನ ಪುತ್ರ ಬ್ರಾಹ್ಮಣ ಯುವಕ ಮಯೂರ ವರ್ಮನಾಗಿ ಬೆಳೆದು ಕ್ಷತ್ರಿಯರಿಗೆ ಅಗತ್ಯವಾದ ವಿದ್ಯೆಗಳಲ್ಲಿ ಪರಿಣಿತನಾಗುತ್ತಾನೆ. ರಾಜಕುಮಾರಿಯ ಒಲವುಗಳಿಸುತ್ತಾನೆ. ತನ್ನ ಜನ್ಮರಹಸ್ಯ ತಿಳಿದ ಮೇಲೆ ಮಯೂರ, ತನ್ನ ತಂದೆಯನ್ನು ಕೊಂದುರಾಜ್ಯ ಅಪಹರಿಸಿದ ಪಲ್ಲವ ರಾಜನ ಮೇಲೆ ಸೇಡು ತೀರಿಸಿಕೊಳ್ಳುವ ಪ್ರತಿಜ್ಞೆ ಮಾಡಿ ಗೆಲವು ಸಾಧಿಸುತ್ತಾನೆ.

ಶಿವಯೋಗಿ ಅಕ್ಕಮಹಾದೇವಿ; ಲೌಕಿಕ ಬಂಧಗಳನ್ನು ಕಳಚಿಕೊಂಡು ಪರಶಿವನೇ ತನ್ನ ಪತಿಯೆಂದು ನಂಬಿ. ಜಗತ್ತಿಗೆ ಹಿತ ಸಂದೇಶ ಸಾರಿದ ಶಿವಶರಣೆ ಅಕ್ಕ ಮಹಾದೇವಿಯ ಕತೆಯಿದು. ಅಪ್ರತಿಮ ರೂಪವತಿಯಾದ ಮಹಾದೇವಿಯನ್ನು ಕೌಶಿಕ ಮಹಾರಾಜ ಬಯಸಿ ಮದುವೆಯಾದ.

ಆದರೆ ಅವನ ಹದ್ದು ಮೀರಿದ ವರ್ತನೆಯನ್ನು ಸಹಿಸದೆ ನಿರ್ವಸ್ತ್ರಳಾಗಿ ಅರಮನೆಯಿಂದ ಹೊರಬಿದ್ದು. ಅನುಭವ ಮಂಟಪ ಸೇರಿ ಅಲ್ಲಿ ಪರೀಕ್ಷೆಗಳಲ್ಲಿ ವಿಜಯಿಗಳಾಗಿ ಅತ್ಯುನ್ನತ ಮಟ್ಟಕ್ಕೇರುವ ಕಥಾವಸ್ತು ಇದರದಾಗಿದೆ.

ಮಾಡಿ ಮಡಿದವರು ;ಭಾರತಕ್ಕೆ ಸ್ವಾತಂತ್ರ್ಯ ತರಲು ಹೋರಾಡಿ ಮಡಿದವರ ಜೀವನ, ಧ್ಯೇಯ, ಆದರ್ಶಗಳ ಸುತ್ತ ಹೆಣೆದ ಕಥೆ. ಗಾಂಧೀಜಿಯವರ ಚಲೇಜಾವ್ ಚಳವಳಿ, ಸ್ವದೇಶಿ ಆಂದೋಲನ ಚಿತ್ರಕ ತೆಗೆ ಸ್ಫೂರ್ತಿ.

ತಾಯಿ ಸಾಹೇಬ ; ಸ್ವಾತಂತ್ರ ಹೋರಾಟದ ನಂತರ ಘಟ್ಟದ ಕತೆ. ಪ್ರಾದೇಶಿಕ ಮಟ್ಟದಲ್ಲಿ ಹೋರಾಟ ಮುಂದುವರೆಸಿದ ಅಪ್ಪಾ ಸಾಹೇಬನಂಥವರ ಬದುಕನ್ನು ಈ ಚಿತ್ರ ನಿರೂಪಿಸುತ್ತದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಗಾಂಧೀ ತತ್ವಕ್ಕೆ ಗಾಂಧೀವಾದಿಯಾದ ಅಪ್ಪಾಸಾಹೇಬನಿಗೆ ಒದಗಿದ ದುಸ್ಥಿತಿಯನ್ನು ಚಿತ್ರಿಸುತ್ತದೆ. ತನ್ನ ಸಮುದಾಯದವರನ್ನೆಲ್ಲಾ ಸಂಘಟಿಸಿ, ಅಭಿವೃದ್ಧಿಯತ್ತ ಕೊಂಡೊಯ್ಯುವಂಥ ಉದಾತ್ತ, ಶಕ್ತ ನೇತಾರನಾಗ ಬಹುದಾಗಿದ್ದ ಅಪ್ಪಾಸಾಹೇಬ ಕಾಲುಮುರಿದು ಕೊಂಡು, ಭ್ರಮಸಿರಪನಾಗಿ ದೇವರ ಮೊರೆ ಹೋಗುವ ಅಸಾಹಯಕ ಮನುಷ್ಯನಾಗುವ ದುರಂತವನ್ನು ಅನುಭವಿಸುತ್ತಾನೆ. ಸ್ವಾತಂತ್ರ್ಯವೆಂದರೆ ಕೇವಲ ಬ್ರಿಟೀಷರನ್ನು ಓಡಿಸುವುದೊಂದೇ ಅಲ್ಲ. ಪ್ರತಿಯೊಬ್ಬ ಪ್ರಜೆಗೂ ಸಮಾಜದಲ್ಲಿ ಸಮಾನ ಸ್ವಾತಂತ್ರ್ಯ ದ ಅವಕಾಶ ಇರಬೇಕೆಂಬ ಅಪ್ಪಾಸಾಹೇಬನ ಕನಸು ದೇಸಗತಿಯ ಸಂಪತ್ತು. ಸವಲತ್ತುಗಳನ್ನು ಎಣ್ಣುವ ಜಮೀನುದಾರರಿಗೆ ಪಥ್ಯವಿಲ್ಲ. ಆದ್ದರಿಂದಲೇ ದೇಶಕ್ಕೆ ದೊರಕಿದ ಸ್ವಾತಂತ್ರ್ಯ ಕೆಳವರ್ಗದ ಜನರಿಗಾಗಲಿ, ನಾಲ್ಕು ಗೋಡೆಯ ನಡುವೆಯೇ ಬದುಕು ಸವೆಸುವ ಹೆಂಗಸರಿಗಾಗಲೀ ಯಾವ ಅರ್ಥವೂ ಇಲ್ಲದಂತಹ ಪರತಂತ್ರ ಸ್ಥಿತಿಯಾಗಿಯೇ ಉಳಿಯುತ್ತದೆ.

ಕನ್ನೇಶ್ವರ ರಾಮ ; ಬ್ರಿಟಿಷ್ ಕಾನೂನು ಪಾಲಕರ ದೃಷ್ಟಿಯಲ್ಲಿ ದರೋಡೆಕೋರ, ಸಿಂಪಾಚಾರ ಮಾಡುವವನು. ಆದರೆ ಜನತೆಯ ದೃಷ್ಟಿಯಲ್ಲಿ ಜನನಾಯಕ. ಸ್ವಾತಂತ್ರ್ಯಯೋಧ, ಇದ್ದವರಿಂದ ಕಸಿದು ಇಲ್ಲದವರ ಅಗತ್ಯ ಪೂರೈಸುತ್ತಿದ್ದ ಶಿವಮೊಗ್ಗ ಪ್ರಾಂತ್ಯದಲ್ಲಿ ಬಡವರ ಪಕ್ಷಪಾತಿಯೆಂದು ಹೆಸರಾಗಿದ್ದ ಕನ್ನೇಶ್ವರ ರಾಮನ ಸುತ್ತ ಹೆಣದ ಕಥೆ.

ಮೈಸೂರು ಮಲ್ಲಿಗೆ ;ಖ್ಯಾತಕವಿ ಕೆ. ಎಸ್. ನರಸಿಂಹ ಸ್ವಾಮಿಯವರ ಪ್ರೇಮ ಕವಿತೆಗಳನ್ನು ಆಧಾರವಾಗಿಟ್ಟುಕೊಂಡು ಸ್ವಾತಂತ್ರ್ಯ ಪೂರ್ವ ಮತ್ತು ನಂತರದ ವಸ್ತುವನ್ನು ಇದರಲ್ಲಿ ಹೇಳಲಾಗಿದೆ. ಶಾನಭೋಗರ ಮಗಳು ಮಾಸ್ತರ ಕವನಗಳಲ್ಲಿ ತನ್ನ ಬದುಕಿನ ಕನಸನ್ನು ಕಾಣುತ್ತಾಳೆ. ಅವರಿಬ್ಬರ ಮದುವೆಯಾದಾಗ ಸ್ವಾತಂತ್ರ್ಯ ಚಳುವಳಿಯ ಬಿಸಿ ಮಾವ-ಅಳಿಯನಲ್ಲಿ ವೈಮನಸ್ಸು ತರುತ್ತದೆ. ಗರ್ಭಿಣಿಯಾದ ಹುಡುಗಿ ತಂದೆಯ ಹಠದಿಂದಾಗಿ ಗಂಡನ ಹಿಂದೆ ಹೋಗಲಾರದೆ ತವರಿನಲ್ಲೇ ಉಳಿಯುತ್ತಾಳೆ. ಚಳುವಳಿಯಲ್ಲಿ ಗಂಡ ಗುಂಡಿಗೆ ಬಲಿಯಾದನೆಂಬ ಸುದ್ದಿ ತಿಳಿಯುತ್ತದೆ. ಆದರೆ ಅದು ಸುಳ್ಳಾಗಿರುತ್ತದೆ. ಅವನನ್ನು ಜೈಲಿಗೆ ಹಾಕಿರುತ್ತಾರೆ. ಜೈಲಿನಿಂದ ಹೊರಬಂದ ಗಂಡ ಹೆಂಡತಿಯನ್ನರಸುತ್ತಾ ಬಂದಾಗ ಅವಳು ಊರು ಬಿಟ್ಟಿರುವುದು ತಿಳಿಯುತ್ತದೆ. ಕೊನೆಗೆ ಎಲ್ಲರೂ ಒಂದಾಗುತ್ತಾರೆ. ಇಲ್ಲಿ ಸ್ವಾತಂತ್ರ್ಯ ಹೋರಾಟದ ಐತಿಹಾಸಿಕ ಘಟನೆಗಳೊಂದಿಗೆ ಸಾಮಾಜಿಕ ಸಂಗತಿಗಳೂ ಹಾಸುಹೊಕ್ಕಾಗಿವೆ.

ಗಂಡುಗಲಿ ಕುಮಾರರಾಮ; ಸು ರುದ್ರಮೂರ್ತಿ ಶಾಸ್ತ್ರಿಯವರ ಕಾದಂಬರಿಯಾಧಾರಿತ ಈ ಚಿತ್ರವನ್ನು ೨೦೦೬ರ ಕಂಪಿಲ ರಾಜ್ಯದ ಗಂಡುಗಲಿ ಕುಮಾರ ರಾಮನ ಕುರಿತಾದ ಚಿತ್ರವಾಗಿದೆ.

ಹೀಗೆ ನಮ್ಮ ನಾಡಿನ ರಾಜ ಮಹಾರಾಜರುಗಳ ಐತಿಹಾಸಿಕ ಪುರುಷರ, ಶರಣರ , ಮಹಾತ್ಮರ ಜೀವನ ಸಾಧನೆಗಳಿಂದ ಹಿಡಿದು ಸ್ವಾತಂತ್ರ್ಯ ಸಂಗ್ರಾಮದ ಘಟನಾವಳಿಗಳನ್ನಾಧರಿಸಿದ ಚಿತ್ರಗಳ ತನಕ ಈ ಐತಿಹಾಸಿಕ ಸಿನಿಮಾಗಳ ವ್ಯಾಪ್ತಿಯನ್ನು ವಿಸ್ತರಿಸ ಬಹುದಾಗಿದೆ. ಆದರೆ ಈಗಾಗಲೇ ಗಮನಿಸಿದ ಪೌರಾಣಿಕ ಚಿತ್ರಗಳ ಪ್ರಮಾಣಕ್ಕೆ ಹೋಲಿಸಿದರೆ ಈ ಐತಿಹಾಸಿಕ ಚಿತ್ರಗಳ ಸಂಖ್ಯೆ ತೀರಾ ಕಡಿಮೆಯೆಂದೇ ಹೇಳ ಬಹುದು.

೪.೫ ನಾಡು-ನುಡಿ ಮತ್ತು ಕನ್ನಡ ಪ್ರಜ್ಞೆ

ನಾಡು-ನುಡಿಯ ಬಗೆಗಿನ ಕಾಳಜಿಯನ್ನೂ 'ದೇಸೀ ಸಂಸ್ಕೃತಿ'ಯ ಭಾಗವಾಗಿ ಪರಿಗಣಿಸಬಹುದಾಗಿದೆ. ಕನ್ನಡಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಕನ್ನಡ ನಾಡು-ನುಡಿಯ ಬಗೆಗೆ ಅಭಿಮಾನವನ್ನು ವ್ಯಕ್ತಪಡಿಸುವ ಹಲವಾರು ಸಿನಿಮಾಗಳು ಬಂದಿವೆ. ಬಹುತೇಕ ಕನ್ನಡ ಸಿನಿಮಾಗಳು ಹಾಡಿನ ಸಂದರ್ಭದಲ್ಲಷ್ಟೇ ನಾಡು-ನುಡಿಯ ಬಗೆಗಿನ ಅಭಿಮಾನವನ್ನು ಬಿಂಬಿಸುತ್ತವೆ. ಕನ್ನಡ ನಾಡಿನ ನೆಲ, ಜಲ, ಸಸ್ಯ ಸಂಪತ್ತು, ಪ್ರಾಣಿ ಸಂಕುಲ, ಜನಪದ, ಜಾನಪದ ಕಲೆ, ಸಂಸ್ಕೃತಿ ಇತ್ಯಾದಿಗಳ ಬಗೆಗೆ ಅಭಿಮಾನ ಪ್ರೀತಿಯನ್ನು ವ್ಯಕ್ತಪಡಿಸುವ ಹಲವಾರು ಹಾಡುಗಳು ಬೇರೆ ಬೇರೆ ಸಿನಿಮಾಗಳಲ್ಲಿ ಬಳಕೆಯಾಗಿವೆ. ಪ್ರಾರಂಭದ ಘಟ್ಟದಿಂದ ತೊಡಗಿ, ತೀರ ಇತ್ತೀಚಿನ ಕೆಲವು ಸಿನಿಮಾಗಳವರೆಗೂ ಈ ಭಾಷಾಭಿಮಾನದ ಭಾವನೆಯನ್ನು ಒಂದಲ್ಲ ಒಂದು ರೀತಿಯಲ್ಲಿ ಅಭಿವ್ಯಕ್ತ ಪಡಿಸಲಾಗಿದೆ.

೬೦ರ ದಶಕದಿಂದ ಈ ರೀತಿಯ ನಾಡು-ನುಡಿ ಮತ್ತು ಕನ್ನಡ ಪ್ರಜ್ಞೆಯನ್ನು ಬಿಂಬಿಸುವ ಹಾಡುಗಳನ್ನು ಗುರುತಿಸಬಹುದಾಗಿದೆ. ೧೯೬೧ರಲ್ಲಿ ತೆರೆಕಂಡ 'ಕಣ್ತೆರೆದು ನೋಡು' ಚಿತ್ರದ 'ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ ತಾಯ್ನಾಡ ಜಯಭೇರಿ ನಾವಾಗ ಬನ್ನಿ' ಈ ಗೀತೆಯು ಕನ್ನಡ ನಾಡು-ನುಡಿಯ ಬಗೆಗಿನ ಹಾಡಾಗಿದೆ. ಅದೇ ರೀತಿ ಇನ್ನೂ ಹಲವು ಗೀತೆಗಳನ್ನು ಇಲ್ಲಿ ಉದಾಹರಿಸಬಹುದಾಗಿದೆ.

ಅನ್ನಪೂರ್ಣ ಚಿತ್ರದ 'ಕನ್ನಡವೇ ತಾಯ್ ನುಡಿಯು
ಕರುನಾಡು ತಾಯ್‌ನಾಡು
ಕನ್ನಡಿಗನು ನೀನೆಂಬ ಅಭಿಮಾನ ವಿರಲಿ'

ಪೋಸ್ಟ್ ಮಾಸ್ಟರ್ ಚಿತ್ರದ 'ಕನ್ನಡದ ಕುಲದೇವಿ
ಕಾಪಾಡು ಬಾತಾಯೆ'

ಕರುಳಿನ ಕರೆ ಚಿತ್ರದ 'ಅ. ಆ. ಇ. ಈ. ಕನ್ನಡದ ಅಕ್ಷರ ಮಾಲೆ
ಅಮ್ಮಾ ಎಂಬುದೇ ಕರುಳಿನ ಕಂದನ ಕರೆಯೋಲೆ'

[illegible]

[illegible]

[illegible]

[illegible]

'ನಮ್ಮೂರೆ ಅಂದ, ನಮ್ಮೂರೆ ಚೆಂದ
ಕನ್ನಡ ಭಾಷೆ ಕುರುಣಾನಂದ'

ಬೇಡಿ ಬಂದವಳು ಚಿತ್ರದ 'ಕನ್ನಡ ತಾಯೆ ನಮ್ಮನ್ನು ನೀಕಾಯೇ'

ಮಾತು ತಪ್ಪಿದ ಮಗ ಚಿತ್ರದ 'ಎಂಥಾ ಸೌಂದರ್ಯ ನೋಡು
ನಮ್ಮ ಕರುನಾಡ ಬೀಡು

ರತ ಸಪ್ತಮಿ ಚಿತ್ರದ 'ಶಿಲೆಗಳು ಸಂಗೀತವ ಹಾಡಿದೆ
ಬೇಲೂರ ಗುಡಿಯಲ್ಲಿ
ಕೇಶವ ನೆದುರಲ್ಲಿ
ಅನುದಿನ ಅನುಕ್ಷಣ
ಕುಣಿಯುತಲೀ ....'

ಸಿಂಹಾದ್ರಿಯ ಸಿಂಹ ಚಿತ್ರದ 'ಕಲ್ಲಾದರೆ ನಾನು ಬೇಲೂರ ಶಿಲೆಯಲಿ ಇರುವೆ
ಮಣ್ಣಾದರೆ ನಾನು ಕಾವೇರಿಯ ಮಡಿಲಲಿ ಇರುವೆ'

ತಿರುಗು ಬಾಣ ಚಿತ್ರದ 'ಇದೇ ನಾಡು ಇದೇ ಭಾಷೆ
ಎಂದೆಂದೂ ನಮ್ಮದಾಗಿರಲಿ
ಎಲ್ಲೇ ಇರಲಿ ಹೇಗೆ ಇರಲಿ

ಕನ್ನಡವೇ ನಮ್ಮ ಉಸಿರಂತೆ. ಹೀಗೆ ಹಲವಾರು ಗೀತೆಗಳನ್ನು ಇಲ್ಲಿ ಉದಹಾರಿಸಿಬಹುದು. ಇಲ್ಲಿ ಕೆಲವು ಹಾಡುಗಳಲ್ಲಿ ನಾಡು-ನುಡಿಯ ಬಗೆಗೆ ಅಲ್ಲಲ್ಲಿ ಮಾತ್ರ ಉಲ್ಲೇಖವಾಗಿದ್ದು ಉಳಿದಂತೆ ಬೇರೆ ಸಾಹಿತ್ಯವಿದೆ. ಆದರೆ ಪೂರ್ಣ ಪ್ರಮಾಣದಲ್ಲಿ ಕನ್ನಡ ನಾಡು-ನುಡಿ, ನೆಲ, ಜಲ, ಸಾಹಿತ್ಯ, ಸಂಸ್ಕೃತಿ ಇತ್ಯಾದಿಗಳ ಬಗೆಗೆ ಉಲ್ಲೇಖವಿರುವ ಕೆಲವು ಹಾಡುಗಳನ್ನು ಕಾಣಬಹುದು.

ಕರುನಾಡ ತಾಯಿ ಸದಾ ಚಿನ್ಮಯಿ

ಈ ಪುಣ್ಯ ಭೂಮಿ ನಮ್ಮ ದೇವಾಲಯ

ಪ್ರೇಮಾಲಯ ಈ ದೇವಾಲಯ

ವೀರಧೀರರಾಳಿದ ನಾಡು ನಮ್ಮದು

ಶಾಂತಿ ಮಂತ್ರವಾಡಿದ ಬೀಡು ನಿನ್ನದು

ವರ ಸಾಧು ಸಂತರ ನೆಲೆ ನಿನ್ನದು

ಮಹಾ ಶಿಲ್ಪಕಾರರ ಶಿಲೆ ನಿನ್ನದು

ಸಂಗೀತ ಸಾಹಿತ್ಯ ಕಲೆ ನಿನ್ನದು

ಜೀವ ತಂತಿ ಮೀಟಿಧ ಸ್ನೇಹ ನಿನ್ನದು

ಎಲ್ಲಾ ಒಂದೇ ಎನ್ನುವ ಔದಾರ್ಯ ನನ್ನದು

ಸೌಂದರ್ಯ ಸೀಮೆಯ ನಾಡು ನನ್ನದು

ಮಾಧುರ್ಯ ತುಂಬಿದ ನುಡಿ ನನ್ನದು

ರೋಮ ರೋಮಗಳು ನಿಂತವು ತಾಯೆ

ಚೆಲುವ ಕನ್ನಡದೊಳಗಿದೆ ಮಾಯೆ

ಮಂಗಿಲೇ - ಕಡಲೇ - ಸಿಡಿಲೇ ಕೇಳರಿ

ತನುವು ಮನವು ಎಲ್ಲಾ ಕನ್ನಡ (**ನಾನು ನನ್ನ ಹೆಂಡ್ತಿ**)

ಜೇನಿನ ಹೊಳೆಯೋ ಹಾಲಿನ ಮಳೆಯೋ

ಸುಧೆಯೋ ಕನ್ನಡ ಸವಿ ನುಡಿಯೋ

ವಾಣಿಯ ವೀಣೆಯ ಸ್ವರ ಮಾಧುರ್ಯವೋ

ಸುಮಧುರ ಸುಂದರ ನುಡಿಯೋ ಆಹಾ .....

ಕವಿನುಡಿ ಕೋಗಿಲೆ ಹಾಡಿದ ಹಾಗೆ

ಸವಿನುಡಿ ತಣ್ಣನೆ ಗಾಳಿಯ ಹಾಗೆ

ಮಕ್ಕಳು ನುಡಿದರೆ ಸಕ್ಕರೆಯಂತೆ

ಅಕ್ಕರೆ ನುಡಿಗಳು ಮುತ್ತುಗಳಂತೆ

ಪ್ರೀತಿಯ ನೀತಿಯ ಮಾತುಗಳಲ್ಲಿ ಸುಮಧುರ ಸುಂದರ ನುಡಿಯೋ ||ಜೇನಿನ||

ಕುಮಾರ ವ್ಯಾಸನ ಕಾವ್ಯವು ಚಂದ

ರವಿ ಸರ್ವಜ್ಞನ ಪದಗಳ ಅಂದ

ದಾಸರು ಶರಣರು ನಾಡಿಗೆ ನೀಡಿದ

ಭಕ್ತಿಯ ಗೀತೆಗಳ ಪರಮಾನಂದ

ರನ್ನನು ರಚಿಸಿದ ಹೊನ್ನಿನ ನುಡಿಯೋ

ಪಂಪನು ಹಾಡಿದ ಚಿನ್ನದ ನುಡಿಯು

ಕನ್ನಡ ತಾಯಿಯು ನೀಡಿದ ವರವು

ಸುಮಧುರ ಸುಂದರ ನುಡಿಯೋ (**ಚಲಿಸುವ ಮೋಡಗಳು**)

ಕನ್ನಡ ರೋಮಾಂಚನ ಈ ಕನ್ನಡಾ

ಕಸ್ತೂರಿ ನುಡಿಯಿದು, ಕರುನಾಡು ಮಣ್ಣಿದು

ಪ್ರೀತಿಸು, ವಂದಿಸು, ಪೂಜಿಸು

ಈ ಕನ್ನಡ ಮಣ್ಣನು ಮರಿಬೇಡ

ಓ ಅಭಿಮಾನಿ ಓ ಅಭಿಮಾನಿ

ಈ ಮಣ್ಣಿನ ಹೆಣ್ಣನು ಜರಿಬೇಡ ಓ ಅಭಿಮಾನಿ

ಸುಸಂಸ್ಕೃತ ಚರಿತೆಯ ತಾಯ್ನಾಡು

ಮಹೋನ್ನತ ಕಲೆಗಳ ನೆಲೆವೀಡು

ಕೆಡಸದಿರು ಈ ಹೆಸರಾ, ಈ ಹೆಸರಾ ॥ ಈ ಕನ್ನಡ॥

ಹಾಡಾಗಲಿ, ಗೂಡಾಗಲಿ, ನಾಡಾಗಲಿ

ಕಟ್ಟೋಕೆ ನಾನಾದಿನ, ಕೆಡವೋಕೆ ಮೂರೆದಿನಾ

ಹರಸಿದರು ಮುನಿಗಳು

ಗಳಿಸಿದರು ಕವಿಗಳು

ನೆತ್ತರಲಿ ನೆಚ್ಚಿನ ಈ.ನೆಚ್ಚಿನ ಸಾಮ್ರಾಜ್ಯವಾ

ಹಾಡಿದರು ಕವಿಗಳು ಕರಗಿದವು ಶಿಲೆಗಳು

ತುಂಬಿಯ ಎದೆಯಲಿ

ಸಿರಿಗನ್ನಡ ಅಭಿಮಾನದ ಕನ್ನಡಾ ಆಹಾ-ರೋಮಚಾಂನ

ಈ ಕನ್ನಡ ಹಾಡಿಸು, ಕೇಳಿಸು, ಪ್ರೀತಿಸು ॥ ಪ ॥ (ಸೋಲಿಲ್ಲದ ಸರದಾರ)

ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು

ಮೆಟ್ಟಿದರೆ ಕನ್ನಡ ಮಣ್ಣಲ್ಲಿ ಮೆಟ್ಟಬೇಕು

ಬದುಕಿದು ಜಟಕಾ ಬಂಡಿ

ಇದು ವಿಧಿಯೋಡಿಸುವ ಬಂಡಿ

ಬದುಕಿದು ಜಟಕಾ ಬಂಡಿ

ವಿಧಿ ಅಲೆದಾಡಿಸುವ ಬಂಡಿ ॥ ಪ ॥

ಕಾಶೀಲಿ ಸ್ನಾನ ಮಾಡು, ಕಾಶ್ಮೀರ ಸುತ್ತಿ ನೋಡು

ಜೋಗಾದ ಗುಂಡಿ ಒಡೆದು ನಾನೆಂದು ಕೂಗಿ ಹಾಡು

ಅಜಂತಾ – ಎಲ್ಲೋರಾನ ಬಾಳಲ್ಲಿ ಒಮ್ಮೆ ನೋಡಂ

ಬಾದಾಮಿ ಐಹೊಳೆಯ ಚಂದನಾ ತೂಕ ಮಾಡಂ

ಕಲಿಯೋಕೆ ಕೋಟಿ ಭಾಷೆ ಆಡೋಕೆ ಒಂದೇ ಭಾಷೆ

ಕನ್ನಡ... ಕನ್ನಡ .... ಕಸ್ತೂರಿ ...... ಕನ್ನಡ

ಬದುಕಿದು ಜಟಕಾ ಬಂಡಿ ಇದು ವಿಧಿಯೋಡಿಸುವ ಬಂಡಿ

ಬದುಕಿದು ಜಟಕಾ ಬಂಡಿ. ವಿಧಿ ಗುರಿ ತೋರಿಸುವ ಬಂಡಿ

ಧ್ಯಾನಕ್ಕೆ ಭೂಮಿ ಇದು. ಪ್ರೇಮಕ್ಕೆ ಸ್ವರ್ಗ ಇದು

ಕಾರ್ಯಕ್ಕೆ ಕಲ್ಪ ಇಧು ಶಿಲ್ಪಕ್ಕೆ ಕಲ್ಪ ಇದು

ನಾಟ್ಯಕ್ಕೆನಾಡಿ ಇದು ನಾನಾಂತರಂಗವಿದು

ಕುವೆಂಪು ಬೇಂದ್ರೆಯಿಂದ ಕಾರಂತ ಮಾಸ್ತಿಯಿಮದ

ಧನ್ಯವೇ ಕನ್ನಡ ಓ ಧಾಟನಾ ಕನ್ನಡ ॥ ಪ ॥

ಬದುಕಿದು ಜಟಕಾ ಬಂಡಿ ಇದು ಓಡಿಸುವಾ ಬಂಡೀ

ಬದುಕಿದು ಜಟಕಾ ಬಂಡೀ ಇದುದಡ ಸೇರಿಸುವ ಬಂಡೀ॥

ಬಾಳಿನ ಬೆನ್ನುಹತ್ತಿ ನೂರಾರು ಊರು ಸುತ್ತಿ

ಏನೇನೋ ಕಂಡ ಮೇಲೂ ನಮ್ಮೂರೇ ನಮಗೆ ಮೇಲು

ಕೈಲಾಸಂ ಕಂಡ ನಮಗೆ ಕೈಲಾಸ ಯಾಕೆ ಬೇಕು

ದಾಸಾರ ಕಂಡ ನಮಗೆ ವೈಕುಂಠ ಯಾಕೆ ಬೇಕು

ಮುಂದಿನ ನನ್ನ ಜನ್ಮ ಬರೆದಿಟ್ಟನಂತೆ ಬ್ರಹ್ಮ

ಇಲ್ಲಿಯೇ ಇಲ್ಲಿಯೇ ಎಂದಿಗೂ ನಾನಿಲ್ಲಿಯೇ

ಬದುಕಿದು ಜಟಕಾ ಬಂಡೀ ಇದು ವಿಧಿ ಓಡಿಸುವ ಬಂಡೀ

ಬದುಕಿದು ಜಟಕಾ ಬಂಡೀ ವಿಧಿ ದಡಸೇರಿಸುವ ಬಂಡೀ ॥ **(ಆಕಸ್ಮಿಕ)**

ಕರ್ನಾಟಕದ ಇತಿಹಾಸದಲಿ ಬಂಗಾರದ ಯುಗದ

ಕಥೆಯನ್ನು ಹಾಡುವ ಕೇಳಿ ನಾ ಹಾಡುವೆ ಕೇಳಿ ||೧||

ಜ್ಞಾನದ ಜ್ಯೋತಿಯು ವಿದ್ಯಾರಣ್ಯರು

ಅನುಗ್ರಹ ಗೈದ ಭೂಮಿ ಇದು

ಹಕ್ಕಬುಕ್ಕರು ಆಳಿದರಿಲ್ಲಿ

ಹರುಷದ ಮಳೆಯನು ಎಲ್ಲೂ ಚೆಲ್ಲಿ

ವಿಜಯದ ಕಹಳೆಯ ಊದಿದರು

ವಿಜಯನಗರ ಸ್ಥಾಪನೆ ಮಾಡಿದರು || ಕರ್ನಾಟಕ ||

ಗಂಡರ ಗಂಡ ಧೀರ ಪ್ರಚಂಡ

ಕೃಷ್ಣದೇವರಾಯ ಆಳಿದ ವೈಭವಿದೆ

ಕಲಿಗಳ ನಾಡು ಕವಿಗಳ ಬೀಡು

ಎನಿಸಿತು ಹಂಪೆಯು ಆದಿನದೆ

ಕನ್ನಡ ಬಾವುಟ ಹಾರಿಸಿದ ಮಧುರೆವರೆಗು ರಾಜ್ಯದ ಅರಳಿಸಿದ || ಕರ್ನಾಟಕ||

ಸಂಗೀತ ನಾಟ್ಯಗಳ ಸಂಗಮವಿಲ್ಲೆ ಶಿಲ್ಪಕಲೆಗಳ ತಾಣವಿದೆ

ಭುವನೇಶ್ವರಿಯ ತವರೂರಿಲ್ಲೆ ಯತಿಗಳ ದಾಸರ ನೆಲೆನಾಡಿಲ್ಲೆ

ಪಾವನ ಮಣ್ಣಿದು ಹಂಪೆಯದು ಯುಗಯುಗ ಅಳಿಯದಕೀರ್ತಿಯಿದು

ಕನ್ನಡ ಮುಗಿಲೆ ಕನ್ನಡ ಭುವಿಯು

ಕನ್ನಡ ಕೀರ್ತಿ ಎಂದೆಂದು ಬೆಳಗಲಿ ಸಿರಿಗನ್ನಡಂಗೆಲ್ಗೆ **(ಕೃಷ್ಣ ರುಕ್ಮಿಣಿ)**

ಇಲ್ಲಿ ಉದಾಹರಿಸಲಾದ ಹಾಡುಗಳಲ್ಲೆಲ್ಲಾ ಕನ್ನಡನಾಡಿನ ಇತಿಹಾಸ ಪುರುಷರ ವರ್ಣನೆ, ಕನ್ನಡ ಭಾಷೆ, ನೆಲ, ಜಲ, ಕವಿಗಳು, ದಾಸರು, ರಾಜರುಗಳು, ಸಂಗೀತ, ಕಲೆ, ಸಾಹಿತ್ಯ, ಐತಿಹಾಸಿಕ ಸ್ಥಳಗಳು, ಕನ್ನಡ ಜನತೆ, ಕನ್ನಡದ ಕವಿಗಳು ಇವುಗಳ ಬಗ್ಗೆ ಹಾಡಿ ಹೊಗಳಿರುವುದನ್ನು ಕಾಣಬಹುದು. ಇಲ್ಲಿ ಮಾದರಿಗೆಂಬಂತೆ ಕೆಲವನ್ನಷ್ಟೇ ಕೊಡಲಾಗಿದೆ. ಈ ರೀತಿಯ ಇನ್ನು ಅನೇಕ ಹಾಡುಗಳ ಕನ್ನಡ ಸಿನಿಮಾಗಳಲ್ಲಿ ಬಳಕೆಗೊಂಡಿವೆ.

೪.೬ ಬಂಧುತ್ವವನ್ನು ಸೂಚಿಸುವ ಸಿನಿಮಾಗಳು

ಬಂಧುತ್ವ ಕಲ್ಪನೆಗೆ ಮಾನವೀಯ ಸಂಬಂಧಗಳಿಗೆ ನಮ್ಮ ನಾಡಿನ ಸಂಸ್ಕೃತಿಯಲ್ಲಿ ವಿಶಿಷ್ಟ ಸ್ಥಾನವಿದೆ. ದೇಸೀ ಸಂಸ್ಕೃತಿಯ ಭಾಗ ವೆನ್ನಬಹುದಾದ ಈ ಬಂಧುತ್ವ ಕಲ್ಪನೆಗಳು ಕನ್ನಡ ಸಿನಿಮಾಗಳಲ್ಲಿ ಸಶಕ್ತವಾಗಿ ಅಭಿವ್ಯಕ್ತಗೊಂಡಿವೆ.

ಪ್ರದೇಶದಿಂದ ಪ್ರದೇಶಕ್ಕೆ ಸಮುದಾಯದಿಂದ ಸಮುದಾಯಕ್ಕೆ ಈ ಬಂಧುತ್ವ ಕಲ್ಪನೆಗಳು ಬದಲಾಗುತ್ತಾ ಹೋಗುತ್ತವೆ. ಇಂತಹ ವೈವಿಧ್ಯ,ಅನನ್ಯತೆಗಳನ್ನು ನಮ್ಮ ಸಿನಿಮಾಗಳು ಅಷ್ಟರ ಮಟ್ಟಿಗೆ ಬಳಸಿಕೊಳ್ಳದಿದ್ದರೂ, ಒಟ್ಟಾರೆಯಾಗಿ 'ಭಾರತೀಯವೆನ್ನಬುಹುದಾದ ಬಂಧುತ್ವ ಕಲ್ಪನೆಗಳನ್ನೂ ಬಂಧುಗಳೊಳಗಿನ ಪರಸ್ಪರ ಭಾವನಾತ್ಮಕ ಸಂಬಂಧಗಳನ್ನು ಮನ ಮುಟ್ಟುವಂತೆ ಚಿತ್ರಿಸಿವೆ. ತಂದೆ-ತಾಯಿ-ಮಕ್ಕಳೊಳಗಿನ ಸಂಬಂಧ, ಸಹೋದರ ಸಂಬಂಧ (ಭಾತೃತ್ವ), ಗಂಡ-ಹೆಂಡತಿ ಸಂಬಂಧ, ಅಣ್ಣ-ಅತ್ತಿಗೆ ಸಂಬಂಧ, ಅತ್ತೆ-ಸೊಸೆ ಸಂಬಂಧ, ಸೋದರ ಮಾವ - ಸೋದರಳಿಯ - ಸೋದರ ಸೊಸೆ ಸಂಬಂಧ. ಇತ್ಯಾದಿ ಸಂಬಂಧದ ಎಳೆಗಳು ಹಲವು ಸಿನಿಮಾಗಳಲ್ಲಿ ವಿಶಿಷ್ಠವಾಗಿ ಪಡಿಮೂಡಿವೆ. ಈ ಸಂಬಂಧಗಳ ಮಹತ್ವ ಎಷ್ಟರ ಮಟ್ಟಿನದೆಂದರೆ ಕೆಲವು ಸಿನಿಮಾಗಳು ಇಂತಹ ಸಂಬಂಧಗಳನ್ನು ಸೂಚಿಸುವ ಪದಗಳನ್ನೇ ಶೀರ್ಷಿಕೆಯಾಗಿ ಹೊಂದಿರುವುದೂ ಉಂಟು.

ಅಣ್ಣತಂಗಿ ; ಸೋದರಿಯರ ನಡುವಿನ ಪ್ರೀತಿ ವಾತ್ಸಲ್ಯದ ಸುತ್ತ ಹೆಣೆದ ಕಥೆ. ತಂಗಿಗಾಗಿ ಅಣ್ಣ ಎಂಥ ತ್ಯಾಗಕ್ಕೂ ಸಿದ್ಧನಾಗಿರುತ್ತಾನೆ. ಅಣ್ಣನಿಗಾಗಿ ಪ್ರೀತಿಯನ್ನು ತ್ಯಾಗ ಮಾಡಲು ಅನುವಾಗುವ ತಂಗಿ. ಹೀಗೆ ಒಬ್ಬರಿಗೊಬ್ಬರು ಏನು ಬೇಕಾದರೂ ಮಾಡಲು ಸಿದ್ಧರಿರುವ, ಅಣ್ಣತಂಗಿಯರ ಪ್ರೀತಿಯ ಕತೆ. ಇದು ಗ್ರಾಮೀಣ ಪರಿಸರದಲ್ಲಿನ ಸಹಜತೆಯೊಂದಿಗೆ ಚಿತ್ರಿತವಾಗಿದೆ.

ಅಮ್ಮ ; ಹೆತ್ತ ತಾಯಿ ಒಬ್ಬಳು ಸಾಕಿದ ತಾಯಿ ಒಬ್ಬಳು ಇಬ್ಬರೂ ಮಮತಾಮಯಿಗಳು ಇವರಿಬ್ಬರಲ್ಲಿ ಯಾರನ್ನೂ ಬಿಡಲಾಗದ ನಾಯಕನ ಭಾವತೀವ್ರತೆಯೇ ವಸ್ತು.

ನನ್ನ ತಮ್ಮ ; ಪ್ರಸಾದ್, ರಘು ಸಹೋದರರು, ತಮ್ಮನಿಗಾಗಿ ಪ್ರಸಾದ್ ಕಲಾನಿಕೇತನವೊಂದನ್ನು ತೆರೆಯುವನು.

ನೃತ್ಯ ಶಿಕ್ಷಕಿ ಮಂಜುಳ ರಘುವನ್ನು ಬಲೆಯಲ್ಲಿ ಬೀಳಿಸಿಕೊಳ್ಳಲು ಹವಣಿಸಿ ಸೋಲುವಳು. ಅನಾಥಳಾದ ಶಾಂತ ಸಹ ಅದೇ ಕಲಾನಿಕೇತನ ಸೇರುವಳು. ರಘು-ಶಾಂತ ಇಬ್ಬರು ಪ್ರೇಮಿಸುವರು . ಪ್ರಸಾದ್ ಶಾಂತಾಳನ್ನು ವಿವಾಹವಾಗಬೇಕೆಂಬ ಸಮಯದಲ್ಲಿ ತಮ್ಮನೂ ಶಾಂತಾಳನ್ನು ಪ್ರೀತಿಸುವುದನ್ನು ಕಂಡು ತ್ಯಾಗ ಮಾಡುವನು. ಇಂತಹ ಸಮಯದಲ್ಲಿ ಪ್ರಸಾದ್ ಕಾಲು ಕಳೆದುಕೊಳ್ಳವನು. ಹೀಗಿರುವಾಗ ತಮ್ಮನಿಗಾಗಿ ಪ್ರಸಾದ್, ಗಂಡನಿಗಾಗಿ ಶಾಂತ ಇಬ್ಬರೂ ಹಲುಬುವರು. ಕೊನೆಗೆ ಎಲ್ಲವೂ ಒಳ್ಳೆಯದಾಗುತ್ತದೆ.

ದೇವರು ಕೊಟ್ಟ ತಂಗಿ ;ತಂದೆ ತಾಯಿ ಇಲ್ಲದ ರಘುವಿಗೆ ತಂಗಿ ಸುಧಾ ಎಂದರೆ ಪಂಚ ಪ್ರಾಣ. ಆಕೆಯನ್ನು ಬಹಳ ಮುಚ್ಚಟೆ ಮಾಡಿ ಸಲಹುತ್ತಿರುತ್ತಾನೆ.

ಸಾಕು ಮಗಳು ;ಜೀವನದಲ್ಲಿ ಶಿಸ್ತಿಲ್ಲದೆ ಉಡಾಫೆ ಹೊಡೆಯುತ್ತಿದ್ದ ತಂದೆಯಂತೆಯೇ ಮಗ ರಘು ಉಂಡಾಡಿ ಗುಂಡಾನಾಗಿರುತ್ತಾನೆ. ತಂಗಿ ಉಮಾ ಶಾಲಾ ಶಿಕ್ಷಕಿಯಾಗಿದ್ದು ತಂದೆ, ಅಣ್ಣ, ರೋಗಿಷ್ಟ ತಾಯಿಯನ್ನು ಸಲಹ ಬೇಕಾಗುತ್ತದೆ. ತಾಯಿ ಸಾಯುವಾಗ ಉಮಾ ಸಾಕುಮಗಳು ಎಂದು ತಿಳಿಸಿ ಸಾಯುತ್ತಾಳೆ. ಉತ್ತಮ ಗಾಯಕಿಯೂ ಆದ ಉಮಾಳ ಹಾಡನ್ನು ಆಕಾಶವಾಣಿಯಲ್ಲಿ ಕೇಳಿದ ಶ್ರೀಮಂತ ವಾಸು ಉಮಾಳನ್ನು ಇಷ್ಟ ಪಡುತ್ತಾನೆ. ಮನೆಯಲ್ಲಿನ ಕಷ್ಟಗಳಿಂದಾಗಿ ಉಮಾ ಮುದುಕನೊಬ್ಬನನ್ನು ಮದುವೆಯಾಗಲು ಒಪ್ಪಿ, ಹಣ ತಂದು ಜೈಲಿಗೆ ಸೇರಿದ್ದ ಅಣ್ಣನನ್ನು ಬಿಡಿಸಿಕೊಳ್ಳುತ್ತಾಳೆ. ತಾಳಿ ಕಟ್ಟಿಸಿಕೊಳ್ಳಲು ನೋಡಿದರೆ ವಾಸುವೇ ವರವಾಗಿರುತ್ತಾನೆ. ವಾಸು ತಂಗಿ ಮಂಜುಳಾ ಅಂಧಳಾಗಿರುತ್ತಾಳೆ. ಮನಃಪರಿವರ್ತನೆಯಾಗಿದ್ದ ರಘು ಸೇವೆ ಮಾಡಿ ಮಂಜುಳಾಗೆ ಕಣ್ಣು ಬರಿಸುತ್ತಾನೆ. ವಾಸು ವಿದೇಶಕ್ಕೆ ಹೋದ ಸಂದರ್ಭದಲ್ಲಿ ಉಮಾಳನ್ನು ಹೊರಹಾಕಿರುತ್ತಾರೆ. ಅವಳು ಹಳ್ಳಿಯೊಂದರಲ್ಲಿ ಗಂಡು ಮಗುವಿನ ತಾಯಿಯಾಗುತ್ತಾಳೆ. ಕೊನೆಗೆ ಎಲ್ಲರೂ ಒಟ್ಟಿಗೆ ಸೇರುತ್ತಾರೆ.

ಮನೆಅಳಿಯ; ಶ್ರೀಮಂತ ಶಿವಣ್ಣನವರ ಪುತ್ರಿ ಮೀನಾ ಕಾಲೇಜಿನ ಸಹ ವಿದ್ಯಾರ್ಥಿ ಸೋಮುವನ್ನು ಪ್ರೀತಿಸಿದಳು. ಸೋಮು ತಬ್ಬಲಿಯಾದ್ದರಿಂದ ಶಿವಣ್ಣನವರ ಮನೆ ಅಳಿಯನಾಗಲು ಒಪ್ಪುತ್ತಾನೆ.

ಶಿವಣ್ಣನ ಪತ್ನಿ ನಾಗಮ್ಮ ಹಾಗೂ ಆಕೆಯ ತಮ್ಮಂದಿರಿಗೆ ಈ ವಿವಾಹ ಇಷ್ಟವಿರಲಿಲ್ಲ. ಮೀನಾಳ ತಲೆ ಕೆಡಿಸಿ ಗಂಡ-ಹೆಂಡತಿಯರಿಗೆ ಆಗದಂತೆ ಮಾಡುತ್ತಾರೆ. ಶಿವಣ್ಣನವರು ತೀರಕೊಂಡ ನಂತರ ಸೋಮುವಿನ ಪರಿಸ್ಥಿತಿ ವಿಪರೀತಕ್ಕಿಟ್ಟು ಕೊಳ್ಳುತ್ತದೆ. ಕಳ್ಳತನ, ಹಣ ದುರುಪಯೋಗ, ವ್ಯಭಿಚಾರ, ಪಿತೂರಿ ಮುಂತಾದ ಆಪಾದನೆಗಳನ್ನು ಸೋಮು ಹೊರಬೇಕಾಗುತ್ತದೆ. ಸೋಮು ಮೀನಾಳ ಭ್ರಮೆಯನ್ನು ಹೋಗಲಾಡಿಸಿ ತಾನು ತ್ಯಾಗಶೀಲ ಎಂಬುದನ್ನು ಸಾಬೀತು ಪಡಿಸುವನು.

ಚಿಕ್ಕಮ್ಮ ; ತನ್ನನ್ನು ನಂಬಿದವರಿಗಾಗಿ, ತನ್ನ ಪ್ರೀತಿಯನ್ನು ತ್ಯಾಗ ಮಾಡಿ, ಪ್ರಿತಿಸಿದವನ ತಂದೆಗೆ ಎರಡನೇ ಹೆಂಡತಿಯಾಗಿ ಬರುವ ತ್ಯಾಗಮಯಿ ಹೆಣ್ಣು . ಇವಳು ಮನೆಯಲ್ಲಿ ಎಲ್ಲರ ಬದುಕನ್ನು ಹಸನುಗೊಳಿಸಿ, ತ್ಯಾಗಮೂರ್ತಿಯಾಗಿ ಬದುಕುತ್ತಾಳೆ.

ತಂದೆ ಮಕ್ಕಳು; ಮೂರು ಮಕ್ಕಳನ್ನು ಅನಾಥಾಲಯದಲ್ಲಿ ಬಿಟ್ಟು ಹೆತ್ತವರು ದೂರವಾಗುತ್ತಾರೆ. ಆ ಮಕ್ಕಳು ಅನಾಥಾಲಯದಲ್ಲಿ ಬೆಳೆದು ದೊಡ್ಡವರಾಗುತ್ತಾರೆ. ವಿವಿಧ ಕಾರ್ಯ, ಕಷ್ಟಗಳನ್ನು ದಾಟಿ ಕೊನೆಗೆ ಇಡೀ ಕುಟುಂಬ ಒಂದಾಗುತ್ತದೆ.

ಅಣ್ಣ-ಅತ್ತಿಗೆ ;ಅಣ್ಣ-ಅತ್ತಿಗೆ ಹಾಗೂ ಮೈದುನರ ನಡುವಣ ಪ್ರೀತಿ-ವಿಶ್ವಾಸ ಹಾಗೂ ಅನುಬಂಧಗಳ ಚಿತ್ರಣವಿದೆ. ಅಣ್ಣ-ಅತ್ತಿಗೆ ಕಷ್ಟಪಟ್ಟು ಇಬ್ಬರು ಮೈದುನರನ್ನು ಬೆಳೆಸುತ್ತಾರೆ. ಇವರ ಮನೆ ದೈವ ಒಂದು ನಾಗಪ್ಪವಾಗಿರುತ್ತದೆ. ಆದರೆ ಮನೆಗೆ ಬರುವ ಸೊಸೆಗೆ ಹಾವನ್ನು ಕಂಡರೆ ಆಗುತ್ತಿರುವುದಿಲ್ಲ. ಈ ಕಾರಣಕ್ಕಾಗಿಯೇ ಮನೆ ಒಡೆಯುತ್ತದೆ. ನಂತರ ಎಲ್ಲವೂ ಸರಿಹೋಗಿ ಒಂದಾಗುತ್ತಾರೆ.

ಮುತ್ತಿನಂಥ ಅತ್ತಿಗೆ; ಮನೆ ತುಂಬಿದ ಹೆಣ್ಣು ಮನೆಯ ಕಿರಿಯರ ಪಾಲಿಗೆ ಮುತ್ತಿನಂಥ ಅತ್ತಿಗೆಯಾಗಿ, ಅವರ ಬದುಕು ಸರಿಹೋಗಲು ನೆರವಾದ ಕಥಾ ವಸ್ತು ಇದರಲ್ಲಿದೆ.

ಮಾವ ಸೊಸೆ ಸವಾಲ್; ಒಬ್ಬ ಶ್ರೀಮಂತ, ಅವನಿಗೊಬ್ಬ ತಂಗಿ ಮತ್ತು ಮಗ ಇರುತ್ತಾರೆ. ಮನೆಗೆ ಸೊಸೆಯಾಗಿ ಬಂದ ಹುಡುಗಿ ಹಳೆಯ ಸೇಡು ತೀರಿಸಿಕೊಳ್ಳಲು ಮಾವನನ್ನು ಅವಮಾನಿಸುತ್ತಿರುತ್ತಾಳೆ. ಇದಕ್ಕೆ ಶ್ರೀಮಂತನ ತಂಗಿಯೇ ಕಾರಣ ಎಂಬ ಸತ್ಯ ತಿಳಿದು, ಕೊನೆಗೆ ಒಂದಾಗುತ್ತಾರೆ.

ಮಾವನೋ ಅಳಿಯನೋ; ಮಾವ ಕರ್ತವ್ಯ ನಿಷ್ಠ ಪೊಲೀಸ್ ಅಧಿಕಾರಿಯಾಗಿರುತ್ತಾನೆ. ನಾಯಕನು ವೃತ್ತಿಯಲ್ಲಿ ಲಾಯರ್, ಇವರಿಬ್ಬರಿಂದ ಶಿಕ್ಷೆಗೆ ಒಳಗಾದ ವ್ಯಕ್ತಿಯೊಬ್ಬನ ದ್ವೇಷಕ್ಕೆ ಅತ್ತೆ ಸಾವಿಗೀಡಾಗುತ್ತಾಳೆ. ಆಕೆಯ ಕೊಲೆಯ ಆಪಾದನೆಯು ಅಳಿಯನ ಮೇಲೆ ಬರುತ್ತದೆ. ಅಳಿಯನು ತನ್ನ ಮೇಲೆ ಬಂದ ಆಪಾದನೆಯಿಂದ ಮುಕ್ತನಾಗುವುದಲ್ಲದೇ, ತನ್ನ ಅತ್ತೆಯನ್ನು ಕೊಂದವರ ಮೇಲೂ ಸೇಡು ತೀರಿಸಿಕೊಳ್ಳತ್ತಾನೆ.

ಕಿಲಾಡಿ ಅಳಿಯ;ತನ್ನನ್ನು, ತನ್ನ ಮಗಳನ್ನು ಶತ್ರುಗಳ ಕಪಿಮುಷ್ಠಿಯಿಂದ ಪಾರು ಮಾಡಿದ ಯುವಕನನ್ನು ನಂಬಿ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿ ಸಂಪೂರ್ಣ ಅಧಿಕಾರವನ್ನು ಅಳಿಯನ ಕೈಗೆ ಒಪ್ಪಿಸುತ್ತಾನೆ. ನಂತರ ಅಳಿಯನಾದವನು ಹಳೆಯ ದ್ವೇಷ ಸಾಧನೆಗಾಗಿ ಮಾವ, ಹೆಂಡತಿ, ಅತ್ತೆಯನ್ನು ಹಿಂಸಿಸುತ್ತಾನೆ. ಮಾವ ನಿರಪರಾಧಿ ಎಂದು ತಿಳಿದಾಗ ಶತ್ರುಗಳ ಸದೆ ಬಡಿದು ಕಿಲಾಡಿ ಅಳಿಯನೆನಿಸಿಕೊಳ್ಳುತ್ತಾನೆ.

ತಾಯಿ ತಂದೆ; ಹೆತ್ತವರು ಮಕ್ಕಳನ್ನು ಬೆಳೆಸಲು ಪಡಬಾರದ ಕಷ್ಟ ಪಡುತ್ತಾರೆ. ಆದರೆ ಆ ಮಕ್ಕಳು ಬೆಳೆಯುತ್ತಾ ಹೋದಂತೆ ತಂದೆ-ತಾಯಿಗಳನ್ನು ಕಡೆ ಗಾಣಿಸುತ್ತಾರೆ. ತಂದೆ, ತಾಯಿ, ಮಕ್ಕಳ ಸಂಬಂಧಗಳನ್ನು ಸವಿವರವಾಗಿ ಚಿತ್ರಿಸಲಾಗಿದೆ.

ತಾಯಿ ಮಮತೆ; ತಂದೆಗೆ ಬೇಡವಾದ ಮಗು ಒಂದು ಅನಾಥಶ್ರಮ ಸೇರುತ್ತದೆ. ಆತನ ತಾಯಿಗೆ ಮತ್ತೊಂದು ಸುಂದರ ಗಂಡು ಮಗು ಹುಟ್ಟುತ್ತದೆ. ಕುರೂಪಿಯಾದ ಮಗನಿಗೂ ಹಾಗೂ ತಾಯಿಗೂ ತಾವು ತಾಯಿ ಮಗ ಎಂದು ಗೊತ್ತಾಗಿ ದುಃಖಿಸುತ್ತಾರೆ. ತನಗೆ ಸಿಗದ ತಾಯಿ ಮಮತೆಗಾಗಿ ಪರಿತಪಿಸುವ ಯುವಕ ಕಡೆಗೆ ತಮ್ಮನನ್ನು ಕಾಪಾಡುವ ಸಲುವಾಗಿ ತಾನೇ ಸಾಯುತ್ತಾನೆ.

ತಾಯಿ ;ಅಣ್ಣ ಅತ್ತಿಗೆಯರಿಬ್ಬರ ತ್ಯಾಗ ಔದಾರ್ಯತೆಗಳ ಚಿತ್ರಣವಿದೆ. ತಮ್ಮನ ಬಾಳನ್ನು ಸರಿಪಡಿಸಲು ಅಣ್ಣ ತನ್ನ ಹೆಂಡತಿಯು ಜನ್ಮ ನೀಡಿದ ಮಗುವನ್ನು ನೀಡುತ್ತಾನೆ. ಆದರೆ ಅವರ ತ್ಯಾಗಕ್ಕೆ ಅರ್ಥವಿಲ್ಲವೆಂದಾಗ ಇಬ್ಬರೂ ಪ್ರಾಣತ್ಯಾಗ ಮಾಡುತ್ತಾರೆ.

ನನ್ನ ತಂಗಿ; ತನ್ನ ತಂದೆಯನ್ನು ಕೊಲೆ ಮಾಡಿದವನ ಮೇಲೆ ಮಗ ಸೇಡು ತೀರಿಸಿಕೊಳ್ಳುವ ಕಥೆ. ಅನಾಥನಾಗಿ ಬೆಳೆದ ರಾಘವ ತನ್ನ ತಂಗಿ ಮಾಧುರಿಯನ್ನು ಪ್ರಾಣಕ್ಕಿಂತಲೂ ಮಿಗಿಲಾಗಿ ಪ್ರೀತಿಸಿ ಬೆಳೆಸುತ್ತಾನೆ. ಆಕೆಯ ಬಾಳಿನಲ್ಲಿ ಚೆಲ್ಲಾಟವಾಡಲು ಬಂದವರನ್ನು ಸದೆ ಬಡಿಯುತ್ತಾನೆ. ರಾಘವನಿಗೆ ತನ್ನ ತಂದೆ ತಾನು ಕೆಲಸ ಮಾಡುತ್ತಿದ್ದ ಬ್ಯಾಂಕಿನ ಕಾವಲುಗಾರನ ಕೊಲೆ ಮಾಡಿ ಬ್ಯಾಂಕನ್ನು ದೋಚಿ ಪರಾರಿಯಾದನೆಂಬ ಆರೋಪ ಕೊರೆಯುತ್ತಿರುತ್ತದೆ. ಆದರೆ ಆ ಕಾವಲುಗಾರನೇ ತನ್ನ ತಂದೆಗೆ ಎಚ್ಚರ ತಪ್ಪುವಂತೆ ಕುಡಿಸಿ, ತನ್ನ ಸಮವಸ್ತ್ರವನ್ನು ತೊಡಿಸಿ ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಿ ಬ್ಯಾಂಕನ್ನು ದೋಚಿರುವ ಸತ್ಯ ಸಂಗತಿಯನ್ನು ಕಂಡು ಹಿಡಿದ ರಾಘವ, ಊರಿನಲ್ಲಿ ಗಣ್ಯನೆನಿಸಿ ಮರೆಯುತ್ತಿರುವವನೇ ಆ ಧೂರ್ತ ಕಾವಲುಗಾರನೆಂಬುದನ್ನು ಪತ್ತೆ ಹಚ್ಚುತ್ತಾನೆ. ದೂರ್ತನ ಕೊಲೆ ಮಾಡುತ್ತಾನೆ. ಕೊಲೆಗೀಡಾದ ತಂದೆಯ ಆತ್ಮಕ್ಕೆ ಶಾಂತಿಯುಂಟು ಮಾಡುತ್ತಾನೆ.

ಮನೆಗೆದ್ದ ಮಗ; ನಾಯಕ ಮುಗ್ಧನಾಗಿರುತ್ತಾನೆ. ಆದರೆ ಹೃದಯವಂತ. ಅವನ ಮುಗ್ಧತೆಯನ್ನು ತಪ್ಪಾಗಿ ತಿಳಿಯುವವರು ಹಲವರು. ಅದರ ದುರುಪಯೋಗಕ್ಕೆ ಯತ್ನಿಸುವವರೂ ಹಲವರು. ಇಂಥ ಮುಗ್ಧನನ್ನು ಒಬ್ಬ ಹುಡುಗಿ ಪ್ರೀತಿಸುತ್ತಿರುತ್ತಾಳೆ. ಕಾರಣಾಂತರಗಳಿಂದ ಆ ಮುಗ್ಧ ಹಳ್ಳಿಯನ್ನು ಬಿಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಹಲವು ಘಟನೆಗಳ ನಂತರ ಆತನ ಬಗ್ಗೆ ಇದ್ದ ತಪ್ಪು ಗ್ರಹಿಕೆಗಳೆಲ್ಲಾ ದೂರವಾಗುತ್ತವೆ. ಮುಗ್ಧ ಯುವಕ ಹೆತ್ತವರಿಗೆ ಕೀರ್ತಿ ತರುತ್ತಾನೆ.

ಮನಮೆಚ್ಚಿದಸೊಸೆ; ಶ್ರೀಮಂತ ಅವನಿಗೆ ಇಬ್ಬರು ಮಕ್ಕಳು. ಬುಡುಬುಡುಕೆಯವನೊಬ್ಬನ ಭವಿಷ್ಯಕೇಳಿ ಹೆದರಿದ ಶ್ರೀಮಂತ ಬೇಗ ಮದುವೆಯಾಗುವಂತೆ

ಮಕ್ಕಳಿಗೆ ಒತ್ತಡ ತರುತ್ತಾನೆ. ಆಕಸ್ಮಿಕಗಳು ನಡೆದು, ಮನೆಗೆ ಬಂದ ಹುಡುಗಿಯರು, ಸೊಸೆಯರಂತೆ ನಾಟಕವಾಡಿದರೂ, ನಿಜವಾದ ಸೊಸೆ ಮಗು ಹೆರುವಳು. ಹೀಗೆ ಕಾಕತಾಳೀಯಗಳ ಸರಮಾಲೆ ಈ ಚಿತ್ರದಲ್ಲಿದೆ.

ಹೆತ್ತವಳ ಕೂಗು; ನಾಸ್ತಿಕನಲ್ಲಿ ನಂಬಿಕೆ ಮೂಡಿಸುವ ಕಥಾವಸ್ತುವುಳ್ಳ ಚಿತ್ರ. ರಾಜಾರಾಯರ ಏಕೈಕ ಪುತ್ರ ಗುರುರಾಜ. ತನ್ನ ತಾಯಿ ಸಾವಿಗೀಡಾದ ದುರ್ಘಟನೆಯಿಂದಾಗಿ ದೇವರಲ್ಲಿ ನಂಬಿಕೆಯನ್ನು ಕಳೆದು ಕೊಂಡು ನಾಸ್ತಿಕನಾಗಿ ಬೆಳೆಯುತ್ತಾನೆ.
ಆದರೆ ಅವನು ಮದುವೆಯಾಗುವ ತುಳಸಿ ದೈವಭಕ್ತಿ. ತುಳಸಿಯಲ್ಲಿನ ದೈವಭಕ್ತಿಯನ್ನು ಬುಡ ಸಹಿತ ಕಿತ್ತು ಹಾಕಲು ಗುರು ಪ್ರಯತ್ನಿಸಿ ವಿಫಲನಾಗುತ್ತಾನೆ. ತುಳಸಿ ಗರ್ಭಿಣಿಯಾಗಿ ಹುಟ್ಟಿದ ಮಗು ಹುಟ್ಟುವಾಗಲೇ ಸತ್ತಿದೆ ಎಂದು ವೈದ್ಯರು ಹೇಳುತ್ತಾರೆ. ಆದರೆ ತುಳಸಿ ದೈವ ಭಕ್ತಿಯಾದುದರಿಂದ ಆ ಮಾತನ್ನು ನಂಬಲಿಲ್ಲ. ತುಳಸಿ ತನ್ನ ಮಗುವಿಗಾಗಿ ದೇವರ ಮೊರೆಹೊಕ್ಕುವಳು. ಸತ್ತಿದೆ ಎಂದು ಹೇಳಿದ ಮಗು ತಾಯಿಯ ದೈವಭಕ್ತಿಯಿಂದಾಗಿ ಜೀವಂತವಾಗುವುದು.

ಮುದ್ದಿನ ಅಳಿಯ; ದೊಡ್ಡ ಮನೆತನದ ಅಳಿಯ ನ ಸುತ್ತ ಹೆಣೆಯಲಾದ ಕಥೆ. ಉದಯೋನ್ಮುಖ ಕೃಷಿಕ ರಾಮಣ್ಣ ಧರ್ಮಯ್ಯನ ಮಗಳು ಕಸ್ತೂರಿಯನ್ನು ಮದುವೆಯಾಗುತ್ತಾನೆ. ಧರ್ಮಯ್ಯನ ಮಗ ರಾಜನನ್ನು ಆಸ್ತಿಯ ಆಸೆಗಾಗಿ ನಗರದವಳಾದ ಶೀಲ ಮದುವೆಯಾಗುತ್ತಾಳೆ ಶೀಲಳ ಮಗಳು ಕಾವೇರಿಯನ್ನು ರಾಮಣ್ಣ ಮತ್ತು ಕಸ್ತೂರಿ ತುಂಬಾ ಹಚ್ಚಿ ಕೊಂಡಿರುತ್ತಾರೆ. ಕಸ್ತೂರಿ ಆಕಸ್ಮಿಕವಾಗಿ ದುರಂತದಲ್ಲಿ ಸಾವಿಗೀಡಾಗುತ್ತಾಳೆ. ಧರ್ಮಯ್ಯ ಅಳಿಯನಿಗೆ ಅಮೃತಳನ್ನು ಮದುವೆಯಾಗುವಂತೆ ಕೇಳಿಕೊಳ್ಳುತ್ತಾನೆ. ರಾಮಣ್ಣ ಅಮೃತಳಿಂದ ದೂರವೇ ಉಳಿಯುತ್ತಾ ಹೋಗುತ್ತಾನೆ. ಕೊನೆಗೆ ಕಾವೇರಿ ಅವಳನ್ನು ಅಮ್ಮನೆಂದು ಒಪ್ಪಿಕೊಂಡಾಗ ಅವನೂ ಒಪ್ಪಿಕೊಳ್ಳುತ್ತಾನೆ.

ಮಾವನ ಮಗಳು ; ನಾಯಕನಿಗೆ ಎರಡು ಹೆಣ್ಣುಗಳ ಒಡನಾಟವಿರುತ್ತದೆ. ಇಬ್ಬರೂ ಆತನ ಸೋದರ ಮಾವನ ಮಕ್ಕಳಾಗಿರುತ್ತಾರೆ. ಒಬ್ಬಳು ಮದುವೆಗೆ ಮುಂಚಿನ ಸಂಬಂಧದ ಫಲವಾದರೆ, ಮೊತ್ತೊಬ್ಬಳು ಮದುವೆಯ ಫಲ. ನಾಯಕ ಇಬ್ಬರ ಮಧ್ಯೆ ಪಡಬಾರದ ಕಷ್ಟ ಪಡುವ ಕಥೆ ಕಡೆಗೆ ಸುಖಾಂತವಾಗುತ್ತದೆ.

ಮೊಮ್ಮಗ; ತಂದೆ-ತಾಯಿ ಇಲ್ಲದ ತಬ್ಬಲಿಯೊಬ್ಬ ಇಬ್ಬರು ಅಜ್ಜಿಯರ ಆಶ್ರಯದಲ್ಲಿ ಬೆಳೆಯುತ್ತಾನೆ ಅಜ್ಜನ ಆಸ್ತಿಯನ್ನು ಪಡೆಯಲು ತಬ್ಬಲಿಯ ಮಲತಾಯಿಯ ಮಗನ ಸಂಚು. ಆದಕ್ಕಾಗಿ ಮೊಮ್ಮಗನ ಕೊಲೆಗೆ ಪ್ರಯತ್ನ ನಡೆಯುತ್ತದೆ. ತಬ್ಬಲಿಯು ವಿದ್ಯಾವಂತನಾಗಿ, ನ್ಯಾಯವಾದಿಯಾಗಿ ಮಲ ಸೋದರನ ಸಂಚುಗಳನ್ನು ವಿಫಲಗೊಳಿಸಿ ತನ್ನ ಅಜ್ಜನ ಪ್ರಾಣ ಹಾಗೂ ಆಸ್ತಿಯನ್ನು ಸಂರಕ್ಷಿಸಿಕೊಳ್ಳುತ್ತಾನೆ.

ಜನುಮದಾತ; ಮದುವೆಯಾಗದೆ ತಾಯಿಯಾದ ಹೆಣ್ಣು ಪ್ರಪಂಚದಲ್ಲಿ ಎದುರಿಸಬೇಕಾಗುವ ವಿಷಯ ಪರೀಕ್ಷೆಗಳು. ಆಕೆಯ ಮಗ ತನ್ನ ತಾಯಿ ಅನುಭವಿಸಿದ ಅವಮಾನಕ್ಕೆ ಪ್ರತೀಕಾರ ತೆಗೆದುಕೊಳ್ಳುವ ಪಣ ತೊಡುತ್ತಾನೆ. ತನ್ನ ಹುಟ್ಟಿನ ಹಿಂದಿನ ರಹಸ್ಯವನ್ನು ಭೇದಿಸುತ್ತಾನೆ.

ನಾನು ನನ್ನ ಹೆಂಡ್ತೀರು; ನಾಯಕ ಮೊದಲಿಗೆ ಒಂದು ಮದುವೆಯಾಗಿರುತ್ತಾನೆ. ಒಮ್ಮೆ ಕೆಲಸದ ಸಲುವಾಗಿ ಬೇರೆ ದೇಶಕ್ಕೆ ಹೋದಾಗ ವಿಚಿತ್ರ ಸಂದರ್ಭಕ್ಕೆ ಸಿಲುಕಿ ಅಲ್ಲಿನ ಆದಿವಾಸಿ ಜನಾಂಗದ ಹುಡುಗಿಯನ್ನು ಮದುವೆಯಾಗಬೇಕಾಗುತ್ತದೆ. ನಂತರ ಮೊದಲ ಹೆಂಡತಿಗೆ ಸತ್ಯಾಂಶ ತಿಳಿಸಲಾರದೆ, ಎರಡನೆಯವಳನ್ನು ಬಿಡಲೂ ಆಗದೆ ಸಂಕಟಕ್ಕೆ ಸಿಲುಕುತ್ತಾನೆ. ಕೊನೆಗೊಮ್ಮೆ ನಿಜಾಂಶ ಹೊರಬೀಳಲೇಬೇಕಾಗುತ್ತದೆ. ಆ ಸಂದರ್ಭದಲ್ಲಿ ಮೊದಲ ಹೆಂಡತಿ ವಿಶಾಲ ಹೃದಯಿಯಾಗಿ ಎರಡನೆಯವಳನ್ನು ತಂಗಿಯಂತೆಯೇ ಸ್ವೀಕರಿಸುತ್ತಾಳೆ.

ತಾಯಿಯಿಲ್ಲದ ತವರು ; ತಾಯಿ ಇಲ್ಲದ ಹೊಣ್ಣೊಬ್ಬಳು ಪಡುವ ಕಷ್ಟದ ಸುತ್ತ ಹೆಣೆಯಲಾದ ಕಥೆ. ಒಳ್ಳೆಯ ಹುಡುಗಿಯಾದ ಕಾವೇರಿಯ ಮದುವೆ ಉತ್ತಮ ಯುವಕನೊಂದಿಗೆ ಆಗುತ್ತದೆ.

ಅವರ ಸಂಸಾರ ಹಾಲು ಜೇನಿನಂತ್ತಿರುತ್ತದೆ. ಆದರೆ ಅವಳಗಂಡ ಸತ್ತಾಗ ಅತ್ತೆ, ಮಾವ ಅವಳು ಮನೆಯಲ್ಲಿರುವುದನ್ನು ಇಷ್ಟಪಡುವುದಿಲ್ಲ. ತಾಯಿ ಇಲ್ಲದ ತವರನ್ನು ಅವಲಂಬಿಸಲು ಕಾವೇರಿಗೆ ಸಾಧ್ಯವಿರುವುದಿಲ್ಲ. ಇದೇ ಸಮಯದಲ್ಲಿ ಅವಳು ಅವಳಿ ಮಕ್ಕಳಿಗೆ ಜನ್ಮ ನೀಡುತ್ತಾಳೆ. ಈ ಭೂಮಿಯಲ್ಲಿ ಬದುಕುವುದೇ ಅವಳಿಗೆ ನರಕವೆನಿ ಎಲ್ಲವನ್ನೂ ಬಿಟ್ಟು ಹೋಗುತ್ತಾಳೆ.

ಮೇಲೆ ಉಲ್ಲೇಖಿಸಿದ ಚಿತ್ರಗಳಲ್ಲಿ ಮನವೀಯ ಸಂಬಂಧಗಳು, ಬಂಧುತ್ವದ ಕಲ್ಪನೆಗಳು ಯಾವ ರೀತಿಯಾಗಿರುತ್ತವೆ ಎಂಬುದನ್ನು ಕಾಣಬಹುದು. ಹಾಗೆ ನೋಡಿದರೆ ಪ್ರತಿಯೊಂದು ಚಿತ್ರದಲ್ಲೂ ನಾವು ಬಂಧುತ್ವ ಮಾನವೀಯತೆ ಆದರ್ಶಗಳು ಇರುತ್ತವೆ. ಆದರೆ ಇಲ್ಲಿ ಬಂಧುತ್ವದ ಹೆಸರುಗಳನ್ನು ಸೂಚಿಸುವ ಸಿನಿಮಾಗಳನಷ್ಟೇ ವಿಶ್ಲೇಷಣೆಗೆ ಬಳಸಿಕೊಳ್ಳಲಾಗಿದೆ.

೪.೭ ಕೃಷಿ ಸಂಸ್ಕೃತಿ ಮತ್ತು ಇತರ ಪಾರಂಪರಿಕ ವೃತ್ತಿಗಳು

ಈಗಾಗಲೇ ಗಮನಿಸಿರುವಂತೆ ಕೃಷಿ ಸಂಸ್ಕೃತಿಯೂ ದೇಸೀ ಸಂಸ್ಕೃತಿ ಪರಿಕಲ್ಪನೆಯ ಬಹುಮುಖ್ಯ ಅಂಗವಾಗಿದೆ. ಕೃಷಿ ಪ್ರಧಾನವಾದ ನಮ್ಮ ನಾಡಿನಲ್ಲಿ ನಿರ್ಮಾಣಗೊಂಡು ಹಲವಾರು ಚಿತ್ರಗಳು ಕೃಷಿಯ ಮಹತ್ವವನ್ನು ಎತ್ತಿ ಹೇಳುತ್ತವೆ. ಕೃಷಿ ಸಂಸ್ಕೃತಿ ಎಂದಾಗ ನಮ್ಮ ಕಣ್ಣಮುಂದೆ ನಿಲ್ಲುವು ಗ್ರಾಮೀಣ ಪ್ರದೇಶಗಳೇ. ಗ್ರಾಮೀಣ ಪ್ರದೇಶಗಳಲ್ಲಿ ಮುಖ್ಯ ವೃತ್ತಿ ಕೃಷಿಯಾಗಿರುತ್ತದೆ. ಜಮೀನ್ದಾರಿ ವ್ಯವಸ್ಥೆಯೂ ಕೃಷಿ ಸಂಸ್ಕೃತಿಯ ಒಂದು ಭಾಗವಾಗಿರುತ್ತದೆ. ಈ ಜಮೀನ್ದಾರಿ ವ್ಯವಸ್ಥೆಯಲ್ಲಿ ಶೋಷಣೆ, ದಬ್ಬಾಳಿಕೆ ಇತ್ಯಾದಿಗಳು ಸೇರುತ್ತವೆ. ಹಾಗೆಯೇ ವಿದ್ಯಾವಂತ ಯುವಕರು ಹಳ್ಳಿಗೆ ಹಿಂತಿರುಗಿ ಕೃಷಿ ಮಾಡಲು ಪ್ರಾರಂಭಿಸುವುದು ಮುಂತಾದ ಅಂಶಗಳನ್ನಾಧರಿಸಿದ ಚಿತ್ರಗಳು ಇಲ್ಲಿ ಪ್ರಸ್ತುತವೆನಿಸುತ್ತವೆ. ಕೃಷಿಯಜೊತೆಗೆ ಇತರ ಪಾರಂಪರಿಕ ವೃತ್ತಿಗಳನ್ನೂ ನಾವು ಗ್ರಾಮೀಣ ಪರಿಸರದಲ್ಲಿ ಕಾಣಬಹುದು. ಅಂತಹ ಕೆಲವು ವೃತ್ತಿಗಳ ಬಗೆಗೂ ಇಲ್ಲಿ ಪ್ರಸ್ತಾಪಿಸಬೇಕಾಗುತ್ತದೆ. ಕನ್ನಡ ಚಿತ್ರದ ರಂಗದ ಆರಂಭದಲ್ಲಿ ಪೌರಾಣಿಕ ಹಾಗೂ ಭಕ್ತಿ ಪ್ರಧಾನ ಚಿತ್ರಗಳು ಹೆಚ್ಚಾಗಿದ್ದವು. ನಂತರದ ಒಂದು ಕಾಲಘಟ್ಟದಿಂದ ಪ್ರಾರಂಭವಾದ ಸಾಮಾಜಿಕ ಚಿತ್ರಗಳಲ್ಲಿ ಕೃಷಿ ಸಂಸ್ಕೃತಿಯನ್ನು ಬಿಂಬಿಸುವ ಚಿತ್ರಗಳು ಹಲವಿವೆ. ೧೯೬೨ರಲ್ಲಿ ಎಸ್.ಕೆ.ಭಗವಾನ್ ಹಾಗೂ ರಾಮಚಂದ್ರ ಅವರ ನಿರ್ದೇಶನದಲ್ಲಿ ನಿರ್ಮಾಣಗೊಂಡ ಭೂದಾನ ಚಿತ್ರವು ಕೃಷಿ ಸಂಸ್ಕೃತಿಯ ಆಶಯವುಳ್ಳ ಮೊದಲ ಸಿನಿಮಾವಾಗಿದೆ. ೧೯೬೨ರಿಂದ ಇತ್ತೀಚಿನವರೆಗೂ ಕೃಷಿ ಸಂಸ್ಕೃತಿಗೆ ಸುಮಾರು ಸಂಬಂಧ ಪಟ್ಟ ಸುಮಾರು ೫೦ ರಷ್ಟು ಕೃಷಿ ಚಿತ್ರಗಳನ್ನು ನಾವು ಕಾಣಬಹುದಾಗಿದೆ.

ಭೂದಾನ; ಈ ಚಿತ್ರದಲ್ಲಿ ಜಮೀನ್ದಾರಿ ವ್ಯವಸ್ಥೆಯ ಕಥೆಯಿದೆ. ಲಕ್ಷ್ಮೀಪತಿ ಎಂಬ ಶ್ರೀಮಂತ ಜಮೀನ್ದಾರ ಮಹಾಸ್ವಾರ್ಥಿ. ಈತನ ಬಳಿ ದಾಸಣ್ಣ ಹಾಗೂ ಅವರ ಪುತ್ರರಾದ ರಾಮ ಮತ್ತು ಲಕ್ಷ್ಮಣ ಜೀತದಾಳುಗಳು ಇವರಿಗೆ ಸ್ವಂತ ಭೂಮಿ ಹೊಂದುವ ಆಸೆ. ತುಂಡು ಭೂಮಿಯನ್ನಾದರೂ ತನಗೆ ನೀಡುವಂತೆ ದಾಸಣ್ಣ ಮಾಲೀಕರಲ್ಲಿ ಪದೇ ಪದೇ ಮನವಿ ಮಾಡುತ್ತಾನೆ. ಜಮೀನ್ದಾರ ಹುಸಿ ಭರವಸೆ ನೀಡುತ್ತಲೇ ಬರುತ್ತಾನೆ. ಭೂದಾನ ಚಳುವಳಿ ಆರಂಭಗೊಂಡು ಕಾರ್ಯಕರ್ತರು ಈ ಹಳ್ಳಿಗೆ ಬಂದಾಗ ಲಕ್ಷ್ಮೀಪತಿ ಐದು ಎಕರೆ ಭೂಮಿದಾನ ನೀಡುತ್ತಾನೆ.

ಕಾರ್ಯಕರ್ತರು ಈ ಭೂಮಿಯನ್ನು ದಾಸಣ್ಣನಿಗೆ ನೀಡುತ್ತಾರೆ. ದಾಸಣ್ಣ ಭೂಮಿಯಲ್ಲಿ ಫಲವತ್ತಾದ ಬೆಳೆ ಬೆಳೆದಾಗ ಲಕ್ಷ್ಮೀಪತಿಗೆ ಅಸೂಯೆವುಂಟಾಗುತ್ತದೆ. ಪತ್ನಿಯ ಬಲವಂತಕ್ಕೆ ಮಣಿದು ಲಕ್ಷ್ಮೀಪತಿ ಭೂಮಿಯನ್ನು ದಾಸಣ್ಣನಿಂದ ಮರಳಿ ಪಡೆಯುತ್ತಾನೆ. ದಾಸಣ್ಣ ಹುಚ್ಚನಾಗುತ್ತಾನೆ. ರಾಮ ಲಕ್ಷ್ಮಣರು ಮತಾಂತರಗೊಳ್ಳುತ್ತಾರೆ. 'ದೇವಮಾವನ' ಸುಂದರ ಮಧ್ಯಮ ವರ್ಗದ ಹಳ್ಳಿಯ ರೈತ, ರಾಜ ಕೃಷಿ ಮಾಡಿ ತಮ್ಮನನ್ನು ಓದಿಸುತ್ತಾನೆ, ಅಣ್ಣನಿಗೆ ತಮ್ಮನನ್ನು ದೇಶದ ಸತ್ಪ್ರಜೆಯನ್ನಾಗಿ ಮಾಡಬೇಕೆಂಬ ಹಂಬಲ. ಆದರೆ ರಾಜ ಅಣ್ಣನ ಎಲ್ಲಾ ಆಸೆಯನ್ನು ಮಣ್ಣುಗೂಡಿಸಿ ಕಂಟಕ ಪ್ರಾಯನಾಗಿ ಬೆಳೆಯುತ್ತಾನೆ. ಅಣ್ಣ ಆತನನ್ನು ಕೊಂದು ಸಮಾಜಕ್ಕೆ ದೇವಮಾನವನಾಗುತ್ತಾನೆ.

ಮಣ್ಣಿನ ಮಗ; ರಾಜ ದಾಯಾದಿಗಳ ಮೋಸ ವಂಚನೆಗಳಿಂದ ಜೈಲು ಸೇರಿ ಬಿಡುಗಡೆ ಹೊಂದಿದ ಮೇಲೆ ಊರಿನವರಿಂದ ಬಹಿಷ್ಕಾರಕ್ಕೆ ಒಳಗಾಗಿ ತನ್ನ ಪಾಲಿಗೆ ಬಂದ ಜಂಬರು ಭೂಮಿಯಲ್ಲೇ ಕ್ರಮದಿಂದ ದುಡಿದು ಒಳ್ಳೆಯ ಬೆಳೆ ತೆಗೆದು ಊರಿಗೆ ಆದರ್ಶ ಪ್ರಾಯನಾದ ರೈತನೆನಿಸುತ್ತಾನೆ. ಇವನಿಗೆ ಈ ನಿಟ್ಟಿನಲ್ಲಿ ಸಹಾಯಕ್ಕಾಗಿ ಹೆಣ್ಣೊಬ್ಬಳು ನಿಲ್ಲುತ್ತಾಳೆ.

ಭಲೇ ಬಸವ; ಮಗ ಬಸವ ಜಮೀನು ಸಾಗುವಳಿ ಮಾಡುತ್ತಿರುತ್ತಾನೆ. ತಂಗಿ ಲಕ್ಷ್ಮೀ ತಮ್ಮ ಶಂಕರ ಪಟ್ಟಣದಲ್ಲಿ ಓದುತ್ತಿರುತ್ತಾರೆ. ಇವರು ಭದ್ರಯ್ಯನ ಸಾಲದ ಕಪಿ ಮುಷ್ಠಿಗೆ ಸಿಲುಕುವನು. ಗಂಗಾ ಎಂಬುವಳನ್ನು ಬಸವ ಪ್ರೀತಿಸುತ್ತಿರುತ್ತಾನೆ. ಅವಳಿಂದಾಗಿ ಬಸವ ಆರು ತಿಂಗಳು ಊರಿನಿಂದ ಬಹಿಷ್ಕಾರಕ್ಕೊಳಗಾಗುವನು. ಪಟ್ಟಣಕ್ಕೆ ಹೋಗಿ ಪೈಲ್ವಾನನಾಗಿ ಕುಸ್ತಿಮಾಡಿ ಹಣ ಸಂಪಾದಿಸಿ ಭದ್ರಯ್ಯನ ಸಾಲ ತೀರಿಸುವನು. ಒಮ್ಮೆ ತಮ್ಮನ ಮೇಲೆಯೂ ಕುಸ್ತಿ ಮಾಡಬೇಕಾಗಿ ಬರುವುದು. ಭದ್ರಯ್ಯನ ಕಡೆಯವರು ತಂಗಿ ಲಕ್ಷ್ಮಿಯನ್ನು ಅಪಹರಿಸಿದಾಗ ಬಸವ ಅಲ್ಲಿಗೆ ಧಾವಿಸಿ ಹೋರಾಡುತ್ತಾನೆ. ಕೊನೆಗೆ ಸುಖಾಂತವಾಗುತ್ತದೆ.

ನಾಡಿನಭಾಗ್ಯ; ಈ ಚಿತ್ರದಲ್ಲಿ ಹಳ್ಳಿಯ ಒಬ್ಬಯುವಕ ಪಟ್ಟಣದಲ್ಲಿದ್ದು, ವ್ಯವಸಾಯ ಕಾಲೇಜಿನಲ್ಲಿ ಪದವಿಯನ್ನು ಪಡೆದು ಮತ್ತೆ ಹಳ್ಳಿಗೆ ಹಿಂತಿರುಗಿ ಹಳ್ಳಿಯ ಸಮಸ್ತ ಅಭಿವೃದ್ಧಿಗೆ ಪಣತೊಟ್ಟು ಹಳ್ಳಿಯನ್ನು ಒಂದು ಮಾದರಿ ಹಳ್ಳಿಯಾಗಿಸುತ್ತಾನೆ.

ಮಣ್ಣಿನ ಮಗಳು; ಭೂತಾಯಿಯನ್ನು ಪ್ರೀತಿಸುವ ನಾಯಕಿ, ಭೋಗ ವಿಲಾಸದಲ್ಲಿ ಮುಳುಗಿದ ನಾಯಕ. ದುಶ್ಚಟಗಳ ದಾಸನಾದ ನಾಯಕ ಸಾಯುತ್ತಾನೆ. ಆಗ ನಿರ್ಗತಿಕಳಾದ ನಾಯಕಿ ತನ್ನ ತಾಳಿ ಮಾರಿ ತುಂಡು ಭೂಮಿಯಲ್ಲಿ ಬೇಸಾಯ ಮಾಡಿ ಮಕ್ಕಳನ್ನು ಕಷ್ಟ ಪಟ್ಟು ಬೆಳೆಸುತ್ತಾಳೆ. ತಾಯಿಯಂತೆ ಬೆಳೆದ ಮಕ್ಕಳು ತಾಯಿಯೊಡನೆ ಭೂಸೇವೆ ಮಾಡಿ ಮಣ್ಣಿನ ಮಕ್ಕಳೆನಿಸುತ್ತಾರೆ. ಈ ಮಧ್ಯೆ ನಡೆಯುವ ಸಂಘರ್ಷದಲ್ಲಿ ತಾಯಿ ಗೆಲ್ಲುತ್ತಾಳೆ. ಮಣ್ಣಿನ ಮಗಳ ಹಿರಿಮೆಯನ್ನು ಸಾರುವ ಚಿತ್ರ. ಚೋಮನ ದುಡಿ ತುಂಡು ಭೂಮಿಗಾಗಿ ಜೀವನ ವಿಡೀ ಹಂಬಲಿಸುವ ಚೋಮ ಎಂಬ ಜೀತದಾಳಿನ ಕಥೆ. ತುಂಡು ಭೂಮಿ ನೀಡುವ ಆಸೆಯನ್ನು ತೋರುತ್ತ ಚೋಮ ಹಾಗೂ ಅವನ ಇಡೀ ಸಂಸಾರವನ್ನು ಶೋಷಿಸುತ್ತಾರೆ. ಮಗ, ಮಗಳು ಎಲ್ಲವನ್ನೂ ಕಳೆದುಕೊಂಡು ಏಕಾಂಗಿಯಾಗುವ ಚೋಮ ದುಡಿಯೊಂದನ್ನೇ ನೆಚ್ಚಿಕೊಂಡು ಬದುಕುತ್ತಾನೆ. ಕಡೆಗೆ ಅದನ್ನು ಬಡಿಯುತ್ತ ಬಡಿಯುತ್ತಲೇ ಸಾಯುತ್ತಾನೆ.

ಬೆಳುವಲದ ಮಡಿಲಲ್ಲಿ; ನಾಯಕ ತನಗೆಂದು ಸರ್ಕಾರ ನೀಡಿದ ಜಂಬರು ಭೂಮಿಯನ್ನು ತನ್ನ ಬೆವರು ಸುರಿಸಿ, ಕಷ್ಟಪಟ್ಟು ಫಲವತ್ತಾಗಿ ಮಾಡುತ್ತಾನೆ. ಅವನ ಮಡದಿಯಾದವಳು ಕೂಡ ಅವನ ಹೆಗಲಿಗೆ ಹೆಗಲು ಕೊಟ್ಟು ದುಡಿಯುತ್ತಾಳೆ. ಎಲ್ಲವೂ ಸರಿಯಾದಾಗ ಮಕ್ಕಳು ಕೈಕೊಡುತ್ತಾರೆ. ಎದೆಗುಂದದ ನಾಯಕ ಕಷ್ಟಪಟ್ಟು ದುಡಿದು ಆದರ್ಶ ರೈತನೆನಿಸಿಕೊಳ್ಳುತ್ತಾನೆ.

ಬೆಳುವಲದ ಮಡಿಲಲ್ಲಿ ಬೆವಾರ ಹನಿ ಬಿದ್ದಾಗ
ಒಂದೊಂದು ಬೆವರ ಹನಿ ಮುತ್ತಾಯ್ತದೋ
ರಾಗಿಯ ಜೋಳದ ತೆನಯಾಯ್ತದೋ
ಬೆಳುವಲದ ಮಡಿಲಲ್ಲಿ .... ಬೆವರ ಹನಿ ಬಿದ್ದಾಗ
ಒಂದೊಂದು ಅನ್ನದ ತುತ್ತಾಯ್ತದೋ
ದುಡಿಮೇಲೆ ಯಾವತ್ತು ಇರಬೇಕು ಭಕ್ತಿ
ಬಡತನದ ಒಡ್ಲೋಕೆ ಅದು ಒಂದೇ ಯುಕ್ತಿ

ದುಡಿಯೋರೆ ನಾಡಿನ ಬಲು ದೊಡ್ಡ ಶಕ್ತಿ
ಬೆಳೆಯೋರ ಕೈಗಳೆ ದೇಶಕ್ಕೆ ಆಸ್ತಿ
ಈ ನಮ್ಮ ಶಕ್ತೀಲೀ ನಂಬಿಕೆ ಇಟ್ಟಾಗ
ನಾವ್ಕಾಣೋ ಕಸವೆಲ್ಲ ರಸವಾಯ್ತುದೋ
ನಾವ್ಕಾಣೋ ಕನಸೆಲ್ಲ ನನಸಾಯ್ತೋ
ಉಳವೋನೆ ಲೋಕಕ್ಕೆ ಬೇಕಾದ ಗೆಳೆಯ
ಭೂತಾಯಿ ಭರವ ನೂರ ನೇಗಿಲನೆಂಟ
ಭೂತಾಯಿ ಭರವ ಈ ನೆಲದ ನಂಟ
ಅವನಿಂದಲೇ ಅಳಿಯೋದು ಹಸಿ ವಿನಾ ಸಂಕ್ಟ

ಈ ಭಂಟ ದುಡಿದಾಗ ಭೂದೇವಿ ನಗ್ತಾಳೆ
ಈ ಭಂಟ ದುಡಿದಾಗ ಭೂದೇವಿ ನಗ್ತಾಳೆ
ಅವಾಗ್ಲೆ ನೆಲವೆಲ್ಲ ಹಸಿರಾಯ್ತು ದೋ
ಎಲ್ಲರ ಬಾಳಿನ ಉಸಿರಾಯ್ತುದೋ
ಬೆಳುವಲದ ಮಡಿಲಲ್ಲಿ ಬೆವಾರ ಹನಿ ಬಿದ್ದಾಗ
ಒಂದೊಂದು ಬೆವರ ಹನಿ ಮುತ್ತಾಯ್ತುದೋ
ರಾಗಿಯ ಜೋಳದ ತೆನಯಾಯ್ತುದೋ

ತಬ್ಬಲಿಯು ನೀನಾದೆ; ಮಗನೆ ಗ್ರಾಮ ಪರಿಸರದಲ್ಲಿ ವ್ಯವಸಾಯ ಮಾಡುತ್ತಿರುತ್ತಾರೆ. ಇವರಿಗೆ ಗೋಮಾತೆ ಬಹಳ ಪವಿತ್ರವೆಂಬ ಭಾವನೆಯುಂಟು. ಊರ ಮಗ ವಿದೇಶದಲ್ಲಿ ಕೃಷಿಯನ್ನೇ ಕಲಿತು ಬಂದರೂ ವಿಧಿಯಾಚರಣೆ, ನಂಬಿಕೆಗಳಲ್ಲಿ ಒಲವು ಕಡಿಮೆಯಿರುತ್ತದೆ. ಅದಕ್ಕೆ ಅವನ ವಿದೇಶಿ ಹೆಂಡತಿಯೂ ಕೊಂಚ ಮಟ್ಟಿಗೆ ಕಾರಣವಾಗಿರುತ್ತಾಳೆ. ಹೊರಗಿನ ಶಕ್ತಿ ಒಳಗಿನ ನಂಬಿಕೆಗಳ ದಂಡುವಿನ ಸಂಘರ್ಷ ವಾಸ್ತವ - ಅವಾಸ್ತವಗಳ ತಾಕಲಾಟವನ್ನು ಹೇಳುತ್ತ ಹೋಗಿದೆ.

ವೈಜ್ಞಾನಿಕ ತಿಳುವಳಿಕೆಗಳನ್ನು ಮೀರಿದ ಯಾವುದೋ ನಂಬಿಕೆ. ಭಾರತೀಯರ ಜೀವನ ವಿಧಾನ ಕುರಿತಂತೆ ಘಟನಾವಳಿಗಳು, ತರ್ಕ, ಪ್ರಶ್ನೆಗಳು ತುಂಬಿದ ಗಂಭೀರವಾದ ಕಥಾ ಭಾಗ ಈ ಚಿತ್ರದಲ್ಲಿದೆ.

ದೇವರೇ ದಿಕ್ಕು; ಊರ ಜಮೀನ್ದಾರ, ಬಡ ಜನತೆಯನ್ನು ಬಂಡ ಮಟ್ಟ ಶೋಷಣೆ ಮಾಡಿ ಬೊಕ್ಕಸ ತುಂಬಿಸಿಕೊಳ್ಳುವ ಕ್ರೂರಿಯಿರುತ್ತಾನೆ. ಆತನಿಗೊಬ್ಬ ಚೆಲುವೆ, ಊರಿಗೆ ಬಂದ ವಿದ್ಯಾವಂತ ಯುವಕನಿಂದ ಗ್ರಾಮದಲ್ಲಿ ನೊಂದವರಿಗೆ ಸಮಾಧಾನ ಸಿಗುತ್ತದೆ. ಸಾಹುಕಾರನ ವಿರುದ್ಧ ನಿಂತ ಯುವಕ, ಅವಳ ಮಗಳನ್ನು ವಿವಾಹವಾದ ಮೇಲೆ ಆತನ ಮನಸ್ಸು ಪರಿವರ್ತನೆಯಾಗಿ ಆತನು ಶೋಷಕನಾಗುತ್ತಾನೆ. ಹಿಂಸೆಗಳ ಸಾಲುಸಾಲು ಘಟಿಸಿ ಆಕಸ್ಮಿಕಗಳಿಂದ ಆತ ಮತ್ತೆ ಹಳೆಯ ಆದರ್ಶ ವ್ಯಕ್ತಿಯಾಗಿ ಊರ ಹಿತ ಕಾಯುತ್ತಾನೆ.

ಚಂದನದ ಗೊಂಬೆ; ಮಧ್ಯಮ ವರ್ಗದ ಕುಟುಂಬ ಮೌಲ್ಯಗಳಿಗಾಗಿ ಬದುಕುವ ಮನುಷ್ಯರು ಎಲ್ಲವನ್ನು ಮೀರಿ ಬದುಕನ್ನು ಸಹನೀಯ ಮಾಡುವುದು, ಗಂಡ ಹೆಂಡಿರ ನಡುವಿನ ಸಹಜ ಪ್ರೇಮತ್ಯಾಗವಿದೆ. ಕೃಷಿಯನ್ನೇ ಅವಲಂಬಿಸಿ ಜೀವನ ನಡೆಸುವ ಕುಟುಂಬ ಇವರದು. ಈ ಕೃಷಿಗಾಗಿಯೇ ಬಾವಿಯನ್ನು ತೋಟಿಸುವಾಗ ಮಣ್ಣು ಕಳಚಿ ಬಿದ್ದು ಸಾಯುತ್ತಾನೆ. ಇಂತಹ ಸಂದರ್ಭದಲ್ಲಿ ವಿಧವೆ ಪತ್ನಿಯ ಒಂಟಿ ಜೀವನದಲ್ಲಿ ಅನೇಕ ಕಹಿ ಪ್ರಸಂಗಗಳು. ನಿಂದನೆ, ಅಪವಾದ ಕಡೆಗೆ ಆಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

ರೈತನ ಮಕ್ಕಳು; ಒಕ್ಕಲು ತನವೇ ಪ್ರಧಾನವಾದ ಗ್ರಾಮ ಜೀವನ, ಒಟ್ಟು ಕುಟುಂಬ, ಆಧುನಿಕ ಜೀವನಕ್ಕೆ ಒಗ್ಗಿದವರಿಂದ ವಿಭಜಿತವಾದ ಸಂಸಾರ. ಹಿರಿಯ ಮಗ ಅತಿಯಾದ ಒಳ್ಳೆಯತನ, ಜನಪ್ರೀಯತೆ ಪಡೆದವನು. ಆಕಸ್ಮಿಕ ಘಟನೆಗಳಿಂದಾಗಿ ಅಪಕೀರ್ತಿಗೆ, ನಿಂದೆಗೆ ಒಳಗಾಗುವನು, ನಿರಪರಾಧಿ ಎಂದು ಸಾಬೀತಾದರೂ ಒಲ್ಲದ ಬದುಕನ್ನು ತಿರಸ್ಕರಿಸಿ ಕತ್ತಲಲ್ಲಿ ಕರಗುವನು.

ಮುನಿಯನ ಮಾದರಿ; ದೊಡ್ಡೇ ಗೌಡರ ಜೀತದಾಳು ಮುನಿಯ. ದೊಡ್ಡೇಗೌಡರ ಮಗ ನ್ಯಾಯಶಾಸ್ತ್ರ ಓದಿಬಂದಿರುತ್ತಾನೆ. ಬಾಲ್ಯದ ಗೆಳೆಯ ಮುನಿಯ ಹೆಬ್ಬೆಟ್ಟೊತ್ತುತ್ತಿದ್ದ ಅವನಲ್ಲಿ ಕ್ರಾಂತಿಯ ಬೀಜ ಮೊಳಕೆಯೊಡೆಯುವಂತಾಗಿಸುವನು. ಮಗನ ಕಾರ್ಯ ತಂದೆಗೆ ನುಂಗಲಾಗದ ತುತ್ತಾಯಿತು. ಜಮೀನ್ದಾರಿ ಪದ್ಧತಿ, ಜೀತ ಪದ್ಧತಿಯ ಬಗ್ಗೆ ಚಿತ್ರಣವಿದೆ.

ಕಾಮನಬಿಲ್ಲು ; ಸೂರಿ ಚಂದ್ರು ಪ್ರಾಣ ಸ್ನೇಹಿತರಿರುತ್ತಾರೆ. ಹಿರಿಗೌಡರ ಮೊಮ್ಮಗಳು ಕೃಷಿ ಪದವೀಧರೆಯಾಗಿರುತ್ತಾಳೆ. ಇವಳು ಸೂರಿಗೆ ಕೃಷಿ ಮಾಡಲು ನೆರವಾಗಿ ಅಧಿಕ ಇಳುವಳಿ ಬರುವಂತೆ ಮಾಡುವಳು. ಗೌಡರ ಮೊಮ್ಮಗಳು ಸೂರಿಯನ್ನು ಪ್ರೀತಿಸುತ್ತಾಳೆ. ವಿಧುರನಾದ ಸೂರಿಯ ಸ್ನೇಹಿತ ಚಂದ್ರನಿಗೂ ಅವಳಲ್ಲಿ ಒಲವು ಮೂಡುತ್ತದೆ. ಗೆಳೆಯನಿಗಾಗಿ ತ್ಯಾಗಮಾಡಿ. ಅಂಗವಿಕಲೆಯೊಂದಿಗೆ ವಿವಾಹವಾಗುವ ಔದಾರ್ಯ ಸೂರಿಯದಿರುತ್ತದೆ. ಸೂರಿ ಕೊನೆಗೆ ಅಂಗವಿಕಲೆಯನ್ನು ಮದುವೆಯಾಗುತ್ತಾನೆ. ಚಿತ್ರದಲ್ಲಿರುವ

ನೇಗಿಲ ಹಿಡಿದ ಹೊಲದೊಳು ಆಡುತ ಎಳುವ ಯೋಗಿಯ ನೋಡಲ್ಲಿ

ಫಲವ ಬಯಸುವ ಸೇವೆಯ ಪೂಜೆಯ ಕರ್ಮದೆ ಇಹಪರ ಸಾಧನವು ।

ಕಷ್ಟದೊಳೆನ್ನದೆ ದುಡಿಯುವವನೆ ತ್ಯಾಗಿ ಸೃಷ್ಟಿ ನಿಯಮದೊಳಗವನೇ ಭೋಗಿ ॥

ಉಳವಾ ಯೋಗಿಯ ನೋಡಲ್ಲಿ ಹೆ ..... ಏ ಏ

ಲೋಕದೊಳಗೇನೇ ನಡೆಯುತಿರಲಿ ತನ್ನೀ ಕಾಯಕನ ಬಿಡನೆಂದೂ ಓ .... ಓ .... ಓ ....

ರಾಜ್ಯಗಳುದಿಸಲಿ ರಾಜ್ಯಗಳಳಿಯಲ್ಲಿ ಹಾರಲಿ ಗದ್ದುಗೆ ಮುಕುಟಗಳೂ ।

ಮುತ್ತಿಗೆ ಹಾಕಲಿ ಸೈನಿಕರೆಲ್ಲ ಬಿತ್ತು ಬಿಡುವುದ ನವ ಬಿಡುವುದೇ ಇಲ್ಲ

ಉಳುವಾಯೋಗಿಯ ನೋಡಲ್ಲಿ ಹೆ ..... ಏ ಏ

ಯಾರೂ ಅರಿಯದ ನೇಗಿಲ ಯೋಗಿಯೂ ಲೋಕಕ್ಕೆ ಅನ್ನದ ನೀಡುವರು ॥

ಹೆಸರನು ಬಯಸದೆ ಅತಿ ಸುಖಗಳಿಸದೆ ದುಡಿವನು ಗೌರವವಾಶಿಸದೆ ॥

ನೇಗಿಲ ಕುಲದೊಳಗಡಿಗಿದೆ ಕರ್ಮ।

ನೇಗಿಲ ಮೇಲೆಯೇ ನಿಂತಿದೆ ಧರ್ಮ

ಉಳುವಾಯೋಗಿಯ ನೋಡಲ್ಲಿ । ಎಂಬ ಹಾಡು ರೈತನ ಮಹತ್ವವನ್ನು ಸಾರುತ್ತದೆ.

ಮಳೆ ಬಂತು ಮಳೆ; ಚಿತ್ರದಲ್ಲಿ ಊರಿಜನ ಜನರೆಲ್ಲ ಮಳೆ ಬರುವುದಕ್ಕಾಗಿಯೇ ಕಾದು ಕುಳಿತಿರುತ್ತಾರೆ. ಭೂಮಿಯನ್ನೇ ಅವಲಂಬಿಸಿ ಜೀವನ ಮಾಡುವ ಇವರು ಕೆರೆಯಲ್ಲಿ ನೀರಿಲ್ಲದೆ ಬತ್ತಿ ಹೋಗಿರುತ್ತದೆ. ಇಂತಹ ಸಮಯದಲ್ಲಿ ಯಾವುದೇ ಕೃಷಿ ಕೆಲಸ ಮಾಡಲಾಗದೆ ಊರಿನ ಜನರೆಲ್ಲ ಮೊಡದ ಕಡೆ ಮುಖಮಾಡಿ ಮಳೆ ಬರುವುದನ್ನೇ ಕಾಯುತ್ತಿರುತ್ತಾರೆ. ಹಳ್ಳಿಯ ಜಮೀನ್ದಾರನು ರೈತರಿಗೆ ಸಾಲ ಕೊಡುವುದರ ಮೂಲಕ ಅವರ ಜಮೀನನ್ನೆಲ್ಲಾ ತಾನೇ ತೆಗೆದುಕೊಳ್ಳುತ್ತಿರುತ್ತಾನೆ. ಕೊನೆಗೊಂದು ದಿನ ಮಳೆ ಬಂದು ಊರಿನ ಜನರಿಗೆಲ್ಲ ಸಂತೋಷವಾಗುತ್ತದೆ. ಚಿತ್ರದಲ್ಲಿ ರೈತನ ಜೀವನದ ಬಗ್ಗೆ ಕಥೆಯಿದ್ದರೂ ಸಿನಿಮಾದ ದೃಷ್ಟಿಯಿಂದ ಬೇರೆ ಕೆಲವು ಅಂಶಗಳು ಸೇರಿಕೊಂಡಿವೆ. ಜಮೀನ್ದಾರನು ಕೆಟ್ಟ ವ್ಯಕ್ತಿಯಾಗಿದ್ದರಿಂದ ಅವನು ಸತ್ತಾಗ ಊರಿನ ಜನ ಅವನನ್ನು ನೀರಿಗೆ ಎಸೆಯುತ್ತಾರೆ. ಆದರೆ ನೀರಲ್ಲಿರುವ ಮೊಸಳೆಯೊಂದು ಅವನನ್ನು ತಿನ್ನುವುದರಿಂದ ಆ ಮೊಸಳೆಗೂ ದುಷ್ಟ ಬುದ್ಧಿ ಬರುವ ಚಿತ್ರಣವಿದೆ. ಮೊಸಳೆಯೊಂದಿಗೆ ಹೋರಾಟ, ಪ್ರಣಯ, ಸಾಹಸ ಹಾಗೂ ಭಾವುಕತೆ ತುಂಬಿಕೊಂಡ ಕಥೆ ಇದರಲ್ಲಿದೆ.

ಭೂಮಿ ತಾಯಾಣೆ; ಜಮೀನ್ದಾರನ ದೌರ್ಜನ್ಯದಿಂದ ಛಿಧ್ರ ಛಿದ್ರವಾದ ಒಂದು ರೈತ ಕುಟುಂಬ ಕೊನೆಯಲ್ಲಿ ಒಂದಾಗುವ ಕಥೆ.

ಅಂಜದ ಗಂಡು ;ಧೈರ್ಯಶಾಲಿ ತರುಣನೊಬ್ಬನ ಸಾಹಸದ ಕತೆ. ಈ ಚಿತ್ರದ ಯುವಕ ನಗರದಲ್ಲಿ ಬೆಳೆದು ದುಂದು ವೆಚ್ಚ ಮಾಡುತ್ತಿರುತ್ತಾನೆ. ತಂದೆ ಮಗನಿಗೆ ಬುದ್ಧಿ ಕಲಿಸಲೆಂದು ಅವನನ್ನು ಹಳ್ಳಿಗೆ ಕಳುಹಿಸುತ್ತಾನೆ. ಯುವಕನು ಹಳ್ಳಿಯಲ್ಲಿ ಕೃಷಿ ಮಾಡುವುದನ್ನು ಕಲಿಯುತ್ತಾನೆ. ಕೃಷಿ ಮಾಡುವವರ ಜೀವನ ಹೇಗಿರುತ್ತದೆ ಎಂಬುದನ್ನು ತಿಳಿದುಕೊಳ್ಳುತ್ತಾನೆ.

ಬಡವರ ಆಸ್ತಿಗೆ ಹೊಂಚು ಹಾಕುವ ದುರುಳರು ಕೃಷಿ ಮಾಡುವ ಭೂಮಿಯಲ್ಲಿ ಫ್ಯಾಕ್ಟರಿ ತೆರೆಯುವ ಯೋಚನೆ ಮಾಡುತ್ತಾರೆ. ಆದರೆ ಯುವಕ ಮತ್ತು ಆತನ ಮನೆಯವರು ಇದಕ್ಕೆ ಒಪ್ಪುವುದಿಲ್ಲ. ಭೂಮಿಯನ್ನು ಉಳಿಸಿಕೊಳ್ಳುತ್ತಾರೆ.

ರಾಮಣ್ಣ ಶಾಮಣ್ಣ; ಎಂಬ ಇಬ್ಬರು ಸೋದರರು ಹೆಚ್ಚಾಗಿ ವಿದ್ಯೆಯನ್ನು ಕಲಿತಿರುವುದಿಲ್ಲ ಕೃಷಿ ಮಾಡಿಯೇ ಜೀವನ ಸಾಗಿಸುತ್ತಾರೆ. ಈ ಇಬ್ಬರೂ ಒಬ್ಬಳನ್ನೇ ಪ್ರೀತಿಸುತ್ತಾರೆ. ಈ ಇಬ್ಬರೂ ಒಬ್ಬಳನ್ನೇ ಪ್ರೀತಿಸುತ್ತಾರೆ. ಆದರೆ ಆಕೆ ಕಿರಿಯವನನ್ನು ಪ್ರೀತಿಸುತ್ತಾಳೆ. ಮೋಸದ ಸಂಚಿಗೆ ಬಲಿಯಾಗಿ ಬೇರೆ ಬೇರೆಯಾಗುತ್ತಾರೆ. ಕೊನೆಗೆ ದುಷ್ಟರನ್ನು ಶಿಕ್ಷಿಸಿ ಅಜ್ಜಿಯ ಅಣತೆಯಂತೆ ಮದುವೆಯಾಗುತ್ತಾರೆ. ಇಬ್ಬರೂ ಸೇರಿ ಕೃಷಿ ಮಾಡುವುದನ್ನೇ ಮುಂದುವರೆಸಿ ಕೊಂಡು ಹೋಗುತ್ತಾರೆ. ಕೊನೆಗೆ ಸುಖಾಂತವಾಗುತ್ತದೆ.

ಭುಜಂಗಯ್ಯನ ದಶಾವತಾರ; ಕೃಷಿಕನಾದ ಭುಜಂಗಯ್ಯ ಮಳೆಯಿರದ ಕಾರಣಕ್ಕೆ ಹೊಟೇಲು ವ್ಯಾಪಾರ ಮಾಡುತ್ತಾನೆ. ಅಲ್ಲಿಗೆ ಬಳೆಗಾರ ಶೆಟ್ಟಿ ಮತ್ತು ಆತನ ಮಗಳು ಬರುತ್ತಾರೆ. ಹೆಂಡತಿ ಮುನಿಸಿಕೊಂಡು ಹೋದ ಬಳಿಕ ಬಳೆಗಾರನ ಮಗಳು ಕೈ ಹಿಡಿಯುತ್ತಾಳೆ. ಕಣ್ಣು ಕಳೆದುಕೊಳ್ಳುವ ಗಂಡನಿಗೆ ಕಣ್ಣಾಗುತ್ತಾಳೆ. ಗೌಡರ ಮಗ ಆಕೆಯನ್ನು ಕೆಡಿಸುತ್ತಾನೆ. ಆದರೆ ಭುಜಂಗಯ್ಯ ಆತನಿಗೆ ಹಾವು ಕಡಿದು ಔಷಧಿ ಇಲ್ಲದಾದಾಗ ಬಾಯಿಯಿಂದ ವಿಷ ಹೀರಿ ಆತನನ್ನು ಬದುಕಿಸಿ ತಾನು ಸಾಯುತ್ತಾನೆ. ಅತ್ತ ಆತನ ಹೆಂಡತಿ ಅವಮಾನ ಸಹಿಸಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

ಈ ಚಿತ್ರದಲ್ಲಿ ಭುಜಂಗಯ್ಯ ಕೃಷಿಕನಾದರೂ ಮಳೆಯಿರದ ಕಾರಣಕ್ಕೆ ಹಲವು ಬೇರೆ ಉದ್ಯೋಗಗಳನ್ನು ಮಾಡಲು ಪ್ರಾರಂಭಿಸುತ್ತಾನೆ. 'ಮಳೆ' ಎನ್ನುವುದು ರೈತನಿಗೆ ಎಷ್ಟು ಮುಖ್ಯ ಇತ್ಯಾದಿ ಅಂಶಗಳು ಕಂಡು ಬರುತ್ತವೆ.

ಚಿಕ್ಕೆಜಮಾನ್ರು ;ಆದರ್ಶದ ಕಥೆ. ಕಥೆಯನಾಯಕ ಊರಿನ ಜನರಿಗೆಲ್ಲಾ ಆದರ್ಶ ಪ್ರಾಯನಾದ ವ್ಯಕ್ತಿ. ಎಲ್ಲರ ಪಾಲಿಗೂ ಚಿಕ್ಕೆಜಮಾನರೆಂದೇ ಖ್ಯಾತ.

ಅವನು ಮೆಚ್ಚಿ ಮದುವೆಯಾದ ಯುವತಿ ಅವನಿಗೆ ತಕ್ಕ ಹೆಂಡತಿ, ಇವನ ಖ್ಯಾತಿ ಹಲವು ಧೂರ್ತರಿಗೆ ಕಣ್ಣರಾಗಿತ್ತು. ಇವನ ಜನಪ್ರಿಯತೆಯನ್ನು ಸಹಿಸದ ಆ ದುರುಳರು ಅವನ ಚಾರಿತ್ರ್ಯಕ್ಕೆ ಕಳಂಕ ಲೇಪಿಸಲು ಯತ್ನಿಸುವರು. ಆ ಪ್ರಯತ್ನ ಫಲಿಸದೆ ಆ ಧೂರ್ತರು ತಾವು ತೋಡಿದ ಹಳ್ಳಕ್ಕೆ ತಾವೇ ಬೀಳುತ್ತಾರೆ. ಚಿಕ್ಕಜಮಾನ ಮತ್ತಷ್ಟು ಪ್ರಖರನಾಗುತ್ತಾನೆ. ಚಿತ್ರದ ಕಥೆ ಇದಾದರೂ ಚಿತ್ರದಲ್ಲಿ ಹಳ್ಳಿಯ ಸನ್ನಿವೇಶ ಚಿತ್ರಣಗಳು ಮೂಡಿ ಬಂದಿವೆ. ರೈತಾಪಿ ಜನರ ಬವಣೆಗಳು, ಕೃಷಿ ಕೆಲಸಗಳು ಹೊಳುಮೆ ಮಾಡುವುದು, ಬಿತ್ತುವುದು. ಇತ್ಯಾದಿ ಅಂಶಗಳು ಈ ಚಿತ್ರದಲ್ಲಿ ಮೂಡಿ ಬಂದಿವೆ.

ಅಣ್ಣಯ್ಯ; ಈ ಚಿತ್ರದಲ್ಲಿ ಹೆಂಡತಿಯನ್ನು ಕಳೆದುಕೊಂಡು ವಿಧುರನಾದವ ತನ್ನ ಮಗ ಅಣ್ಣಯ್ಯನಿಗಾಗಿ ಮರು ಮದುವೆಯಾಗುತ್ತಾನೆ. ಮನೆಗೆ ತಾಯಿಯ ಸ್ಥಾನಕ್ಕೆ ಬಂದವಳು ಮಗನಿಗೆ ಮಲತಾಯಿಯಾದವಳೇ ಹೊರತು . ತಾಯಿಯಾಗಲೇ ಇಲ್ಲ. ಮಗನೋ ಮಲತಾಯಿಯನ್ನೇ ತಾಯಿಯಾಗಿ ಕಂಡವ. ಅವಳು ಹಾಕಿದ ಗೆರೆಯನ್ನು ದಾಟದವ, ಮಲತಾಯಿಯೋ ಸದಾ ತನ್ನ ಸ್ವಂತದವರ ಬಗ್ಗೆಯೇ ಚಿಂತಿಸುವವಳು. ಅಣ್ಣಯ್ಯನ ಕೈಹಿಡಿದು ಬಂದವಳು ಆ ಮಲತಾಯಿ ಹಾಗೂ ಅವಳು ಪರಿವಾರಕ್ಕೆ ಬುದ್ಧಿ ಕಲಿಸಲು ಹೊರಟಾಗ, ಮಲತಾಯಿ ಅಣ್ಣಯ್ಯನಿಗೆ ವಿಷವಿಡುತ್ತಾಳೆ. ತಾನು ತಾಯಿಯಾಗಿ ಕಂಡವಳೇ ವಿಷ ನೀಡಿದರೂ ಮರು ಮಾತಾಡದೆ ಅದನ್ನು ಕುಡಿದು ಮಲತಾಯಿಯನ್ನು ಪರಿವರ್ತಿಸುತ್ತಾನೆ. ಚಿತ್ರದಲ್ಲಿ ಅಣ್ಣಯ್ಯ ಜಮೀನುದಾರನಾಗಿರುತ್ತಾನೆ. ಚಿತ್ರದಲ್ಲಿ ಕೃಷಿಯನ್ನು ಕುರಿತ ಹಲವು ಸನ್ನಿವೇಶಗಳು ನಿರ್ಮಾಣಗೊಂಡಿವೆ. ಬತ್ತ ಕೊಯ್ಯುವ ದೃಶ್ಯ, ದನದ ಕೊಟ್ಟಿಗೆ ಸ್ವಚ್ಛಗೊಳಿಸುವ ದೃಶ್ಯ, ರಾಶಿಮಾಡುವ ದೃಶ್ಯ, ಹಾಗೆಯೇ ಕಾಳುಗಳನ್ನು ಶೇಖರಿಸಿ ಇಡುವ ದೃಶ್ಯ ಹಲವು ದೃಶ್ಯಗಳು ಕೃಷಿಗೆ ಸಂಬಂಧಿಸಿದ್ದಾಗಿದೆ. ಹೀಗೆ ಅಣ್ಣಯ್ಯ ಚಿತ್ರವು ಕೃಷಿ ಸಂಸ್ಕೃತಿಯಿರುವ ಚಿತ್ರವೆಂದು ಹೇಳಬಹುದು.

ಪುಟ್ನಂಜ; ಹಳ್ಳಿಯಲ್ಲೇ ಹುಟ್ಟಿ ಬೆಳೆದ ಮುಗ್ಧಜೀವಿ. ಪಟ್ಟಣದಲ್ಲಿ ಹುಟ್ಟಿ ಬೆಳೆದು ನಾಗರಿಕತೆಯನ್ನು ಮೈಗೂಡಿಸಿಕೊಂಡಿದ್ದ ಅತ್ತೆಯ ಮಗಳನ್ನು ಮುಗ್ಧ ಪುಟ್ನಂಜ ಮದುವೆಯಾಗುತ್ತಾನೆ.

ಪಟ್ಟಣದಲ್ಲಿ ಬೆಳೆದ ಹೆಣ್ಣು ಹಳ್ಳಿಯ ಬದುಕಿಗೆ ಒಗ್ಗದೆ ಅವಳು ಪಟ್ಟಣಕ್ಕೆ ಮರುಳುತ್ತಾಳೆ. ಹೆಂಡತಿಯನ್ನು ತನ್ನ ಹಳ್ಳಿಗೆ ಕರೆತರುವ ಪುಟ್ನಂಜನ ಪ್ರಯತ್ನಗಳು ವಿಫಲಗೊಳ್ಳುತ್ತವೆ. ಅವಳು ಮಗುವಿನ ತಾಯಿಯಾಗುತ್ತಾಳೆ. ನಂತರದಲ್ಲಿನ ಸಂದರ್ಭ ಸನ್ನಿವೇಶಗಳು ಅವಳನ್ನು ಮಾರ್ಪಡಿಸುತ್ತದೆ. ಚಿತ್ರದಲ್ಲಿ ಒಂದು ಹೆಣ್ಣನ್ನು ಪರಿವರ್ತಿಸುವುದು ಮುಖ್ಯ ಕಥೆಯಾದರೂ ಪುಟ್ನಂಜ ಇರುವುದು ಹಳ್ಳಿಯಲ್ಲಿ ಹಾಗೂ ಅವನು ಒಬ್ಬ ರೈತ. ಈ ಚಿತ್ರದ ಹಲವು ಸನ್ನಿವೇಶಗಳಲ್ಲಿ ಕೃಷಿ ಸಂಬಂಧಿ ವಿವರಗಳಿವೆ. ''ನಮ್ಮಮ್ಮ ನಮ್ಮಮ್ಮ ಭೂಮಿ ತಾಯಮ್ಮ

ಈ ಸುಗ್ಗಿ ತಂದವಳಾರಮ್ಮ

ನಮ್ಮಮ್ಮ ನಮ್ಮಮ್ಮ ''ಈ ಹಾಡಿನಲ್ಲಿ ಕೃಷಿಗೆ ಸಂಬಂಧಿಸಿದ ಚಿತ್ರಣವಿದೆ. ಅಷ್ಟೇ ಅಲ್ಲದೆ ಪ್ರಸ್ತುತ ಚಿತ್ರದಲ್ಲಿ ನಾಯಕ ಮನೆಯ ಗೋಡೆಗೆ ನೇಗಿಲು ನೇತುಹಾಕಿ ಅದನ್ನು ದೇವರಂತೆ ಪೂಜೆಮಾಡುವ ಸನ್ನಿವೇಶವಿದೆ.

ಭೂಮಿ ತಾಯಿ ಚೊಚ್ಚಲ ಮಗ ;ಈ ಚಿತ್ರದಲ್ಲಿ ಇಬ್ಬರು ನಾಯಕರು ಒಬ್ಬ ಭೂಮಿ ತಾಯಿಯ ಸೇವಕನಾದರೆ, ಇನ್ನೊಬ್ಬ ಕಮೀಷನರ್, ಇಬ್ಬರೂ ಪ್ರಾಣ ಸ್ನೇಹಿತರು, ಭೂಮಿತಾಯಿಯ ಸೇವಕ ರೈತರಪರ ಯುವಕ. ಆದರೆ ಸಂದರ್ಭಗಳು ಪ್ರಾಣ ಸ್ನೇಹಿತರನ್ನು ಮುಖಾಯನ್ನಾಗಿಸುತ್ತದೆ. ರೈತರ ಸಮಸ್ಯೆ ಸಂಕಷ್ಟಗಳಿಗೆ ಸರ್ಕಾರದ ಬೆಂಬಲ ಪಡೆಯಲು ನಡೆಯುವ ಹೋರಾಟದಲ್ಲಿ ಯುವಕ ಸಾಯುತ್ತಾನೆ. ಅಂತಿಮವಾಗಿ ಆತನ ಆದರ್ಶಗಳಿಗೆ ಜಯ ದೊರೆಯುವುದು. ಈ ಚಿತ್ರದಲ್ಲಿ ಯುವಕನು ಭೂಮಿತಾಯಿಯ ಸೇವಕನಾದರೂ ಉಳಿದ ರೈತರ ಸಮಸ್ಯೆಗಳನ್ನು ದೂರಮಾಡಲು ಸರ್ಕಾರದ ವಿರುದ್ಧ ಹೋರಾಡುವನು. ಮಳೆ ಬರದೆ ಬಂಜರು ಆದ ಭೂಮಿಗೆ ಸರ್ಕಾರದಿಂದ ಪರಿಹಾರ ಪಡೆಯಲು ಹೋರಾಡುವನು. ಚಿತ್ರದಲ್ಲಿ ರೈತರ ಪರ ಕಾಳಜಿಯನ್ನು ಗುರುತಿಸಹಬಹುದು.

ಬರ ;ಬಿಜಾಪುರ ಜಿಲ್ಲೆಯಲ್ಲಿ ಬರಗಾಲ ಬಂದು ರೈತರೆಲ್ಲ ಕಂಗಾಲಾಗುವುದು. ಇದಕ್ಕೆ ಪರಿಹಾರವಾಗಿ ಸರ್ಕಾರದಿಂದ ಬರ ಪರಿಹಾರನಿಧಿ ಪಡೆಯಲು ಬವಣೆ ಪಡುವುದು ಇವುಗಳ ಚಿತ್ರವಿದೆ. ಕೃಷಿ ಪ್ರಧಾವಾಗಿರುವ ಚಿತ್ರಗಳೆಂದು ಹೇಳುವಾಗ ಕೇವಲ ಕೃಷಿ ಕೆಲಸ ಮಾಡುವುದು ಬಿತ್ತುವುದು

ಬೆಳೆಯುವುದು ಅಷ್ಟೇ ಅಲ್ಲ, ರೈತನ ಜೀವನಕ್ಕೆ ಮುಖ್ಯವಾಗಿ ಬೇಕಾಗಿರು ಮಳೆಬಾರದೆ ಬರಗಾಲದಲ್ಲಿ ಇದ್ದಾಗ ಅದಕ್ಕೆ ಸರ್ಕಾರದಿಂದ ಹಣವನ್ನು ಪಡೆಯುವುದು ಮುಖ್ಯವಾಗುತ್ತದೆ. ಈ ರೀತಿಯ ಅಂಶಗಳನ್ನು ನಾವು ಹಲವು ಚಿತ್ರಗಳಲ್ಲಿ ಗುರುತಿಸಬಹುದಾಗಿದೆ.

ಬಂಗಾರದ ಮನುಷ್ಯ ; ಟಿ.ಕೆ. ರಾಮರಾವ್ ಅವರ ಕಾದಂಬರಿಯಾದರಿತ ಈ ಚಿತ್ರವನ್ನು ಸಿದ್ಧಲಿಂಗಯ್ಯ ನಿರ್ದೇಶಿಸಿದ್ದಾರೆ. ರಾಜೀವಪ್ಪ ವಿದ್ಯಾವಂತ ಯುವಕನಾದರೂ ತನ್ನ ಅಕ್ಕನ ಮಕ್ಕಳನ್ನು ಸಾಕಲಿಕ್ಕೆಂದು ಕೃಷಿಯನ್ನು ಮಾಡುತ್ತಾನೆ. ಎರಡು ಎಕರೆ ಜಮೀನನ್ನು ಗುತ್ತಿಗೆ ನೀಡಿದ್ದ ಭಾವ ಸಾಯುತ್ತಾನೆ. ಆಗ ರಾಜೀವನು ತನ್ನ ಅಕ್ಕನ ಮಕ್ಕಳ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಹೊತ್ತು ಗುತ್ತಿಗೆ ಕೊಟ್ಟಿದ್ದ ಭೂಮಿಯನ್ನು ವಾಪಸ್ಸು ಪಡೆಯುತ್ತಾನೆ. ಈ ಭೂಮಿಯು ಎರಡು ಎಕರೆ ಇರುವುದರಿಂದ ಮನೆ ಖರ್ಚಿಗೆ ಮತ್ತು ವಿದ್ಯಾಭ್ಯಾಸಕ್ಕೆ ಹಣ ಸಾಕಾಗುವುದಿಲ್ಲವೆಂದು ತಿಳಿದು ಸರಕಾರದಿಂದ ೨೫ ಎಕರೆ ಭೂಮಿಯನ್ನು ಪಡೆದು ಕೃಷಿ ಮಾಡಿ ಶ್ರೀಮಂತನಾಗುವನು. ಹಾಗೆಯೇ ಊರಲ್ಲಿ ಭೂಮಿ ಇರದವರೆಗೆ ಭೂಮಿಯನ್ನು ಕೊಡುಸುವನು ಇವನು ಕೃಷಿಯಲ್ಲಿ ಕೇವಲ ಕಾಳು ಬೆಳೆಗಳನ್ನು ಮಾತ್ರ ಬೆಳೆಯದೆ ತರಕಾರಿ ಹಣ್ಣುಗಳನ್ನು ಸಹ ಬೆಳೆಯುವನು.

ಚಿತ್ರದ 'ಆಗದು ಎಂದು ಕೈಲಾದು ಎಂದು' ಎನ್ನುವ ಹಾಡಿನ ದೃಶ್ಯವೊಂದರಲ್ಲಿ ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳಾದ ಹೂಳುಮೆ ಮಾಡುವುದು, ಬಿತ್ತುವುದು, ಕೊಯ್ಲು ಮಾಡುವುದು ಇತ್ಯಾದಿಗಳನ್ನು ಇದರಲ್ಲಿ ಕಾಣ ಬಹುದಾಗಿದೆ.

ಒಡಹುಟ್ಟಿದವರು; ಅಣ್ಣ ತಮ್ಮಂದಿರಿಬ್ಬರ ಅನ್ಯೋನ್ಯತೆಯನ್ನು ಸಾರುವ ಕತೆ. ಅಣ್ಣ ಹಳ್ಳಿಯಲ್ಲಿ ಕೃಷಿಯನ್ನು ಮಾಡುತ್ತಿರುತ್ತಾನೆ. ತಮ್ಮ ತನ್ನ ವಿದ್ಯಾಭ್ಯಾಸ ಮುಗಿಸಿಕೊಂಡು ಹಳ್ಳಿಗೆ ಹಿಂತಿರುಗುತ್ತಾನೆ. ಅಣ್ಣ ತಮ್ಮಂದಿರಿಬ್ಬರು ಅನ್ಯೋನ್ಯದಿಂದಿರುತ್ತಾರೆ. ಈ ನಡುವೆ ತಮ್ಮನಿಗೆ ನಗರದಲ್ಲಿ ಉದ್ಯೋಗದೊರಕುವುದು. ಆದರೆ ಅಣ್ಣ ಅದಕ್ಕೆ ಒಪ್ಪದೆ ಹಳ್ಳಿಯಲ್ಲಿ ಕೃಷಿ ಮಾಡಲು ಹೇಳುವನು ಅವನಿಗೆ ಕೃಷಿ ಕೆಲಸವನ್ನು ಹೇಳಿಕೊಡುವನು. ತಮ್ಮನಿಗೆ ಮದುವೆ ಮಾಡುವನು ತಮ್ಮನ ಹೆಂಡತಿಯು ಆಸ್ತಿಯಲ್ಲಿ ಪಾಲು ಕೇಳಿದಾಗ ಅವರ ಮಾವನಿಗೆ ಹೃದಯಾಘಾತವಾಗಿ ಸಾಯುವನು.

ಸಾಯುವ ಸಮಯದಲ್ಲಿ ತನ್ನ ದೊಡ್ಡಮಗನಿಂದ ಈ ಮನೆ ಒಡೆಯದಂತೆ ಭಾಷೆ ತೆಗೆದುಕೊಳ್ಳುವನು. ಅದರಂತೆ ಅಣ್ಣ ತಮ್ಮನಿಗೆ ಎಲ್ಲವನ್ನು ಬಿಟ್ಟುಕೊಟ್ಟು ಹೋಗುವನು. ಕೊನೆಗೆ ಎಲ್ಲರೂ ಒಂದಾಗುವರು.

ಇವು ಕೃಷಿ ಸಂಸ್ಕೃತಿಯನ್ನು ಬಿಂಬಿಸುವ ಕೆಲವು ಮಾದರಿ ಚಿತ್ರಗಳು ಮಾತ್ರ. ಹಾಗೆ ನೋಡಿದರೆ ನಮ್ಮ ಬಹುಪಾಲು ಸಿನಿಮಾಗಳು ಒಂದಲ್ಲ ಒಂದು ಸನ್ನಿವೇಶದಲ್ಲಿ ಕೃಷಿಯ ಮಹತ್ವವನ್ನು, ಕೃಷಿ ಸಂಸ್ಕೃತಿಯ ಅಂಶವನ್ನು ಪ್ರತಿಪಾದಿಸುತ್ತವೆ ಎನ್ನುಬಹುದು.

ಇತರ ಪಾರಂಪರಿಕ ವೃತ್ತಿಗಳಾದ ಕುಂಬಾರಿಕೆ, ಕಮ್ಮಾರಿಕೆ,ಚಮ್ಮಾರಿಕೆ,ಕ್ಷೌರ ಮುಂತಾದವುಗಳ ಬಗೆಗಿನ ಪಾತ್ರ ಸನ್ನಿವೇಶಗಳು ಕೆಲವು ಸಿನಿಮಾಗಳಲ್ಲಿ ಕಾಣಿಸಿಕೊಂಡುದಿದೆ. ಉದಾಹರಣೆಗೆ ಭಕ್ತ ಕುಂಬಾರ ಚಿತ್ರದಲ್ಲಿ ಕುಂಬಾರಿಕೆ ವೃತ್ತಿ ಬಗೆಗಿನ ವಿವರಗಳಿವೆ. ದೂರದ ಬೆಟ್ಟ ಚಿತ್ರದಲ್ಲಿ ಕಮ್ಮಾರಿಕೆಯ ಸನ್ನಿವೇಶ ವಿದೆ. ಬೂತಯ್ಯನ ಮಗಅಯ್ಯು ಸಿನಿಮಾದಲ್ಲಿ ಚಮ್ಮಾರನೊಬ್ಬನ ಪಾತ್ರ ಸನ್ನಿವೇಶವಿದೆ. ಬಂಗಾರದ ಮನುಷ್ಯ ಚಿತ್ರದಲ್ಲಿ ಕ್ಷೌರ ವೃತ್ತಿಯ ವಿವರಗಳಿವೆ.

೪.೮ ಕಲೆ-ಕ್ರೀಡೆ, ಆಚಾರ-ವಿಚಾರ, ನಂಬಿಕೆ-ನಡವಳಿಕೆ ಇತ್ಯಾದಿ

ಸಿನಿಮಾಗಳಲ್ಲಿ ಅಭಿವ್ಯಕ್ತಗೊಳ್ಳುವ ದೇಸೀ ಸಂಸ್ಕೃತಿ ಅಂಶಗಳಲ್ಲಿ ಕಲೆ-ಕ್ರೀಡೆ, ಆಚಾರ-ವಿಚಾರ, ನಂಬಿಕೆ - ನಡವಳಿಕೆ ಇತ್ಯಾದಿಗಳೂ ಗಮನಾರ್ಹವಾದವುಗಳೇ ಆಗಿವೆ. ಸಿನಿಮಾ ಒಂದು ಸಮಷ್ಟಿ ಅಥವಾ ಸಮನ್ವಯ ಕಲೆ. ಸಂಗೀತ, ನೃತ್ಯ ನಾಟಕಗಳಂತಹ ಬಹು ಮಾಧ್ಯಮಗಳ ಸಂಗಮ. ವಿದೇಶೀ ಮೂಲದ ಸಿನಿಮಾ ನಮ್ಮಲ್ಲಿ ಹುಟ್ಟಿಕೊಂಡಾಗ ತನ್ನ ಅಂಗೋಪಾಂಗಗಳಾದ ಸಂಗೀತ ನೃತ್ಯ - ನಾಟಕಗಳಂತಹ ಪೂರಕ ಕಲೆಗಳನ್ನು ಅದು ಎಲ್ಲಿಂದ ಪಡೆದುಕೊಂಡಿತು? ಎಂಬ ಪ್ರಶ್ನೆಯನ್ನು ಹಾಕಿಕೊಂಡರೆ ಕೆಲವರು ಅದಕ್ಕೆ 'ವಿದೇಶದಿಂದಲೇ ಪಡೆದುಕೊಂಡಿತು' ಎಂಬ ಉತ್ತರವನ್ನು ನೀಡಬಹುದು. ಆದರೆ ಈ ಉತ್ತರ ಎಲ್ಲಾ ಸಂದರ್ಭದಲ್ಲೂ ಸಮಂಜಸವೆನಿಸದು. ಪಾಶ್ಚಾತ್ಯ ಸಂಗೀತ-ನೃತ್ಯಗಳ ಅಳವಡಿಕೆ ನಮ್ಮ ಸಿನಿಮಾಗಳಲ್ಲಿದ್ದರೂ ಅದುವೇ ಮುನ್ನಲೆಯಲ್ಲಿದೆ ಎಂದು ಹೇಳುವಂತಿಲ್ಲ. ಬಹುಪಾಲು ಸಿನಿಮಾಗಳು ನಮ್ಮ ದೇಸೀ ಕಲಾರೂಪಗಳನ್ನೇ ತಮ್ಮ ಅಂಗೋ ಪಾಂಗಗಳಾಗಿ ಅಳವಡಿಸಿಕೊಂಡು ಬೆಳೆದಿವೆ. ಈಗಾಗಲೇ ಅಲ್ಲಲ್ಲಿ ಪ್ರಸ್ತಾಪಿಸಿರುವಂತೆ ಪ್ರಾರಂಭ ಕಾಲದ ನಮ್ಮ ಸಿನಿಮಾಗಳಲ್ಲಿ ನಮ್ಮದೇ ಆದ ರಂಗಭೂಮಿ. ನಾಟಕಗಳ ದಟ್ಟ ಪ್ರಭಾವವಿದೆ. ನಂತರದಲ್ಲೂ ನಮ್ಮದೇ ಸಾಹಿತ್ಯ ಕೃತಿಗಳ ಆಧಾರದಿಂದ ಹಲವು ಸಿನಿಮಾಗಳು ಹುಟ್ಟಿ ಬಂದವು. ತನ್ನ ಅಂಗೋ ಪಾಂಗಗಳಾದ ಸಂಗೀತ - ನೃತ್ಯಾದಿಗಳನ್ನೂ ನಮ್ಮ ಸಿನಿಮಾ ಬಹುಮಟ್ಟಿಗೆ ನಮ್ಮ ಪರಿಸರದಿಂದಲೇ ಆಯ್ದು ಬಳಸಿಕೊಂಡಿತು.

ಸಂಗೀತ, ನೃತ್ಯಗಳಂತಹ ಕಲಾರೂಪಗಳು ಸಿನಿಮಾದ ಅನಿವಾರ್ಯ ಅಂಗಗಳಾಗಿ ಬಳಕೆಯಾಗುವಂತೆ ಪೂರಕವಾಗಿಯೂ ಬಳಕೆಯಾಗುತ್ತವೆ. ಸಿನಿಮಾಗಳಲ್ಲಿ ನಮ್ಮ ಜನಪದ ಸಂಗೀತ, ಶಾಸ್ತ್ರೀಯ ಸಂಗೀತಗಳೆಂದೂ ಬಳಕೆಯಾಗಿವೆ. ಅದೇ ರೀತಿ ಜನಪದ ಕುಣಿತ, ಶಾಸ್ತ್ರೀಯ ನೃತ್ಯಗಳೆರಡೂ ಬಳಕೆಯಾಗಿವೆ. ನಮ್ಮ ಹಲವು ಸಿನಿಮಾಗಳಲ್ಲಿ ಯಕ್ಷಗಾನ - ಬಯಲಾಟ, ಭೂತಾರಾಧನೆ, ಹರಿಕಥೆ, ಡೊಳ್ಳುಕುಣಿತ, ಹಗಲುವೇಷ, ಕೋಲಾಟ, ಹೋಳಿಕುಣಿತ, ಗೊರವರ ಕುಣಿತ, ಗೀಗೀ ಪದ, ಚೌಡಿಕೆಪದಗಳಂತಹ ಜನಪದ ಕಲಾರೂಪಗಳು ಬಳಗೊಂಡಿದೆ.

ಉದಾಹರಣೆಗೆ ಆನಂದ ಭೈರವಿ ಚಿತ್ರದಲ್ಲಿ ಶಾಸ್ತ್ರೀಯ ನೃತ್ಯವಾದ ಭರತನಾಟ್ಯ ಬಳಕೆಗೊಂಡಿದೆ. ದ್ವೀಪ ಚಿತ್ರದಲ್ಲಿ ಭೂತಾರಧನೆ ಹಗಲುವೇಷ ಚಿತ್ರದಲ್ಲಿ ಹಗಲುವೇಷ ಕುಣಿತ. ದೂರದ ಬೆಟ್ಟ ಚಿತ್ರದಲ್ಲಿ ಹೋಳಿಕುಣಿತ. ಬೆಟ್ಟದತಾಯಿ ಚಿತ್ರದಲ್ಲಿ ಹರಿಕಥೆ ಹೇಳುವುದು ಬಂಗಾರ ಪಂಜರ ಚಿತ್ರ ತಂದೆಯ ನೆನೆದವೋ ತಾಯಿಯನೆನೆವೋ ಹಾಡಿನ ದೃಶ್ಯದಲ್ಲಿ ಗೊರವ ಕುಣಿತವನ್ನು, ಪಾಷರಿಪುಣ್ಯ ಹಾಗೂ ಸಂಗ್ಯಾಬಾಳ್ಯ ಚಿತ್ರದಲ್ಲಿ ಗೀಗೀ ಪದಗಳನ್ನು ಕಾಣಬಹುದಾಗಿದೆ. ಇವಲ್ಲದೆ ಕೋಲಾಟ, ಡೊಳ್ಳುಕುಣಿತ, ಯಕ್ಷಗಾನಗಳು ಹಲವು ಸಿನಿಮಾಗಳಲ್ಲಿ ಸಾಂದರ್ಭಿಕವಾಗಿ ಬಳಕೆಯಾಗಿವೆ.

ಜನಪದ ಕಲೆಗಳಂತೆ ಕಂಬಳ, ಕೋಳಿ ಅಂಕ, ಎತ್ತಿನ ಬಂಡಿ ಓಟಗಳಂತಹ ಗ್ರಾಮೀಣ ಕ್ರೀಡೆಗಳೂ, ಚೆನ್ನಮಣೆ, ಗೋಟುಗುಣಿ, ಕುಂಟೇಬಿಲ್ಲೆ, ಚಿನ್ನಿದಾಂಡು, ಕಬಡ್ಡಿಗಳಂತಹ ನಮ್ಮ ದೇಸೀ ಆಟಗಳೂ ಆಯಾ ಸನ್ನಿವೇಶಗಳಿಗೆ ತಕ್ಕಂತೆ ಕೆಲವು ಸಿನಿಮಾಗಳಲ್ಲಿ ಬಳಕೆಯಾಗಿವೆ. ಉದಾಹರಣೆಗೆ ಸಿಪಾಯಿ ರಾಮು ಹಾಗೂ ಸಿಪಾಯಿ ಚಿತ್ರಗಳಲ್ಲಿ ಕೋಳಿ ಅಂಕ, ಟಗರುಜೂಜು, ಆಟಗಳು, ಪ್ರಚಂಡ ಪುಟಾಣಿಗಳು ಮತ್ತು ಅಜಯ್ ಚಿತ್ರದಲ್ಲಿ ಕಬ್ಬಡಿ ಆಟ, ಗಗನಚಿತ್ರದಲ್ಲಿ ಚಿನ್ನಿದಾಂಡು ಆಟ, ಜನಮದ ಜೋಡಿ ಚಿತ್ರದಲ್ಲಿ ಎತ್ತಿನ ಬಂಡಿ ಓಟದ ಸ್ಪರ್ಧೆ ಮನಮೆಚ್ಚಿದ ಹುಡುಗಿ ಚಿತ್ರದಲ್ಲಿ ಗುಂಡು ಎತ್ತುವಸ್ಪರ್ಧೆ ಇತ್ಯಾದಿಗಳನ್ನು ಉದಾಹರಿಸಬಹುದಾಗಿದೆ.

ಇವುಗಳಲ್ಲದೆ ನಮ್ಮ ವಿವಿಧ ಗ್ರಾಮೀಣ ಪ್ರದೇಶಗಳ ಜನರ ಜೀವನಾವರ್ತನ, ವಾರ್ಷಿಕಾವರ್ತನ ಆಚರಣೆಗಳ ಉಡುಗೆ-ತೊಡುಗೆಗಳು, ಉಟೋಪಚಾರದ ಪದ್ಧತಿಗಳು, ನಂಬಿಕೆ-ನಡವಳಿಕೆಗಳು, ದೇಸೀ ವಾಸ್ತು, ಭೌತಿಕ ಜಾನಪದ ಇತ್ಯಾದಿಗಳ ಅಳವಡಿಕೆ ಕೆಲವು ಸಿನಿಮಾಗಳಿಗೆ ದೇಸೀತನದ ಸೊಗಡನ್ನೂ ತಂದು ಕೊಟ್ಟಿವೆ. ಉದಾಹರಣೆಗೆ ನಮ್ಮ ಹಲವಾರು ಸಿನಿಮಾಗಳಲ್ಲಿ 'ಶಿಷ್ಟ' ಆಹಾರ ಪದ್ಧತಿಯ ಜತೆಗೆ ಜನಪದ ಅಥವಾ ಗ್ರಾಮೀಣ ಆಹಾರ ಪದ್ಧತಿಯನ್ನೂ ನಾವು ಕಾಣಬಹುದು. ಜೋಳದ ರೊಟ್ಟಿ, ಕಾಳು ಪಲ್ಯ, ರಾಗಿ ಮುದ್ದೆ, ರಾಗಿ ಅಂಬಲಿ, ರಾಗಿ ರೊಟ್ಟಿ, ಉಚ್ಚೆಳ್ಳು ಚಟ್ನಿ, ಭಟ್ಟಿಸರಾಯಿ, ಮುಂತಾದ ದೇಸೀ ಆಹಾರ-ಖಾದ್ಯ- ಪಾನೀಯಗಳ ಬಳಕೆ-ಪ್ರಸ್ತಾಪ ಹಲವು ಸಿನಿಮಾಗಳಲ್ಲಿವೆ. 'ಮುಂಗಾರಿನ ಮಿಂಚು' ಸಿನಿಮಾದಲ್ಲಿ ಕೆಂಪಿರುವೆ

ಮೊಟ್ಟೆಯ ಚಟ್ನಿಯನ್ನು ಉಪಯೋಗಿಸುವ ಮಲೆನಾಡಿನ ಖಾದ್ಯದ ಸನ್ನಿವೇಶವಿದೆ. ಸಂಗ್ಯಾಬಾಳ್ಯ ನಾಗಮಂಡಲ ಚಿತ್ರಗಳಲ್ಲಿ ಉತ್ತರ ಕರ್ನಾಟಕ್ಕೆ ವಿಶಿಷ್ಟವಾದ ಜೋಳದ ರೊಟ್ಟಿ, ಕೆನೆ ಮೊಸರು, ಕಾಳು ಪಲ್ಯ ಮುಂತಾದ ಆಹಾರ ಉಪಯೋಗಿಸುವ ಸನ್ನಿವೇಶವಿದೆ.

ಜನಪದ ಕಲಾವಿದರ ನೈಜ ಅಥವಾ ಕಾಲ್ಪನಿಕ ಬದುಕನ್ನಾ ಧರಿಸಿದ ಚಿತ್ರಗಳೂ ಕನ್ನಡದಲ್ಲಿವೆ. ಬರಗೂರು ರಾಮಚಂದ್ರಪ್ಪನವರ ಹಗಲುವೇಷ, 'ಜನಪದ' ದಂಥ ಚಿತ್ರಗಳು ಇಲ್ಲಿ ಉಲ್ಲೇಖನೀಯ. ಈ ಚಿತ್ರಗಳ ಕಥೆ ಕಾಲ್ಪನಿಕವೆಂದು ಕಂಡರೂ ವಾಸ್ತವ ಘಟನೆಗಳ ಪ್ರೇರಣೆಯಿಂದ ನೈಜವೆಂಬಂತೆ ಮೂಡಿ ಬಂದಿವೆ. ಇಲ್ಲಿ ಆಯಾ ಜನಪದ ಕಲಾ ರೂಪಗಳನ್ನು ಹೇರಳವಾಗಿ ಬಳಸಿಕೊಳ್ಳಲಾಗಿದೆ. ಬರಗೂರು ರಾಮಚಂದ್ರಪ್ಪನವರು ನಿರ್ದೇಶಿಸಿದ ಈ ಚಿತ್ರವು. ಜನಪದ ಕಲಾವಿದರನ್ನು ಆಥರಿಸಿದ ಚಿತ್ರವಾಗಿದೆ. ಚಿತ್ರದಲ್ಲಿ ಚಂದ್ರಜೋಗಿ ಪ್ರತಿನಿಧಿಸುವ ಪರಂಪರೆ ಜೀವಂತವಾದದು ಮತ್ತು ಸೃಜನ ಶೀಲವಾದದು. ಇವನ ಹಾಡು ಸಂವೃದ್ಧಿಯ ಸಂಕೇತವಾಗಿದೆ. ಚಂದ್ರ ಜೋಗಿಗೆ ತನ್ನ ಕಲೆಯ ಬಗ್ಗೆ ಅಭಿಮಾನವಿರುತ್ತದೆ. ಚಂದ್ರ ಜೋಗಿಯು ಹುಟ್ಟು ಕಲಾವಿದನಾಗಿರುತ್ತಾನೆ. ಪ್ರತಿನಿತ್ಯ ಊರೂರು ಸುತ್ತಿ ಹಾಡುಗಳನ್ನು ಹೇಳಿ. ಭಿಕ್ಷೆ ಬೇಡಿ ಜೀವನ ಸಾಗಿಸುತ್ತಿರುತ್ತಾನೆ. ಹೀಗಿರುವಾಗ ಊರಲ್ಲಿ ಮಳೆ ಇಲ್ಲದೆ ಬರಗಾಲ ಬರುತ್ತದೆ. ಊರಿನ ಜನರೆಲ್ಲಾ ಒಂದಾಗಿ ಗೌಡನ ಹತ್ತಿರ ಕಾಳು ಕೇಳಲು ಹೋಗುತ್ತಾರೆ. ಗೌಡನು ಕೊಡದೆ ಕಳಿಸುವನು. ಆದರೆ ಗೌಡನ ತಾಯಿಯು ಚಂದ್ರ ಜೋಗಿಯು ಹಾಡು ಹೇಳಿದರೆ ಮಳೆ ಬರುವುದು ಎಂಬ ನಂಬಿಕೆಯನ್ನು ವ್ಯಕ್ತ ಪಡಿಸುವಳು ಈ ಮಾತನ್ನು ಊರಿನ ಕೆಲವರು ಸಹಿಸುವುದಿಲ್ಲ. ಚಂದ್ರಜೋಗಿಯು ಹಾಡು ಹೇಳುವುದರ ಮೂಲಕ ಮಳೆ ತರಿಸುತ್ತಾನೆ. ಊರಿಗೂ ಅವನಿಗೂ ಅವನಿಗೂ ಸಂಘರ್ಷವಾಗುತ್ತದೆ. ಆಗ ಅವನನ್ನು ಜಾನಪದ ವಿದುಷಿ 'ರಾಗ' ಸಂತೈಸುತ್ತಾಳೆ. ಅವನನ್ನು ನಿಯಂತ್ರಿಸುತ್ತಾಳೆ. ಊರಿನಲ್ಲಿ ನಡೆಯಲಿರುವ ಜನಪದ ಮೇಳದಲ್ಲಿ ಭಾಗವಹಿಸಲು ಅವನು ನಿರಾಕರಿಸಿದಾಗ ಪ್ರೀತಿಯಿಂದ ಅವನ ಮನ ಬಲಿಸಿ, ಕಲಾವಿದರೊಡನೆ ಅವನು ಒಂದಾಗುವಂತೆ ಮಾಡುತ್ತಾಳೆ. ಈ ಸಮಯದಲ್ಲಿ ಎಲ್ಲಾ ಜನಪದ ಕಲಾವಿದರೂ ಒಂದೆಡೆ ಸೇರುತ್ತಾರೆ. ಕೊನೆಗೆ ಹೊಸ ಜನಪದ ಗೀತೆಯೊಂದನ್ನು ಹೇಳುವುದರ ಮೂಲಕ ಕಥೆ ಮುಕ್ತಾಯವಾಗುತ್ತದೆ. ಈ ಚಿತ್ರದಲ್ಲಿ ಜನಪದ ಕಲೆಯ ಮಹತ್ವವನ್ನು ಹೇಳಲಾಗಿದೆ.

ಕೆಲವು ಸಿನಿಮಾಗಳು ನಮ್ಮ ದೇಸೀ ನಂಬಿಕೆ ಆಚರಣೆಗಳನ್ನು ವೈಭವೀಕರಿಸಿದರೆ ಮತ್ತೆ ಕೆಲವು ವರ್ತಮಾನದ ವೈಚಾರಿಕತೆಯ ದೃಷ್ಟಿಕೋನದಿಂದ ವಿಮರ್ಶಿಸಿವೆ. ಸಾಮಾಜಿಕ ಪಿಡುಗಾಗಿ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಉಳಿದು ಬಂದಿರುವ ದೇವದಾಸಿ ಪದ್ದತಿ, ಬೆತ್ತಲೆ ಸೇವೆ ಪದ್ಧತಿಗಳೂ ಅಂಥ ನಂಬಿಕೆ - ಆಚರಣೆಗಳ ಸಾಲಿಗೆ ಸೇರುತ್ತವೆ. ಧರ್ಮದ ಹೆಸರಿನಲ್ಲಿ ಸಮಾಜದ ಮುಗ್ಧ ಹೆಣ್ಣು ಮಕ್ಕಳನ್ನು ಲೈಂಗಿಕ ಶೋಷಣೆಗೊಳ ಪಡಿಸುವ ಈ ಅನಿಷ್ಟ ಪದ್ಧತಿಗಳ ಯಥಾವತ್ ಚಿತ್ರಣ ಕೆಲವು ಸಿನಿಮಾಗಳಲ್ಲಿದ್ದರೆ, ಅದನ್ನೊಂದು ಸಮಸ್ಯೆಯಾಗಿ ಪರಿಗಣಿಸಿ ಚಿತ್ರಿಸಿದ ಸಂದರ್ಭಗಳು ಇತರ ಕೆಲವು ಸಿನಿಮಾಗಳಲ್ಲಿದೆ. ಉದಾಹರಣೆಗೆ 'ಗೆಜ್ಜೆಪೂಜೆ' ಚಿತ್ರದಲ್ಲಿ ಆ ಅನಿಷ್ಟ ಪದ್ಧತಿಯನ್ನು ಒಪ್ಪಿಕೊಳ್ಳಲಾರದ ಅಸಹಾಯಕ ಹೆಣ್ಣು ಮಗಳೊಬ್ಬಳ ದುರಂತ ಚಿತ್ರಣವಿದೆ.

'ಅರಗಿಣಿ' ಚಿತ್ರದಲ್ಲಿ ಪರಂಪರಾಗತ ಆಚರಣೆಯನ್ನು ಪ್ರತಿಭಟಸಿ ನಿಲ್ಲುವ ಹೆಣ್ಣೊಬ್ಬಳ ಬದುಕಿನ (ಕಥೆ) ರೋಚಕ ಚಿತ್ರಣವಿದೆ. 'ಗೆಜ್ಜೆಪೂಜೆ' ಕಲಾತ್ಮಕ ಶೈಲಿಗೆ ಹೆಚ್ಚು ಹತ್ತಿರವಾಗಿದ್ದರೆ 'ಅರಗಿಣಿ' ವಾಣಿಜ್ಯಾತ್ಮಕ ಶೈಲಿಯಲ್ಲಿದೆ.

ಪುಟ್ಟಣ್ಣ ಕಣಗಾಲ್ ನಿರ್ದೇಶನದ ಗೆಜ್ಜೆಪೂಜೆ ಎಂ.ಕೆ. ಇಂದಿರಾ ಅವರ ಕಾದಂಬರಿ ಅದೇ ಹೆಸರಿನ ಈ ಚಿತ್ರವು ೧೯೭೦ರಲ್ಲಿ ತೆರೆಕಂಡಿತು. ದೇವದಾಸಿ ಪದ್ಧತಿಯ ಕರಾಳ ವ್ಯವಸ್ಥೆಯನ್ನು ಎಳೆ ಎಳೆಯಾಗಿ ಬಿಡಿಸಿ ಹೇಳುವ ಚಿತ್ರ. ನಾಯಕಿಯ ತಾಯಿ ದೇವದಾಸಿ ಪದ್ಧತಿಗೆ ಬಲವಂತನಾಗಿ ತಳ್ಳಲ್ಪಟ್ಟಿರುತ್ತಾಳೆ. ಅವಳ ಮಗಳಿಗೂ ಆ ಪದ್ಧತಿಯ ಕರಾಳ ಛಾಯೆ ಬೇಡ ಎನ್ನುವ ಅಭಿಪ್ರಾಯ. ಆಕೆ ಅದಕ್ಕಾಗಿ ಎಂಥ ತ್ಯಾಗಕ್ಕೂ ಸಿದ್ಧಳಾಗುತ್ತಾಳೆ. ಪ್ರೀತಿಸಿದ ಹುಡುಗನಿಂದ ತಿರಸ್ಕೃತವಾದ ನಾಯಕಿ, ದೇವದಾಸಿಯಾಗಲು ಒಪ್ಪದೆ ಪ್ರಾಣತ್ಯಾಗ ಮಾಡುತ್ತಾಳೆ.

'ಹೆಜ್ಜೆ ಹೆಜ್ಜೆಗೂ ಹೊನ್ನೇ ಸುರಿಯಲಿ ಗೆಜ್ಜೆ ಪೂಜೆಯಾ' ಈ ಹಾಡಿನ ಗೆಜ್ಜೆ ಯನ್ನು ಪೂಜೆ ಮಾಡಿ ಅದನ್ನು ಹೆಣ್ಣಿನ ಕಾಲಿಗೆ ತೊಡಿಸುವ ಸನ್ನಿವೇಶ ಚಿತ್ರಿತವಾಗಿದೆ.

ಅರಗಿಣಿ ೧೯೯೫ರಲ್ಲಿ ಬಿಡುಗಡೆಯಾದ ಈ ಚಿತ್ರ. ಪಿ.ಹೆಚ್. ವಿಶ್ವನಾಥ್ ನಿರ್ದೇಶಿಸಿದ್ದಾರೆ. ಅಮಾನವೀಯ - ಅನಾಗರಿಕ ಪದ್ಧತಿಯೊಂದರ ವಿರುದ್ಧ ವಿದ್ಯಾವಂತ ಹೆಣ್ಣೊಬ್ಬಳು ಹೋರಾಡಿ ಗೆಲ್ಲುವ ಚಿತ್ರಣ. ದೇವರು ಮತ್ತು ಧರ್ಮದ ಭೀತಿ ಬಿತ್ತಿ ದುರ್ಬಲ ವರ್ಗದ ಹೆಣ್ಣು ಮಕ್ಕಳನ್ನು ದೇವದಾಸಿಯರನ್ನಾಗಿಸಿ ತಮ್ಮ ಕಾಮ ತೃಷೆ ತೀರಿಸಿಕೊಳ್ಳುವ, ಸಂಸಂಸ್ಕೃತರೆಂದುಕೊಳ್ಳುವ ಶ್ರೀಮಂತ ವರ್ಗದವರ ಶೋಷಣೆಯ ವಿರುದ್ಧ ಹೆಣ್ಣೊಬ್ಬಳ ದಿಟ್ಟ ಹೋರಾಟ ಇದರಲ್ಲಿದೆ. ಗಂಡು - ಹೆಣ್ಣು ಬೇಧವಿಲ್ಲದೆ ಸಾರ್ವತ್ರಿಕ ಶಿಕ್ಷಣ ನೀಡುವುದೊಂದೇ ಸಾಮಾಜಿಕ ಶೋಷಣೆಯ ಅಂತ್ಯಕ್ಕೆ ದಾರಿ ಎಂಬ ಸಂದೇಶವೂ ಇದೆ. ವಿದ್ಯೆ ಕಲಿತು ಸ್ವಾವಲಂಬಿಯಾಗಿ ಬದುಕುವ ಆಸೆ ದಲಿತ ಹೆಣ್ಣುರಾಣಿಯದು. ಆ ಆಸೆಗೆ ನೂರಾರು ಅಡ್ಡಿ ಗಳಂಟಾಗುತ್ತವೆ. ಅವಳನ್ನು ದೇವದಾಸಿಯನ್ನಾಗಿಸಲು ಮಾವನೇ ಸಂಚು, ಹೊಡುತ್ತಾನೆ.

ಅವಳಲ್ಲಿ ತನ್ನ ಕಾಮ ತೃಷೆಯನ್ನು ಹಿಂಗಿಸಿಕೊಳ್ಳಲು ಊರ ಸಾಹುಕಾರನ ಕಾತರ ವಿರುತ್ತದೆ. ತನ್ನ ವರ್ಗದವರ ಮೌಢ್ಯವನ್ನು ತೊಡೆದು ಮೇಲ್ವರ್ಗದವರ ದಮನದ ಸಂಚನ್ನು ಎದುರಿಸಿ ನಿಂತು. ತಾನು ಪ್ರೀತಿಸಿದ ಹುಡುಗನೊಂದಿಗೆ ಕೂಡಿ ಹೋರಾಡಿ ಗೆಲ್ಲುವ ರಾಣಿ, ದೇವತೆಯೆಂದು ಪೂಜಿಸುವ ಹೆಣ್ಣನ್ನು ಭೋಗದ·ವಸ್ತುವಾಗಿಯೂ ಕಾಣುವ ಸಮಾಜದ ದ್ವಂದ್ವ ನಿಲುವಿಗೆ ಕನ್ನಡಿ ಹಿಡಿಯುತ್ತಾಳೆ.

೪.೯ ಸಾಂಸ್ಕೃತಿಕ ಸಂಘರ್ಷದ ನೆಲೆಗಳು

ಮನುಷ್ಯನನ್ನು ಕೇಂದ್ರೀಕರಿಸಿರುವ ಕಲೆ, ಸಾಹಿತ್ಯದಲ್ಲಿ ಆತನ ಸಂಸ್ಕೃತಿಯಂತೆ ಸಾಂಸ್ಕೃತಿಕ ಬದುಕಿಗೆ ಸಹಜವಾಗಿರುವ ಸಂಘರ್ಷದ ನೆಲೆಗಳೂ ನಿರೂಪಿತವಾಗಿರುತ್ತವೆ. ಈ ಬಗೆಯ ಸಂಘರ್ಷಕ್ಕೆ ಹಲವು ನೆಲೆಗಳಿವೆ. ನಮ್ಮ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಗಮನಿಸಿದರೆ ಉದ್ದಕ್ಕೂ ಒಂದಲ್ಲ ಒಂದು ರೀತಿಯ ಸಂಘರ್ಷದ ಸ್ಥಿತಿಯಿದ್ದುದನ್ನು ನಾವು ಕಾಣುತ್ತೇವೆ. ಅದು ಧರ್ಮ - ಧರ್ಮಗಳೊಳಗಿನ ಸಂಘರ್ಷವಾಗಿರಬಹುದು, ಜನಾಂಗ ಜನಾಂಗಗಳೊಳಗಿನ ಸಂಘರ್ಷವಾಗಿರಬಹುದು. ಜಾತಿ-ಜಾತಿಯಗಳೊಳಗಿನ ಸಂಘರ್ಷವಾಗಿರಬಹುದು. ವಂಶ -ವಂಶಗಳೊಳಗಿನ ಸಂಷರ್ಘವಾಗಿರಬಹುದು. ವಿವಿಧ ಜೀವನ ಕ್ರಮಗಳೊಳಗಿನ ಸಂಘರ್ಷವಾಗಿರಬಹುದು. ಈ ಎಲ್ಲಾ ಬಗೆಯ ಸಂಘರ್ಷಗಳ ನಂತರ ಪರಸ್ಪರ ಪ್ರಭಾವ ಹೊಂದಾಣಿಕೆಗಳಾದದೂ ಇದೆ. ಆದರೆ ಆಧುನಿಕ ಸಂದರ್ಭದಲ್ಲಿ ಸಂಘರ್ಷದ ನೆಲೆಗಳು ಇನ್ನಷ್ಟು ವ್ಯಾಪಕವಾದುವು. ವಸಾಹತುಶಾಹಿ ಆಡಳಿತ ಕಾಲದಲ್ಲಿ ನಮ್ಮಲ್ಲಿ ಇದ್ದಕ್ಕಿದ್ದಂತೆ 'ಆಧುನಿಕತೆ'ಯ ಪ್ರಭಾವವಾಗತೊಡಗಿತು. ಪಾಶ್ಚಾತ್ಯ ಜೀವನ ಕ್ರಮ ಹಾಗೂ ವಿಚಾರಗಳು ನಮ್ಮ ಪರಂಪರೆಯೊಂದಿಗೆ ಮುಖಾಮುಖಿಯಾಗತೊಡಗಿದವು. ವಿದೇಶೀ ಸಂಸ್ಕೃತಿ ನಮ್ಮ ದೇಸೀ ಸಂಸ್ಕೃತಿಯ ಮೇಲೆ ಪ್ರಭಾವ ಬೀರ ತೊಡಗಿತು. ಭಾಷೆ, ಶಿಕ್ಷಣ, ಸಾಮಾಜಿಕತೆ, ಆರ್ಥಿಕತೆ, ಧಾರ್ಮಿಕತೆಗಳಲ್ಲಿ ಏಕಾಏಕಿ ಬದಲಾವಣೆಗಳಾಗ ತೊಡಗಿದವು. 'ಪಾಶ್ಚಾತ್ಯೀಕರಣ' ದಿಂದ ಪ್ರಾರಂಭವಾದ ಈ ಆಧುನಿಕತೆ ಕೈಗಾರಿಕೀಕರಣ, ಔದ್ಯೋಗೀಕರಣ, ನಗರೀಕರಣ, ಉದಾರೀಕರಣಗಳಲ್ಲಿ ಮುಂದುವರಿದು ಈಗ 'ಜಾಗತೀಕರಣ' ದ ಹಂತಕ್ಕೆ ಬಂದು ತಲುಪಿದೆ. ಕೆಲವರು ಇದನ್ನು 'ಸುಧಾರಣೆ' ಯೆಂದು ಪರಿಭಾವಿಸಿದರೆ ಮತ್ತೆ ಕೆಲವರು ನಮ್ಮ ಪರಂಪರೆ - 'ದೇಸೀ ಸಂಸ್ಕೃತಿ'ಯ ನಾಶವೆಂದು ಆತಂಕ ಪಡುತ್ತಾರೆ. ಇಂತಹ ಮುಖಾಮುಖಿ - ಸಂಘರ್ಷದ ವಿವಿಧ ಸ್ವರೂಪಗಳಾದ ಆತಂಕ ತಲ್ಲಣ, ಪ್ರತಿಭಟನೆ, ಹೊಂದಾಣಿಕೆ ಇತ್ಯಾದಿಗಳೆಲ್ಲಾ ಸಾಹಿತ್ಯದಂತೆ ನಮ್ಮ ಕೆಲವು ಸಿನಿಮಾಗಳಲ್ಲೂ ಅಭಿವ್ಯಕ್ತವಾಗಿವೆ.

೧೯೭೭ರಲ್ಲಿ ತೆರೆಕಂಡ ವಿಜಯ ನಿರ್ದೇಶನದ ಸನಾದಿ ಅಪ್ಪಣ್ಣ ಚಿತ್ರದಲ್ಲಿ ಗ್ರಾಮೀಣ-ನಗರ, ಪರಂಪರೆ-ಆಧುನಿಕತೆ ಇತ್ಯಾದಿ ಸಂಘರ್ಷಗಳ ಚಿತ್ರಣವಿದೆ. ಅಪ್ಪಣ್ಣ ಅಸಾಮಾನ್ಯ ಸನಾದಿ ವಾದಕನಾಗಿರುತ್ತಾನೆ. ಆತನನ್ನು ಒಬ್ಬ ನರ್ತಕಿ ಮೆಚ್ಚಿ ಕೈಹಿಡಿಯುವಳು.

ಈ ದಂಪತಿಗಳಿಗೆ ಸಮಾರಂಭವೊಂದರಲ್ಲಿ ಜಾತಿಯ ವಿಷಯದಲ್ಲಿ ಅವಮಾನವಾಗುತ್ತದೆ. ನಾಯಕಿ ತನ್ನ ಮಗನಿಗೆ ಇಂಥ ಅವಮಾನವಾಗಬಾರದೆಂದು ಭಾಷೆ ತೆಗೆದುಕೊಂಡು ಸಾಯುತ್ತಾಳೆ. ನಾಯಕನು ಆಕೆಯ ಇಚ್ಛೆಯಂತೆ ಮಗನನ್ನು ದೊಡ್ಡ ಅಧಿಕಾರಿಯನ್ನಾಗಿ ಮಾಡುತ್ತಾನೆ. ಆದರೆ ಆ ಮಗ ಅಪ್ಪನನ್ನು ಕಡೆಗಾಣಿಸುತ್ತಾನೆ. ಆದರೆ ಮೊಮ್ಮಗನಿಗೆ ಸನಾದಿಯೆಂದರೆ ಪಂಚಪ್ರಾಣ, ಬದುಕು ಅಸಹ್ಯವೆನಿಸಿದಾಗ ನಾಯಕ ಊರುಬಿಟ್ಟು ಹೊರಡುತ್ತಾನೆ. ಮೊಮ್ಮಗ ತಾತನಿಲ್ಲದೆ ಸಾಯುವ ಸ್ಥಿತಿ ಬರುತ್ತದೆ. ಕಡೆಗೆ ತಾತ, ಸನಾದಿ ನುಡಿಸಿ ಮಗುವನ್ನು ಬದುಕಿಸಿ ತಾನೂ ಸಾಯುತ್ತಾನೆ. ಜಾತಿ ಅಂತಸ್ತುಗಳನ್ನು ಮೀರಿ ತಲೆಮಾರಿನಿಂದ ತಲೆಮಾರಿಗೆ ಕಲೆ ಹರಿದು ಬರುತ್ತದೆ ಎಂಬ ಸಿದ್ಧಾಂತ ಸಾರುವ ಕಥೆ.

ಚಿತ್ರದಲ್ಲಿ ದೇಸೀ ಕಲೆ ಮತ್ತು ಆಧುನಿಕತೆಯ ಸಂಘರ್ಷವಿದೆ. ಪಾರಂಪರಿಕ ಕಲೆಯಾದ ಸನಾದಿ ನುಡಿಸುವುದರಲ್ಲೇ ಸಾಫಲ್ಯವನ್ನು ಕಂಡುಕೊಂಡಿದ್ದ ಕೊರವರ ಅಪ್ಪಣ್ಣ ಪರಂಪರೆಯ ಪ್ರತಿನಿಧಿಯಾದರೆ, ಅವನ ಮಗ ಹನುಮಂತರಾವ್ ಆಧುನಿಕತೆಯ ಪ್ರತಿನಿಧಿ, ಉನ್ನತ ಶಿಕ್ಷಣ ಪಡೆದು ಹಿರಿಯ ಅಧಿಕಾರಿಯಾದ ಆತನಿಗೆ ಪ್ರತಿಷ್ಟೆಯ ಪ್ರಶ್ನೆ ಕಾಡುತ್ತದೆ. ತನ್ನ ಜಾತಿ - ಕುಲ - ವೃತ್ತಿಯನ್ನು ಕೀಳೆಂದು ಭಾವಿಸುತ್ತಾನೆ. ಸನಾದಿ ನುಡಿಸುತ್ತಲೇ ತನ್ನ ಜೀವನವನ್ನು ಕಂಡು ಕೊಂಡು, ತನ್ನ ಮಗನ ಭವಿಷ್ಯವನ್ನೂ ರೂಪಸಿದ ಅಪ್ಪಣ್ಣ - ಹಾಗಾಗಿ ಸನಾದಿಯೇ ಆತನಿಗೆ ದೇವರು. ಆದರೆ ಮಗನಿಗದರಲ್ಲಿ ಕೀಳು ಭಾವನೆ ಇರುತ್ತದೆ. ಅದಕ್ಕಾಗಿ ಮಗ ತನ್ನ ಹೆಸರನ್ನೂ ಎಚ್.ಕೆ.ರಾವ್ ಎಂದು ಮಾರ್ಪಡಿಸಿ ಕೊಳ್ಳುತ್ತಾನೆ. ಕೊನೆಯಲ್ಲಿ ಸಿನಿಮಾ ದೇಸೀ (ಪಾರಂಪರಿಕ) ಕಲೆಯ ಮಹತ್ವವನ್ನು ಎತ್ತಿ ಹಿಡಿಯುತ್ತದೆ.

ದೇಸೀ ಸಂಸ್ಕೃತಿ ಮತ್ತು ವಿದೇಶೀ ಸಂಸ್ಕೃತಿಗಳೊಳಗಣ ಮುಖಾಮುಖಿಯನ್ನು ಅನೇಕ ಸಿನಿಮಾಗಳಲ್ಲಿ ಕಾಣಬಹುದು ಉದಾಹರಣೆಗೆ ನಾಗತಿಹಳ್ಳಿ ಚಂದ್ರಶೇಖರ ಅವರ **ಅಮೇರಿಕಾ ಅಮೇರಿಕಾ** ಸಿನಿಮಾವನ್ನೇ ಗಮನಿಸಿಬಹುದು

ಸೂರ್ಯ, ಶಶಾಂಕ, ಭೂಮಿಕಾ ಬಾಲ್ಯದ ಗೆಳೆಯರು ಶಶಾಂತ ಉದ್ಯೋಗಕ್ಕಾಗಿ ಅಮೇರಿಕಾಕ್ಕೆ ವಲಸೆ ಹೋಗುತ್ತಾನೆ. ಸೂರ್ಯ, ಭೂಮಿಕ ಇಲ್ಲೇ ನೆಲೆಸುತ್ತಾರೆ. ರಜಾ ಕಳೆಯಲಿಕ್ಕೆಂದು ಬಂದ ಶಶಾಂಕನಿಗೆ ಭೂಮಿಕಾಳನ್ನು ಕೊಟ್ಟು ಮದುವೆ ಮಾಡುತ್ತಾರೆ. ಭೂಮಿಕಾಳನ್ನು ಗುಪ್ತವಾಗಿ ಪ್ರೀತಿಸುತ್ತಿದ್ದ ಸೂರ್ಯ ಭಗ್ನ ಪ್ರೇಮಿಯಾಗುತ್ತಾನೆ. ಸೂರ್ಯ ಅಮೇರಿಕಾಗೆ ಹೋದಾಗಾ ಶಶಾಂಕ - ಭೂಮಿಕಾ ಬೇರ್ಪಟ್ಟಿರುತ್ತಾರೆ. ನಂತರ ಶಶಾಂಕ ಅಪಘಾತವೊಂದರಲ್ಲಿ ಸಾಯುತ್ತಾನೆ. ಸೂರ್ಯ - ಭೂಮಿಕಾ ಗೆಳೆಯರಾಗಿಯೇ ಭಾರತಕ್ಕೆ ಬರುತ್ತಾರೆ. ಇದು ಚಿತ್ರದ ಕಥೆ.

ಕರ್ನಾಟಕದ ಹಳ್ಳಿಯೊಂದರಿಂದ (ಮಂಡ್ಯ ಸಮೀಪದ ಕೊಟಗಾನಹಳ್ಳಿ) ಅಮೇರಿಕಾಕ್ಕೆ (ತನ್ನ ಮಗನ ಮನೆಗೆ) ಬಂದ ಸಂಪ್ರದಾಯಸ್ಥ ಮುದುಕಿಯು ಅಲ್ಲಿನ ಜೀವನ ವಿಧಾನವನ್ನು ಕಂಡು ದಂಗಾಗುವುದು : ಶಶಾಂಕ ಮತ್ತು ಶ್ರೀನಿವಾಸರ ನಡುವೆ ಅಮೇರಿಕಾ ಮತ್ತು ಭಾರತದ ಸಂಸ್ಕೃತಿ ಬಗೆಗೆ ನಡೆಯುವ ಮಾತುಕತೆ : ಶಶಾಂಕ ಸೂರ್ಯ ಮತ್ತು ಭೂಮಿಕಾರ ನಡುವೆ ನಡೆಯುವ ಅದೇ ವಿಷಯವಾದ ಚರ್ಚೆ ಇಲ್ಲೆಲ್ಲಾ ಈ ಮುಖಾಮುಖಿಯನ್ನು ಕಾಣಬಹುದು.

'ಹೇಗಿದೆ ನಮ್ಮ ದೇಶ

ಹೇಗಿದೆ ನಮ್ ಭಾಷೆ' - ಎನ್ನುವ ಹಾಡನ್ನೂ ಇಲ್ಲಿ ಗಮನಿಸಬಹುದು. ಈ ಹಾಡಿನಲ್ಲಿ ಕನ್ನಡದ ಜನತೆ, ಬೆಳೆಯುತ್ತಿರುವ ಬೆಂಗಳೂರು ಪರಿಸರ, ಕಾವೇರಿ ವಿವಾದ ಇತ್ಯಾದಿ ವಿವರಗಳನ್ನು ಕಾಣಬಹುದಾಗಿದೆ. ಸ್ವದೇಶಿ ಸಂಸ್ಕೃತಿ ಮತ್ತು ವಿದೇಶಿ ಸಂಸ್ಕೃತಿ ನಡುವಿನ ಮುಖಾಮುಖಿ, ಕೊನೆಗೆ ಸ್ವದೇಶೀ ಸಂಸ್ಕೃತಿಯೇ ಮೇಲುಗೈ ಪಡೆಯುವುದು - ಇತ್ಯಾದಿಗಳನ್ನು ಹಳೆಯ ಕಾಲದ

ಸಿನಿಮಾಗಳಲ್ಲೂ ಕಾಣಬಹುದು. ಆದರೆ ಇವತ್ತಿನ ಸಿನಿಮಾಗಳಲ್ಲಿ ಹೊಸ ಪರಿಕಲ್ಪನೆಯಾದ 'ಜಾಗತೀಕರಣದ ಪ್ರಭಾವಗಳನ್ನು ಗುರುತಿಸಬಹುದಾಗಿದೆ. ಪ್ರಸ್ತುತ 'ಅಮೇರಿಕಾ ಅಮೇರಿಕಾ' ಸಿನಿಮಾದಲ್ಲೂ ಇಂಥ ಜಾಗತೀಕರಣದ ಪ್ರಭಾವವನ್ನು ಚಿತ್ರಿಸಲಾಗಿದೆ.

ಚಿಗುರಿದ ಕನಸು ಶಿವರಾಮ್ ಕಾರಂತರ ಆದೇ ಹೆಸರಿನ ಕಾದಂಬರಿಯಾಧರಿತ ಚಿತ್ರವಾಗಿದೆ. ಟಿ. ಎಸ್. ನಾಗಭರಣ್ ಈ ಚಿತ್ರವನ್ನು ನಿರ್ದೇಶಿಸಿದರು. ಚಿತ್ರದ ಮುಖ್ಯ ಪಾತ್ರವಾದ ಶಂಕರ್‌ಹುಟ್ಟಿ ಬೆಳೆದದ್ದು ಮುಂಬೈಯಲ್ಲಿ. ಶಂಕರನಿಗೆ ನಗರ ಜೀವನವೆಂದರೆ ಆಗದು. ಇದರಿಂದಾಗಿ ಇವನ ತಾಯಿಗೆ ಶಂಕರನನ್ನು ಕಂಡರೆ ಇಷ್ಟವಿರುವುದಿಲ್ಲ. ಇವನು ಪಿ. ಯು. ಸಿ. ಪಾಸಾದ ಬಳಿಕ ಇಲ್ಲೆಕ್ಟ್ರಿಕಲ್ ಇಂಜಿನಿಯರ್ ಆಗುತ್ತಾನೆ. ಶಂಕರನಿಗೆ ವರಲಕ್ಷ್ಮಿ ಎಂಬ ಭಿನ್ನ ಜಾತಿಯ ಹುಡುಗಿಯ ಮೇಲೆ ಮನಸ್ಸಾಗುತ್ತದೆ. ಅವಳಿಗೂ ಇವನ ಮೇಲೆ ಮನಸ್ಸಾಗುತ್ತದೆ. ಇವರಿಬ್ಬರಲ್ಲಿ ಪತ್ರವ್ಯವಹಾರ ನಡೆಯುತ್ತದೆ. ಶಂಕರ ವರಲಕ್ಷ್ಮಿಗೆ ಬರೆಯುವ ಹಲವು ಪತ್ರಗಳಲ್ಲಿ ತನಗೆ ಪಟ್ಟಣದ ಬದುಕಿಗಿಂತ ಹಳ್ಳಿ ಜೀವನದ ಮೇಲೆ ಇರುವ ಆಸಕ್ತಿಯ ಕುರಿತು ಬರೆಯುತ್ತಿರುತ್ತಾನೆ. ಸುಂದರವಾದೊಂದು ಹಳ್ಳಿಯಲ್ಲಿ ತನ್ನ ಬದುಕನ್ನು ರೂಪಿಸಿಕೊಳ್ಳುವ ಹಂಬಲ ತೋಡಿಕೊಳ್ಳುತ್ತಾನೆ. ಆದರೆ ಇದು ವರಲಕ್ಷ್ಮಿಗೆ - ಇಷ್ಟವಾಗುವುದಿಲ್ಲ. ಈ ಮಧ್ಯೆ ತನ್ನ ವಿದ್ಯಾಭ್ಯಾಸ ಮುಗಿಸಿದ ಶಂಕರ ಗೆಳೆಯರೊಂದಿಗೆ ತನ್ನ ಪೂರ್ವಿಕರು ನೆಲೆಸಿದ್ದ ಬಂಗಾಡಿ ಎಂಬ ಹಳ್ಳಿಗೆ ತಿರುಗಾಡಲು ಹೋಗುತ್ತಾನೆ. ಅಲ್ಲಿ ಅವನ ಪೂರ್ವಜರಲ್ಲಿ ಒಬ್ಬಾಕೆ ಮುದುಕಿಯ ಪರಿಚಯವಾಗುತ್ತದೆ. ಆ ಮುದುಕಿಗೆ ತನ್ನಣ್ಣ ಗತಿಸಿದ ದತ್ತಮೂರ್ತಿಯ ಮೊಮ್ಮಗ ಶಂಕರನೆಂದು ತಿಳಿದು ಸಂತೋಷವಾಗುತ್ತದೆ. ಶಂಕರ ಆ ಊರಿನಲ್ಲಿದ್ದಷ್ಟು ದಿನವೂ, ಪ್ರಕೃತಿಸೌಂದರ್ಯ, ಕಾಡು, ಗುಡ್ಡ, ಜಲಪಾತ, ತೆಂಗು, ಕಂಗಿನತೋಟ, ಗದ್ದೆ ಬೇಸಾಯಗಳನ್ನೆಲ್ಲ ಕಂಡು ಅವನ ಮನಸ್ಸು ವಿಪರೀತ ಆನಂದಗೊಳ್ಳುತ್ತದೆ. ತಾನು ಸಹ ಇಂತಹದೇ ಹಳ್ಳಿಯಲ್ಲಿ ನೆಲೆಸಿ, ಸಾಹಸಮಯ ಬದುಕನ್ನು ಸಾಗಿಸಬೇಕೆಂಬ ಕನಸು ಕಾಣುತ್ತಾನೆ. ತಮ್ಮ ಪೂರ್ವಜರ ಭೂಮಿಯನ್ನು ಕ್ರಯಕ್ಕೆ ಪಡೆದು ಅಲ್ಲಿ ಬೇಸಾಯವನ್ನು ಪ್ರಾರಂಭಿಸುತ್ತಾನೆ. ಭಾರೀ ಕಷ್ಟಪಟ್ಟು ಕಾಡಿನಂತಾಗಿದ್ದ ಭೂಮಿಯನ್ನು ಹಸನು ಮಾಡಿ, ತಾನುಗಳಿಸಿದ್ದ ವೈಜ್ಞಾನಿಕ ಜ್ಞಾನವನ್ನು ಉಪಯೋಗಿಸಿ ಕೃಷಿ ಮಾಡಲು ತೊಡಗುತ್ತಾನೆ. ಕಾಡು ಪ್ರಾಣಿಗಳನ್ನು ಓಡಿಸಲು,

ಅಬ್ಬಿಯ ನೀರನ್ನು ಸೆರೆಹಿಡಿದು, ಸಣ್ಣ ಡೈನಮೋದಿಂದ ವಿದ್ಯುತ್ತನ್ನು ತಯಾರಿಸಿ, ಅದನ್ನು ಮುಳ್ಳಿನ ತಂತಿಯ ಬೇಲಿಯ ಮೇಲೆ ಹಾಯಿಸುತ್ತಾನೆ. ವರಲಕ್ಷ್ಮೀಯು ಅವನಿಗೆ ಸಹಾಯ ಮಾಡಲು ಹಳ್ಳಿಗೆ ಬರುತ್ತಾಳೆ. ಇಬ್ಬರೂ ಮದುವೆಯಾಗಿ ಹಳ್ಳಿಯಲ್ಲೇ ಉಳಿಯುತ್ತಾರೆ. ಈ ಚಿತ್ರದಲ್ಲಿ ಗ್ರಮೀಣ ಮತ್ತು ನಗೆ ಸಂಸ್ಕೃತಿಗಳೊಳಗಿನ ಸಂಘರ್ಷದ ನಿರೂಪಣೆಯಿದೆ.

ಹೇಮಾವತಿ ಗೊರೂರು ರಾಮಸ್ವಾಮಿ ಅಯ್ಯಂಗಾರರ ಕಾದಂಬರಿ ಆಧಾರಿತ ಈ ಚಿತವನ್ನು ನಿರ್ದೇಶಿಸಿದರು. ಜಾತಿಯ ಸಮಸ್ಯೆಯನ್ನು ಹೇಳುವ ಚಿತ್ರ. ಚೆನ್ನಿಯು ಕೆಳಜಾತಿಯವಳೆಂಬ ಕಾರಣಕ್ಕೆ ಶಾಸ್ತ್ರಿಯ ಸಂಗೀತವನ್ನು ಕಲಿಯಬಾರದು ಎಂದು ಬ್ರಾಹ್ಮಣರು ವಿರೋಧಿಸುತ್ತಾರೆ.
ಆದರೆ ಚೆನ್ನಿಯು ಮೇಲ್ಜಾತಿಯವನಾದ ಆನಂದ ಜೊತೆ ಸ್ನೇಹ ಬೆಳೆಸಿದ್ದರಿಂದ ಊರು ಬಿಡಬೇಕಾದ ಪ್ರಸಂಗ ಬರುತ್ತದೆ. ಆನಂದ ಚೆನ್ನಿ ಇಬ್ಬರು. ಊರು ಬಿಟ್ಟು ಹೋಗುವರು. ಚೆನ್ನಿಯು ಅಲ್ಲಿ ಶಾಸ್ತ್ರೀಯ ಸಂಗೀತವನ್ನು ಕಲಿಯುವಳು. ಚೆನ್ನಿಯ ಸಂಗೀತಾಭ್ಯಾಸವೆಲ್ಲ ಮುಗಿದ ಮೇಲೆ ಊರಿಗೆ ವಾಪಸಾಸುಗವರು ಸಂಗೀತ ಕಛೇರಿಯಲ್ಲಿ ಅವಳ ಸಂಗೀತ ಕೇಳಿ ಮೆಚ್ಚಿ ಬ್ರಾಹ್ಮಣರು ಸ್ನಾನ ಮಾಡುವರು . ನಂತರ ಚೆನ್ನಿಯು ತನ್ನ ತಂದೆ ಪಾದಗಳಿಗೆ ನಮಸ್ಕರಿಸಿದಾಗ ಬ್ರಾಹ್ಮಣರೆಲ್ಲರೂ ಶುದ್ಧಿಯಾಗಲೆಂದು ಹೊಳೆಯಲ್ಲಿ ಸ್ನಾನಮಾಡುವರು.

ಇದೇ ರೀತಿ ತಬ್ಬಲಿಯು ನಿನಾದೆ ಮಗನೆ, ಕೊಟ್ರೇಶಿಕನಸು, ಭೂಮಿ ಇತ್ಯಾದಿ ಸಿನಿಮಾಗಳಲ್ಲಿ ಸಾಂಸ್ಕೃತಿಕ ಸಂಘರ್ಷದ ವಿವಿಧ ನೆಲೆಗಳ ಅಭಿವ್ಯಕ್ತಿಯಿದೆ.

ಹೀಗೆ ಕನ್ನಡ ಸಿನಿಮಾದ ವಿವಿಧಾಂಗಗಳಲ್ಲಿ ನಮ್ಮ ದೇಸೀ ಸಂಸ್ಕೃತಿ ವಿವಿಧ ಅಂಶಗಳು ಯಾವೆಲ್ಲ ಸ್ವರೂಪಗಳಲ್ಲಿ ಅಭಿವ್ಯಕ್ತವಾಗಿದೆಯೆಂಬುದನ್ನು ಸ್ಥೂಲವಾಗಿ ಕಂಡು ಕೊಂಡಂತಾಯಿತು. ವಿಶ್ಲೇಷಣೆಯ ಸಂದರ್ಭದಲ್ಲಿ ಮಾದರಿಗೆಂಬಂತೆ ಕೆಲವೇ ಚಿತ್ರಗಳನ್ನೆಷ್ಟೆ ಇಲ್ಲಿ ಉದಾಹರಿಸಲಾಗಿದೆ. ದೇಸೀ ಸಂಸ್ಕೃತಿಯನ್ನು ಬಿಂಬಿಸುವ ಇನ್ನೂ ಅನೇಕ ಚಿತ್ರಗಳು ಇವೆಯಾದರೂ ಅವನ್ನೆಲ್ಲಾ ಇಲ್ಲಿ ಉಲ್ಲೇಖಿಸಿಲ್ಲ. ಕಾಲಾನುಕ್ರಮದಲ್ಲಿ ನೋಡುತ್ತಾ ಬಂದರೆ ಪ್ರಾರಂಭದ ದಿನಗಳಿಂದಲೂ ನಮ್ಮ ಸಿನಿಮಾಗಳಲ್ಲಿ ದೇಸೀ ಸಂಸ್ಕೃತಿಯು ತನ್ನದೇ ಆದ ರೀತಿಯಲ್ಲಿ ಹಾಸುಹೊಕ್ಕಾಗಿರುವುದನ್ನು ನಾವು ಗಮನಿಸಬಹುದಾಗಿದೆ.

ಸಿನಿಮಾದಂತಹ ಮೂಲತಃ ಅನ್ಯ ದೇಶೀಯವಾದ ಕಲೆಯೊಂದು ನಮ್ಮ ನಾಡಿನಲ್ಲಿ ನಮ ಪರಿಸರದ್ದೇ ಆದ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಬೆಳೆಯಿತೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಆದರೆ 'ನಮ್ಮ ಸಂಸ್ಕೃತಿ'ಯನ್ನು ಅದು ಎಷ್ಟರ ಮಟ್ಟಿಗೆ ಬಳಸಿಕೊಂಡಿತು? ಯಾವ ಉದ್ದೇಶಕ್ಕಾಗಿ ಬಳಸಿಕೊಂಡಿತು? ಎಂಬುದು ಪ್ರತ್ಯೇಕ ಚರ್ಚೆಯ ವಿಷಯವಾಗಬಹುದು. ಕೆಲವೆಡೆ ಮನರಂಜನೆಗಾಗಿ ಮತ್ತೇ ಕೆಲವೆಡೆ ವಾಣಿಜ್ಯಾತ್ಮಕ ಉದ್ದೇಶಕ್ಕಾಗಿ ಇನ್ನೂ ಕೆಲವೆಡೆ ಗಂಭೀರ ಪರಿಣಾಮದ ಸಾಧನೆಗಾಗಿ ಇದು ಸಿನಿಮಾಗಳಲ್ಲಿ ಬಳಕೆಯಾಗಿರಬಹುದು. ಆದೇನಿದ್ದರೂ ಆಯಾ ನಿರ್ದೇಶಕ ಅಥವಾ ನಿರ್ಮಾಪಕರ ಪ್ರವೃತ್ತಿ ಹಾಗೂ ನಿರೀಕ್ಷೆಗಳಿಗೆ ಬಿಟ್ಟ ವಿಷಯ. ಹಾಗಂತ ಅದರಲ್ಲಿ ಪ್ರೇಕ್ಷಕರ ಪಾತ್ರ ಏನೂ ಇಲ್ಲವೆಂದು ಹೇಳುವಂತಿಲ್ಲ. ಸಿನಿಮಾದ ರಸಗ್ರಹಣ ಅದೇ ರೀತಿ ಪರಿಣಾಮಗಳು ಎಷ್ಟೋವೇಳೆ ಪ್ರೇಕ್ಷಕಾಭಿರುಚಿಯನ್ನೂ ಅವಲಂಬಿಸಿರುವುದೂ ಉಂಟು. ಸಾಮಾನ್ಯವಾಗಿ ಸಿನಿಮಾಗಳಲ್ಲಿ ಅಂತಿಮವಾದ ಪರಿಣಾಮ ಅಥವಾ ಸಂದೇಶ ಇದ್ದೇ ಇರುತ್ತದೆ. ಆದರೆ ಆ ಪರಿಣಾಮ ಅಥವಾ ಸಂದೇಶವನ್ನು ಸಾರುವುದಕ್ಕೆ ಪೂರಕವಾಗಬಲ್ಲ ಅನೇಕ ದೃಶ್ಯಾವಳಿಗಳನ್ನು ನಿರ್ದೇಶಕರು ಅದರಲ್ಲಿ ಅಳವಡಿಸಿರುತ್ತಾರೆ. ಅವು ದೇಸೀ ಸಂಸ್ಕೃತಿಯನ್ನು ಬಿಂಬಿಸುವ ದೃಶ್ಯಗಳಾಗಿರ ಬಹುದುಃ ವಿದೇಶೀ ಸಂಸ್ಕೃತಿಯನ್ನು ಬಿಂಬಿಸುವ ದೃಶ್ಯಾವಳಿಗಳಾಗಿರಬಹುದು. ಸದ್ವರ್ತನೆ, ಸನ್ನಡತೆ, ನೈತಿಕತೆ- ಅನೈತಿಕತೆ, ನ್ಯಾಯ-ಅನ್ಯಾಯ, ಸದಾಚಾರ - ಅನಾಚಾರ. ಎಲ್ಲವುಗಳೂ ಅದರಲ್ಲಿ ಸೇರಿ ಕೊಂಡಿರಬಹುದು. ಕೆಲವೊಮ್ಮೆ ಪ್ರೇಕ್ಷಕರು ಸಿನಿಮಾದ ಅಂತಿಮ ಪರಿಣಾಮದ ಕಡೆಗೆ ಹೋಗದೆ, ಇಂತಹ ಪೂರಕ ಸನ್ನಿವೇಶಗಳಿಂದ ಪ್ರಭಾವಿತರಾಗುವ ಅಪಾಯವೂ ಇಲ್ಲದಿಲ್ಲ. ನಿರ್ದೇಶಕರ ಒಟ್ಟಾರೆ ನಿರ್ವಹಣೆ ಹೇಗೇ ಇದ್ದರೂ ಪ್ರೇಕ್ಷಕರಾದವರು ತಮಗೆ ಬೇಕಾದ ಅಂಶಗಳನ್ನಷ್ಟೇ ಸಿನಿಮಾದಿಂದ ಹೆಕ್ಕಿಕೊಳ್ಳುವ ಸಾಧ್ಯತೆ ಇದೆ.

ದೇಸೀ ಸಂಸ್ಕೃತಿಯ ಬಳಕೆಗೂ ಈ ಮಾತು ಅನ್ವಯವಾಗುತ್ತದೆ. ಹಾಗಾಗಿ ಪರಿಣಾಮದ ಬಗೆಗಿನ ಚರ್ಚೆಯನ್ನು ಒತ್ತಟ್ಟಿಗಿಟ್ಟು ದೇಸೀ ಸಂಸ್ಕೃತಿಯ ಬಳಕೆ ಮ್ಮ ಸಿನಿಮಾಗಳಲ್ಲಿ ಎಷ್ಟರ ಮಟ್ಟಿಗಾಗಿದೆಯೆಂಬುದನ್ನು ನೋಡ ಹೋದರೆ ವೈವಿಧ್ಯಮಯವಾದ ಸಾಂಸ್ಕೃತಿಕ ಲೋಕವೊಂದು ನಮ್ಮೆದುರು ತೆರೆದುಕೊಳ್ಳತ್ತದೆ. ಮುಂದಿನ ಅಧ್ಯಾಯಗಳು ಈ ಅಂಶವನ್ನು ಇನ್ನಷ್ಟು ಸ್ಪಷ್ಟ ಪಡಿಸುತ್ತವೆ.

ಅಧ್ಯಾಯ-೫

ದೇಸೀ ಸಂಸ್ಕೃತಿ ಹಿನ್ನೆಲೆಯಲ್ಲಿ ಸಾಹಿತ್ಯ ಮತ್ತು ಸಿನಿಮಾ ಸಂಬಂಧ

೫.೧. ಮೌಖಿಕ ಸಾಹಿತ್ಯ ಮತ್ತು ಕನ್ನಡ ಸಿನಿಮಾ

೫.೨. ಶಿಷ್ಟ ಸಾಹಿತ್ಯ ಮತ್ತು ಕನ್ನಡ ಸಿನಿಮಾ

ಸಾಹಿತ್ಯ ಮತ್ತು ಸಿನಿಮಾಕ್ಕೆ ಅವಿನಾಭಾವ ಸಂಬಂಧವಿದೆ. ಒಂದರ್ಥದಲ್ಲಿ ಸಾಹಿತ್ಯವಿಲ್ಲವೆ ಸಿನಿಮಾವಿಲ್ಲವೆನ್ನಬಹುದು. ಸಿನಿಮಾದಲ್ಲಿನ ಸಾಹಿತ್ಯವನ್ನು ನಾವು ಹಲವು ನೆಲೆಗಳಲ್ಲಿ ಗುರುತಿಸಬಹುದಾಗಿದೆ. ಯಾವುದೇ ಸಿನಿಮಾಕ್ಕೂ ಮೂಲವಾಗಿ ಒಂದು ಕಥೆ ಅಥವಾ ವಸ್ತು ಇರುತ್ತದೆ. ಸಿನಿಮಾಕ್ಕೆ ತಕ್ಕಹಾಗೆ ಆ ಕಥೆಯನ್ನು ಅಳವಡಿಸಿದಾಗ ಅದುವೇ ಚಿತ್ರಕಥೆಯೆನಿಸುತ್ತದೆ. ಅದನ್ನೇ ಮತ್ತೆ ಸಂಭಾಷಣೆಯಾಗಿ ರೂಪಾಂತರಿಸಲಾಗುತ್ತದೆ. ಇದರ ಜತೆಗೆ ಸಿನಿಮಾಕ್ಕೆ ಯೋಗ್ಯವಾದ ಹಾಡುಗಳನ್ನು ರಚಿಸ್ಥಲಗುತ್ತದೆ. ಹೀಗೆ ಮೂಲಕಥೆ, ಚಿತ್ರಕಥೆ, ಸಂಭಾಷಣೆ, ಹಾಡು ಇವುಗಳು ಒಂದು ಸಿನಿಮಾದಲ್ಲಿರುವ ವಿವಿಧ ಸಾಹಿತ್ಯ ರೂಪಗಳು. ಒಂದರ್ಥದಲ್ಲಿ ಇವುಗಳೆಲ್ಲಾ ಸಿನಿಮಾಕ್ಕೇ ವಿಶಿಷ್ಟವಾದ ಸಾಹಿತ್ಯ ರೂಪಗಳೆನ್ನಬಹುದು. ಆದರೆ ಇಲ್ಲಿನ ಮೂಲಕಥೆ ಮತ್ತು ಹಾಡುಗಳ ವಿಷಯದಲ್ಲಿ ಅನೇಕ ಸಿನಿಮಾಗಳು ಪ್ರಚಲಿತ ಸಾಹಿತ್ಯ ಪ್ರಕಾರಗಳಿಗೆ ಋಣಿಯಾಗಿರುವುದುಂಟು. ಕಥೆ, ಕಾದಂಬರಿ, ಕಾವ್ಯ, ನಾಟಕಗಳಂತಹ ಶಿಷ್ಟ ಸಾಹಿತ್ಯ ಪ್ರಕಾಗಳನ್ನೂ ಜನಪದ ಕಥೆ ಕಾವ್ಯಗಳನ್ನೂ ಆಧಾರವಾಗಿಸಿಕೊಂಡು ನಮ್ಮಲ್ಲಿ ಅನೇಕ ಸಿನಿಮಾಗಳು ನಿರ್ಮಾಣಗೊಂಡಿವೆ. ಅದರಲ್ಲೂ ಕಾದಂಬರಿಗಳಿಗೂ ಸಿನಿಮಾಗಳಿಗೂ ವಿಶೇಷವಾದ ನಂಟು. ಸಾಹಿತ್ಯ ಮತ್ತು ಸಿನಿಮಾಗಳ ಸಂಬಂಧವನ್ನು ಪ್ರಮುಖವಾದ ಇನ್ನೊಂದು ನೆಲೆಯಿಂದಲೂ ಅವಲೋಕಿಸಬಹುದಾಗಿದೆ. ಅದು ವಿವಿಧ ಸಾಹಿತ್ಯ ಪಂಥಗಳು ಹಾಗೂ ಸಿನಿಮಾಗಳೊಳಗಿನ ಸಂಬಂಧದ ನೆಲೆ ಸಿನಿಮಾ ಸಾಹಿತ್ಯವೆಂಬುದು ಪ್ರತ್ಯೇಕವಾದ ಒಂದು ಕವಲಾಗಿದ್ದರೂ, ಹೊಸಗನ್ನಡ ಸಂದರ್ಭದಲ್ಲಿ ಅದು ಅಭಿಜಾತ ಸಾಹಿತ್ಯದ ಜತೆಗೂ ಗಾಢವಾದ ಸಂಬಂಧವೆನ್ನಿರಿಸಿಕೊಂಡು ಬೆಳೆಯಿತು. ಆಧುನಿಕ ಸಾಹಿತ್ಯದ ಜತೆಗೂ ಗಾಢವಾದ ಸಂಬಂಧವನ್ನಿರಿಸಿಕೊಂಡು ಬೆಳೆಯಿತು. ಆಧುನಿಕ ಸಾಹಿತ್ಯ ಪಂಥಗಳಾದ ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ, ನವ್ಯೋತ್ತರ ಚಿಂತನೆಗಳು ಅವುಗಳೊಂದಿಗೆ ಆದರ್ಶವಾದ,

ಮಾನವತಾವಾದ, ಮಾರ್ಕ್ಸ್‌ವಾದ, ಸಮತಾವಾದ, ಲೋಹಿಯಾವಾದ, ಸ್ತ್ರೀವಾದಗಳಂತಹ ವಿಚಾರಗಳು, ಸ್ತ್ರೀ ಸಂವೇದನೆ, ದಲಿತಸಂವೇದನೆ, ಮುಸ್ಲಿಂ ಸಂವೇದನೆ, ಶೋಷಿತರ ಸಂವೇದನೆಗಳಂತಹ ದನಿಗಳು ವರ್ಗ-ಜಾತಿ-ಸಂಘರ್ಷಗಳು ಇವೆಲ್ಲಾ ನಮ್ಮ ಸಿನಿಮಾಗಳಲ್ಲೂ ಕಾಲಕಾಲಕ್ಕೆ ಅಭಿವ್ಯಕ್ತಿಗೊಂಡಿವೆ. ಸಾಲದಕ್ಕೆ ನಮ್ಮ ಪ್ರಖ್ಯಾತ ಸಾಹಿತಿಗಳೂ ಸಿನಿಮಾರಂಗದಲ್ಲಿ ಗುರುತಿಸಿಕೊಂಡಿದ್ದಾರೆ.

ಸಾಹಿತ್ಯ ಮತ್ತು ಸಿನಿಮಾಗಳೊಳಗಿನ ಈ ಬಗೆಯ ಸಂಬಂಧದಲ್ಲಿ 'ದೇಸೀ ಸಂಸ್ಕೃತಿ' ಹೇಗೆ ಅಭಿವ್ಯಕ್ತಗೊಂಡಿದೆಯೆಂಬುದನ್ನು ವಿಶ್ಲೇಷಿಸುವುದೇ ಪ್ರಸ್ತುತ ಅಧ್ಯಾಯದ ಉದ್ದೇಶವಾಗಿದೆ. ಸಾಹಿತ್ಯ ಮತ್ತು ಸಿನಿಮಾದ ಸಂಬಂಧದಲ್ಲಿ ಆರಂಭದ ಕನ್ನಡ ಚಲನ ಚಿತ್ರಗಳು ಲಿಖಿತ ಅಥವಾ ಅಲಿಖಿತ ಸಾಹಿತ್ಯವನ್ನಾಧರಿಸಿ ರಚನೆಯಾಗಿವೆ. ಭಾರತೀಯರ ಎಲ್ಲ ಚಟುವಟಿಕೆಗಳಲ್ಲಿ ತನ್ನ ಪ್ರಭಾವ ಬೀರುವ ಮಹಾಕಾವ್ಯಗಳು ಸಿನಿಮಾರಂಗದ ಮೇಲೂ ತನ್ನ ಪ್ರಭಾವವನ್ನು ಬೀರಿವೆ. ಮೊದಲು ಈ ಮಹಾಕಾವ್ಯಗಳನ್ನು ಆಧರಿಸಿದ ಚಿತ್ರಗಳು ಬಂದವು. ನಂತರದಲ್ಲಿ ನಾಟಕವನ್ನಾಧರಿಸಿದ ಚಿತ್ರಗಳು, ಹಾಗೆಯೇ ಸಣ್ಣಕಥೆ, ಕಾದಂಬರಿ, ಕವನಗಳನ್ನು ಆಧರಿಸಿದ ಚಿತ್ರಗಳು ಬಂದಿರುವುದನ್ನು ಕಾಣಬಹುದು. ನಾಟಕ, ಸಣ್ಣಕಥೆ, ಕಾದಂಬರಿ, ಕವನ ಇವುಗಳು ಲಿಖಿತ ಸಾಹಿತ್ಯದಲ್ಲಿ ಕಂಡುಬಂದರೆ ಇನ್ನೂ ಜನಪದಕಥೆ, ಲಾವಣಿ, ಪಾಡ್ದನ, ಕಾವ್ಯ ಇತ್ಯಾದಿಗಳು ಮೌಖಿಕ ಸಾಹಿತ್ಯದಲ್ಲಿ ಸೇರುತ್ತವೆ.

೫.೧ ಜನಪದ/ಮೌಖಿಕ ಸಾಹಿತ್ಯ ಮತ್ತು ಕನ್ನಡ ಸಿನಿಮಾ

ಮೌಖಿಕ ಸಂಪ್ರದಾಯದ ಜನಪದ ಸಾಹಿತ್ಯವನ್ನು ಸ್ವತಃ ದೇಸೀ ಸಾಹಿತ್ಯವೆಂದು ಕರೆಯಲಾಗುವುದರಿಂದ ಅವುಗಳನ್ನಾಧರಿಸಿ ತಯಾರಾದ ಸಿನಿಮಾಗಳಲ್ಲಿ ಸಹಜವಾಗಿಯೇ ದೇಸೀ ಸಂಸ್ಕೃತಿ ಇರುತ್ತದೆನ್ನಬಹುದು. ದೇಶಾದ್ಯಾಂತ ಜನಪದ ಕಥೆ-ಪುರಾಣ-ಕಾವ್ಯಗಳನ್ನಾಧರಿಸಿದ ಸಿನಿಮಾಗಳು ತೆರೆಕಂಡಿವೆ. ದಕ್ಷಿಣ ಭಾರತವನ್ನೇ ತೆಗೆದುಕೊಂಡರೆ ಕನ್ನಡ, ತುಳು, ಮಲಯಾಳಂ, ತಮಿಳು, ತೆಲಗು, ಮುಂತಾದ ಭಾಷೆಗಳಲ್ಲಿ ಇಂತಹ ಅಸಂಖ್ಯೆ ಚಿತ್ರಗಳು ನಿರ್ಮಾಣಗೊಂಡಿವೆ. ತುಳುವಿನ ಕೋಟಿ ಚೆನ್ನಯ್ಯ, ತುಳುನಾಡ ಸಿರಿ, ಮಲಯಾಳಂನ ಒರು ವಡಕ್ಕನ್ ವೀರಗಾಥ,

ತಚ್ಚೋಳಿ ವಥೇನನ್, ತೆಲುಗಿನ ಮಲ್ಲೀಶ್ವರಿ, ಒಕಊರಿಕಥೆ, ತಮಿಳಿನ ಕನ್ನಗಿ, ನಂದಾನಾರ್ ಇತ್ಯಾದಿಗಳಂತೆ ಕನ್ನಡದಲ್ಲೂ ಮೌಖಿಕ ಸಾಹಿತ್ಯವನ್ನಾಧರಿಸಿದ ಹಲವು ಚಿತ್ರಗಳಿವೆ.

ಜನಪದ ಸಾಹಿತ್ಯ ಪ್ರಕಾರಗಳಾದ ಕಥೆ, ಐತಿಹ್ಯ, ಪುರಾಣ ಹಾಗೂ ಕಾವ್ಯಗಳನ್ನಾದರಿಸಿ ಹಲವು ಕನ್ನಡ ಸಿನಮಾಗಳು ನಿರ್ಮಾಣವಾಗಿವೆ. ಇವುಗಳಲ್ಲಿ ಸಿಂಹಪಾಲು ಜನಪದ ಕಥೆಗಳದೆನ್ನಬಹುದು. ಕನ್ನಡ ಚಲನ ಚಿತ್ರ ಇತಿಹಾಸವನ್ನು ನೋಡಿದರೆ ಪ್ರಾರಂಭದ ಬಹುಪಾಲು ಚಿತ್ರಗಳು ಜನಪದ ಕಥೆಗಳ ಆಶಯಗಳನ್ನೊಳಗೊಂಡವುಗಳು. ಸಿನಿಮಾ ಮಾಧ್ಯಮವನ್ನು ನಮ್ಮ ದೇಸೀ ಸಂಸ್ಕೃತಿ ಜಾಯಮಾನಕ್ಕೆ ಒಗ್ಗಿಸಿಕೊಳ್ಳುವ ಅದೇ ರೀತಿ ನಮ್ಮ ದೇಸೀ ಸಂಸ್ಕೃತಿ ಅಂಶಗಳನ್ನು ಸಿನಿಮಾ ಮಾಧ್ಯಮಕ್ಕೆ ಅಳವಡಿಸಿಕೊಳ್ಳುವ ಪ್ರಯತ್ನ ನಮ್ಮಲ್ಲಿ ಪ್ರಾರಂಭದಿಂದಲೇ ನಡೆಯುತ್ತಾ ಬಂದಿತೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಮುಗ್ಧ ಮಾನವನು ಪಡುವ ಕಷ್ಟಕೋಟಲೆಗಳು, ಅವನ ಭಕ್ತಿಗೆ ಮೆಚ್ಚಿ, ಪ್ರತ್ಯಕ್ಷರಾಗುವ ಶಿವ-ಪಾರ್ವತಿಯರಂಥ ದೇವತೆಗಳು, ಅವರ ಅನುಗ್ರಹ ಪಡೆದ ಆತ ಅಲೆಮಾನುಷತ್ವವನ್ನು ಪಡೆದುಕೊಳ್ಳುವುದು, ದೇವರುಗಳ ಮಹಿಮೆ ಕಾರಣಿಕಗಳು, ರಾಜ-ರಾಣಿಯರ, ರಾಜಕುಮಾರ - ರಾಜಕುಮಾರಿಯರ, ರಮ್ಯ ಕಥೆಗಳು ಇವೆಲ್ಲಾ ಮೂಲತಃ ಜನಪದರ ಕಲ್ಪನಾಲೋಕದ ಅಭಿವ್ಯಕ್ತಿಗಳು. ಇಂತಹ ಅನೇಕ ಜನಪದ ಕಥೆಗಳು ಕನ್ನಡದಲ್ಲಿ ಸಿನಿಮಾಗಳಾಗಿ ದೃಶ್ಯ ಮಾಧ್ಯಮದಲ್ಲಿ ಅದ್ಭುತ ರಮ್ಯ ಲೋಕವನ್ನೇ ಸೃಷ್ಟಿಸಿವೆ.

ಇದೇ ರೀತಿ ಐತಿಹ್ಯ - ಪುರಾಣ ಕಾವ್ಯಗಳೂ ಚಲನ ಚಿತ್ರಗಳಿಗೆ ವಸ್ತುವಾಗಿವೆ. ಮಂಟೇಸ್ವಾಮಿ, ಮಲೆಮಾದೇಶ್ವರ, ಜುಂಜಪ್ಪ ಮುಂತಾದ ಮಧ್ಯಕಾಲೀನ ಕರ್ನಾಟಕದ ಸಾಂಸ್ಕೃತಿಕ ನಾಯಕರು ನಂತರದಲ್ಲಿ ದೇವತೆಗಳಾಗಿ ವಿವಿಧ ಸಮುದಾಯಗಳ ಜನರಿಂದ ಆರಾಧನೆಗೊಳ್ಳುತ್ತಿದ್ದಾರೆ. ಅಂಥ ಸಾಂಸ್ಕೃತಿಕ ನಾಯಕರ ಕುರಿತಾದ ಕೆಲವು ಪುರಾಣ ಐತಿಹ್ಯಗಳು ಚಲನ ಚಿತ್ರಗಳಾಗಿವೆ.

ಜಾನಪದ ಸಾಹಿತ್ಯವನ್ನಾಧರಿಸಿದ ಚಿತ್ರಗಳನ್ನು ಕನ್ನಡ ಚಿತ್ರರಂಗದ ಆರಂಭದ ಕಾಲದಿಂದಲೂ ನಾವು ಗುರುತಿಸಬಹುದಾಗಿದೆ. ಕನ್ನಡದ ಮೊಟ್ಟಮೊದಲ ಜನಪದ ಕಥಾ ಚಿತ್ರವೆಂದರೆ 'ನಾಗಕನ್ನಿಕಾ' ೧೯೪೯ರಲ್ಲಿ ಬಂದ ಈ ಚಿತ್ರವನ್ನು ಜಿ.ವಿಶ್ವನಾಥ ನಿರ್ದೇಶಿಸಿದರು. ಇದರ ನಂತರ ಜಗನ್ಮೋಹಿನಿ ೧೯೫೧,

ಗುಣಸಾಗರಿ ೧೯೫೩, ರಾಜಲಕ್ಷ್ಮೀ ೧೯೫೪, ಗಂಧರ್ವಕನ್ಯೆ, ಸೋದರಿ, ಪಂಚರತ್ನ, ರತ್ನಗಿರಿರಹಸ್ಯ, ಸತೀನಳಾಯಿನಿ, ರಾಣಿಹೊನ್ನಮ್ಮ, ಮಕ್ಕಳರಾಜ್ಯ, ಆಶಾಸುಂದರಿ, ರತ್ನಮಂಜರಿ, ವಿಜಯನಗರದ ವೀರಪುತ್ರ, ಕಚದೇವಯಾನಿ, ಮಹಾಕವಿಕಾಳಿದಾಸ, ದೇವಸುಂದರಿ, ವಿಧಿವಿಲಾಸ, ತೇಜಸ್ವಿನಿ, ವೀರಕೇಸರಿ, ವಾಲ್ಮೀಕಿ, ಚಂದ್ರಕುಮಾರ, ಸತಿಶಕ್ತಿ, ಕಠಾರಿವೀರ, ಪಾತಾಳ ಮೋಹಿನಿ, ಸಿಂಹಸ್ವಪ್ನ, ಗುರುಶಿಷ್ಯರು, ಶಿವಕನ್ಯೆ ಪ್ರಚಂಡಕುಳ್ಳ, ಸಂಗ್ಯಾಬಾಳ್ಯ ಇನ್ನು ಹಲವು ಚಿತ್ರಗಳನ್ನು ನಾವು ಕಾಣಬಹುದು.

ಕನ್ನಡದ ಮೊದಲ ಜನಪದ ಚಿತ್ರ ಎಂದು ಹೆಗ್ಗಳಿಕೆ ಪಾತ್ರವಾದ ಸಿನಿಮಾ **ನಾಗಕನ್ನಿಕಾ**. ಈ ಚಿತ್ರದಲ್ಲಿ ಮಂತ್ರವಾದಿಯೊಬ್ಬ ತನ್ನಲ್ಲಿದ್ದ ಅತಿಮಾನುಷ ಶಕ್ತಿಯನ್ನು ಸ್ವಾರ್ಥಕ್ಕೆ ಬಳಸಿಕ್ಕೊಳ್ಳುತ್ತಿರುತ್ತಾನೆ. ಈ ವಿಷಯ ತಿಳಿದ ಪುತ್ರಿಯು ವಿರೋಧಿಸಿದಾಗ ತನ್ನ ಪುತ್ರಿಯನ್ನೇ ಗಿಣಿಯನ್ನಾಗಿ ಮಾಡುತ್ತಾನೆ. ತನ್ನ ಮೋಸದ ಜಾಲದಿಂದ ಪುತ್ರಿಯನ್ನು ಸರ್ಪವಾಗಿಸುತ್ತಾನೆ. ಮಹೇಂದ್ರಪುರಿ ರಾಜನನ್ನು ಮರುಳು ಮಾಡಿ ರಾಜಕುಮಾರಿಯನ್ನೇ ಕಾಡಿಗೆ ಅಟ್ಟುತ್ತಾನೆ. ಕಾಡಿನಲ್ಲಿ ರಾಜಕುಮಾರಿಗೆ ರಾಜಕುಮಾರನೊಬ್ಬ ಸಿಗುತ್ತಾನೆ. ರಾಜಕುಮಾರಿಯು ಮಂತ್ರವಾದಿಯ ಮೋಸದ ಬಗ್ಗೆ ತಿಳಿಸುತ್ತಾಳೆ. ಆಗ ರಾಜಕುಮಾರನು ಮಾಯಾವಿಯ ಮೋಸದ ಕೃತ್ಯಗಳನ್ನು ಬಯಲಿಗೆಳೆದು ನಾಗಕನ್ನಿಕೆಯನ್ನು ಪಾರು ಮಾಡುತ್ತಾನೆ.

ಜಗನ್ಮೋಹಿನಿ ಈ ಚಿತ್ರದಲ್ಲಿ ಮಹಾರಾಜನೊಬ್ಬ ಗ್ರಾಮೀಣ ಚೆಲುವೆಯ ಮೋಹಕ್ಕೆ ಒಳಗಾಗುತ್ತಾನೆ. ಅರಮನೆಗೆ ಕರೆದೊಯ್ಯುವ ಭಾಷೆ ಕೊಟ್ಟು ಅವಳನ್ನು ಗಾಂಧರ್ವ ವಿವಾಹವಾಗುತ್ತಾನೆ. ಅರಮನೆಗೆ ಬಂದ ಮೇಲೆ ಅವನು ಆ ಚೆಲುವೆಯನನ್ನು ಮರೆಯುತ್ತಾನೆ.

ಚೆಲುವೆಯು ಮಹಾರಾಜನನ್ನು ಹುಡುಕಿಕೊಂಡು ಅರಮನೆಗೆ ಬಂದಾಗ ಮಹಾರಾಜ ಅವಳನ್ನು ಅವಮಾನಿಸುತ್ತಾನೆ. ಮನನೊಂದ ಚಲುವೆ ಆತ್ಮಹತ್ಯೆ ಮಾಡಿಕೊಂಡು ಸೇಡುತೀರಿಸಿಕೊಳ್ಳಲು ನಾಗಿಣಿಯಾಗಿ ಜನ್ಮವೆತ್ತುತ್ತಾಳೆ. ರಾಜ ಸಹ ಸತ್ತುಹಳ್ಳಿಯ ಯುವಕನಾಗಿ ಜನಿಸಿರುತ್ತಾನೆ. ಅವನು ಗೌರಿ ಎಂಬ ಯುವತಿಯನ್ನು ವಿವಾಹವಾಗುತ್ತಾನೆ. ನಾಗಿಣಿ ಯುವಕನನ್ನು ನಾಗಲೋಕಕ್ಕೆ ಕರೆದೊಯ್ಯುತ್ತಾಳೆ. ನಾಗಿಣಿ ನಾನಾಕಷ್ಟ ಕೊಟ್ಟಾಗ, ತಡೆಯಲಾರದೆ ಗೌರಿ ಆತ್ಮಹತ್ಯೆಗೆ ಪ್ರಯತ್ನಿಸುವಾಗ ಋಷಿಯೊಬ್ಬ ತಡೆದು ಪತಿಯನ್ನು ಪಡೆದುಕೊಳ್ಳಲು ಅವಳಿಗೆ ನೆರವಾಗುತ್ತಾನೆ.

ಈ ರೀತಿಯ ಮಾಯ ಮಂತ್ರದ ಕಥೆಗಳು ಹಲವಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಉದಾಹರಣೆಗಾಗಿ ನೋಡಬಹುದು.

ರಾಜ ಲಕ್ಷ್ಮಿ ಚಿತ್ರವು ಅಕ್ಕ ತಂಗಿಯರಿಬ್ಬರ ಕಥೆ. ಅಕ್ಕ ವಿಶಿಷ್ಠವಾದ ಮಂತ್ರಶಕ್ತಿ ಹೊಂದಿದವಳು. ಪ್ರತಿ ಹುಣ್ಣಿಮೆಯಲ್ಲೂ ಒಬ್ಬೊಬ್ಬ ಗಂಡಸನ್ನು ಆಕರ್ಷಿಸಿ ಬಲಿಕೊಟ್ಟು ತನ್ನ ಮಂತ್ರ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಿರುತ್ತಾಳೆ. ಈ ಕೆಲಸಕ್ಕೆ ತಂಗಿಯನ್ನು ಶಿಲೆಯಾಗಿಸಿ ಬೇಕಾದಾಗ ಮಾತ್ರ ನೆರವು ಪಡೆಯುತ್ತಾಳೆ. ರಾಜನೊಬ್ಬನಿಗೆ ತಂಗಿಯಿಂದಲೇ ಈ ಗುಟ್ಟು ತಿಳಿದಾಗ ಅವನು ಅಕ್ಕನನ್ನು ಮಣಿಸುತ್ತಾನೆ.

ರತ್ನಗಿರಿ ರಹಸ್ಯ ಚಿತ್ರದಲ್ಲಿ ಚಾಲುಕ್ಯ ಚಕ್ರವರ್ತಿ ಆದಿತ್ಯನನ್ನು ಮಂಗಳ ಪುರಿಯ ರಾಜಕುಮಾರಿ ನಂದಿನಿ ವರಿಸುವ ಕನಸು ಕಾಣುತ್ತಾಳೆ. ಆದರೆ ಆದಿತ್ಯನು ನಂದಿನಿಯ ದಾಸಿ ಮಂಗಳೆಯನ್ನು ಮದುವೆಯಾಗುತ್ತಾನೆ. ಇದರಿಂದ ಮಂಗಳೆ ಮಹಾರಾಣಿಯಾಗುತ್ತಾಳೆ. ಕೋಪಗೊಂಡ ನಂದಿನಿ ಸೇಡು ತೀರಿಸಿಕೊಳ್ಳಲು ಹವಣಿಸಿ ಆ ನಿಟ್ಟಿನಲ್ಲಿ ಯಶಸ್ವಿಯಾಗುತ್ತಾಳೆ. ಮಹಾರಾಣಿಯ ಉದರದಲ್ಲಿ ಜನಸಿದ ರಾಜಕುಮಾರ ಗಜೇಂದ್ರವರ್ಮನನ್ನು ಕಾಡುಪಾಲು ಮಾಡುತ್ತಾಳೆ. ಮಂತ್ರವಾದಿ ಮಹೇಂದ್ರನ ತಂತ್ರದಿಂದ ಮಹಾರಾಣಿಯನ್ನು ಮುದುಕಿಯನ್ನಾಗಿ ಮಾಡಿ, ಮಹಾರಾಜನನ್ನು ಮುತ್ತು ಮಾಲೆಯಾಗಿ ಮಾಡುತ್ತಾಳೆ. ಕೊನೆಗೆ ಎಲ್ಲ ಕಷ್ಟಗಳು ದೂರವಾಗಿ ಎಲ್ಲರೂ ಒಂದಾಗುತ್ತಾರೆ.

ಆಶಾಸುಂದರಿ ರಾಜಕುಮಾರಿ ಹೇಮಾವತಿಯ ಬದುಕಿಗೆ ಗೆಳತಿಯಾಗಿ ಪ್ರವೇಶಿಸಿದ ಯಕ್ಷಕನ್ಯೆ ಮಿತ್ರವೃಂದಳು ಗುಣಶೀಲ ಎಂಬ ಯುವಕ ಹಾಗೂ ಹೇಮಾವತಿಯರ ಪ್ರೀತಿಯ ನಡುವೆ ಮುಳ್ಳಾಗಿ ನಾನಾ ತೊಂದರೆಗಳನ್ನು ನೀಡುತ್ತಾಳೆ. ಹೇಮಾವತಿಯ ಹೃದಯದ ಜ್ವಾಲೆಯಿಂದ ಮಿತ್ರವೃಂದ ಭಸ್ಮವಾಗುವ ಸಂದರ್ಭಬರುತ್ತದೆ. ಮಿತ್ರವೃಂದ ಹೇಮಾವತಿಗೆ ಶರಣಾಗುತ್ತಾಳೆ.

ರತ್ನಮಂಜರಿ ಇದರಲ್ಲಿ ತಪಸ್ಸಿನಲ್ಲಿದ ಏಕನಾತ ಋಷಿಯಿಂದ ಗಂಧರ್ವ ಕನ್ಯೆಯೊಬ್ಬಳು ಶಾಪಗ್ರಸ್ತಳಾಗಿ ಚಂದ್ರಗಿರಿಯ ರಾಜನ ಪುತ್ರಿಯಾಗಿ ಜನಿಸುತ್ತಾಳೆ. ಜಯಕೀರ್ತಿ ಎಂಬ ಯುವಕ ಗುರುಗಳೊಬ್ಬರ ಬಳಿ ವಿದ್ಯೆ ಕಲಿಯುತ್ತಾನೆ. ಗುರುಪುತ್ರಿ ಮಂಜರಿ ಅವನ ಸಹಪಾಠಿ.

ವಿದ್ಯಾಭ್ಯಾಸದ ನಂತರ ವಿವಾಹವಾಗೆಂಬ ಮಂಜರಿಯ ಕೋರಿಕೆಯನ್ನು ಜಯಕೀರ್ತಿ ನಿರಾಕರಿಸಿ ಗುರುಶಾಪಕ್ಕೀಡಾಗುತ್ತಾನೆ. ರಾಜಕುಮಾರನಂತೇ ಇದ್ದ ಜಯಕೀರ್ತಿ ರಾಜಕುಮಾರನ ಜಾಗದಲ್ಲಿ ನಿಂತು ರಾಜಕುಮಾರಿಯನ್ನು ವಿವಾಹವಾಗುತ್ತಾನೆ. ರಾಜಕುಮಾರಿ ತನ್ನ ಅರ್ಧ ಆಯಸ್ಸು ನೀಡಿ ಜಯಕೀರ್ತಿಯನ್ನು ಬದುಕಿಸುತ್ತಾಳೆ. ಮಂಜರಿ ಜಯಕೀರ್ತಿಗೆ ತೊಂದರೆ ಕೊಡುವ ಉದ್ದೇಶದಿಂದ ಅವನನ್ನು ವಿಕಾರ ಮಾಡುತ್ತಾಳೆ. ಮಾರ್ತಾಂಡನೆಂಬ ಮಾಂತ್ರಿಕ ಮಂಜರಿಯನ್ನು ನಾಯಿಯಾಗಿಸುತ್ತಾನೆ. ಜಯಕೀರ್ತಿಯಿಂದಲೇ ಪುನರ್ ರೂಪ ಪಡೆದು ಪುನಃ ಜಯಕೀರ್ತಿಗೆ ನಾನಾ ತೊಂದರೆ ಕೊಡುತ್ತಾಳೆ. ಕೊನೆಗೆ ಎಲ್ಲವೂ ಸುಖಾಂತವಾಗುತ್ತದೆ.

ವೀರಕೇಸರಿ ಪ್ರಜಾ ಪರಿಪಾಲನೆಯೇ ಸರ್ವಸ್ವ ಎಂದು ತಿಳಿದಿದ್ದ ರಾಜನೊಬ್ಬನ ಬಳಿ ಆತನ ಬಂಧು ಶೂರಸೇನ ಸೇರಿಕೊಂಡು ದೇಶದಲ್ಲಿ ಅರಾಜಕತೆ ಹುಟ್ಟಿಸುತ್ತಾನಲ್ಲದೆ, ರಾಜಕುಮಾರಿಯನ್ನು ವಿವಾಹವಾಗಲು ಸಂಚು ಮಾಡುತ್ತಾನೆ. ಮುಸುಕು ವ್ಯಕ್ತಿಯೊಬ್ಬ ಜನಗಳಿಗೆ ಸಹಾಯ ಮಾಡುತ್ತಿರುತ್ತಾನೆ. ಆ ಮುಸುಕು ವ್ಯಕ್ತಿಯ ವೇಷಧರಿಸಿ ರಾಜಕುಮಾರಿಯ ಆಭರಣ ಕಿತ್ತುಕೊಳ್ಳಲು ಮುಂದಾದಾಗ ನರಸಿಂಹ ಎಂಬ ಯುವಕ ಕಾಪಾಡಿ ರಕ್ಷಿಸುತ್ತಾನೆ. ಆ ಮುಸುಕುಧಾರಿ ವ್ಯಕ್ತಿ ತನ್ನ ಚಿಕ್ಕಪ್ಪ ಎಂದು ಅರಿವಾಗುತ್ತದೆ.

ಅಲ್ಲದೆ ಶೂರಸೇನನ ಅಕೃತ್ಯಗಳು ನರಸಿಂಹನಿಗೆ ತಿಳಿಯುತ್ತದೆ. ನರಸಿಂಹ ಒಂದು ಪಡೆಯನ್ನೇ ಕಟ್ಟಿ ಶೂರಸೇನನ ವಿರುದ್ಧ ಹೋರಾಡಿ ಸತ್ಯಕ್ಕೆ ಜಯ ತಂದಂಕೊಡುತ್ತಾನೆ.

ವಾಲ್ಮೀಕಿ ಮಹಾಕವಿ ವಾಲ್ಮೀಕಿಯ ಜೀವನಕ್ಕೆ ಸಂಬಂಧಪಟ್ಟ ದಂತ ಕತೆಯನ್ನಾಧರಿಸಿದ ಚಿತ್ರವಿದು. ರಕ್ಷಾ ಎಂಬುವನು ಅರಣ್ಯದಲ್ಲಿ ದರೋಡೆ, ಕೊಲೆ ಮಾಡುತ್ತಾ ಜೀವಿಸುತ್ತಿರುತ್ತಾನೆ. ಒಮ್ಮೆ ರಾಜಕುಮಾರಿ ಕಲ್ಯಾಣಿ ಕಾಡಿಗೆ ಬಂದಾಗ ಅವಳ ಆಭರಣ ದರೋಡೆ ಮಾಡಿ ಸಿಕ್ಕಿಕೊಳ್ಳುತ್ತಾನೆ. ರಾಜಕುಮಾರಿ ಅವನಲ್ಲಿ ಅನುರಾಗಹೊಂದಿ ತನ್ನ ತಂದೆಗೆ ಅಪ್ರತಿಮ ಶೂರನೆಂದು ಪರಿಚಯಿಸುತ್ತಾಳೆ. ಸುಳ್ಳು ಹೇಳದ ರಕ್ಷಾ ತಾನು ದರೋಡೆಕೋರನೆಂದೇ ಹೇಳುತ್ತಾನೆ. ಆಗ ರಾಜನು ಮರಣದಂಡನೆ ವಿಧಿಸುತ್ತಾನೆ. ಇದರಿಂದ ತಪ್ಪಿಸಿಕೊಂಡ ರಕ್ಷಾ ಬೆಟ್ಟದಿಂದ ನದಿಗೆ ಹಾರುತ್ತಾನೆ. ಅಲ್ಲಿ ಬೇಡ ಕನ್ಯೆ ತಾರ ಎಂಬುವಳು ಇವನನ್ನು ರಕ್ಷಿಸುತ್ತಾಳೆ. ಅಲ್ಲಿಗೆ ಬಂದ ಕಲ್ಯಾಣಿ ತಾರಾಳನ್ನು ಕೊಲ್ಲುವ ಸಂಚು ಮಾಡುತ್ತಾಳೆ.

ರಕ್ಷಾ ತಾರಾಳನ್ನು ರಕ್ಷಿಸಿ ಇಬ್ಬರೂ ಮದುವೆಯಾಗುತ್ತಾರೆ. ಅಸೂಯೆಯಿಂದ ಕಲ್ಯಾಣಿ ಈ ದಂಪತಿಗಳಿಗೆ ವಿರಸದುರಿಯಿಂದ ಬೇಯುವ ಶಾಪವೀಯುತ್ತಾಳೆ. ತಾರಾನಾಗರತ್ನ ಮಾಲೆ ಬೇಕೆಂದು ಕೇಳಿದಾಗ ಸಾವಿರಾರು ಸರ್ಪಗಳನ್ನು ಕೊಂದು, ಲಕ್ಷ್ಮಿ ವಿಗ್ರಹದ ಮೇಲೆಹತ್ತಿ ಅಲ್ಲಿದ್ದ ಮಾಲೆ ಪಡೆದು ಕೊಂಡರೂ ಲಕ್ಷ್ಮಿ ಮಾಯ ಮಾಡುತ್ತಾಳೆ. ಆಗ ನಾರದ ತನ್ನ ಬಳಿ ಮಾಲೆ ಇದೆ, ನೀನು ಮಾಡುವ ಕೊಲೆ ದರೋಡೆಗಳಲ್ಲಿ ನಿನ್ನ ಮನೆಯವರ ಪಾಲೆಷ್ಟು ಎಂಬ ಪ್ರಶ್ನೆಗೆ ಉತ್ತರ ಹೇಳಿದರೆ ಮಾಲೆ ನೀಡುವುದಾಗಿ ತಿಳಿಸುತ್ತಾನೆ. ಮನೆಗೆ ಬಂದು ಕೇಳಿದಾಗ ಅವನ ಪಾಪದ ಪಾಲು ಹೊರಲು ಯಾರೂ ಸಿದ್ಧರಿರುವುದಿಲ್ಲ. ರಕ್ಷಕನಿಗೆ ಜ್ಞಾನೋದಯವಾಗಿ ನಾರದನ ಸೂಚನೆಯಂತೆ ತಪಸ್ಸಿಗೆ ಕೂರುತ್ತಾನೆ. ತಾರಾಳಿಗೆ ಸ್ವರ್ಗ ಪ್ರಾಪ್ತಿಯಾಗುವುದು. ರಕ್ಷನ ಮೇಲೆ ಹುತ್ತ ಬೆಳೆದು ಹಣ್ಣುಹಣ್ಣು ಮುದುಕನಾಗುತ್ತಾನೆ. ರಾಕ್ಷಸರಿಬ್ಬರನ್ನು ಕ್ರೌಂಚ ಪಕ್ಷಿಗಳಾಗಿಸಿ ವಿಷ್ಣು ಕಿರಾತಕ ವೇಷ ಧರಿಸಿ ಬಂದು ಒಂದು ಪಕ್ಷಿಯನ್ನು ಕೊಲ್ಲುತ್ತಾನೆ. 'ವಾಲ್ಮೀಕಿ ಮಾ ನಿಷಾದ' ಎಂದು ಆರಂಭಿಸಿ ವಿಷ್ಣುವಿಗೆ ಶಾಪ ನೀಡಲು ಹೋಗುತ್ತಾನೆ. ನಾರದ ವಿಷಯ ತಿಳಿಸಿದಾಗ 'ಮಾನಿಷಾದ' ಎಂಬ ಪದದಿಂದಲೇ ಆರಂಭಿಸಿ ರಾಮಾಯಣ ಮಹಾಕಾವ್ಯ ಬರೆಯುತ್ತಾನೆ.

ಸತಿಶಕ್ತಿ ಒಂದೇ ತೆರನಾಗಿದ್ದ ಇಬ್ಬರು ವ್ಯಕ್ತಿಗಳು ಒಬ್ಬ ಸಾಧು, ಮತ್ತೊಬ್ಬ ಮಾಂತ್ರಿಕ ಮಾಂತ್ರಿಕ ತನ್ನ ಮಾಟ ಮಂತ್ರದಿಂದ ಎಲ್ಲವನ್ನು ಜಯಿಸಬಹುದೆಂದು ನಂಬಿ ಹಿಂಸಿಸುವನು. ಮಾಂತ್ರಿಕ ತನ್ನ ಮಂತ್ರಶಕ್ತಿಯಿಂದ ಮಹಾಸಾಧ್ವಿಯೊಬ್ಬಳ ಪತಿಯನ್ನು ತನ್ನ ಕಪಿಮುಷ್ಠಿಯಲ್ಲಿ ಹಿಡಿದುಕೊಂಡು ಆಡುವಾಗ ಆಕೆಯಲ್ಲಿರುವ ಮಹಾಶಕ್ತಿಯಿಂದ ಮಾಂತ್ರಿಕನ ಅಟ್ಟಹಾಸವನ್ನು ಮುರಿಯುತ್ತಾಳೆ.

ನಾಗಪೂಜಾ ನಾಗಕುಮಾರನೊಬ್ಬ ಭೂಲೋಕದಲ್ಲಿ ಮಾನವನಾಗಿ ಜನಿಸುತ್ತಾನೆ. ಅವನನ್ನು ಮೋಹಿಸಿ ವಿಫಲಳಾದ ನಾಗಕನ್ಯೆ ಇವನ ಮೇಲೆ ಸೇಡು ತೀರಿಸಿಕೊಳ್ಳಲು ಕಾಯುತ್ತಿರುತ್ತಾಳೆ. ಪುಂಗಿನಾದ ಕೇಳಿದರೆ ಮೈದೂಗುತ್ತಿದ್ದ ನಾಗಕುಮಾರನನ್ನು ನಾಗಕನ್ಯೆ ಹಿಂಸಿಸುತ್ತಾಳೆ. ನಾಗಕನ್ಯೆ ಚಂಪಾಳಿಗೆ ನಾನಾ ತೊಂದರೆ ನೀಡುತ್ತಾಳೆ. ನಾಗಕುಮಾರ ಶಾಶ್ವತವಾಗಿ ಸರ್ಪವಾದಾಗ ಸರ್ಪವನ್ನರಸಿ ಚಂಪಾ ಹೋಗುತ್ತಾಳೆ. ನಾಗದೇವನ ವರದಿಂದ ಎಲ್ಲವೂ ಒಳ್ಳೆಯದಾಗುತ್ತದೆ.

ಚಂದ್ರಹಾಸ ಕೇರಳದ ಮೇಧಾವಿ ಎಂಬ ರಾಜನ ಪುತ್ರ ಚಂದ್ರಹಾಸ ಸುಬುದ್ದಿ ಎಂಬ ಮಂತ್ರಿ ರಾಜನನ್ನು ಕೊಂದು ರಾಜ್ಯವನ್ನು ವಶಪಡಿಸಿಕೊಂಡ. ಆಪ್ತದಾಸಿ ನಂದಿನಿ ಚಂದ್ರಹಾಸನನ್ನು ಕರೆದುಕೊಂಡು ತಪ್ಪಿಸಿಕೊಂಡು ಹೋಗುವಳು ವನವೊಂದರಲ್ಲಿ ಮಲಗಿದ್ದ ಚಂದ್ರಹಾಸ ಪತ್ತೆಯಾಗಿ, ಅವನ ತಲೆ ಕಡಿಯಲು ಮಂತ್ರಿಯು ಕಟುಕರಿಗೆ ಅಪ್ಪಣೆ ಮಾಡಿದ. ಕಟುಕರು ಅವನನ್ನು ಕಾಡಿನಲ್ಲಿ ಬಿಟ್ಟು ಹೋಗುವರು. ಚಂದ್ರಹಾಸ ಧೀರ, ವೀರ, ಶೂರ, ಸುಂದರನಾಗಿದ್ದ. ಸುಬುದ್ಧಿಯು ತನ್ನ ಪುತ್ರನಿಗೆ ವಿಷಯಕೊಡೆಂದು ಪತ್ರ ಬರೆದು ಚಂದ್ರಹಾಸನ ಕೈಯಲ್ಲಿ ಕಳುಹಿಸಿದ ವಿಷಯೆ ಮಂತ್ರಿಯ ಮಗಳಾಗಿದ್ದಳು. ವಿಷಯೆಯನ್ನು ಕೊಡೆಂದು ತಂದೆ ಬರೆದಿದ್ದಾರೆಂದು ಗ್ರಹಿಸಿ ಚಂದ್ರಹಾಸನಿಗೆ ವಿಷಯವನ್ನು ಕೊಟ್ಟು ವಿವಾಹ ಮಾಡುತ್ತಾನೆ. ಚಂದ್ರಹಾಸನು ಚಕ್ರವರ್ತಿಯಾಗುತ್ತಾನೆ.

ಸಿಂಹ ಸ್ವಪ್ನ ದಾಯಾದಿ ಮತ್ಸರದಿಂದಾಗಿ ಧರ್ಮಪುರಿ, ಸಿಂಹಪುರಿ ಪ್ರತ್ಯೇಕ ರಾಜ್ಯಗಳಾಗುತ್ತವೆ. ಧರ್ಮ ಪುರಿಯನ್ನು ಶಾಂತಿ ಪ್ರಿಯನಾದ ಧರ್ಮಸಿಂಹ ಹಾಗೂ ಸಿಂಹಪುರಿಯನ್ನು ಸುಖಲೋಲುಪನಾದ ರುದ್ರಸಿಂಹ ಆಳುತ್ತಿದ್ದರು. ಸಿಂಹಪುರಿಯ ಪ್ರಜೆಗಳು ಆಗಾಗ ಧರ್ಮ ಪುರಿಗೆ ನುಗ್ಗಿ ಕೊಳ್ಳೆಹೊಡೆಯುತ್ತಿದ್ದರು. ಚರ್ಚಿಸಲು ತಮ್ಮನ್ನು ಕರೆದರೆ ಅವನು ಮೋಸದಿಂದ ಧರ್ಮಸಿಂಹನ ಬಳಿ ಇದ್ದ ಅರ್ಧ ನೀಲಮಣಿಯನ್ನು ಅಪಹರಿಸಿದ ಮನೋಹರನೆಂಬ ಗೂಢಾಚಾರನನ್ನು ಧರ್ಮಸಿಂಹ ಸಿಂಹಪುರಿಗೆ ಕಳುಹಿಸುವನು. ಎರಡು ರಾಜ್ಯಗಳನ್ನು ಕಬಳಿಸಿ ಇಬ್ಬರೂ ರಾಜರನ್ನು ಮುಗಿಸಲು ಸಂಚು ಹೂಡಿದ್ದ ಸಿಂಹಪುರಿಯ ಮಂತ್ರಿ ಕಾಲಕೇಶ್ವರನ ಮೋಸದ ಜಾಲವನ್ನು ಬಯಲಿಗೆಳೆದ ಮನೋಹರ, ಸಿಂಹಪುರಿಯ ರಾಜಕುಮಾರಿಯನ್ನು ವಿವಾಹವಾಗಿ ಎರಡೂ ರಾಜ್ಯಗಳನ್ನು ಒಂದು ಮಾಡುವನು.

ಪ್ರಚಂಡ ಕುಳ್ಳ ಪೆದ್ದ ಹುಡುಗ ನಗದೇ ಇರುವ ರಾಜಕುಮಾರಿಯನ್ನು ನಗಿಸಲು ರಾಜ ವಿಧವಿಧವಾದ ರೀತಿಯಲ್ಲಿ ಯತ್ನಿಸಿ ಹತಾಶನಾದಾಗ ಹುಡುಗ ಈ ನಿಟ್ಟಿನಲ್ಲಿ ಯಶಸ್ವಿಯಾಗುತ್ತಾನೆ. ಮಂತ್ರವಾದಿಯೊಬ್ಬ ರಾಜಕುಮಾರಿಯನ್ನು ಅಪಹರಿಸುತ್ತಾನೆ. ಕಡೆಗೆ ಹುಡುಗ ರಾಜಕುಮಾರಿಯನ್ನು ಮಂತ್ರವಾದಿಯ ಕಪಿಮುಷ್ಠಿಯಿಂದ ಬಿಡಿಸಿ ತಂದು ಮದುವೆಯಾಗುತ್ತಾನೆ.

ರಾಜಶೇಖರ ರಾಜಶೇಖರ ಬ್ರಹ್ಮಚಾರಿ ಪಕ್ಕದ ರಾಜ್ಯದ ರಾಜಕುಮಾರಿ ಪಂಕಜವಲ್ಲಿ ಅಜಯಸಿಂಹನ ವೇಷದಲ್ಲಿ ಯುದ್ಧಕ್ಕೆ ಕರೆಕಳುಹಿಸುತ್ತಾಳೆ. ಯುದ್ಧದಲ್ಲಿ ಅವಳು ಹೆಣ್ಣೆಂಬುದನ್ನು ಅರಿತು ಅರಮನೆಗೆ ಕರೆತಂದು ರಾಜಶೇಖರ ಉಪಚರಿಸುತ್ತಾನೆ. ಪಂಕಜವಲ್ಲಿ ರಾಜಶೇಖರನಲ್ಲಿ ಅನುರಕ್ತಳಾಗುತ್ತಾಳೆ. ಆದರೆ ರಾಜಶೇಖರ ಹಳ್ಳಿಯ ಹುಡುಗಿ ಗೌರಿಯನ್ನು ಮದುವೆಯಾಗುತ್ತಾನೆ. ಕುಪಿತಳಾದ ಪಂಕಜವಲ್ಲಿ ಮಂತ್ರಿಯೊಂದಿಗೆ ಸೇರಿಕೊಂಡು ನಾನಾ ತರಹದ ತೊಂದರೆಯನ್ನು ಕೊಡುತ್ತಾಳೆ. ಗಂಡ-ಹೆಂಡತಿಯರನ್ನು ಅಗಲಿಸುತ್ತಾಳೆ. ರಾಜಶೇಖರನ ಪ್ರಾಣ ಮಿತ್ರ ಜಗಮಲ್ಲನನ್ನು ಕೊಲ್ಲಿಸುವ ಪ್ರಯತ್ನ ಮಾಡುತ್ತಾಳೆ . ಕೊನೆಗೆ ರಾಜಶೇಖರ-ಗೌರಿ ಒಂದಾಗುತ್ತಾರೆ. ಪಂಕಜವಲ್ಲಿಯ ಮನಃ ಪರಿವರ್ತನೆಯಾಗುತ್ತದೆ.

ರಾಜ್ಯ ದರ್ಗುದ ರಹಸ್ಯ ರಾಮಣ್ಣ ನಾಯಕ ಹಾಗೂ ಸೋಮಣ್ಣ ನಾಯಕ ಮಹಾರಾಜನ ತಮ್ಮನ ಮಕ್ಕಳು. ನೋಡಲು ಒಬ್ಬರಂತೆ ಒಬ್ಬರಿದ್ದರೂ ರಾಮಣ್ಣನಾಯಕ ಸಭ್ಯ ಯುವಕನಾದರೆ, ಸೋಮಣ್ಣ ನಾಯಕ ಭೋಗಲಾಲಸೆಯಲ್ಲಿ ಮುಳುಗಿದವನು. ರಾಜನ ಭಾವಮೈದನಾದ ಮಾರನಾಯಕ ಈ ರಾಜನನ್ನು ಸೆರೆಯಲ್ಲಿರಿಸಿ ಅರಮನೆಗೆ ಬೆಂಕಿ ಇರಿಸುತ್ತಾನೆ. ರಾಮಣ್ಣ ನಾಯಕನೇ ಕೊಲೆಮಾಡಿ ಬೆಂಕಿ ಇಟ್ಟನೆಂದು ಸೋಮಣ್ಣನಾಯಕ ಆಪಾದಿಸುತ್ತಾನೆ. ಸೋಮಣ್ಣನಿಗೆ ಪಟ್ಟಾಭಿಷೇಕದ ಸಮಯದಲ್ಲಿ ರಾಮಣ್ಣನಾಯಕ ಬರುತ್ತಾನೆ. ರಾಮನ್ನನಾಯಕ ಮತ್ತು ಸೋಮಣ್ಣ ನಾಯಕ ಇಬ್ಬರಿಗೂ ಕಾದಾಟವಾಗುತ್ತದೆ. ಈ ಕಾದಾಟದಲ್ಲಿ ಸೋಮಣ್ಣ ನಾಯಕ ಸಾಯುತ್ತಾನೆ. ರಾಮಣ್ಣನಾಯಕ ದುಷ್ಟ ಶಕ್ತಿಗಳ ವಿರುದ್ಧದ ಹೋರಾಟದಲ್ಲಿ ಜಯಶೀಲನಾಗುತ್ತಾನೆ.

ಭಾಗ್ಯದೇವತೆ ಮಧುರ ಶೆಟ್ಟಿಯ ಮಗಳು ಸಿದ್ಧಮ್ಮ ಚದುರಂಗ ಮಹರಾಜನ ಪತ್ನಿಯಾಗಿ ಗರ್ಭಿಣಿಯಾಗುವಳು. ಎರಡು ಮಕ್ಕಳ ತಾಯಿಯಾದ ಅವಳನ್ನು ಕಂಡ ಹಿರಿಯ ರಾಣಿಯರು ಹೊಟ್ಟೆಯುರಿಯಿಂದ ಸುಳ್ಳು ಆರೋಪಗಳಿಂದ ರಾಜನನ್ನು ನಂಬಿಸಿ ಸಿದ್ಧಮ್ಮನನ್ನು ಅರಮನೆಯಿಂದ ಹೊರಗಟ್ಟುವರು. ಅವಳ ಮಕ್ಕಳನ್ನು ಆಳುಗಳಿಗೆ ಕೊಲ್ಲುವಂತೆ ಸೂಚಿಸುವರು. ಆದರೆ ಆ ಆಳುಗಳು ಮಕ್ಕಳನ್ನು ಕೊಲ್ಲದೆ ಜೀವಂತವಾಗಿ ಎಸೆಯುವರು. ಈ ಮಕ್ಕಳು ಬೆಳೆದು ದೊಡ್ಡವರಾದ ನಂತರ ರಾಜನಿಗೆ ಬೆಳಕಾಗುವರು. ಕೊನೆಗೆ ಮಹರಾಜ ಮತ್ತು ಸಿದ್ಧಮ್ಮ ಈ ಮಕ್ಕಳಿಂದ ಒಂದುಗೂಡುತ್ತಾರೆ.

ಹೀಗೆ ಜನಪದ ಕಥೆಗಳನ್ನು ಅಥವಾ ಅವುಗಳ ಆಶಯಗಳನ್ನು ವಸ್ತುವಾಗಿರಿಸಿಕೊಂಡು ಸುಮಾರು ೫೦ಕ್ಕಿಂತ ಹೆಚ್ಚು ಚಿತ್ರಗಳು ಬಂದಿವೆ. ಜನಪದ ಕಥೆಗಳಂತೆ ಜನಪದ ಕಾವ್ಯಗಳಿಗೂ ಸಿನಿಮಾದೊಂದಿಗೆ ಸಂಬಂಧವಿದೆ. ಇಂಥ ಜನಪದ ಕಾವ್ಯ ಪ್ರಕಾರಗಳಲ್ಲಿ ಮಹಾಕಾವ್ಯ, ಲಾವಣಿ ಹಾಗೂ ಜನಪದ ಗೀತೆಗಳು ಮುಖ್ಯವಾಗುತ್ತವೆ. ಅದರಲ್ಲೂ ಜನಪದ ಗೀತೆ ಮತ್ತು ಸಿನಿಮಾಗಳಿಗೆ ಹೆಚ್ಚಿನ ಸಂಬಂಧವಿರುವುದನ್ನು ಕಾಣುತ್ತೇವೆ. ಅನೇಕ ಜನಪದ ಗೀತೆಗಳು ಸಿನಿಮಾ ಹಾಡುಗಳಾಗಿ ಬಳಕೆಯಾಗಿವೆ. ಅಂಥ ಕೆಲವು ಹಾಡುಗಳು ಜನಜನಿತ ರೂಪದಲ್ಲೇ ಬಳಕೆಯಾದರೆ ಇನ್ನೂ ಕೆಲವು ಸಿನಿಮಾದ ಆಶಯಕ್ಕೆ ತಕ್ಕಹಾಗೆ ಬದಲಾದದೂ ಇದೆ. ಉದಾಹರಣೆಗೆ ಕಿತ್ತೂರು ಚೆನ್ನಮ್ಮ ಚಿತ್ರದಲ್ಲಿ

ಬಳಕೆಯಾಗಿರುವ 'ಆಲಕ್ಕೆ ಹೂವಿಲ್ಲ ಸಾಲಕ್ಕೆ ಕೊನೆಯಿಲ್ಲ' ಇದು ಜನಪದ ಗೀತೆಯಾಗಿದ್ದು ಕೊನೆಯಲ್ಲಿ ಮಾತ್ರ ಸಿನಿಮಾದ ಆಶಯಕ್ಕೆ ತಕ್ಕ ಹಾಗೆ 'ಕಿತ್ತೂರ ಮನೆಗೆ ಬೆಳಕಾಗು' ಎಂಬುದಾಗಿ ಪರಿವರ್ತಿಸಿಕೊಳ್ಳಲಾಗಿದೆ. ಮತ್ತೆ ಕೆಲವೆಡೆ ಜನಪದ ಗೀತೆಗಳ ಸೊಲ್ಲುಗಳನ್ನಷ್ಟೇ ಎತ್ತಿಕೊಂಡು ಉಳಿದಂತೆ ಪೂರ್ತಿ ಹೊಸ ಹಾಡುಗಳನ್ನೇ ರಚಿಸಲಾಗಿದೆ. ಉದಾಹರಣೆಗೆ ನನ್ನ ಪ್ರೀತಿಯ ಹುಡುಗಿ ಚಿತ್ರದ 'ಮೂಡಲ್ ಕುಣಗಲ್ ಕರೆ', ಜೋಗಿ ಚಿತ್ರದ 'ಎಲ್ಲೋ ಜೋಗಪ್ಪ ನಿನ್ನ ಅರಮನೆ', ಜನುಮದ ಜೋಡಿ ಚಿತ್ರದ 'ಕ್ವಾರಣ್ಯ ನೀಡವ್ವ ಕೋಡುಗಲ್ಲ ಮಾದೇವನಿಗೆ' ...... ಚಿತ್ರದ 'ಏಳುತಾಲೆ ಎದ್ದು ಯಾರ‍್ಯರ ನೆನೆಯಲಿ' ಇತ್ಯಾದಿ ಗೀತೆಗಳಲ್ಲಿ ಜನಪದ ಗೀತೆಗಳ ಸೊಲ್ಲನ್ನು ಮಾತ್ರ ಬಳಸಿಕೊಂಡು ಉಳಿದಂತೆ ಸಿನಿಮಾಗಳ ಆಶಯಕ್ಕೆ ತಕ್ಕಹಾಗೆ ಹೊಸ ಗೀತೆಗಳನ್ನು ರಚಿಸಿಕೊಳ್ಳಲಾಗಿದೆ. ಪಾಪಪುಣ್ಯ ಚಿತ್ರದ 'ನಾವು ಬಂದೆವಾ ನಾವು ಬಂದೆವಾ' ಎಂಬ ಹಾಡು ಗೀಗೀ ಪದದ ಧಾಟಿಯಲ್ಲಿ ಬಳಕೆಯಾಗಿದೆ. ಕೆಲವು ಜನಪದ ಗೀತೆಗಳನ್ನು ಕೆಲವೆಡೆ ಪಾರಂಪರಿಕ ಧಾಟಿಯಲ್ಲೇ ಅಳವಡಿಸಿಕೊಂಡರೆ ಮತ್ತೆ ಕೆಲವೆಡೆ ಪರಿಷ್ಕೃತ ರಾಗ ಸಂಯೋಜನೆಯನ್ನು ಮಾಡಿಕೊಳ್ಳಲಾಗಿದೆ. ಉದಾಹರಣೆಗೆ ಮಹಾಕವಿ ಕಾಳಿದಾಸ ಚಿತ್ರದ 'ಚೆಲುವಯ್ಯ ಚೆಲುವೋ ತಾನಿ ತಂದಾನ' ಮಾರಿ ಕಣ್ಣು ಹೋರಿ ಮ್ಯಾಗೆ ಚಿತ್ರದ ಹಾವಾದ್ರು ಕಚ್ಚಾಬಾರ‍್ದಾ, ಚೇಳಾದ್ರು ಕುಟುಕಾಬಾರ‍್ದಾ' ಗೀತೆಗಳು ಜನಪದ ಗೀತೆಗಳೇ ಆಗಿವೆ. ಸೇವಂತಿ ಸೇವಂತಿ ಚಿತ್ರದ ಬಹುಪಾಲು ಹಾಡುಗಳು ಜನಪದ ಗೀತೆಗಳೇ ಆಗಿದ್ದು ಸಂಗೀತ ಕೂಡ ಬಹುಮಟ್ಟಿಗೆ ಪಾರಂಪರಿಕ ಶೈಲಿಯಲ್ಲೇ ಇದೆ. ನಿಂಬಿಯಾ ಬನಾದ ಮ್ಯಾಗಳ ಚಂದ್ರಾಮ ಚೆಂಡಾಡಿದ, ಭಾಗ್ಯದ ಬಳೆಗಾರ, ಮಾಯಾದಂತ ಮಳೆ ಬಂತಣ್ಣ, ಚೆಲ್ಲಿದರು ಮಲ್ಲಿಗೆಯೂ ಇತ್ಯಾದಿ ಹಾಡುಗಳನ್ನು ಇಲ್ಲಿ ಉದಾಹರಿಸಬಹುದು. ಮೌಖಿಕ ಸಾಹಿತ್ಯದ ಇತರ ಪ್ರಕಾರಗಳಾದ ಐತಿಹ್ಯ - ಪುರಾಣ - ಸ್ಥಳ ಪುರಾಣ ಲಾವಣಿ, ಮಹಾ ಕಾವ್ಯಗಳು ಕನ್ನಡ ಸಿನಿಮಾಗಳಿಗೆ ವಸ್ತುಗಳಾಗಿವೆ. ಕೆಲವು ದೇಸೀ ಕವಿಗಳ ತತ್ವಪದಕಾರರ -ಅನುಭಾವಿಗಳ ಜೀವನ ಕಥನಗಳೂ ಸಿನಿಮಾಗಳಾಗಿವೆ. ಭಾರತಕ್ಕೆಲ್ಲಾ ಸಾಮಾನ್ಯವಾದ ಗ್ರಂಥಸ್ಥ (ಶಿಷ್ಟ) ಪುರಾಣಗಳನ್ನಾಧರಿಸಿದ ಕೆಲವು ಚಿತ್ರಗಳ ಬಗೆಗೆ ಹಿಂದಿನ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿದೆ. ಅವುಗಳಲ್ಲದೆ ಸ್ಥಳೀಯವಾಗಿ ಪ್ರಚಲಿತವಿರುವ ಅನೇಕ ಮೌಖಿಕ ಸಂಪ್ರದಾಯದ ಪುರಾಣಗಳಿವೆ. ಗ್ರಾಮದೇವತೆಗಳ ಹುಟ್ಟು, ಪ್ರಸರಣ - ಮಹಿಮೆ - ಕಾರಣಿಕಗಳನ್ನು ವರ್ಣಿಸುವ ಕಥೆ ಹಾಗೂ ಸ್ಥಳಪುರಾಣಗಳಿವೆ. ನಮ್ಮ ನಾಡಿನ

[illegible]

ಸಂತಕವಿಗಳ - ತತ್ವಪದಕಾರರ - ಅನುಭಾವಿಗಳ ಸಾತ್ವಿಕ ಜೀವನ ಬೋಧನೆಗಳಿಗೆ ಸಂಬಂಧಿಸಿದ ಕಥೆನಗಳಿವೆ. ಮೌಖಿಕ ಸಂಪ್ರದಾಯದಲ್ಲಿ ಪ್ರಚಲಿತವಿರುವ ಇವೆಲ್ಲಾ ಒಂದರ್ಥದಲ್ಲಿ ನಮ್ಮ ದೇಸೀ ಸಾಹಿತ್ಯಗಳೇ ಆಗುತ್ತದೆ. ಇಂಥ ಕಥೆನಗಳನ್ನಾಧರಿಸಿದ ಹಲವು ಚಿತ್ರಗಳು ಕನ್ನಡದಲ್ಲಿವೆ. ಉದಾಹರಣೆಗೆ ಮಧ್ಯಕಾಲೀನ ಮೌಖಿಕ ಮಹಾಕಾವ್ಯವನ್ನಾಧರಿಸಿದ 'ಮೈಲಾರಲಿಂಗ' ಚಿತ್ರವು ಕುರುಬ ಸುಮುದಾಯದ ಸಾಂಸ್ಕೃತಿಕ ನಾಯಕನೊಬ್ಬನ ಬದುಕನ್ನು ದೈವತ್ವಕ್ಕೇರಿಸುವು ದರ ಜತೆಗೆ ಮೈಲಾರವೆಂಬ ಸ್ಥಳದ ಮಹಿಮೆಯನ್ನೂ ಹೇಳುತ್ತದೆ. ಇತರ ಕೆಲವು ಸಾಂಸ್ಕೃತಿಕ ನಾಯಕರ ಬಗೆಗೆ ಪೂರ್ಣ ಪ್ರಮಾಣದ ಚಿತ್ರಗಳು ಕಂಡುಬರೆದಿದ್ದರೂ ಅವರ ಮಹಿಮೆ ಕಾರಣಿಕಗಳನ್ನು ವಿವರಿಸುವ ಹಾಡುಗಳು ಚಲನಚಿತ್ರಗಳಲ್ಲಿ ಬಳಕೆಯಾದುದ್ದಿದೆ. ಮಂಟೆಸ್ವಾಮಿ, ಮಲೆ ಮಾರೇಶ್ವರ ಬಗೆಗಿನ ಸಿನಿಮಾ ಹಾಡುಗಳನ್ನು ಇಲ್ಲಿ ಪ್ರಸ್ತಾಪಿಸಬಹುದಾಗಿದೆ. ಕಾಕನ ಕೋಟೆ ಚಿತ್ರದ 'ಕರಿಹೈದನೆಂಬೋನೆ ಮಾಹೇಶ್ವರ ; ಜೋಗಿ ಚಿತ್ರದ 'ಏಳುಮಲೆ ಮ್ಯಾಲೆನೀ ಕುಂತಾನಮ್ಮ ಮಾದೇವ' ಎಂಬ ಹಾಡುಗಳು ಮಲೆ ಮಾದೇಶ್ವರನ ಕುರಿತ ಹಾಡುಗಳಾಗಿವೆ. ಹಾಗೆಯೇ ಜನಮದ ಜೋಡಿ ಚಿತ್ರದ 'ಕ್ವಾರಣ್ಯ ನೀಡವ್ವ ಕೋಡು ಗಲ್ಲಯ್ಯನಿಗೆ' ಎನ್ನುವ ಹಾಡು ಮಂಟೇಸ್ವಾಮಿ ಕುರಿತದ್ದಾಗಿದೆ. ಇತ್ಯಾದಿ ಹಾಡುಗಳು ಬಂದಿರುವುದನ್ನು ಕಾಣಬಹುದಾಗಿದೆ. ಕ್ಷೇತ್ರ ಪುರಾಣಗಳೂ ಒಂದರ್ಥದಲ್ಲಿ ಮೌಖಿಕ ಸಾಹಿತ್ಯಗಳೇ ಆಗುತ್ತವೆ. ಇಂಥ ಕ್ಷೇತ್ರ ಪುರಾಣಗಳನ್ನುಧರಿಸಿದ ಚಿತ್ರಗಳು ಕನ್ನಡದಲ್ಲಿವೆ. ಸಿದ್ಧಾರೂಢ ಮಹಾತ್ಮೆ, ಶ್ರೀಶೈಲಮಾಹಾತ್ಮೆ, ಶ್ರೀಧರ್ಮಸ್ಥಳ ಕ್ಷೇತ್ರ ಮಹಾತ್ಮೆ, ಶ್ರೀಕ್ಷೇತ್ರ ಕೈವಾರ ತಾತಯ್ಯ ಮುಂತಾದವುಗಳನ್ನು ಇಲ್ಲಿ ಉದಾಹರಿಸಬಹುದು. ಶ್ರೀಕ್ಷೇತ್ರ ಧರ್ಮಸ್ಥಳ ಸ್ಥಳ ಪುರಾಣವನ್ನಾಧರಿಸಿದ ಸಿನಿಮಾಕ್ಕೆ ಉತ್ತಮ ಉದಾಹರಣೆ. ರೇಣುಕಾದೇವಿ ಮಾಹತ್ಮೆ ಚಿತ್ರವು ಗ್ರಾಮದೇವತೆಯಾದ ಎಲ್ಲಮ್ಮನ ಪುರಾಣಕ್ಕೆ ಶಿಷ್ಟ ಪುರಾಣದೊಂದಿಗೆ ಸಂಬಂಧ ಕಲ್ಪಿಸುವ ಪ್ರಯತ್ನದ ಫಲವಾಗಿ ಮೂಡಿ ಬಂದಿದೆ[೧].

---

೧. ಇದೀಗ ಚಿಂದೋಡಿ ಬಂಗಾರೇಶ್ ನಿರ್ದೇಶನದಲ್ಲಿ ಚಿತ್ರೀಕರಣಗೊಳ್ಳುತ್ತಿರುವ 'ಗುಡ್ಡಾಪುರ ದಾನಮ್ಮ, ಚಿತ್ರವು ಇದೇ ಸಾಲಿಗೆ ಸೇರುತ್ತದೆ. ಗುಡ್ಡಾಪುರ ದಾನಮ್ಮ ಬಿಜಾಪುರ - ಬಾಗಲಕೋಟೆ ಜಿಲ್ಲೆಗಳಲ್ಲಿ ಆರಾಧನೆಗೊಳ್ಳುತ್ತಿರುವ ಕಾರಣಿಕ ದೇವತೆ. ಮೂಲತಃ ಈಕೆ ೧೨ನೆಯ ಶತಮಾನದ ಒಬ್ಬ ಸಮಾಜ ಸುಧಾರಕಿ ಈಗ ಗ್ರಾಮದೇವತೆ.

ಗ್ರಾಮ ದೇವತೆಗಳ ಕಥೆ ಪುರಾಣಗಳನ್ನಾಧರಿಸಿದ ಚಿತ್ರಗಳು ಇದೇ ಸಾಲಿಗೆ ಸೇರುತ್ತವೆ. ಇವುಗಳಲ್ಲಿ ಕೆಲವು ಕಡೆ ಗ್ರಾಮದೇವತೆಗಳ ಪಾತ್ರಗಳು, ಮಹಿಮೆ, ಪವಾಡಗಳ ಸನ್ನಿವೇಶಗಳು ಇವಿಷ್ಟೆ ಚಿತ್ರಿತವಾದರೆ ಇನ್ನೂ ಕೆಲವೆಡೆ ಗ್ರಾಮದೇವತೆಗಳ ಬಗೆಗೆ ಪೂರ್ಣ ಪ್ರಮಾಣದ ಚಿತ್ರಗಳೇ ನಿರ್ಮಾಣವಾಗಿವೆ. ಮಾರೆಮ್ಮ , ಎಲ್ಲಮ್ಮ, ಹುಲಿಗೆಮ್ಮ, ಚಾಮುಂಡಿ, ಮಲೆಮಾದೇಶ್ವರ, ಪಂಜುರ್ಲಿ ಮುಂತಾದ ದೇವತೆಗಳ ಆರಾಧನಾ ಸನ್ನಿವೇಶಗಳನ್ನು ಹಲವಾರು ಸಿನಿಮಾಗಳಲ್ಲಿ ಕಾಣಬಹುದಾಗಿದೆ. ಇದಲ್ಲದೆ ಇಡಿಯಾಗಿ ಗ್ರಾಮದೇವತೆಗಳ ಪುರಾಣಗಳನ್ನು ಕುರಿತ ಚಿತ್ರಗಳೂ ನಮ್ಮಲ್ಲಿವೆ. ಗ್ರಾಮದೇವತೆ, ಧರ್ಮದೇವತೆ, ಶ್ವೇತನಾಗ, ನಾಗದೇವತೆ, ಶ್ರೀರೇಣುಕಾಂಬೆ, ಶ್ರೀ ರೇಣುಕಾದೇವಿ ಮಹಾತ್ಮೆ, ಚಾಮುಂಡೇಶ್ವರಿ ಮಹಿಮೆ ಇತ್ಯಾದಿ ಚಿತ್ರಗಳನ್ನು ಇಲ್ಲಿ ಉದಾಹರಿಸಬಹುದು.

ಗ್ರಾಮದೇವತೆ ಚಿತ್ರದಲ್ಲಿ ಭಕ್ತಳೊಬ್ಬಳು ಮಕ್ಕಳಾಗದಿದ್ದಾಕ್ಕೆ ದೇವತೆಯ ಮೊರೆ ಹೋಗುವಳು ಮಕ್ಕಳಾಗಲಿಕ್ಕೆಂದು ಹರಕೆ ಹೊರುವಳು ಮಕ್ಕಳಾದರೆ ತನ್ನ ಮೊದಲನೇ ಮಗುವನ್ನು ತನ್ನ ಸೇವೆಗೆಂದು ಬಿಡುವುದಾಗಿ ಹೇಳುವಳು. ದೇವತೆಯ ವರದಿಂದ ಮಕ್ಕಳಾದ ಮೇಲೆ ತಾಯಿಯು ಹರಕೆ ತೀರಿಸುವುದನ್ನು ಮರೆತು ಬಿಡುವಳು ಮಗಳು ಬೆಳೆದು ದೊಡ್ಡವಳಾದ ಮೇಲೆ ದೇವಿಯು ಮಗಳ ಮೈಮೇಲೆ ಊರಮ್ಮ ರೂಪದಲ್ಲಿ ಬರುವಳು ತನಗೆಹೊತ್ತ ಹರಕೆಯನ್ನು ತೀರಿಸಿಕೊಂಡು ಹೋಗುವಳು.

ಧರ್ಮದೇವತೆ ಗದಗ್ ಜಿಲ್ಲೆಯ ಇಟಗಿ ಕ್ಷೇತ್ರದ ಭೀಮಾಂಬಿಕ ದೇವಿಯ ಕುರಿತಾದ ಚಿತ್ರವಿದು. ಬನಶಂಕರಿಯ ವರದಿಂದ ತಾಯಿ ಹನುಮವ್ವನ ಹೊಟ್ಟೆಯಲ್ಲಿ ಹುಟ್ಟುವಳು. ನೂಲುವ ಕಾಯಕ ಮಾಡುತ್ತಾ ಪವಾಡಗಳನ್ನು ಮೆರೆಯುತ್ತಾ ಲೋಕಕಲ್ಯಾಣ ಮಾಡುವಳು.

ಶ್ರೀ ರೇಣುಕಾದೇವಿ ಮಾಹತ್ಮೆ ಸೌದತ್ತಿ ಎಲ್ಲಮ್ಮನ ಕುರಿತಾದ ಕಥೆ. ಸುದರ್ಶನನ ಅಹಂಕಾರವಿಳಿಸಲು ನಾರದ ಮಾಡಿದ ಉಪಾಯದಿಂದ ಅವನು ಭೂಲೋಕದಲ್ಲಿ ಕಾರ್ತವೀರ್ಯಾರ್ಜುನನಾಗಿ ಜನ್ಮ ತೆಳೆಯ ಬೇಕಾಗುತ್ತದೆ. ರಾಜಕುಮಾರಿ ರೇಣುಕಾದೇವಿಯು ಜಮದಗ್ನಿ ಮುನಿಯನ್ನು ಪ್ರೇಮಿಸಿ,

ಆತನ ಕಠಿಣ ಪರೀಕ್ಷೆಗಳನ್ನೆಲ್ಲಾ ಎದುರಿಸಿ ಆ ಮುನಿಯ ಕೈ ಹಿಡಿಯುವಳು. ರಾವಣವನ್ನು ಗೆದ್ದ ಕಾರ್ತ ವೀರ್ಯಾರ್ಜುನನಯಜ್ಞಯಾಗಾದಿಗಳನ್ನು ನಿಷೇಧಿಸಿ ಋಷಿ ಮುನಿಗಳಿಗೆ ಹಿಂಸೆ ನೀಡುವನು. ಜಮದಗ್ನಿ ಅವನನ್ನು ಎದುರಿಸಿ ಜಯಶಾಲಿಯಾಗುವನು. ಪರಶುರಾಮ ಜಮದಗ್ನಿ - ರೇಣುಕೆಯರ ಮಗನಾಗಿ ಜನಿಸುವನು. ಚಂಚಲ ಮನದ ಆರೋಪ ಹೊತ್ತ ತಾಯಿಯ ಶಿರವನ್ನೇ ಛೇದಿಸಬೇಕಾಗಿ ಬಂದಾಗ ಪಿತೃವಾಕ್ಯ ಪರಿಪಾಲನೆ ಮಾಡ ತಾಯಿ ಹಾಗೂ ಸೋದರರನ್ನು ಬದುಕಿಸಿಕೊಳ್ಳುವನು ರೇಣುಕಾದೇವಿ 'ಎಲ್ಲಮ್ಮ'ನಾಗಿ ಭಕ್ತರ ಕೋರಿಕೆ ಈಡೇರಿಸುವ ದೇವತೆಯಾಗುವಳು.

ಚಾಮುಂಡೇಶ್ವರಿ ಮಹಿಮೆ ಮಹಿಷಾಸುರನ ಅಟ್ಟಹಾಸವನ್ನು ತಡೆಯಲು ಆದಿಶಕ್ತಿಯ ನವರೂಪವನ್ನು ತಾಳಿದ ಚಾಮುಂಡೇಶ್ವರಿಯ ಮಹಿಮೆಯನ್ನು ಸಾರುವ ಚಿತ್ರ.

ಸಿದ್ಧಾರೂಢ ಮಹಾತ್ಮೆ ಶ್ರೀಕ್ಷೇತ್ರ ಕೈವಾರ ತಾತಯ್ಯ, ಕೈವಾರಮಹಾತ್ಮೆ, ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ, ಸಂತಶಿಶುನಾಳ ಶರೀಫ್ ಮುಂತಾದವು ನಮ್ಮ ದೇಸೀ ಪರಂಪರೆಯ ಪ್ರಮುಖ ಅನುಭಾವಿಗಳ ಜೀವನ ಕಥಗಳನ್ನಾಧರಿಸಿದ ಚಿತ್ರಗಳು. ೧೯ನೇ ಶತಮಾನದ ನಮ್ಮ ನಾಡಿನ ಶ್ರೇಷ್ಠ ಅನುಭಾವೀ ಕವಿಯಾದ ಶಿಶುನಾಳ ಶರೀಫ ಚಿತ್ರ ಸ್ವತಃ ಆತನೇ ರಚಿಸಿದ ತತ್ವಪದ ಅನುಭಾವ ಗೀತೆಗಳ ಸಹಾಯದಿಂದ ದೇಸೀ ಸೊಗಡನ್ನು ಪಡೆದು ಕೊಂಡಿದೆ. ಟಿ. ಎಸ್. ನಾಗಭರಣ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ.

ಸಂತನೊಬ್ಬನ ತತ್ವಗಳು ಮತ್ತು ಆತನ ಬದುಕಿನ ಹಲವು ಘಟನೆಗಳನ್ನು ಹಾಗೂ ಸತ್ಯ ಪರೀಕ್ಷೆಯನ್ನು ಆ ಸಂತನ ಹಾಡುಗಳ ಮೂಲಕವೇ ಹೇಳಲಾಗಿದೆ. ಶಿಶುನಾಳ ಶರೀಫನ ಅನೇಕ ಪ್ರಸಿದ್ಧ ಹಾಡುಗಳು ಇಲ್ಲಿ ಬಳಕೆಯಾಗಿವೆ. 'ಸವಾಲೊಂದು ನಿನ್ನ ಮಾಲೆ ' ತರವಲ್ಲತಗೀ ನಿನ್ನ ತಂಬೂರೀ : ಕೂ ಕೂ ಕೂ ಎನುತಿದೆ ; ಹಾಕಿದಜನಿವಾರವ ಸದ್ಗುರುನಾಥ ; ಸೋಹ್ನಮಾಡಬೇಕಿಂಥವಳಾ ; ಕೋಡಗಾನ ಕೋಳೀ ನುಂಗಿತ್ತಾ : ಮೋಹದ ಹೆಂಡತಿ ತೀರಿದ ಬಳಿಕಾ : ಬಿದ್ದೀಯ ಬೇಮುದುಕಿ : ಇತ್ಯಾದಿ ಹಾಡುಗಳ ಮೂಲಕ ಸಂತನ ಜೀವನವನ್ನು ಹೇಳಲಾಗಿದೆ.

ಶಿಶುನಾಳ ಶರೀಫರ ತತ್ವಪದಗಳೇ ಮೂಲತಃ ದೇಸೀ ಸೊಗಡಿನಿಂದ ಕೂಡಿದವುಗಳು. ಇಲ್ಲಿ ಉದಾಹರಿಸಿದ ಬಹುಪಾಲು ಹಾಡುಗಳಲ್ಲಿ ಉತ್ತರ ಕರ್ನಾಟಕ ಪರಿಸರದ ದೇಸೀ ಪದ ಗುಚ್ಛಗಳೇ ತುಂಬಿವೆ. ಸಂಗೀತವನ್ನು ದೇಸೀ ಶೈಲಿಯಲ್ಲೇ ಸಂಯೋಜನೆಗೊಳಿಸಲಾಗಿದೆ.

ಕ್ಷೇತ್ರ ಪುರಾಣಗಳೂ ಒಂದರ್ಥದಲ್ಲಿ ಮೌಖಿಕ ಸಾಹಿತ್ಯಗಳೇ ಆಗುತ್ತವೆ. ಇಂಥ ಕ್ಷೇತ್ರ ಪುರಾಣಗಳನ್ನಾಧರಿಸಿದ ಚಿತ್ರಗಳು ಕನ್ನಡದಲ್ಲಿವೆ. ಸಿದ್ಧಾರೂಢ ಮಹಾತ್ಮೆ, ಶ್ರೀಕ್ಷೇತ್ರ ಕೈವಾರ ತಾತಯ್ಯ, ಧರ್ಮಸ್ಥಳ ಮಹಾತ್ಮೆ ಮುಂತಾದವುಗಳನ್ನು ಇಲ್ಲಿ ಉಲ್ಲೇಖಿಸಬಹುದು.

ಶ್ರೀಶೈಲ ಮಹಾತ್ಮೆ ದೂರ್ವಾಸರಿಂದ ಶಪಿಸಲ್ಪಟ್ಟ ಪಾರ್ವತಿ, ಯಕ್ಷಕನ್ಯೆಯೊಬ್ಬಳಿಂದ ಶಪಿಸಲ್ಪಟ್ಟ ಋಷಿಪುತ್ರ ಇಬ್ಬರೂ ಭೂಲೋಕದಲ್ಲಿ ಜನಿಸುವರು . ಪಾರ್ವತಿ ಭೂಲೋಕದಲ್ಲಿ ಯಕ್ಷಕನ್ಯೆಯಿಂದ ಶಾಪಕ್ಕೀಡಾದ ವ್ಯಕ್ತಿಯ ಸಾಕುಮಗಳಾಗಿ ಆತನ ಪಟ್ಟದ ರಾಣಿಯಿಂದ ಬೆಳೆಯುವಳು. ಯುದ್ಧದಿಂದ ಹಿಂತಿರುಗಿದ ರಾಜ ತನ್ನ ಸಾಕುಮಗಳನ್ನೇ ಮದುವೆಯಾಗಲು ಹಠ ಹಿಡಿಯುವನು. ಆಕೆ ರಾಜ್ಯ ಪರಿತ್ಯಾಗ ಮಾಡಿ ಶ್ರೀಶೈಲಕ್ಕೆ ತೆರಳಿ ತಪೋಮಗ್ನಳಾಗಿ ಶಿವನನ್ನು ಹೊಂದುವಳು.

ಕೈವಾರ ಮಹಾತ್ಮೆ ಕೋಲಾರ ಜಿಲ್ಲೆಯ ಕೈವಾರದಲ್ಲಿ ಜನಿಸಿದ ನಾರಯಣಪ್ಪ ಎಂಬ ವಿಷ್ಣು ಭಕ್ತನ ಕುರಿತ ಕತೆ. ದಾಸ ಸಾಹಿತ್ಯಕಾರರೂ , ತತ್ವಜಾನಿಯೂ ಹಾಗೂ ಕಾಲಜ್ಞಾನಿಯೂ ಆದ ನಾರಾಯಣಪ್ಪನ ಮಹಿಮೆ ಕಥಾ ವಸ್ತು ಇದರಲ್ಲಿದೆ.

ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ ಮಾಹತ್ಮೆ ಎಡೆಯೂರು ಸಿದ್ದಲಿಂಗೇಶ್ವರರನ್ನು ಕುರಿತ ಕಥೆ. ಅವರ ಪವಾಡಗಳ ಬಗ್ಗೆ ಇರುವಂತೆ ಪ್ರತೀಯನ್ನೂ ಚಿತ್ರಿಸಲಾಗಿದೆ.

ಮೈಲಾರಲಿಂಗ ಮೈಲಾರಲಿಂಗ ಸ್ವಾಮಿಯು ಕುರುಬ ಜನಾಂಗದವರನ್ನು ರಕ್ಷಿಸಲು, ಅವರನ್ನು ಕಾಡುತ್ತಿದ್ದ ಜನಾಂಗ ಪಾರು ಮಾಡಲು ಜನ್ಮ ತಾಳಿ ಬಂದು ಪವಾಡ ಮಾಡಿದ ಕಥೆ.

ಶ್ರೀ ಸಿದ್ಧಾರೂಢ ಮಾಹತ್ಮೆ ಭಕ್ತಿ ಪಂಥದಲ್ಲಿ ಶ್ರೀ ಸಿದ್ಧಾರೂಢರ ಸಾಧನೆ, ಆ ಸಾಧನೆಯಲ್ಲಿ ಅವರ ಪವಾಡ ಹಾಗೂ ಮಹಾತ್ಮೆಗಳ ಬಣ್ಣನೆ ತುಂಬಿದ ಕಥೆ, ದಯೆ-ಧರ್ಮ-ಜೀವನ ಕುರಿತಂತೆ ಸಿದ್ಧಾರೂಢರ ಕಥೆಯಲ್ಲಿ ಹೇರಳ ಸಾಮಾಗ್ರಿಗಳಿದ್ದು, ಅವುಗಳಲ್ಲಿ ಹಲವನ್ನಿಲ್ಲಿ ಬಳಸಿ ಕೊಳ್ಳಲಾಗಿದೆ.

ಶ್ರೀಧರ್ಮಸ್ಥಳ ಮಾಹತ್ಮೆ ಧರ್ಮಸ್ಥಳದ ಸ್ಥಳ ಮಹಿಮೆ ಹಾಗೂ ಮಂಜುನಾಥನ ಮಹಿಮೆ ಸಾರುವ ಚಿತ್ರ.

ಇತರ ಕೆಲವು ಸಾಂಸ್ಕೃತಿಕ ನಾಯಕರ ಬಗೆಗೆ ಪೂರ್ಣ ಪ್ರಮಾಣದ ಚಿತ್ರಗಳು ಕಂಡು ಬರದಿದ್ದರೂ ಅವರ ಮಹಿಮೆ ಕಾರಣಿಕಗಳನ್ನು ವಿವರಿಸುವ ಹಾಡುಗಳು ಚಲನ ಚಿತ್ರಗಳಲ್ಲಿ ಬಳಕೆಯಾದುದ್ದಿದೆ. ಮಂಟೆಸ್ವಾಮಿ, ಮಲೆ ಮಾರೇಶ್ವರ ಬಗೆಗಿನ ಸಿನಿಮಾ ಹಾಡುಗಳನ್ನು ಇಲ್ಲಿ ಪ್ರಸ್ತಾಪಿಸಬಹುದು. ಕಾಕನಕೋಟೆ ಚಿತ್ರದ 'ಕರಿಹೈದ ನೆಂಬೋನೆ ಮಲೇಶ್ವರ' ಜೋಗಿ ಚಿತ್ರದ 'ಏಳುಮಲೆ ಮ್ಯಾಲೆನೇ ಕುಂತನಮ್ಮ ಮಾದೇವ' ಎಂಬ ಹಾಡುಗಳು ಮಲೆ ಮಾರೇಶ್ವರನ ಕುರಿತ ಹಾಡುಗಳಾಗಿವೆ. ಹಾಗೆಯೇ ಜನುಮದ ಜೋಡಿ ಚಿತ್ರದ 'ತ್ವಾರಣ್ಯ ನೀಡವ್ವ ಕೋಡುಗಲ್ಲಯ್ಯನಿಗೆ' ಎನ್ನುವ ಹಾಡು ಮಂಟೇಸ್ವಾಯ ಕುರಿತದ್ದಾಗಿದೆ.

ಆಧುನಿಕ ಕಾಲಘಟ್ಟದಲ್ಲಿ ನಮ್ಮ ಗ್ರಾಮೀಣ ಪರಿಸರದಲ್ಲಿ ನಡೆದಿರಬಹುದಾದ ಮನುಷ್ಯ ಬದುಕಿನ ಎಲ್ಲಾ ಬಗೆಯ ಸೂಕ್ಷ್ಮ ವಿದ್ಯಮಾನಗಳು ಮೌಖಿಕ ಸಂಪ್ರದಾಯದಲ್ಲಿ ಉಳಿದು-ಬೆಳೆದು ಬರುವುದಿದೆ. ಅಂಥವುಗಳಲ್ಲಿ ಮಿತ್ರದ್ರೋಹ, ಗಂಡು ಹೆಣ್ಣಿನ ಅನೈತಿಕ ಸಂಬಂಧಗಳ ದುಷ್ಪರಿಣಾಮಗಳನ್ನು ಚಿತ್ರಿಸುವ ವೃತ್ತಾಂತವಾಗಿ **ಸಂಗ್ಯಾಬಾಳ್ಯ** ಗಮನ ಸೆಳೆಯುತ್ತದೆ.
ಬೆಳಗಾವಿ ಜಿಲ್ಲೆಯ ಗ್ರಾಮಾಂತರ ಪ್ರದೇಶವೊಂದರಲ್ಲಿ ನಡೆದಿದೆಯೆನ್ನಲಾಗುವ ಈ ಘಟನಾದಳಿಯು ಎತ್ತರ ಕರ್ನಾಟಕದಲ್ಲಿ 'ದಪ್ಪಿನಾಟ' (ಸಣ್ಣಾಟ)ವೆಂಬ ಜನಪದ ರಂಗ ಪ್ರಕಾರವಾಗಿ ಜನಪ್ರೀಯತೆ ಪಡೆದಿದೆ. ಜಾನಪದ ವಿದ್ವಾಂಸರು ಇದನ್ನು ನಾಟಕ ರೂಪದಲ್ಲಿ ಸಂಪಾದಿಸಿಯೂ ಕೊಟ್ಟಿದ್ದಾರೆ.

೧೯೯೦ರಲ್ಲಿ ಸುಂದರ ಕೃಷ್ಣ ಅರಸ್ ನಿರ್ದೇಶನದಲ್ಲಿ ಇದು ಚಲನ ಚಿತ್ರವಾಗಿದೆ. ಆಧುನಿಕ ಕಾಲಘಟ್ಟದಲ್ಲಿ ನಡೆದುದೆನ್ನಲಾಗುವ ಕೆಲವು ಜನಪದ ವೃತ್ತಾಂತಗಳು ಕನ್ನಡದಲ್ಲಿ ಸಿನಿಮಾಗಳಾಗಿವೆ. ಸಾಂಗ್ಯಾಬಾಳ್ಯ, ಕಡ್ಡಿಮಟ್ಟಿ ಸ್ಟೇಷನ್ ಮಾಸ್ಟರ ಮುಂತಾದವುಗಳನ್ನು ಇಲ್ಲಿ ಉಲ್ಲೇಖಿಸಬಹುದು.

ಜನಪದ ಕಥೆಯನ್ನಾಧರಿಸಿ ನಿರ್ಮಾಣವಾದ ಚಿತ್ರಗಳಲ್ಲಿ ದೇಸೀ ಸಂಸ್ಕೃತಿಯ ದೃಷ್ಟಿಯಿಂದ ಮುಖ್ಯವೆನಿಸುವ ಇನ್ನೊಂದು ಚಿತ್ರವೆಂದರೆ ಸುಂದರ ಕೃಷ್ಣ ಅರಸ್ ನಿರ್ದೇಶನದ 'ಸಂಗ್ಯಾಬಾಳ್ಯ' ಉತ್ತರ ಕರ್ನಾಟಕದ ಜನಪದ ರಂಗಭೂಮಿಯಲ್ಲಿ ಲೋಕಪ್ರಿಯತೆಯನ್ನು ಪಡೆದಿರುವ ನಾಟಕ. ಬೈಲವಾಡದಲ್ಲಿ ನಡೆದಿರುವ ನೈಜವಾದ ಘಟನೆಯೊಂದನ್ನು ಆಧಾರವಾಗಿಟ್ಟುಕೊಂಡು ಈ ನಾಟಕ ಹುಟ್ಟಿಬಂದಿದೆ. ಬಾಳ್ಯನೊಡನೆ ಪೇಟೆಗೆ ಬಂದಾಗ ಸಂಗ್ಯಾ ಮಾರ್ಯದೆಯಿಂದ ನಡೆದು ಕೊಳ್ಳುತ್ತಾನೆ. ಮರಡಿ - ಬಸವಣ್ಣನ ಜಾತ್ರೆಗೆ ಹೋಗುವ ತನಕ ಗಂಗಾ ವಿನಯದಿಂದ ವರ್ತಿಸುತ್ತಾಳೆ. ಆ ಜಾತ್ರೆಯಲ್ಲಿ ಗಂಗೆಯ ರೂಪಕ್ಕೆ ಮರಳಾಗುವವನು ಪೂಜಾರಿ. ಆದರೆ ಸಂಗ್ಯಾ ಮತ್ತು ಗಂಗೆ ಕೂಡುವುದು ತೀರಾ ಅನಿರೀಕ್ಷಿತವಾಗಿ, ಗಂಡನ ಅಗಲಿಕೆಯಿಂದ ಹಾಗೂ ಪರವ್ವನ ಕುಟಿಲತೆಯ ಫಲವಾಗಿ ಗಂಗೆ ಸಂಗ್ಯಾನಿಗೆ ವಶವಾಗುತ್ತಾಳೆ. ಸಂಗ್ಯಾ ಬಾಳ್ಯ ಇಬ್ಬರು ಜೀವನ ಗೆಳೆಯರು. ಆದರೆ ಸಂಗ್ಯಾನ ಪ್ರೀತಿಯಿಂದ ಒದಗುವ ತೊಂದರೆಗಳಿಗೆ ಹೆದರಿ. ಬಾಳ್ಯ ಸಂಗ್ಯಾನನ್ನು ಬಿಟ್ಟು ಕೊಡುತ್ತಾನೆ. ಇದು ಚಿತ್ರದ ಕಥೆ.

ಸಂಗ್ಯಾ ಬಾಳ್ಯ ಚಿತ್ರವು ಗೆಳತನ, ಪ್ರಣಯ, ಸೇಡು ಎಂಬಿವು ಗ್ರಾಮೀಣ ಪರಿಸರದಲ್ಲಿ ಹೇಗೆ ಹಾಸುಹೊಕ್ಕಾಗಿವೆಯೆಂಬುದನ್ನು ಮನಮುಟ್ಟುವಂತೆ ನಿರೂಪಿಸುವಲ್ಲಿ ಯಶಸ್ವಿಯಾಗಿದೆ.

ಉತ್ತರ ಕರ್ನಾಟಕದ ಗ್ರಾಮೀಣ ಪರಿಸರ, ಅದಕ್ಕೊಪ್ಪುವ ಪ್ರಾದೇಶಿಕ ಭಾಷೆ ಚಿತ್ರಕ್ಕೆ ದೇಸೀತನದ ಸೊಗಡಿನೊಂದಿಗೆ ಜೀವಂತಿಕೆಯನ್ನೂ ನೀಡಿದೆಯೆನ್ನಬಹುದು. ಚಿತ್ರದ ಕಥಾವಸ್ತು ಕೂಡ ಅದೇ ಪ್ರದೇಶದ ಮೌಖಿಕ ಸಂಪ್ರದಾಯಕ್ಕೆ ಸೇರಿದ್ದು. ಉತ್ತರ ಕರ್ನಾಟಕ ಪ್ರದೇಶದಲ್ಲಿ ಮೌಖಿಕ ಕಥನ ಪರಂಪರೆಯಾಗಿ, ಜನಪದ ರಂಗಭೂಮಿ ಪ್ರಕಾರವಾಗಿ (ದೊಡ್ಡಾಟ) ಪ್ರಚಲಿತವಿದ್ದ 'ಸಂಗ್ಯಾ ಬಾಳ್ಯ'

ಮುಂದೆ ಎಂ. ಎಸ್. ಲಠೆ, ಪತ್ತಾರ ಮಾಸ್ತರ, ಚಂದ್ರಶೇಖರ ಕಂಬಾರರಂಥವರಿಂದ ಸಂಪಾದನೆಗೊಂಡು ಶಿಷ್ಟ ರಂಗಭೂಮಿಯನ್ನು ಪ್ರವೇಶಿಸಿತು. ೧೯೯೨ರಲ್ಲಿ ಚಲನಚಿತ್ರವಾಗಿಯೂ ಯಶಸ್ವಿಗಳಿಸಿತು. ವಸ್ತು, ಸನ್ನಿವೇಶ, ಭಾಷೆ - ಎಲ್ಲವುಗಳಲ್ಲೂ 'ದೇಸೀ ಸಂಸ್ಕೃತಿ' ಇಲ್ಲಿ ಸಮರ್ಥವಾಗಿ ಅಭಿವ್ಯಕ್ತಗೊಂಡಿದೆ. ಉತ್ತರ ಕರ್ನಾಟಕದ ಗ್ರಾಮೀಣ ಬದುಕು - ಮನೆ, ಅದರೊಳಗಿನ ಪರಿಕರಗಳು, ಜನಜೀವನ, ಉಡುಗೆ - ತೊಡುಗೆ ಆಹಾರ ಪದ್ಧತಿ, ಆಚಾರ - ವಿಚಾರ, ನಂಬಿಕೆ - ಆಚರಣೆ ಇತ್ಯಾದಿ ವಿವರಗಳ ಮೂಲಕ ಇಲ್ಲಿ ಅನಾವರಣಗೊಂಡಿದೆ. ಅದಕ್ಕೊಪ್ಪುವಂತೆ ಅರ್ಥಗರ್ಭಿತ ನುಡಿಗಟ್ಟು ಮಿಶ್ರಿತ ಗ್ರಾಮೀಣ ಭಾಷೆಯೂ ಬಳಕೆಗೊಂಡಿದೆ. ಗ್ರಾಮೀಣ ಪ್ರದೇಶದಲ್ಲಿ ಸ್ನೇಹಕ್ಕಿರುವ ಮಹತ್ವ, ಅನಿವಾರ್ಯ ಪರಿಸ್ಥಿತಿಯಲ್ಲಿ ವ್ಯಕ್ತಿ ಎಸಗುವ ಮಿತ್ರದ್ರೋಹ, ವಿವಾಹೇತರ ಪ್ರಣಯ-ಲೈಂಗಿಕತೆ, ಅದರ ಪರಿಣಾಮ ಇತ್ಯಾದಿ ಸೂಕ್ಷ್ಮ ಸಂಗತಿಗಳನ್ನು ಚಿತ್ರವು ಅರ್ಥಪೂರ್ಣವಾಗಿ ನಿರೂಪಿಸುತ್ತದೆ.

ಕಡ್ಲಿಮಟ್ಟಿ ಸ್ಟೇಷನ್ ಮಾಸ್ಟರ್ ಕೂಡಾ ಆಧುನಿಕ ಸಂದರ್ಭದ ಘಟನಾವಳಿಗೆ ಸಂಬಂಧಿಸಿದಂತೆ ಪ್ರಚಲಿತವಿರುವ ಮೌಖಿಕ ಕಥನವನ್ನಾಧರಿಸಿದ ಚಿತ್ರ. ಶಂಕರಲಿಂಗ ಸುಗ್ನಳ್ಳಿ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಕಡ್ಲಿಮಟ್ಟಿಯಿಂದ ಕಾಶಿಬಾಯಿಯು ತವರಿಗೆ ಹೋಗಲೆಂದು ರೈಲ್ವೆ ಸ್ಟೇಷನ್‌ಗೆ ಹೋಗುತ್ತಾಳೆ. ಅಲ್ಲಿ ಅವಳಿಗೆ ಮೊದಲ ಟ್ರೈನ್ ತಪ್ಪಿದಾಗ ಸ್ಟೇಷನ್ ಮಾಸ್ಟರ್ ಮತ್ತೊಂದು ಟ್ರೈನ್ ಹೋಗಲು ಹೇಳುವನು ಟ್ರೈನ್ ಬರುವವರೆಗೂ ಮಗನ ಜೊತೆ ಅಲ್ಲೇ ಉಳಿಯಲು ಹೇಳುತ್ತಾನೆ. ಟಿಕೇಟ್ ಕೌಂಟರ್ ಒಳಗೆ ಮಲಗಲು ಹೇಳಿ ತಾನು ಹೊರಗೆ ಮಲಗುವನು. ಸ್ವಲ್ಪ ಸಮಯದ ನಂತರ ಯಾವುದೇ ನೆಪ ಹೇಳಿ ಒಳಗೆ ಬಂದು ಅವಳನ್ನು ಬಲಾತ್ಕರಿಸಲು ಪ್ರಯತ್ನಿಸುವನು ಆಗ ಕಾಶಿಬಾಯಿಯು ತಾನ ಮೂತ್ರ ಮಾಡಿ ಬರುವುದಾಗಿ ಹೊರ ಬಂದು ಮನೆಯ ಚಿಲಕವನ್ನು ಹಾಕುವಳು.

ಸ್ಟೇಷನ ಮಾಸ್ಟರ್ ನೀನು ನನ್ನೊಡನೆ ಸಹಕರಿಸದಿದ್ದರೆ ನಿನ್ನ ಮಗನನ್ನು ಕೊಲ್ಲುವುದಾಗಿ ಹೇಳಿದಾಗಲೂ ಅವಳು ಒಪ್ಪುವುದಿಲ್ಲ.

ಸ್ಟೇಷನ್ ಮಾಸ್ಟರ್ ಅವಳ ಮಗನನ್ನು ಕೊಂದಾಗ ಬರವಳೆಂದು ಎಣಿಸಿ ಮಗನ ದೇಹವನ್ನು ತುಂಡು ತುಂಡಾಗಿ ಕತ್ತರಿಸ ಎಸೆಯುವನು. ಕಾಶಿಬಾಯಿಯು ಅವನ್ನೆಲ್ಲ ಸೆರಗಿನಲ್ಲಿ ತುಂಬಿಕೊಂಡು ಸ್ಟೇಷನ್ ಮಾಸ್ಟರ್‌ಗೆ ನನ್ನ ಶೀಲ ಸರಿಯಾಗಿದ್ದರೆ ಇಂಥ ಹತ್ತು ಮಕ್ಕಳನ್ನು ಹೆರುವೆನು ಎಂದು ಹೇಳುವುದರ ಮೂಲಕ ತನ್ನ ಪಾವಿತ್ರ್ಯವನ್ನು ಮೆರೆಯುವಳು.

ಹೀಗೆ ನಮ್ಮ ನಡುವೆ ಜನಜನಿತವಾಗಿರುವ ಮೌಖಿಕ ಕಥನ ಪರಂಪರೆಯನ್ನಾಧರಿಸಿ ನಿರ್ಮಾಣಗೊಂಡ ಕನ್ನಡದ ಬಹುಪಾಲು ಸಿನಿಮಾಗಳು ಕಥೆಯು ಜತೆಗೆ ಸನ್ನಿವೇಶ ನಿರ್ಮಾಣದಲ್ಲೂ ದೇಸೀ ಸಂಸ್ಕೃತಿಯನ್ನು ಬಿಂಬಿಸುತ್ತವೆ. ಆದರೆ 'ದೇಸೀ ಸಂಸ್ಕೃತಿಯ ಅಂಶಗಳನ್ನು 'ಸಿನಿಮಾ ಸಂಸ್ಕೃತಿ'ಗೆ ಅಳವಡಿಸುವ ಪ್ರಯತ್ನವೂ ಅಲ್ಲಲ್ಲಿ ನಡೆದಿದೆಯೆಂದರೆ ತಪ್ಪಾಗಲಾರದು.

ಶಿಷ್ಟ ಸಾಹಿತ್ಯ ಆಧಾರಿತ ಸಿನಿಮಾಗಳಲ್ಲಿ ದೇಸೀ ಸಂಸ್ಕೃತಿ

ಪ್ರಪಂಚದಲ್ಲಿ ಚಿತ್ರರಂಗದ ಬುನಾದಿಯನ್ನು ಭದ್ರವಾಗಿ ಕಟ್ಟಿದ್ದು ರಂಗಭೂಮಿ. ಹಾಲಿವುಡ್, ಜಪಾನ್, ಹಾಂಗ್‌ಕಾಂಗ್, ಭಾರತ ಯಾವುದೇ ದೇಶವನ್ನು ನಾವು ಗಮನಿಸಿದರು ರಂಗಭೂಮಿಯೇ ಚಿತ್ರರಂಗಕ್ಕೆ ಭದ್ರವಾದ ಬುನಾದಿ. ಆಧುನಿಕ ಶಿಷ್ಟ ಸಾಹಿತ್ಯ ಆಧಾರಿತ ಸಿನಿಮಾಗಳಲ್ಲಿ ಮೊದಲು ನಾವು ಗಮನಿಸಬೇಕಾದದ್ದು ನಾಟಕಗಳನ್ನು ಕನ್ನಡದ ಸಂದರ್ಭದಲ್ಲಿ ನಾಟಕ ಮತ್ತು ಸಿನಿಮಾಗಳೊಳಗಿನ ಸಂಬಂಧ ಮಹತ್ವದ್ದೆನ್ನಬಹುದು. ಪ್ರಾರಂಭದ ದಿನಗಳಲ್ಲಿ ರಂಗಭೂಮಿಯ ಪ್ರಭಾವದಿಂದ ಬೆಳೆದು ಬಂದ ಸಿನಿಮಾ ಒಂದು ಹಂತವಾದರೆ, ಆಧುನಿಕ ನಾಟಕಗಳನ್ನಾಧರಿಸಿ ನಿರ್ಮಾಣವಾದ ಸಿನಿಮಾಗಳದು ಇನ್ನೊಂದು ಹಂತ. ಈ ಎರಡೂ ಹಂತಗಳೊಳಗೆ ಅಂತರ ಬಹಳವಿದ್ದಂತೆ ಐತಿಹಾಸಿಕ ಮಹತ್ವವೂ ಇದೆ. ಪುರಾಣ ಮತ್ತು ಮಹಾಕಾವ್ಯಗಳಂತೆ ಕನ್ನಡದ ನಾಟಕಗಳು ಸಹ ಆರಂಭದ ಚಲನ ಚಿತ್ರಗಳ ಮೇಲೆ ತೀವ್ರವಾದ ಪ್ರಭಾವವನ್ನು ಬೀರಿವೆ. ಒಂದು ರೀತಿಯಲ್ಲಿ ಸಿನಿಮಾವು ನಾಟಕಗಳಿಗೆ ಪರ್ಯಾಯವಾಗಿ ಬಂದಿರುವುದು ಎನ್ನಬಹುದು. ನಾಟಕದ ಪ್ರೇಕ್ಷಕರು ಸಿನಿಮಾದ ಕಡೆ ಆಕರ್ಷಿತರಾದದ್ದು ಕನ್ನಡ ಚಿತ್ರರಂಗದ ಆರಂಭದ ಸ್ಥಿತಿಯಲ್ಲಿ. ಕನ್ನಡದ ನೆಲದಲ್ಲಿ ಮೊದಲು ಚಿತ್ರೀಕರಣವಾದದ್ದೇ ನಾಟಕ. ೧೯೨೧ರಲ್ಲಿ ಅಂದಿನ ಅರಸರಾದ ಕಂಠೀರವ ನರಸರಾಜ ಒಡೆಯರು ತಮ್ಮ ಅರಮನೆಯಲ್ಲಿ ನಡೆಯುತ್ತಿದ್ದ ವರದಾಚಾರ್ಯರ 'ನಿರುಪಮಾ' ನಾಟಕವನ್ನು ಚಿತ್ರೀಕರಿಸಿದರು. ಇದನ್ನು ಕುತೂಹಲಕ್ಕಾಗಿ ಮಾಡಲಾಗಿತ್ತು. ನಾಟಕಗಳನ್ನು ಆಧರಿಸಿದ ಸಿನಿಮಾದಲ್ಲಿ ಮೊದಲ ಹಂತದಲ್ಲಿ ಸಹಜವಾಗಿಯೇ ಕಂಪನಿ ನಾಟಕಗಳ ಪ್ರಭಾವ ಕನ್ನಡ ಸಿನಿಮಾಗಳ ಮೇಲಾದರೆ, ದೀರ್ಘಕಾಲದ ನಂತರ ಪ್ರಾಯೋಗಿಕ ರಂಗಭೂಮಿ ಹಾಗೂ ನಾಟಕಗಳನ್ನಾಧರಿಸಿ ಹೊಸ ಅಲೆಯ, ಕಲಾತ್ಮಕವೆನ್ನಬಹುದಾದ ಕೆಲವು ಚಿತ್ರಗಳು ನಿರ್ಮಾಣವಾದವು. ಮಾಸ್ತಿಯವರ 'ಕಾಕನಕೋಟೆ' ಶಂಕರ್‌ನಾಗ ಅವರ 'ನೋಡಿಸ್ವಾಮಿ ನಾವಿರೋದು ಹೀಗೆ' ಕಂಬಾರರ 'ಋಷ್ಯಶೃಂಗ' ಕಾರ್ನಾಡರ 'ನಾಗಮಂಡಲ' ಹೀಗೆ ಆಧುನಿಕ ನಾಟಕಗಳು ಸಿನಿಮಾಗಳಾಗಿ ಯಶಸ್ವಿಯಾಗಿವೆ.

ನಾಟಕವನ್ನಾಧರಿಸಿದ ಮೊದಲ ಚಿತ್ರವೆಂದರೆ ೧೯೨೯ರಲ್ಲಿ ಚಿತ್ರಿತವಾದ 'ವಸಂತಸೇನಾ' ಇದು ಸಂಸ್ಕೃತದ ಮೃಚ್ಛಕಟಿಕ ನಾಟಕವನ್ನಾಧರಿಸಿದ್ದು. ಆರಂಭದಲ್ಲಿ ಸಿನಿಮಾ ಎಂಬುದು ಜನರಿಗೆ ವಿಸ್ಮಯಾಗಿದ್ದರಿಂದ ಇಲ್ಲಿನ ತಾಂತ್ರಿಕತೆಯ ಬಗೆಗೆ ಅಥವಾ ಕತೆಯ ಬಗೆಗೆ ಜನರು ಹೆಚ್ಚು ಮಹತ್ವ ನೀಡಲಿಲ್ಲ. ಈ ನಾಟಕಗಳು ಚಲನ ಚಿತ್ರವಾಗುವಾಗ ಯಾವ ಅರ್ಥದಲ್ಲೂ ಬದಲಾಗಲಿಲ್ಲ. ಅಲ್ಲಿಯಂತೆಯೇ ಇಲ್ಲಿ ಸಂಭಾಷಣೆ ಮತ್ತು ಗೀತೆಗಳ ಮೂಲಕ ಕಥೆ ಬಳಸುವ ತಂತ್ರ ಉಳಿದು ಕೊಂಡಿತು. ಇದರಲ್ಲಿ ಇನ್ನೊಂದು ಮಾದರಿ ವಸ್ತುವು. ಪುರಾಣ ಮತ್ತು ಜಾನಪದ ಕಥೆಗಳದ್ದು. ಇವುಗಳು ಸಹ ಚಿತ್ರವಾಗುವಾಗ ನಾಟಕದ ಚೌಕಟ್ಟನ್ನೇ ಚಿತ್ರರಂಗ ಅವಲಂಬಿಸಿತು. ಇದಕ್ಕೆ 'ನಾಗಕನ್ನಿಕಾ' ಮತ್ತು 'ಜಗನ್ಮೋಹಿನಿ' ಉತ್ತಮವಾದ ಉದಾಹರಣೆಗಳು.

ಕನ್ನಡದ ಮೊದಲ ಸಾಮಾಜಿಕ ಸಿನಿಮಾ ಎಂದು ಗುರುತಿಸಲ್ಪಡುವ ಸಂಸಾರ ನೌಕೆ ನಾಟಕವನ್ನಾಧರಿಸಿದ್ದು. ಪೌರಾಣಿಕ -ಜನಪದ - ಸಾಮಾಜಿಕ ಹೀಗೆ ಯಾವುದೇ ಬಗೆಯ ಸಿನಿಮಾಗಳಾದರೂ ಅಲ್ಲೊಂದು ನಾಟಕವಿದ್ದುದು ಆರಂಭದ ಕನ್ನಡ ಚಲನಚಿತ್ರಗಳ ಇತಿಹಾಸದ ಮಹತ್ವದ ಅಂಶ. ಮೂಕಿಯಿಂದ ಟಾಕಿ ಯುಗಕ್ಕೆ ಬಂದಾಗಲೂ ಚಿತ್ರರಂಗ ಆಶ್ರಯಿಸಿದ್ದು ರಂಗಭೂಮಿಯನ್ನೇ ಟಾಕಿ ಯುಗದ ಮೊದಲ ಕಥೆ ಬೆಳ್ಳಾವೆಯವರ 'ಸತಿ ಸುಲೋಚನಾ' ನಾಟಕವನ್ನಾಧರಿಸಿದ ಚಿತ್ರ.

ಮೊದಲ ಚಿತ್ರದಿಂದ ಚಿತ್ರರಂಗ ಬಾಲ್ಯಾವಸ್ಥೆಗೆ ಬರುವವರೆಗೂ ಕನ್ನಡದ ರಂಗಕೃತಿಗಳೇ ಚಿತ್ರ ಭಾಷೆಗೆ ತರ್ಜುಮೆಯಾದವು. ಸತಿ ಸುಲೋಚನಾ, ಸದಾರಮೆ, ಸಂಸಾರನೌಕೆ, ಭಕ್ತಧ್ರುವ, ವಸಂತಸೇನ, ಭಕ್ತಪ್ರಹ್ಲಾದ, ಸುಭದ್ರಾ, ಸತ್ಯಹರಿಶ್ಚಂದ್ರ ಕೃಷ್ಣಸುಧಾಮ, ಹೇಮರೆಡ್ಡಿ ಮಲ್ಲಮ್ಮ, ಚಂದ್ರಹಾಸ, ಕೃಷ್ಣಲೀಲಾ, ಮಹಾತ್ಮಕಬೀರ್, ಭಕ್ತರಾಮದಾಸ ಮೊದಲಾದ ಚಿತ್ರಗಳು ರಂಗಭೂಮಿಯ ಸಾಹಿತ್ಯ ಸಂಗೀತವನ್ನೇ ತೆರೆಯ ಮೇಲೆ ಬಿಂಬಿಸಿದಂಥವು. ಈ ಸಾಹಿತ್ಯ ನಾಟಕಗಳು ಎಷ್ಟು ಶಕ್ತಿಶಾಲಿಯಾದವು ಎಂಬುದಕ್ಕೆ ಅಂದು ತಯಾರಾದ ಚಿತ್ರಗಳು ಮತ್ತೊಮ್ಮೆ ಪುನರ್‌ರಚಿತವಾದುದೇ ಸಾಕ್ಷಿ. ಭಕ್ತಕುಂಬಾರ, ಭಕ್ತಪ್ರಹ್ಲಾದ, ಮಹಾಕವಿಕಾಳಿದಾಸ, ಬಸವೇಶ್ವರ, ಹಾಗೆಯೇ ಕಂಪನಿ ನಾಟಕಗಳಾದ ಸೊಸೆ ತಂದ ಸೌಭಾಗ್ಯ, ಸಂಪತ್ತಿಗೆ ಸವಾಲ್,

ಪಟ್ಟಣಕ್ಕೆ ಬಂದ ಪತ್ನಿಯರು, ವೀರ ಸಿಂಧೂರಲಕ್ಷ್ಮಣ, ಕಡ್ಲಿಮಟ್ಟಿ ಸ್ಟೇಷನ್ ಮಾಸ್ಟರ್ ಹೀಗೆ ಹಲವು ನಾಟಕಗಳು ಚಲನಚಿತ್ರಗಳಾದ ಉದಾಹರಣೆ ನಮ್ಮೆದುರಿಗಿದೆ. 'ಕಳಸಾಪುರ ಹುಡುಗರು' ಮುಂತಾದವುಗಳು ಇತ್ತೀಚಿನವರೆಗೂ ಋಷ್ಯಶೃಂಗ, ಗಿರೀಶ್‌ಕಾರ್ನಾಡರ ನಾಗಮಂಡಲ ಇವೆಲ್ಲವೂ ನಾಟಕಗಳಾಗಿದ್ದು ರಂಗ ಭೂಮಿಯಿಂದ ಚಲನಚಿತ್ರವಾಗಿ ನಿರ್ಮಾಣಗೊಂಡಿವೆ. ಅಂಥದರಲ್ಲಿ ಮಾಸ್ತಿಯವರ ಕಾಕನ ಕೋಟೆ ಕೂಡ ಒಂದು. ವ್ಯಾಪಕವಾದ ಅರ್ಥದಲ್ಲಿ ಭಾರತೀಯ ಪುರಾಣ ಇತಿಹಾಸಗಳ ಕಥಾನಕಗಳನ್ನಾಧರಿಸಿದ ಈ ಚಿತ್ರಗಳಲೆಲ್ಲಾ ದೇಸೀ ಸಂಸ್ಕೃತಿ ಇದೆ ಎನ್ನಬಹುದು. ಆದರೆ ನಮಗೀಗ ಸಂಸ್ಕೃತಿ ಚಿಂತನೆಯ ಹಿನ್ನೆಲೆಯಲ್ಲಿ ಪ್ರಸ್ತುತವೆನಿಸುವ 'ದೇಸೀ ಸಂಸ್ಕೃತಿ'ಯನ್ನು ಬಿಂಬಿಸುವ ನಾಟಕಗಳನ್ನಾಧರಿಸಿದ ಕೆಲವು ಚಿತ್ರಗಳನ್ನಷ್ಟೇ ಇಲ್ಲಿ ಮುಖ್ಯವಾಗಿ ಚರ್ಚೆಗೆ ಎತ್ತಿಕೊಳ್ಳಲಾಗಿದೆ.

[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

೫.೧ ನಾಟಕ ಮತ್ತು ಸಿನಿಮಾ

ದೇಸೀ ಸಂಸ್ಕೃತಿಯ ಹಿನ್ನೆಲೆಯನ್ನಿಟ್ಟುಕೊಂಡು ಸಾಹಿತ್ಯ ಮತ್ತು ಸಿನಿಮಾದ ಸಂಬಂಧದ ನೆಲೆಯಲ್ಲಿ ನಾಟಕಗಳನ್ನಾಧರಿಸಿದ ಚಿತ್ರಗಳಾದ ಋಷ್ಯಶೃಂಗ ನಾಗಮಂಡಲ, ಕಾಕನಕೋಟೆ, ಇವುಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇಲ್ಲಿ ಆಯ್ಕೆ ಮಾಡಿಕೊಂಡ ಚಿತ್ರಗಳು ಮಾತ್ರ ದೇಸೀ ಸಂಸ್ಕೃತಿ ಹಿನ್ನೆಲೆಯಲ್ಲಿ ಚಿತ್ರಿತವಾದವು ಎಂದು ಹೇಳಲಾಗುವುದಿಲ್ಲ. ಪುರಾಣದ ಕಥೆಯನ್ನಾಧರಿಸಿ ರಚಿತವಾದ ನಾಟಕಗಳು ಚಿತ್ರಗಳಾಗಿವೆ. ಇವುಗಳು ಸಹ ದೇಸೀ ಸಂಸ್ಕೃತಿಯ ಚಿತ್ರಗಳೇ ಆದರೂ ಇಲ್ಲಿ ಆಧುನಿಕ ನಾಟಕಗಳನ್ನಾಧರಿಸಿದ ಚಿತ್ರಗಳನ್ನು ಎತ್ತಿಕೊಳ್ಳಲಾಗಿದೆ.

ಕಾಕನಕೋಟೆಯು ಕಾಡು ಕುರುಬರ ಜೀವನದ ಬೇರೆ ಬೇರೆ ಅಂಶಗಳಿಂದ ವರ್ಣಿತವಾದ ನಾಟಕ. ಇತಿಹಾಸ ಇದರ ಮುಖ್ಯ ವಸ್ತು. ಕಾಚ ಇಲ್ಲಿಯ ನಾಯಕ. ಕಾಡು ಕುರುಬರ 'ಬೂಡಿನ (ಹಳ್ಳಿಯ) ಬುದ್ಧಿವಂತ' ಇವನ ಬೂಡು ಒಬ್ಬ ಹೆಗ್ಗಡೆಯ ಪಾಳ್ಯದಲ್ಲಿದೆ. ಬೂಡಿನವರಿಂದ ಕಾಣಿಕೆಗಳಿಸಿ ಅದನ್ನು ಮೈಸೂರಿನ ಅರಸನಿಗೆ ಕಳುಹಿಸುವುದು ಹೆಗ್ಗಡೆಯ ಕೆಲಸ. ಹೀಗಿರುವಾಗ ಹೆಗ್ಗಡೆ ತನಗಾಗಿ ಒಂದಕ್ಕೆರಡೂ ಪಟ್ಟು ಕಾಣಿಕೆ ಕೇಳುತ್ತಾನೆ. ಮೈಸೂರು ಅರಸನಿಗೆ ಮುಟ್ಟಬೇಕಾದ ಕಾಣಿಕೆಗಿಂತ ಹೆಚ್ಚು ತನಗೆ ಮೊದಲು ತಲುಪಬೇಕೆಂದಾಗ ದುರ್ಬಲ ಕಾಡು ಕುರುಬರು ಪೇಚಿನಲ್ಲಿ ಸಿಲುಕುತ್ತಾರೆ. ಈ ಪೇಚಿನಿಂದ ಪಾರಾಗಲಿಕ್ಕೆ ಕಾಚ ಒಂದು ಉಪಾಯ ಹೂಡುತ್ತಾನೆ. ಅವನು ಮೈಸೂರಿನಲ್ಲಿದ್ದಾಗ ಒಮ್ಮೆ ಅರಸನ ಪ್ರಾಣ ಉಳಿಸಿದ್ದ. ಆದಕ್ಕೆ ಬದಲಾಗಿ ತಾನು ಕರೆಕಳಿಸಿದಾಗ ಬರಬೇಕೆಂದು ಅರಸನಡೆಯಲ್ಲಿ ಕೇಳಿಕೊಂಡಿದ್ದ. ಈಗ ಅದನ್ನು ನೆನೆದು, ತನ್ನ ಬೂಡನ್ನು ಈ ಸಂಕಟದಿಂದ ಪಾರುಮಾಡಲು ಬರಬೇಕು ಎಂದು ಅರಸನಿಗೆ ಹೇಳಿಕಳಿಸುತ್ತಾನೆ ಮತ್ತು ಅರಸ ಬರುವವರೆಗೆ ಹೆಗ್ಗಡೆಯನ್ನು ಸುಮ್ಮನಿರಿಸಲಿಕ್ಕೆಂದು 'ಕಾಕ' ಎಂಬ ವ್ಯಕ್ತಿಯಾಗುತ್ತಾನೆ.

ಕಾಚನೇ ಕಾಕ ಎಂಬ ಮಾತು ಹೆಗ್ಗಡೆಗೆ ಗೊತ್ತಿಲ್ಲ. ಆದರೆ ಬೂಡಿನ ಮಾವಯ್ಯ ಕಾಕನ ಮೇಲೆ ಮತ್ಸರ ತಳೆದು ಕಾಚನೇ ಕಾಕ ಎಂಬ ಮಾತನ್ನು ಅರಸನಿಗೆ ತಿಳಿಸುತ್ತಾನೆ. ರೊಚ್ಚಿಗೆದ್ದ ಹೆಗ್ಗಡೆ ತನ್ನ ಭೇಟ್ಟಿಗೆ ಬಂದ ಕಾಚನನ್ನು ಹಿಡಿದಿಡಲು ಯತ್ನಿಸುತ್ತಾನೆ.

ಆದರೆ ಮೋನ ಎಂಬ ತರುಣನ ಸಹಾಯದಿಂದ ಕಾಕ ಪಾರಾಗುತ್ತಾನೆ. ಪಾರಾಗುವಾಗ ಹೆಗ್ಗಡೆಯ ಮಗ ಚಿಕ್ಕಯ್ಯನನ್ನು ಮತ್ತು ಹೆಗ್ಗಡೆಯ ಕರಣೀಕರನ್ನು ಸೆರೆಹಿಡಿದು ಒಯ್ಯುತ್ತಾನೆ. ಅವರು ಬೂಡಿನಲ್ಲಿ ಬಂಧಿಗಳಾಗಿರುವ ವರೆಗೆ ಹೆಗ್ಗಡೆಗೆ ಬೂಡಿನ ಮೇಲೆ ದಾಳಿ ಮಾಡುವ ಧೈರ್ಯವಿರುವುದಿಲ್ಲ.

ಆರು ದಿನಗಳ ನಂತರ ಅರಸ ರಣಧೀರ ಬೂಡಿಗೆ ಬರುತ್ತಾನೆ. ಅವನನ್ನು ಕರೆಯಲಿಕ್ಕೆ ಹೋದ ತಮ್ಮ ಗೌಡ 'ಕಾಚ ಕರೆದಿದ್ದಾನೆ' ಎನ್ನುವುದಕ್ಕೆ ಬದಲಾಗಿ 'ಕಾಕ ಕರೆದಿದ್ದಾನೆ' ಎಂದು ಹೇಳಿದ್ದರಿಂದ ಅರಸನಿಗೆ ಗೊಂದಲವುಂಟಾಗುತ್ತದೆ. ಅರಸನಿಗೆ ಕಾಚನೇ ಕಾಕ ಎಂಬುದು ಗೊತ್ತಿರುವುದಿಲ್ಲ. ಇದರಿಂದಾಗಿ ಅರಸ ಆರುದಿನ ತಡೆದಿದ್ದ. ಅರಸ ಬಂದ ಮೇಲೆ ಎಲ್ಲ ಕಷ್ಟಗಳು ದೂರವಾಗುತ್ತದೆ. ಈ ಮಧ್ಯೆ ಹೆಗ್ಗಡೆಯ ಮಗ ಚಿಕ್ಕಯ್ಯ ಕಾಕನ ಮಗಳಾದ ಮೊಲ್ಲೆಯನ್ನುವರಿಸುತ್ತಾನೆ. ಅರಸ ರಣಧೀರ ಆ ಬೂಡನ್ನು ಹೆಗ್ಗಡೆಯ ಪಾಳ್ಯದಿಂದ ಬೇರ್ಪಡಿಸಿ. ಸ್ವತಂತ್ರ ಪಾಳ್ಯವನ್ನಾಗಿ ಮಾಡುತ್ತಾನೆ. ಬೂಡಿಗೆ 'ಕಾಕನ ಕೋಟೆ' ಎಂಬ ಹೆಸರಿಟ್ಟು ಚಿಕ್ಕಯ್ಯನನ್ನೇ ಅದರ ಹೆಗ್ಗಡೆಯಾಗಿ ನೇಮಿಸುತ್ತಾನೆ. ಆದರೆ ಬೂಡಿಗೊಂದು ಕೋಟೆ ಕಟ್ಟಿಸಬೇಕು ಎಂದಾಗ ಮಾತ್ರ ಕಾಡು ಕುರುಬರೆಲ್ಲ 'ಕೋಟೆ ಬೇಡ, ನಿಸರ್ಗದೊಡನೆ ರಮಿಸುವ ಬೂಡೇ ಇರಲಿ' ಎಂದು ಬೇಡಿಕೊಳ್ಳುತ್ತಾರೆ.

ಕಾಕನಕೋಟೆ ಚಿತ್ರದಲ್ಲಿ ದೇಸೀ ಸಂಸ್ಕೃತಿಯನ್ನು ಬಿಂಬಿಸುವ ಅನೇಕ ಅಂಶಗಳನ್ನು ನಾವು ಕಾಣಬಹುದು. ಮೊದಲನೆಯದಾಗಿ ಇದೊಂದು ಬುಡಕಟ್ಟು ಜನಾಂಗದ ಕಥೆ. ಕಾಡು ಕುರುಬರ ನಂಬಿಕೆ, ಶ್ರದ್ಧೆ, ಆಚರಣೆಗಳು ವಿವಾಹ ವಿಧಿಗಳು ಇತ್ಯಾದಿಗಳಲ್ಲಿ ದೇಸೀ ಸಂಸ್ಕೃತಿಯ ಅಂಶವಿದ್ದು ಕಾಣುತ್ತದೆ. ಗಂಡಾಗಲಿ, ಹೆಣ್ಣಾಗಲಿ, ಮನಸ್ಸು ಕಾದು ಬೆರೆತ ಮೇಲೆ ಕಾಡಿಗೆ ಹೋಗಿದ್ದು ಬೂಡಿಗೆ ಬರಬೇಕು. ಬೂಡಿಗೆ ಬಂದ ಮೇಲೆ ಜೊತೆಯಾಗಿ ನಡೆಯಬೇಕು. ಯಾರೊಬ್ಬರು ಮೆಚ್ಚಿದರೆ ಸಾಲದು. ಮಿಗ, ಹಕ್ಕಿ, ಆಕಾಶ, ಭೂಮಿಯ ಹಾಗೆ ಯಾವುದೇ ಹೊರಗಿನ ಒತ್ತಾಯ ಇಲ್ಲದೆ ಸಂಬಂಧ ಏರ್ಪಡಿಸಿಕೊಳ್ಳಬೇಕು. ಎಂಬವಲ್ಲಿ ಇವರ ಪ್ರಕೃತಿಯ ಜೊತೆಗಿನ ನಂಟಿನ ಬಗ್ಗೆ ತಿಳಿಯಬಹುದು. ಒಂದು ಜನಾಂಗದ ಸಂಸ್ಕೃತಿಯನ್ನು ಚಿತ್ರಿಸುತ್ತಲೇ ಅದು ಎದುರಿಸಬೇಕಾಗಿರುವ ಇಕ್ಕಟ್ಟು ಬಿಕ್ಕಟ್ಟುಗಳನ್ನೂ ಅನಾವರಣಗೊಳಿಸುವ ಕಲಾತ್ಮಕ ಪ್ರಯತ್ನ ಈ ಚಿತ್ರದಲ್ಲಿ.

ಇಂಥ ದೇಸೀ ಸಂಸ್ಕೃತಿ ಸಂದರ್ಭದಲ್ಲಿ ನಮಗೆ ಅತ್ಯಂತ ಪ್ರಸ್ತುತವಾಗುವ ಮತ್ತೊಂದು ನಾಟಕವೆಂದರೆ **ನಾಗಮಂಡಲ**. ನಮ್ಮ ದೇಸೀ ಪರಂಪರೆಯು ಎಷ್ಟೆಲ್ಲ ಸಾಧ್ಯತೆಗಳನ್ನು ತನ್ನೊಡಲಲ್ಲಿ ಹುದುಕಿಸಿಕೊಂಡಿದೆಯೆಂಬುದಕ್ಕೆ 'ನಾಗಮಂಡಲ' ಸೂಕ್ತ ಉದಹಾರಣೆಯೆನ್ನ ಬಹುದು. ಮೂಲತಃ ಇದು ಮೌಖಿಕ ಸಂಪ್ರದಾಯದ ಜನಪದ ಕಥೆ ಎ.ಕೆ.ರಾಮನುಜನ್ ಅವರಿಂದ ಈ ಕಥೆಯನ್ನು ಕೇಳಿದ ಚಂದ್ರಶೇಖರ್ ಕಂಬಾರರು ಅದನ್ನಾಧರಿಸಿ 'ಸಿರಿಸಂಪಿಗೆ' ನಾಟಕ ಬರೆದರೆ ಗಿರೀಶ್ ಕಾರ್ನಾಡರು 'ನಾಗಮಂಡಲ' ಎಂಬ ನಾಟಕವನ್ನು ರಚಿಸಿದರು. ಇವರೆಡೂ ರಂಗ ಕೃತಿಗಳಾಗಿಯೂ ಯಶಸ್ವಿಯಾದವು. ಮುಂದೆ ಟಿ. ಎಸ್. ನಾಗರಭರಣ ನಿರ್ದೇಶನದಲ್ಲಿ 'ನಾಗಮಂಡಲ' ಸಿನಿಮಾವಾಗಿಯೂ ಯಶಸ್ವಿಗಳಿಸಿತು. ಹೀಗೆ ಮೌಖಿಕ ಸಂಪ್ರದಾಯದ ಕಥೆಯೊಂದು ನವ್ಯ ಸಂದರ್ಭದ ನಾಟಕವಾಗಿ, ಉತ್ತಮ ರಂಗ ಕೃತಿಯಾಗಿ, ಕಲಾತ್ಮಕ ಸಿನಿಮಾವಾಗಿ ಯಶಸ್ವಿಗಳಿಸುವಲ್ಲಿ ಮೂಲ ಕೃತಿಯ ಬಹುಮುಖೀ ಸಾಧ್ಯತೆಯು ಎದ್ದು ಕಾಣುತ್ತದೆ. ಕಥೆಯ ಪ್ರಮುಖ ಆಶಯವೇ ಅಪ್ಪಟ ದೇಸೀ ಸಂಸ್ಕೃತಿಯಿಂದ ಒಡಮೂಡಿದುದು. ಯಾವುದೇ ನಿರ್ದಿಷ್ಟ ಬೇರನ್ನರೆದು ಸೇವಿಸುವುದರಿಂದ ಕಾಮೋದ್ದೀಪನೆಯಾಗುವುದೆಂಬ ನಂಬಿಕೆ, ಹೆಣ್ಣಿನ ಅಚಾತುರ್ಯದಿಂದ ಬೇರಿನ ಸಾರವುಳ್ಳಹಾಲನ್ನು ಹಾವಿನ ಹುತ್ತಕ್ಕೆರೆಯುವುದೂ, ಅದನ್ನು ಸೇವಿಸಿದ ನಾಗ ಕಾಮೋದ್ದೀಪನೆಗೊಂಡು, ಪುರುಷರೂಪ ತಾಳಿ ಹೆಣ್ಣನ್ನು ಕೊಡುವುದು, ಮುಗ್ಧ ಹೆಣ್ಣು ಪುರುಷ ರೂಪ ತಾಳಿ ತನ್ನನ್ನು ಕೂಡ ಬಂದ ನಾಗನನ್ನು ಗಂಡನೆಂದೇ ಭಾವಿಸಿ ಸಹಕರಿಸುವುದು, ಗಂಡನಿಗೆ ಸಂಶಯ ಬಂದಾಗ ನಡೆಸಿದ ಸತ್ವ ಪರೀಕ್ಷೆಯಲ್ಲಿ ಮುಗ್ಧಹೆಣ್ಣು ಗೆದ್ದು ಬರುವುದು ಇವೆಲ್ಲಾ ದೇಸೀ ಕಲ್ಪನೆಗಳೇ ಮೂಲ ಕಥೆಯ ನಾಟಕೀಯ ಸನ್ನಿವೇಶಗಳು ನವ್ಯ ಸಂದರ್ಭದ ಆಧುನಿಕ ನಾಟಕಕ್ಕೆ ಹೊಂದುವಂತಿದೆ. ನವ್ಯ ಸಾಹಿತ್ಯದಲ್ಲಿ ತಾನೇ ತಾನಾಗಿ ವಿಜೃಂಭಿಸುವ ಸಂಕೇತ - ಪ್ರತಿಮೆಗಳಲ್ಲಿ ಕೆಲವಂತು ನಮ್ಮ ಮೂಲ (ದೇಸೀ) ಪರಂಪರೆಯಿಂದಲೇ ಬಳುವಳಿಯಾಗಿ ಬಂದವೆಂಬುದನ್ನು 'ನಾಗಮಂಡಲ'ದ ಆಧಾರದಿಂದ ಹೇಳಬಹುದಾಗಿದೆ. ಅದರಂತೆ ಹಾವು ಕಾಮಕ್ಕೆ ಸಂಕೇತವಾಗಿ ಬಳಕೆಯಾಗುತ್ತಾ ಬಂದಿದೆ.

ಮೂಲ ಜನಪದ ಕಥೆಯಲ್ಲಿ ನಾವು ಅದನ್ನು 'ಆಶಯ' (Motif) ಎಂದು ಕರೆದರೆ, ಆಧುನಿಕ ಸಾಹಿತ್ಯ ಸಂದರ್ಭದಲ್ಲಿ ಅದುವೇ 'ಸಂಕೇತ' (Symbol) ಎನಿಸಿಕೊಳ್ಳುತ್ತದೆ. ದೇಸೀ ಸಂಸ್ಕೃತಿ ಪರಿಕರವೊಂದು ಆಧುನಿಕ ನಾಟಕವಾಗಿ ಮುಂದೆ ಸಿನಿಮಾವಾಗಿ ರೂಪಗೊಂಡಾಗ ಇಷ್ಟೆಲ್ಲಾ ಚರ್ಚೆಗೆ ಅವಕಾಶ ಮಾಡಿಕೊಡುತ್ತಿರುವುದು ವಿಶೇಷವೇ. ಮೂಲ ದೇಸೀ ಸಂಸ್ಕೃತಿ ಪರಿಕರವೊಂದು ಆಧುನಿಕ ಕಲಾ ಮಾಧ್ಯಮವೊಂದರಲ್ಲಿ ಮೂಡಿ ಬಂದಾಗ ಆ ಸಂಸ್ಕೃತಿಯು ಅಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ ಎಂಬ ಚರ್ಚೆ ನಮಗಿಲ್ಲಿ ಪುಸ್ತುತವಾಗುತ್ತದೆ. ಹಾಗೆ ನೋಡಿದರೆ ದೇಸೀ ಸಂಸ್ಕೃತಿಯೊಂದನ್ನು ಪರಿಪೂರ್ಣ ಕಲೆಯಾಗಿಸುವಲ್ಲಿ 'ನಾಗಮಂಡಲ' ಬಹುಮಟ್ಟಿಗೆ ಯಶಸ್ವಿಯಾಗಿದೆಯೆನ್ನಬಹುದು. ಒಂದರ್ಥದಲ್ಲಿ ಮೂಲ ಜನಪದ ಕಥೆಯ ಆಶಯಕ್ಕೆ ಯಾವುದೇ ದೇಶ-ಭಾಷೆಯ ಹಂಗಿರುವುದಿಲ್ಲ[೧]. ಆದರೂ ಕನ್ನಡದ ಕಥೆಯಾಗಿ ನಾವದನ್ನು ಸ್ವೀಕರಿಸಿ ಬಿಟ್ಟಿದ್ದೇವೆ. ಅದರಲ್ಲೂ ಮತ್ತಷ್ಟು ದೇಸೀ ತನವನ್ನು ಪ್ರಾದೇಶಿಕತೆಯನ್ನು ತರುವ ಉದ್ದೇಶದಿಂದ ಸಿನಿಮಾದ ಸನ್ನಿವೇಶಗಳನ್ನು ಉತ್ತರ ಕರ್ನಾಟಕದ ಪ್ರಾದೇಶಿಕತೆಗೆ ಸೀಮಿತಗೊಳಿಸಲಾಗಿದೆ.

---

೧. ಇತ್ತೀಚಿಗೆ ತೆರೆಕಂಡ ಹಿಂದೀ ಸಿನಿಮಾ 'ಪಹೇಲಿ' ಯನ್ನು ಇಲ್ಲಿ ಉದಾಹರಿಸಬಹುದು. ನಾಗಮಂಡಲದಂತಹುದೇ ಆಶಯವುಳ್ಳ. ಉತ್ತರ ಭಾರತದ ಜನಪದ ಕಥೆಯೊಂದನ್ನು ಆಧರಿಸಿ ಈ ಸಿನಿಮಾವನ್ನು ನಿರ್ಮಿಸಿರಬೇಕೆಂದು ತೋರುತ್ತದೆ. ನಾಗಮಂಡಲದಲ್ಲಿ ನಾಗ ಪುರುಷ ರೂಪವನ್ನು ಧರಿಸಿ ಬಂದರೆ ಅಲ್ಲಿ ಭೂತವೊಂದು ಪುರುಷ ರೂಪ ಧರಿಸಿ ಬರುತ್ತದೆ. ಹಿಂದಿಯಲ್ಲಿ 'ಪಹೇಲಿ' ಎಂದರೆ 'ಒಗಟು' ಎಂದರ್ಥ. ಸಿನಿಮಾದ ಒಟ್ಟಾರೆ ಘಟನಾವಳಿಗಳು ಪ್ರೇಕ್ಷಕರಿಗೆ ಅತಿಮಾನುಷವಾಗಿ ಒಗಟಿನಂತೆ ಭಾಸವಾಗುವುದರಿಂದ ಈ ಶೀರ್ಷಿಕೆ ಅರ್ಥಪೂರ್ಣವೆನಿಸುತ್ತದೆ. ಒಟ್ಟಿನಲ್ಲಿ ನಮ್ಮ ದೇಸೀಸಂಸ್ಕೃತಿಯಲ್ಲಿ ಇಂತಹ ಆಶಯ ಕಥೆಗಳು ಸಾರ್ವತ್ರಿಕವಾಗಿರುತ್ತವೆ. ಎಂಬುದಕ್ಕೆ ಈ ಸಿನಿಮಾಗಳೆರಡು ಸಾಕ್ಷಿ ಯಾಗುತ್ತವೆ. ವಿವರ ಸನ್ನಿವೇಶಗಳಲ್ಲಿ ಸ್ವಲ್ಪಮಟ್ಟಿನ ವ್ಯತ್ಯಾಸಗಳಿದ್ದರೂ ಇಲ್ಲಿನ ಆಶಯಗಳು ಹೆಚ್ಚು ಕಡಿಮೆ ಒಂದೇ ಆಗಿವೆ.

ಬಾಷೆ, ಉಡುಗೆ ತೊಡುಗೆ, ಆಹಾರ ಪದ್ಧತಿ, ವಸ್ತು, ಆಚಾರ - ವಿಚಾರ ಹೀಗೆ ಒಟ್ಟಾರೆ ಜೀವನ ಕ್ರಮವನ್ನು ಆ ಪ್ರಾದೇಶಿಕತೆಗೆ ಹೊಂದಿಕೆಯಾಗುವಂತೆ ವಿನ್ಯಾಸಗೊಳಿಸಲಾಗಿದೆ. ಹಾಡು ಸಂಗೀತ ಸಂಯೋಜನೆ ಇತ್ಯಾದಿಗಳಲ್ಲೂ ನಿರ್ದಿಷ್ಟ ದೇಸೀ ತನದ ಸೊಗಡು ಎದ್ದು ಕಾಣುತ್ತದೆ. ಉದಾಹರಣೆಗೆ 'ಗೆದಿಯ ಬೇಕು ಮಗಳಾ ಗೆದಿಯಾ ಬೇಕು', 'ಕಂಬದ ಮ್ಯಾಲಿನಾ ಗೊಂಬೆಯೇ ನಂಬಲೇನ ನಿನ್ನ ನಗೆಯನ್ನಾ' ಹೀಗೆ ಈ ಚಿತ್ರದಲ್ಲಿರುವ ಎಲ್ಲಾ ಹಾಡುಗಳಲ್ಲಿಯೂ ದೇಸೀಯ ವರ್ಣನೆಯನ್ನು ಕಾಣಬಹುದು. ಸಿನಿಮಾದಂಥ ದೃಶ್ಯ ಮಾಧ್ಯಮದಲ್ಲೂ ಭಾಷೆಗೆ ಪ್ರಮುಖ ಸ್ಥಾನ ಇದ್ದೇ ಇದೆ. ಪರಿಣಾಮದ ದೃಷ್ಟಿಯಿಂದ ಭಾಷೆಯೂ ಇಲ್ಲಿ ಮಹತ್ವವನ್ನು ಪಡೆದುಕೊಳ್ಳುತ್ತದೆ. ನಮ್ಮ ಪಾರಂಪರಿಕ ರಂಗಭೂಮಿಯಲ್ಲಿ 'ವಾಚಿಕಾಭಿನಯಕ್ಕೆ ವಿಶಿಷ್ಟ ಸ್ಥಾನವಿದೆ. ಆಧುನಿಕ ರಂಗಭೂಮಿ ಹಾಗೂ ಸಿನಿಮಾಗಳಲ್ಲೂ ನಾವದನ್ನು ಅಲ್ಲಗಳೆಯುವಂತಿಲ್ಲ. ನಾಟಕದಲ್ಲಾಗಲಿ, ಸಿನಿಮಾದಲ್ಲಾಗಲಿ ಭಾಷೆಯ ಪ್ರಾದೇಶಿಕ ಗುಣ (ದೇಸೀ ಗುಣ) ವೆನ್ನುವುದು. ಕೇವಲ ಅದರ ಧ್ವನಿಮಾ ಅಥವಾ ಆಕೃತಿಮಾದಲ್ಲಿ ಅಭಿವ್ಯಕ್ತಿಗೊಳ್ಳುವುದಿಲ್ಲ. ನಿರ್ದಿಷ್ಟ ಪ್ರದೇಶದ ಒಟ್ಟಾರೆ ಸಂಸ್ಕೃತಿಯೇ ಭಾಷೆಯೊಂದರಲ್ಲಿ ಅಭಿವ್ಯಕ್ತಿಗೊಳ್ಳಬೇಕಾದರೆ ಕೆಲವು ವಿಶಿಷ್ಟ ರೂಪಕಾತ್ಮಕವಾದ ನುಡಿಗುಟ್ಟುಗಳು ಬಳಕೆಯಾಗಬೇಕು. ಅಂಥ ಭಾಷೆಯ ಬಳಕೆಯು 'ನಾಗಮಂಡಲ' ಸಿನಿಮಾದಲ್ಲಿದೆ. ಉದಾಹರಣಗೆ 'ಈ ಅಂಗ್ಳ ರಂಗೋಲಿ ಬೇಡೈತಿ ಈ ಪಟ್ಟೆ ಚಿತ್ತಾರ ಬೇಡೈತಿ'.

ಇಂತಹ ಹಲವು ನುಡಿಗುಟ್ಟುಗಳು ಇದರಲ್ಲಿ ಬಳಕೆಯಾಗಿರುವುದನ್ನು ನಾವು ಕಾಣಬಹುದು. ಸಿನಿಮಾದ ಸನ್ನಿವೇಶ ಪರಿಸರಗಳೆಲ್ಲಾ ಉತ್ತರ ಕರ್ನಾಟಕಕ್ಕೆ ಸಂಬಂಧ ಪಟ್ಟದೆಂದು ಈಗಾಗಲೇ ಹೇಳಿದೆ. ಅಂದರೆ ಸಿನಿಮಾದ ಒಟ್ಟಾರೆ ಚಿತ್ರೀಕರಣವನ್ನು ಆ ಪ್ರದೇಶದಲ್ಲೇ ಮುಗಿಸಿರಬೇಕೆಂಬುದು ಇದರ ಅರ್ಥ. ಆದರೂ ಒಂದು ಚಿಕ್ಕ ಸಂದೇಹ ಇಲ್ಲಿ ತಲೆದೋರುತ್ತದೆ. ಸಿನಿಮಾದ ಸನ್ನಿವೇಶವೊಂದರಲ್ಲಿ ಕಂಗಿನಿಂದ ಕಂಗಿಗೆ (ಅಡಿಕೆ ಮರದಿಂದ ಅಡಿಕೆ ಮರಕ್ಕೆ) ಜಿಗಿಯುವ ಪ್ರಸಂಗವೊಂದು ಕಂಡು ಬರುತ್ತದೆ. ನಮ್ಮ ಕೃಷಿ ಸಂಸ್ಕೃತಿಯಲ್ಲಿ ಅಡಿಕೆ ಕೃಷಿ ವಿಶೇಷತ: ಕರಾವಳಿ ಕರ್ನಾಟಕ ಮತ್ತು ಮಲೆನಾಡಿಗಷ್ಟೇ ಸಂಬಂಧಪಟ್ಟಿದ್ದು. ಉತ್ತರ ಕರ್ನಾಟಕದ ಪರಿಸರದಲ್ಲಿ ಅದು ಕಾಣಿಸಿಕೊಂಡ ಬಗೆ ಅಚ್ಚರಿಯನ್ನುಂಟು ಮಾಡುತ್ತದೆ.

ಸಿನಿಮಾದ ಸಾಮಾನ್ಯ ಪ್ರೇಕ್ಷಕರಿಗೆ ಅಭಾಸವಾಗಿ ಕಾಣದಿದ್ದರೂ ಸೂಕ್ಷ್ಮ ಪ್ರೇಕ್ಷಕನಿಗೆ ಅದು ಕೆಲವೊಮ್ಮೆ ಅಭಾಸವಾಗಿ ಕಂಡರೂ ಆಶ್ಚರ್ಯವಿಲ್ಲ. ಇಂಥವೇನೇ ಇದ್ದರೂ ದೇಸೀ ಸಂಸ್ಕೃತಿಯೊಂದನ್ನು ಕಲೆಯಾಗಿ ದುಡಿಸಿಕೊಳ್ಳುವಲ್ಲಿ 'ನಾಗಮಂಡಲ' ಬಹುಮಟ್ಟಿಗೆ ಯಶಸ್ವಿಯಾಗಿದೆಯೆನ್ನಬಹುದು.

ಋಷ್ಯಶೃಂಗ ಇದು ಕಂಬಾರರ 'ಹೇಳತೇನಿಕೇಳ' ನಾಟಕದ ಮುಂದುವರಿಸಿದ ಕಥೆಯಾಗಿದೆ. ವಿ. ಆರ್. ಕೆ. ಪ್ರಸಾದ್ ನಿರ್ದೇಶನದ ಈ ಚಿತ್ರದಲ್ಲಿ ಮನುಷ್ಯ ಸದಾ ಯಾವುದೋ ಪ್ರತೀಕ್ಷೆಯಲ್ಲಿರುತ್ತಾನೆ. ಹೊಸ ಬದುಕಿಗೆ, ಹುಟ್ಟು ಸಾವಿಗೂ ಪ್ರತೀಕ್ಷೆ ಇದ್ದೇ ಇರುತ್ತದೆ. ಭೂತ ವರ್ತಮಾನಗಳ ಮೂಲಕ ಆಚರಣೆ, ನಂಬಿಕೆಗಳಿಂದ ಯಾವ ರೀತಿಯ ಸಾಹಸ ತೋರುವನು ಎಂಬುದನ್ನು ಜಾನಪದೀಯ ಅಂಶಗಳ ಮೂಲಕ ಚಿತ್ರಸಲಾಗಿದೆ.

'ಹೇಳತೇನಿ ಕೇಳ'ದ ನಾಯಕನಾದ ರಾಮಗೊಂಡನ ತಮ್ಮ ಬಾಳಗೊಂಡ ಇಲ್ಲಿಯ ನಾಯಕನಾಗಿದ್ದಾನೆ. ಗೌಡನನ್ನು ಕೊಂದು ಅವನ ರೂಪದಲ್ಲಿ ತಿರುಗಿ ಬಂದ ಗೌಡತಿಯನ್ನು ಆಕ್ರಮಿಸಿದ್ದ ರಾಕ್ಷಸ ಮುದುಕನಾಗಿದ್ದರೂ ಸಮರ್ಥನಾದ ಪ್ರತಿನಾಯಕನಾಗಿದ್ದಾನೆ. ರಾಕ್ಷಸ ಮತ್ತು ಗೌಡತಿಯರ ಅಸಹಜ ಸಂಯೋಗದಿಂದ ಹುಟ್ಟಿದ ಬಾಳಗೊಂಡ ಬರಗಾಲದಿಂದ ಶಾಪಗ್ರಸ್ತವಾದಂತಿದ್ದ ಊರಿಗೆ ಒಂದೇ ಒಂದು ಭರವಸೆಯಾಗಿರುತ್ತಾನೆ. ಗೊಲ್ಲತಿಯ ವೇಷದಲ್ಲಿ ಹೊಲೆಯರ ಕಮಲಿ ತನ್ನ ಕನಸನ್ನು ಹೇಳಹೇಳತ್ತ ಸಫಲ ಕಾಮದ ಸಂಕೇತವಾಗುವುದಲ್ಲದೆ ನಾಯಿಕೆಯೂ ಆಗಿಬಿಡುತ್ತಾಳೆ. ಅವಳ ಪೂರ್ವೋತ್ತರಗಳಿಂದ ಊರಿನ ಜೀವನದ ನಿರ್ವೀಯತೆ ಮತ್ತು ಆರ್ತತೆಗಳು ತಿಳಿದು ಬರುತ್ತವೆ. ಬಾಳಗೊಂಡ ಮತ್ತು ಕಮಲಿಯರ ಕೂಡುವಿಕೆಯಿಂದ ಮಳೆಯಾಗಿ ಊರವರು ಬರಗಾಲದ ಪೀಡೆಯಿಂದ ಬಿಡುಗಡೆಯನ್ನು ಪಡೆಯಬೇಕಾಗಿರುತ್ತದೆ. ಬಾಳಗೊಂಡನ ಆಗಮನದಿಂದಲೇ ಮಳೆಯಾಗುತ್ತದೆಂದು ಲೆಕ್ಕ ಹಾಕಿದ್ದ ಊರವರು ನಿರಾಶರಾಗಿ ಅವನಿಂದ ದೂರವಾಗುತ್ತಾರೆ. ಊರು ಬಿಟ್ಟು ಹೋಗಬೇಕೆಂದು ಕೊಂಡಿದ್ದ ಬಾಳಗೊಂಡ ಮಣ್ಣಿನ ಮೋಹಕ್ಕೆ ಬಿದ್ದು ಊರಿನ ಬಿಡುಗಡೆಗಾಗಿ ಯೋಜನೆಗಳನ್ನು ಹಾಕುತ್ತಾನೆ.

ಆದರೆ ಅವನ ತಂದೆ ಅವನ ಯೋಜನೆಗಳನ್ನೆಲ್ಲ ತಾನೇ ಕಾರ್ಯಗತಗೊಳಿಸುತ್ತಾನೆ. ದುಷ್ಟಶಕ್ತಿ ನೆಲಯೂರಿ ನಿಲ್ಲುತ್ತದೆ. ಕೊನೆಗೆ ನಡೆಯುವ ತಂದೆ ಮಕ್ಕಳ ದ್ವಂದ್ವದಲ್ಲಿ ಮಗಗೆದ್ದು ಸೋಲುತ್ತಾನೆ.

ಈ ಚಿತ್ರದಲ್ಲಿ ದೇಸೀ ಸಂಸ್ಕೃತಿಯ ಅಂಶಗಳನ್ನು ಜಾನಪದ ಕತೆಗಳಲ್ಲಿ ಬರುವ ಮಾಯಾ ಮಂತ್ರಗಳು ಹಾಗೂ ಕಾಲ್ಪನಿಕ ಅಂಶಗಳಿಂದ ಗುರುತಿಸಬಹುದು. ಊರಿಗೆ ಮಳೆ ಬಾರದೇ ಇದ್ದಾಗ ಒಂದು ಗಂಡುಹೆಣ್ಣು ಕೊಡುವುದರಿಂದ ಮಳೆಯಾಗುವುದು ಎನ್ನುವುದು ಇದು ಜನಪದರ ನಂಬಿಕೆ. ಇಲ್ಲಿ ಕೊಡುವ ಹೆಣ್ಣು ಗಂಡು, ಕಮಲಿ ಮತ್ತು ಬಾಳಗೊಂಡ ಇವರ ಕೂಡುವಿಕೆಯಿಂದಲೇ ಊರಿಗೆ ಮಳೆ ಬರುತ್ತದೆ ಎಂದು ನಂಬಿರುವ ಊರಿನ ಜನರ ಈ ಭಾವವು ದೇಸೀಯತೆಯನ್ನು ಬಿಂಬಿಸುತ್ತದೆ.

ಹೀಗೆ ದೇಸೀ ಸಂಸ್ಕೃತಿ ಹಿನ್ನೆಲೆಯಲ್ಲಿ ನಾಟಕ ಮತ್ತು ಸಿನಿಮಾಗಳ ಸಂಬಂಧವನ್ನು ಹಲವೆಡೆಗಳಲ್ಲಿ ನಾವು ಗುರುತಿಸಬಹುದಾದರೂ ಇಲ್ಲಿ ಮಾದರಿಗೆಂಬಂತೆ ಕೆಲವನ್ನಷ್ಟೆ ಪ್ರಸ್ತಾಪಿಸಲಾಗಿದೆ.

೫.೨ಸಣ್ಣಕತೆ ಮತ್ತು ಸಿನಿಮಾ

ಸಾಹಿತ್ಯ ಮತ್ತು ಸಿನಿಮಾ ಸಂಬಂಧಗಳನ್ನು ಕುರಿತು ಮಾತನಾಡುವಾಗ ಸಣ್ಣಕತೆ ಬಹುಮುಖ್ಯವಾದುದು. ಸಣ್ಣಕತೆಗಳು ಗಾತ್ರದಲ್ಲಿ ಚಿಕ್ಕವಾದರೂ ಅವು ಅತ್ಯಂತ ಸೂಕ್ಷ್ಮ ಹಾಗೂ ಗಂಭೀರವಾದ ವಸ್ತುವುಳ್ಳವಾಗಿವೆ. ನಿಧಾನಗತಿಯ ನಿರೂಪಣೆ ಹೇಳುವ ವಿಷಯವನ್ನು ವಸ್ತುವನ್ನು ಸ್ಪಷ್ಟವಾಗಿ, ವಿವರವಾಗಿ ಹೇಳುವ ಗಂಭೀರ ಸಿನಿಮಾಗಳಿಗೆ ಸಣ್ಣಕತೆ ಹೆಚ್ಚು ಆಪ್ತವಾಗುತ್ತದೆ. ಸಣ್ಣ ಕತೆಯನ್ನಾಧರಿಸಿದ ಕನ್ನಡದ ಹಲವು ಚಿತ್ರಗಳು ಗಂಭೀರವಾದ ಚಿತ್ರಗಳಾಗಿವೆ.

ಕನ್ನಡದಲ್ಲಿ ಸಣ್ಣಕತೆಯನ್ನಾಧರಿಸಿದ ಚಿತ್ರಗಳನ್ನು ಮೂಕಿ ಕಾಲದಿಂದಲೂ ಗಮನಿಸಬಹುದಾಗಿದೆ. ಮೂಕಿ ಚಿತ್ರಗಳಾದ 'ಹಿಸ್ ಲೌ ಅಫೇರ್ಸ್' ಮತ್ತು 'ಸಾಂಗ್ ಆಫ್ ಲೈಫ್' ಈ ಚಿತ್ರಗಳು ಸಣ್ಣಕತೆಯನ್ನಾಧರಿಸಿವೆ. ಇದರ ನಂತರ ೭೦ರ ದಶಕದ ತರುವಾಯ ಸಣ್ಣಕತೆಗಳು ಮತ್ತೆ ಚಲನಚಿತ್ರ ರಂಗಕ್ಕೆ ಪ್ರೇರಣೆಯಾದವು. ಯು. ಆರ್. ಅನಂತಮೂರ್ತಿಯವರ ಘಟಶ್ರಾದ್ಧ, ಬರ ಆಲನಹಳ್ಳಿಯವರ ಕುರುಬರ ಲಕ್ಕ, ಫೀನಿಕ್ಸ್, ಗೀಜಗನ ಗೂಡು, ತೇಜಸ್ವಿಯವರ ತಬರನ ಕತೆ, ಕುಬಿ ಮತ್ತು ಇಯಾಲ, ಅಬಚೂರಿನ ಪೋಸ್ಟಾಫೀಸು, ಟಿ. ಎನ್. ಸೀತಾರಾಂರವರ ಕಾರ್ಯ ನಂಜರಾಜ ಅರಸರ ಸಂಕಲ್ಪ, ಬರಗೂರರ ಒಂದು ಊರಿನಕತೆ, ಜನಪದ,

ದೇವನೂರರ ಅಮಾಸ, ಗೊರೂರು ರಾಮಸ್ವಾಮಿ ಅಯ್ಯಂಗಾರ ಭೂತಯ್ಯನ ಮಗ ಅಯ್ಯು, ಕರಿನಾಗರಗಳು, ಮುತ್ತುಚ್ಚೇರ ಇನ್ನು ಮುಂತಾದವುಗಳು ಸಣ್ಣಕತೆಯನ್ನಾಧರಿಸಿದ ಚಿತ್ರಗಳು ಇದರಲ್ಲಿ ದೇಸೀ ಸಂಸ್ಕೃತಿಯನ್ನು ಬಿಂಬಿಸುವ ಕೆಲವು ಚಿತ್ರಗಳನ್ನು ಮಾತ್ರ ಇಲ್ಲಿಚರ್ಚೆಗೆ ಎತ್ತಿಕೊಳ್ಳಲಾಗಿದೆ.

ಘಟಶ್ರಾದ್ಧ ಅನಂತಮೂರ್ತಿಯವರ ಸಣ್ಣಕತೆಯನ್ನು ಆಧರಿಸಿದ ಚಿತ್ರ. ಯಮುನೆಯ ದುರಂತದ ಕಥನ ಬಾಲಕ ನಾಣಿಯ ನಿವೇದನವಾಗಿ ನಮ್ಮನ್ನು ತಲುಪುವುದು, ಈ ಕತೆಯ ವೈಶಿಷ್ಟ್ಯವಾಗಿದೆ. ಯಮುನೆಯ ಅನುಭವವನ್ನು ಸಾಮಾಜಿಕ ನ್ಯಾಯ-ಅನ್ಯಾಯ ಅಥವಾ ನೈತಿಕ

ಪಾಪ-ಪುಣ್ಯಗಳ ಸೋಂಕಿಲ್ಲದಂತೆ ಕೇವಲ ಒಂದು ಮಾನವೀಯ ಅನುಭೂತಿಯನ್ನಾಗಿ ಗ್ರಹಿಸುವ ಒಂದು ಮನೋಭಿತ್ತಿಯ ಸೃಷ್ಟಿ. ಕತೆಯಲ್ಲಿ ಈ ಭಿತ್ತಿಯಲ್ಲದೆ ಗೋದಾವರಮ್ಮ ಉಪಾಧ್ಯಾಯರು, ಶಾಸ್ತ್ರಿ ಹಾಗೂ ಅವನ ಗೆಳೆಯರ ಸಾಮಾಜಿಕ ದೃಷ್ಟಿಕೋನಗಳೂ ಇವೆ. ಗೋದಾವರಮ್ಮನಿಗೆ, ಯಮುನಳ ಬಸಿರು ವಿಚಿತ್ರ ಕುತೂಹಲದ ವಿಷಯವಾದರೆ ಶಾಸ್ತ್ರಿ ಮೊದಲಾದವರಿಗೆ ಯಮುನೆ - ಮೇಷ್ಟರ ಗುಪ್ತ ಭೇಟಿಗಳು ಒಂದು 'ತಮಾಷೆ'ಯ ಪ್ರಸಂಗವಾಗಿತ್ತು. ಅಗ್ರಹಾರದ ಜನ ಯಮುನೆಗೆ ವಿಧಿಸುವ ಅಘೋಷಿತ ಬಹಿಷ್ಕಾರದಲ್ಲಿಯೂ ಅವಳನ್ನು ಕುರಿತ ಸಾಮಾಜಿಕ ನಿರ್ಣಯಗಳಿವೆ. ಆದರೆ ಯಮುನಳ ಯಾತನೆಯಲ್ಲಿ ಪ್ರತ್ಯಕ್ಷವಾಗಿ ಭಾಗಿಯಾಗುವವನು ನಾಣಿಯೊಬ್ಬನೇ. ಗರ್ಭಪಾತದ ದೃಶ್ಯಕ್ಕೂ ಅವನು ಸಾಕ್ಷಿಯಾಗಿರುವುದು ಇದಕ್ಕೆ ಒಂದು ಉತ್ತಮ ನಿದರ್ಶನವಾಗಿದೆ. ಘಟಶ್ರಾದ್ಧವು ಯಮುನೆಯ ಕತೆ ಇದ್ದಂತೆ ನಾಣಿಯ ಕತೆಯೂ ಆಗಿದೆ. ಚಿಕ್ಕ ವಯಸ್ಸಿನಲ್ಲಿ ತಾಯಿಯಿಂದ ದೂರವಾದ ನಾಣಿ ಯಮುನೆಯಲ್ಲಿ ತನ್ನ ತಾಯಿಯನ್ನೇ ಕಾಣುತ್ತಾನೆ. ಶಾಸ್ತ್ರಿಯ ಆಕ್ರಮಣ ಅವಮಾನಗಳಿಂದ ಅವುಗಳಲ್ಲಿ ಅವನು ರಕ್ಷಣೆ ಬಯಸುತ್ತಾನೆ. ಯಮುನೆಯ ಅಂತರಂಗದಂತೆ ಅವನ ಅಂತರಂಗವೂ ಕೂಡ ಭಯಗ್ರಸ್ತವಾದದ್ದು, ಅವನ ಭಾವನಾ ಲೋಕದಲ್ಲಿ ಬ್ರಹ್ಮರಾಕ್ಷಸಗಳಿವೆ, ಹಾವುಗಳಿವೆ, ಶಾಸ್ತ್ರಿಯಂಥ ಆಕ್ರಮಣಶೀಲ ವ್ಯಕ್ತಿಗಳಿದ್ದಾರೆ. ಹೀಗಿದ್ದರೂ ಕತೆಯ ಕೊನೆಯಲ್ಲಿಯೂ ಅವನು ತನ್ನ ಮುಗ್ಧತೆಯನ್ನು ಕಳೆದು ಕೊಳ್ಳುವುದೇ ಇಲ್ಲ.

ಸಾಂಪ್ರದಾಯಿಕ ಬ್ರಾಹ್ಮಣ ಕುಟುಂಬಗಳಲ್ಲಿ ಆಚರಣೆಯಲ್ಲಿದ್ದ ಒಂದು ಅಮಾನವೀಯಧಾರ್ಮಿಕ ಪದ್ದತಿಯನ್ನು ಎಳೆ ಎಳೆಯಾಗಿ ಬಿಡಿಸುವ ಚಿತ್ರ ಇದಾಗಿದೆ. ಬಾಲ ವಿಧವೆಯ ಬದುಕಿನ ಸುತ್ತ ಹೆಣೆಯಲಾಗಿದೆ. 'ಘಟಶ್ರಾದ್ಧ' ನಿಜವಾದ ವಸ್ತು ತನ್ನ ನೈಸರ್ಗಿಕ. ಆದರೆ ಸಮಾಜದ ದೃಷ್ಟಿಯಲ್ಲಿ ಪಾಪವೆನಿಸಿಕೊಂಡ ಕ್ರಿಯೆಯ ಪರಿಣಾಮವಾಗಿ ಯಮುನಾ ಅನುಭವಿಸುವ ಭಯ, ನೋವು ಹಾಗೂ ಏಕಾಕಿತನಗಳಲ್ಲಿ ಹುಟ್ಟಿಕೊಳ್ಳುತ್ತದೆ. ಈ ವಸ್ತುವಿಗೆ ವೈಯಕ್ತಿಕ ಮುಖವಿದ್ದಂತೆ ಸಾಮಾಜಿಕ ಮುಖವೂ ಇದೆ. ಪಾಪದ ಭಾವನೆಗಿಂತ ಈ ಭಾವನೆಗಳೇ ಅವಳ ಅನುಭವದಲ್ಲಿ ಪ್ರಮುಖ ಸ್ಥಾನ ಪಡೆಯುತ್ತವೆ. ಅವಳ ಆತ್ಮಹತ್ಯೆಯ ಪ್ರಯತ್ನಗಳ ಹಿಂದಿನ ಪ್ರಚೋದನೆಗಳು ಕೂಡ ಇವೆ ಆಗಿವೆ.

ಬರಗೂರರ **ಒಂದು ಊರಿನ ಕಥೆ** ಚಿತ್ರದಲ್ಲಿ ಗ್ರಾಮೀಣ ಹಾಗೂ ಜಾತಿಯ ಅಸಮಾನತೆಯ ಬಗ್ಗೆ ತೀಕ್ಷ್ಣ ದೃಷ್ಟಿ ಬೀರಿದ ವಸ್ತುವಿದೆ. ಎರಡು ವರ್ಗಗಳ ನಡುವಣ ಸಾಮಾಜಿಕ ಸಂಘರ್ಷ ಸಿನಿಮಾದ ವಸ್ತುವಾಗಿ ಮೂಡಿ ಬಂದಿದೆ. ಪಂಚಾಯತಿ ಕಟ್ಟೆಯನ್ನು ವ್ಯವಸ್ಥೆಯ ಸಂಕೇತವಾಗಿಸಿಕೊಂಡು ಒಂದು ಊರಿನ ವಿದ್ಯಾಮಾನವನ್ನು ಅವುಗಳ ಮೂಲಕ ದೇಶದ ಸಮಸ್ಯೆಯನ್ನು ಪ್ರತಿಬಿಂಬಿಸಿದ್ದಾರೆ. ಶೋಷಕರು ಕೇವಲ ಸವರ್ಣೀಯರಲ್ಲ, ಶೋಷಕ ಯಾವ ಯಾವ ಹಂತದಲ್ಲಿ ಏರ್ಪಡುತ್ತಾನೆ, ಯಾರನ್ನು ಶೋಷಿಸುತ್ತಾನೆ, ಸ್ಥಾನಮಾನದ ಸಲುವಾಗಿ ಅವನು ಯಾವ ಮಟ್ಟದಲ್ಲಿ ಯಾರೊಂದಿಗೆ ರಾಜಿಯಾಗುತ್ತಾನೆ ಎಂಬ ಅಂಶಗಳನ್ನು ಇದರಲ್ಲಿ ಕಾಣಬಹುದು.

ಹರಿಜನರ ಕೆಂಚಿ ಊರಜನ ಪವಿತ್ರವೆಂದು ಭಾವಿಸಿರುವ ಗಂಗಿಹಳ್ಳದಲ್ಲಿ ಅನಿವಾರ್ಯವಾಗಿ ನೀರು ಕುಡಿಯುತ್ತಾಳೆ. ಇದೇ ದೊಡ್ಡ ಅಪರಾಧವಾಗಿ ಚಾವಡಿ ಕಟ್ಟೆಯ ಮುಂದೆ ಅವಳನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲಾಗುತ್ತದೆ. ಗರ್ಭಿಣಿಯಾಗಿದ್ದ ಕೆಂಚಿ ಇದರಿಂದ ಸಾಯುತ್ತಾಳೆ. ಇದು ಚಿತ್ರದ ವಸ್ತುವಾಗಿದೆ. ಅಧಿಕಾರದ ಕೇಂದ್ರ ವ್ಯವಸ್ಥೆಯಾಗಿರುವ ಚಾವಟಿ ಕಟ್ಟೆ ಇಡೀ ಊರಿನಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಚಿತ್ರದಲ್ಲಿ ನೀರಿನ ದೋಣಿ ಮುಟ್ಟುವುದಕ್ಕೆ ನಾಯಕಿ ಹೋಗುತ್ತಿರುವಾಗ ಹಿನ್ನೆಲೆಯಲ್ಲಿ ಸ್ಥಳ ಪುರಾಣ ಹೇಳುವ ಹಾಡು ಬರುತ್ತದೆ. ನೀರನ್ನು ಮುಟ್ಟಬಾರದೆಂದು ಹೇಳುತ್ತಿರುವಾಗಲೇ ಅದೇ ಕೆಲಸಕ್ಕೆ ಹೊರಟ ಹೆಣ್ಣು ಯಾವುದನ್ನೋ ವಿರೋಧಿಸುವ ಭಾವ ಅಲ್ಲಿರುತ್ತದೆ. ಕೆಂಚಿ ಈ ಕಾರಣಕ್ಕೆ ಒದೆತಿಂದು ಸಾಯುವಾಗ ಅಧಿಕಾರದ ಕೇಂದ್ರವಾದ ಚಾವಡಿಯಲ್ಲಿ ಹರಿಕತೆ ನಡೆಯುತ್ತಿರುತ್ತದೆ.

ಚಿತ್ರದುದ್ದಕ್ಕೂ ಮುದುಕಿ ಮಾರಜ್ಜಿ ಮೌನಿ. ಚಿತ್ರದ ಎಲ್ಲ ಘಟನೆಗಳಲ್ಲೂ ಈ ಪಾತ್ರ ಬಂದಾಗಲೆಲ್ಲಾ ಅವರ ಮೌನವೇ ಅರ್ಥ ಪೂರ್ಣವಾಗುತ್ತದೆ. ಮೌನದ ಮೂಲಕ ಪ್ರತಿಭಟನೆ ವ್ಯಕ್ತ ಪಡಿಸಿರುವುದನ್ನು ಕಾಣಬಹುದು. ವಿರೋಧಾಭಾಸ ಮತ್ತು ವ್ಯಂಗ್ಯವನ್ನು ತೋರಿಸಲು ಪದೇ ಪದೇ ಗಾಂಧಿ ಭಾವಚಿತ್ರವನ್ನು ಹಾಗೂ 'ಹುಲಿವೇಷದ' ಕುಣಿತವನ್ನು ಬಳಸಿಕೊಳ್ಳಲಾಗಿದೆ. ಹುಲಿ ವೇಷದ ಕುಣಿತ ಇದೊಂದು ಸಾಂಪ್ರದಾಯಿಕ ಆಚರಣೆ. ಹರಕೆಯನ್ನು ತೀರಿಸುವ ಒಂದು ಬಗೆ. ಆದರೆ ಚಿತ್ರದಲ್ಲಿ ವಿರೋಧ ವ್ಯಕ್ತಪಡಿಸಲು ಬಳಸಿದ್ದಾರೆ.

ಈ ಚಿತ್ರದಲ್ಲಿ ಗುರುತಿಸಬಹುದಾದ ದೇಸಿ ಸಂಸ್ಕೃತಿಯ ಇನ್ನೊಂದು ಅಂಶವೆಂದರೆ ಪಂಚಾಯತಿ ಕಟ್ಟೆಯ ವ್ಯವಸ್ಥೆ. ಗ್ರಾಮೀಣದ ಬದುಕಿನ ನ್ಯಾಯ ವ್ಯವಸ್ಥೆಯಲ್ಲಿ ಪಂಚಾಯತಿ ಕಟ್ಟಗಿರುವ ಮಹತ್ವವು ಇಲ್ಲಿ ವ್ಯಕ್ತವಾಗುತ್ತದೆ. ಹೀಗೆ ಸಿನಿಮಾದಲ್ಲಿ ಬಿಂಬಿತವಾಗಿರುವ ಗ್ರಾಮೀಣದ ಬದುಕಿನ ಚಿತ್ರಣಗಳು ಅಲ್ಲಿಯ ಸಂಘರ್ಷ, ನ್ಯಾಯ ವ್ಯವಸ್ಥೆ ಇತ್ಯಾದಿಗಳಲ್ಲಿ ನಮ್ಮ ದೇಸೀ ಸಂಸ್ಕೃತಿಯ ಅಂಶಗಳನ್ನು ಕಾಣಬಹುದಾಗಿದೆ.

ಇಲ್ಲಿ ವಿಶ್ಲೇಷಣೆಗೆ ಒಳಪಡಿಸುವ ಮತ್ತೊಂದು ಚಿತ್ರವೆಂದರೆ **ಬೂತಯ್ಯನ ಮಗ ಅಯ್ಯು** ಗೊರೂರು ರಾಮಸ್ವಾಮಿ ಅಯ್ಯಂಗಾರರ ಅದೇ ಹೆಸರಿನ ನೀಳ್ಗತೆಯನ್ನಾಧರಿಸಿದ ಚಿತ್ರ. ಈ ಚಿತ್ರವನ್ನು ಸಿದ್ಧಲಿಂಗಯ್ಯ ನಿರ್ದೇಶಿಸಿದರು. ಮಲೆನಾಡು ಬಯಲು ಸೀಮೆಗಳ ಗ್ರಾಮೀಣ ಪರಿಸರದ ಚಿತ್ರವಿದು. ಗ್ರಾಮೀಣ ಪ್ರದೇಶದ ಕೃಷಿ ಸಂಸ್ಕೃತಿ, ಬಡ ಕೃಷಿಕಾರ್ಮಿಕರ ಬವಣೆ, ಭೂಮಾಲಿಕರ-ಜಮಿನ್ದಾರರ ದಬ್ಬಾಳಿಕೆ - ಶೋಷಣೆ ದ್ವೇಷ - ಅಸೂಯೆ ಅವುಗಳಿಂದಾಗುವ ಪರಿಣಾಮಗಳು ಕೊನೆಗೂ ಮಾನವೀಯತೆಯು ಎಲ್ಲವನ್ನು ಗೆಲ್ಲುವ ಬಗೆ. ಇವು ಸಿನಿಮಾದ ಮುಖ್ಯ ಘಟನಾವಳಿಗಳು. ಒಟ್ಟಿನಲ್ಲಿ ನಮ್ಮ ಗ್ರಾಮೀಣ ಪ್ರದೇಶದಲ್ಲಿನ ಮನುಷ್ಯ ಸಂಬಂಧದ ಸೂಕ್ಷ್ಮಗಳನ್ನು ತಿಳಿಸುವ ಚಿತ್ರವಿದು. ಅದಕ್ಕೆ ಪೂರಕವಾದ ಪ್ರಕೃತಿ - ಪರಿಸರದ ಚಿತ್ರಣವೂ ಇಲ್ಲಿದೆ.

ಸಿನಿಮಾ ಮಾಧ್ಯಮದ ಮುಖ್ಯ ಉದ್ದೇಶ ಮನರಂಜನೆಯಾದರೂ. ಅದರ ಮೂಲಕ ಒಂದಲ್ಲ ಒಂದು ಮಾನವೀಯ ಮೌಲ್ಯವನ್ನು ಪ್ರತಿಪಾದಿಸುವ ಗುರಿಯನ್ನು ಬಹುಪಾಲು ಚಿತ್ರಗಳು ಹೊಂದಿರುತ್ತವೆ, ಎಂಬುದಕ್ಕೆ ಪ್ರಸ್ತುತ ಸಿನಿಮಾ ಕೂಡಾ ಉದಾಹರಣೆಯಾಗುತ್ತದೆ. ಈ ಚಿತ್ರದುದ್ದಕ್ಕೂ ದೇಸೀ ಸಂಸ್ಕೃತಿಯನ್ನು ಬಿಂಬಿಸುವ ಹಲವು ಅಂಶಗಳು ಕಾಣಬಹುದು. ಅವುಗಳೆಂದರೆ ದೇಸೀ ಕ್ರೀಡೆ, ಕುಣಿತ, ಸಂಪ್ರದಾಯ - ಆಚರಣೆ, ಆಹಾರ ಪದ್ಧತಿ ಇವುಗಳನ್ನು ಚಿತ್ರದಲ್ಲಿ ಕಾಣಬಹುದಾಗಿದೆ. ಜೋಡೆತ್ತಿನ ಓಟದ ಸ್ಪರ್ಧೆ ಮಾರಮ್ಮನ ಜಾತ್ರೆ, ಮಾರಿಕುಣಿತ, ಮದುವೆಯಲ್ಲಿ ಮಾಡುವ ಆಚರಣೆಗಳು,

ಹಾಗೆಯೇ ಆಹಾರ ಪದ್ಧತಿಯಲ್ಲಿ ಪಿಂಗಾಣಿ ಭರಣಿಯಲ್ಲಿ ಉಪ್ಪಿನ ಕಾಯಿಯನ್ನು ಹಾಕಿಡುವ ಮಲೆನಾಡಿನ ಪದ್ದತಿ ಇತ್ಯಾದಿಗಳು ಸಿನಿಮಾದಲ್ಲಿ ಹಾಸುಹೊಕ್ಕಾಗಿವೆ.

ಹಾಡಿನ ಸಂದರ್ಭದಲ್ಲೂ ದೇಸೀ ಸಂಸ್ಕೃತಿಯನ್ನು ಬಿಂಬಿಸಲಾಗಿದೆ. ಮಲೆನಾಡ ಹೆಣ್ಣ ಮೈಬಣ್ಣ ..... ಈ ಹಾಡಿನಲ್ಲಿ ಮಲೆನಾಡಿನ ಪರಿಸರದಲ್ಲಿರುವ ಹೆಣ್ಣಿನ ವರ್ಣನೆ ಮಾಡಿದರೆ ಈ ಹಾಡು ಮುಂದವರೆದಂತೆ ಬಯಲು ಸೀಮೆಯ ಗಂಡಿನ ವರ್ಣನೆ ಇದೆ. ಮಲೆನಾಡಿನ ಹೆಣ್ಣಿನ ಮೈಬ್ಬಣ ಸುಂದರವಾಗಿದ್ದರೆ ಬಯಲು ಸೀಮೆಯ ಗಂಡು ಗಟ್ಟಿಗನಾಗಿರುತ್ತಾನೆ. ಎನ್ನುವ ವರ್ಣನೆಯನ್ನು ಕಾಣಬಹುದು ಹಾಗಾಯೇ ಈ ಚಿತ್ರದ ಮತ್ತೊಂದು ಹಾಡಾದಾ 'ಶೋಬಾನ ಶೋಬಾನ ಶೋಬಾನವೇ ..... ಈ ಹಾಡು ಮದುವೆಯ ಸಂದರ್ಭದಲ್ಲಿ ಹೇಳುವ ಸಾಂಪ್ರದಾಯಿಕ ಸೋಬಾನೆ ಹಾಡನ್ನು ನೆನಪಿಗೆ ತರುತ್ತದೆ. 'ತಾಯಿಯಾ ದಯೆಗಾಗಿ ಬಂದೆವೂ ತಲೆಬಾಗಿ ಇತ್ಯಾದಿ ಹಾಡುಗಳ ಸನ್ನಿವೇಶಗಳಲ್ಲಿ ದೇಸೀ ಸಂಸ್ಕೃತಿಯ ಅಭಿವ್ಯಕ್ತಿಯಿದೆ.

ಎಪ್ಪತ್ತರ .ದಶಕದಷ್ಟು ಪೂರ್ವದಲ್ಲೇ ನಮ್ಮಲ್ಲಿ ಪೂರ್ತಿಯಾಗಿ ವಾಣಿಜ್ಯಾತ್ಮಕವೂ ಅಲ್ಲದೆ ಕಲಾತ್ಮಕತೆಯೂ ಇರುವ ಚಿತ್ರಗಳು ಬರುತ್ತಿದ್ದವೆಂಬುದಕ್ಕೆ 'ಬೂತಯ್ಯನ ಮಗ ಅಯ್ಯುವಿನಂಥ ಸಿನಿಮಾ ಉತ್ತಮ ಉದಾಹರಣೆಯಾಗುತ್ತದೆ. ವಿವಿಧ ದೇಸೀ ಕಸುಬು-ಕಸುಬುದಾರರ ಬಗೆಗೂ ಸಿನಿಮಾದಲ್ಲಿ ಉಲ್ಲೇಖಗಳಿವೆ. ಗ್ರಾಮೀಣ ಪ್ರದೇಶದ ಮುಖ್ಯ ಕಸುಬಾದ ಕೃಷಿ ಸಂಸ್ಕೃತಿಯ ಸುತ್ತ ಕಥೆ ಹೆಣೆದು ಕೊಂಡಿದೆ. ಹಾಗೂ ಕೃಷಿಗೆ ಇಲ್ಲಿ ಪ್ರಮುಖ ಸ್ಥಾನವಿದೆ. ಉಳಿದಂತೆ ಚಮ್ಮಾರ, ಆಚಾರಿ ಮುಂತಾದ ಕಸ್ತಬುದಾರರ ಉಲ್ಲೇಖ ಇಲ್ಲಿ ಬರುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ 'ಬೂತಯ್ಯನ ಮಗ ಅಯ್ಯು' ಚಿತ್ರವು ಹಲವು ನೆಲೆಗಳಿಂದ ದೇಸೀ ಸಂಸ್ಕೃತಿಯನ್ನು ಒಳಗೊಂಡ ಚಿತ್ರವೆಂದು ಹೇಳಬಹುದು.

೫.೩ ಕಾದಂಬರಿ ಮತ್ತು ಸಿನಿಮಾ

ಕಾದಂಬರಿ ಪ್ರಕಾರವನ್ನು ಬಳಸಿಕೊಂಡು ಚಲನಚಿತ್ರ ತಯಾರಾದ್ದು ನಾಟಕ, ಕಾವ್ಯಗಳ ನಂತರವೇ. ಆದರೂ ಕಾದಂಬರಿ ಪ್ರಕಾರವು ಚಲನಚಿತ್ರದಲ್ಲಿ ಬಳಕೆಗೊಂಡಷ್ಟು ಉಳಿದ ಪ್ರಕಾರಗಳು ಬಳಕೆಗೊಳ್ಳಲಿಲ್ಲ. ಸಾಹಿತ್ಯದ ಎಲ್ಲ ಪ್ರಕಾರಗಳಿಗಿಂತ ಕಾದಂಬರಿಯು ಚಿತ್ರರಂಗವನ್ನು ವಿಶೇಷವಾಗಿ ಆಕರ್ಷಿಸಿತು. ನಮ್ಮಲ್ಲಿ ಕಾದಂಬರಿಗಳನ್ನಾಧರಿಸಿ ಹಲವಾರು ಸಿನಿಮಾಗಳು ನಿರ್ಮಾಣಗೊಂಡಿವೆ. ವಿಶ್ವದ ಯಾವುದೇ ಭಾಷೆಯ ಚಿತ್ರರಂಗವನ್ನು ಗಮನಿಸಿದರೂ, ಕಾದಂಬರಿ ಆಧಾರಿತ ಚಲನಚಿತ್ರಗಳ ಸಂಖ್ಯೆ ಹೆಚ್ಚು. ಮುಖ್ಯವಾಗಿ ಸಿನಿಮಾಗೆ ಬೇಕಾದ ಸಿದ್ಧ ಕತೆಯೊಂದು ಕಾದಂಬರಿಯಲ್ಲಿರುತ್ತದೆ. ಕಾದಂಬರಿಯು ಒಂದು ಭಾಷೆಯ, ಸಮಾಜದ ಸಂಸ್ಕೃತಿಯನ್ನು ಬಿಂಬಿಸುವ ಸಮರ್ಥ ಮಾಧ್ಯಮವಾಗಿದೆ. ಸಮಾಜದಲ್ಲಿನ ವ್ಯಕ್ತಿಗಳ ವರ್ತನೆಯ ಮುಖಾಂತರ ಅದರ ಸಂಸ್ಕೃತಿಯನ್ನು ಕಟ್ಟಿಕೊಡುವ ಕಾದಂಬರಿ ಮನರಂಜನೆಯ ಜೊತೆಗೆ ಗಂಭೀರ ಮಾಧ್ಯಮವಾದ ಚಲನ ಚಿತ್ರವನ್ನು ಆಕರ್ಷಿಸಿತು. ಕನ್ನಡ ಚಿತ್ರರಂಗದಲ್ಲಿ ಆಶ್ಚರ್ಯಕರ ಪ್ರಮಾಣದಲ್ಲಿ ಕಾದಂಬರಿಯ ಬಳಕೆಯಾಗಿರುವುದ ಕಂಡು ಬರುತ್ತದೆ. ನವೋದಯ ಮತ್ತು ಪ್ರಗತಿಶೀಲ ಕಾದಂಬರಿಕಾರರಿಂದ ಸಮೃದ್ಧವಾಗಿ ಬೆಳೆಯುತ್ತಿದ್ದ ಕಾದಂಬರಿಗಳು ಚಿತ್ರರಂಗವನ್ನು ಸ್ವಾಗತಿಸಿದವು. ಕೃಷ್ಣ ಮೂರ್ತಿ ಪುರಾಣಿಕರ 'ಧರ್ಮದೇವತೆ' ಕಾದಂಬರಿಯನ್ನಾಧರಿಸಿದ 'ಕರುಣೆಯೇಕುಟುಂಬದ ಕಣ್ಣು' ೧೯೬೨ರಲ್ಲಿ ಬಂದಿತು. ಇದೇ ತಾಂತ್ರಿಕವಾಗಿ ಮೊದಲ ಕಾದಂಬರಿ ಆಧರಿತ ಚಿತ್ರವಾಗಿದೆ. ಇದು ಕಾದಂಬರಿ ಆಧರಿಸಿದ ಚಿತ್ರವಾದರೂ ಗಿನ ಚಲನ ಚಿತ್ರದ ರೂಪಕಲ್ಲೇ ಹೊರ ಬಂದಿತು. ಇದರ ನಂತರ ಕೃಷ್ಣಮೂರ್ತಿ ಪುರಾಣಿಕರ ಕುಲವಧು ೧೯೬೩ ಮತ್ತು ತ. ರಾ. ಸು. ಅವರ ಚಂದವಳ್ಳಿಯ ತೋಟ ೧೯೬೪. ಈ ಚಿತ್ರಗಳು ಕಾದಂಬರಿ ಆಧರಿತ ಚಿತ್ರ ಪರಂಪರೆಯನ್ನು ಮುಂದುವರೆಸಿದವು.

೧೯೬೪ರಲ್ಲಿ ತೆರೆಕಂಡ ಎನ್.ಲಕ್ಷ್ಮೀನಾರಾಯಣ್ ಅವರ 'ನಾಂದಿ' ಚಿತ್ರವು ಯಾವ ಕಾದಂಬರಿಯನ್ನೂ ಆಧರಿಸಲಿಲ್ಲ. ಆದರೆ ಕಿವುಡ ಮೂಗರ ಬದುಕಿನ ದ್ವಂದ್ವಗಳನ್ನು ಹೇಳುವ ಪರಿವರ್ತನೆಯ ಆಶಯ ಹೊಂದಿದ ಈ ವಸ್ತುವಿನಲ್ಲಿ ಪ್ರಗತಿಶೀಲ ಮತ್ತು ನವ್ಯರ ನಡುವಿನ ಸಂಕೀರ್ಣ ಘಟ್ಟದಲ್ಲಿದ್ದ ಸಾಹಿತ್ಯಿಕ ಪ್ರೇರಣೆ ಕೆಲಸ ಮಾಡಿತ್ತು. ಸಾಹಿತ್ಯ ಕೃತಿಯನ್ನು ಚಲನಚಿತ್ರ ಎತ್ತರಕ್ಕೆ

ಕೊಂಡೊಯ್ಯಬಲ್ಲದು ಎಂಬ ಇನ್ನೊಂದು ಅಂಶವು ಬೆಳಕಿಗೆ ಬಂದಿತು. ೧೯೬೫ರಲ್ಲಿ ತೆರೆಕಂಡ 'ಮಿಸ್ ಲೀಲಾವತಿ' ಚಿತ್ರದಿಂದ ತಿಳಿಯುತ್ತದೆ. ಕೊರಟ್ ಶ್ರೀನಿವಾಸ್‌ರಾವ್ ಅವರ ಕಾದಂಬರಿಯನ್ನು ಆಧರಿಸಿದ ಕೆ.ಎಸ್.ಜಗನಾಥ್ ನಿರ್ಮಿಸಿ ಕೊಳ್ಳಲು ಪ್ರಯತ್ನಿಸುವ ಆಶಯ ಸೇರಿಕೊಂಡಿತು

೧೯೭೦ರ ಸುಮಾರಿಗೆ ಕನ್ನಡ ಚಿತ್ರರಂಗದ ಬೆಳವಣಿಗೆಯಲ್ಲಿ ಉದ್ಭವಿಸಿದ ಒಂದು ಮಾರ್ಗದ ಚಿತ್ರಗಳಿಗೆ ಹೊಸ ಅಲೆ ಎಂದು ನಾಮಕಾರಣ ಮಾಡಲಾಯಿತು. ಹೊಸ ಅಲೆ ಎಂಬ ಶಬ್ಧವನ್ನು ಮೊದಲಿಗೆ ಬಳಸಿದವನು ಫ್ರಾಂಕಿಯ ಜಿರಾಡ್. ಫ್ರೆಂಚ್ ಸಿನಿಮಾರಂಗದಲ್ಲಿ ಪದೇ ಪದೇ ಅಭಿವ್ಯಕ್ತವಾಗುತ್ತಿದ್ದ ಸಿನಿಮಾ ಕ್ಲೀಶೆಗಳನ್ನು ಗಮನದಲ್ಲಿರಿಸಿಕೊಂಡು ಅವನು ಈ ಪದವನ್ನು ಬಳಸಿದನು. ಛಿದ್ರಗೊಳ್ಳುವ ಸಂಬಂಧಗಳು, ಜಾಗತೀಕರಣ ಮತ್ತು ಕೈಗಾರಿಕೀರಣದ ಪ್ರಭಾವ, ನಿರ್ಭಾವುಕ ಸಮಾಜದ ನಡುವೆ ಅನಾಥವಾಗುವ ವ್ಯಕ್ತಿ ಹೀಗೆ ವಾಸ್ತವವಾದಿ ಪರಂಪರೆಯನ್ನು ಯುರೋಪಿನ ಹೊಸ ಅಲೆ ಚಿತ್ರಗಳು ಅವಲಂಬಿಸಿದ್ದವು. ಅವುಗಳಿಗೆ ಸಾರ್ತ್ರೆ, ಕಾಮು, ಕಾಫ್ಕ ಮುಂತಾದವರ ಬರಹಗಳು ಜೀವ ಒದಗಿಸಿದ್ದವು. ಇದೇ ಬರಹಗಾರರಿಂದ ಪ್ರೇರಿತರಾಗಿದ್ದ ಗೋಪಾಲ ಕೃಷ್ಣ ಅಡಿಗ, ಯು. ಆರ್. ಅನಂತಮೂರ್ತಿ, ಲಂಕೇಶ್, ತೇಜಸ್ವಿ, ಚಿತ್ತಾಲ ಮುಂತಾದ ಬರಹಗಾರರನ್ನು ಕನ್ನಡ ಹೊಸ ಅಲೆ ಚಿತ್ರಗಳು ಅವಲಂಬಿಸಿದ್ದವು.

ಎಪ್ಪತ್ತರ ದಶಕದಲ್ಲಿ ಕಣಗಾಲ್ ನಿರ್ದೇಶಿಸಿದ ಎಂ.ಕೆ. ಇಂದಿರಾ ಅವರ ಗೆಜ್ಜೆಪೂಜೆಯಿಂದ ಆರಂಭವಾದ ಈ ಪರಂಪರೆ 'ಸಂಸ್ಕಾರ' ಚಿತ್ರದ ಮೂಲಕ ತೀವ್ರವಾದ ಬದಲಾವಣೆ ತಂದಿತು. ಆದುವರೆಗೆ ಕನ್ನಡ ಚಿತ್ರರಂಗದಲ್ಲಿದ್ದ ಏಕತಾನತೆಯನ್ನು ಮುರಿದು 'ಹೊಸಅಲೆ'ಯನ್ನು ತಂದ 'ಸಂಸ್ಕಾರ' ಖ್ಯಾತ ನವ್ಯ ಸಾಹಿತಿ ಯು. ಆರ್. ಅನಂತಮೂರ್ತಿಯವರ ಕಾದಂಬರಿಯನ್ನಾಧರಿಸಿದ್ದು. ಪಟ್ಟಾಭಿರಾಮರೆಡ್ಡಿಯವರ ನಿರ್ದೇಶನದಲ್ಲಿ ಸಿದ್ಧವಾದ 'ಸಂಸ್ಕಾರ' ಕನ್ನಡ ಚಿತ್ರರಂಗದ ಮೈಲಿಗಲ್ಲಾಗುವುದರೊಂದಿಗೆ ಅಂತಹದೊಂದು ಅಲೆ ಕೆಲವು ಕಾಲ ಅಸ್ತಿತ್ವದಲ್ಲಿರುವಂತೆ ಮಾಡಿತು. ಇದೇ ದಶಕದಲ್ಲಿ ವಿ. ಎಂ. ಇನಾಂದಾರರ 'ಶಾಪ' ಕಾದಂಬರಿಯನ್ನಾಧರಿಸಿ

ಎನ್.ಲಕ್ಷ್ಮೀನಾರಾಯಣ್ ನಿರ್ದೇಶಿಸಿದ ಮುಕ್ತಿ. ಭೈರಪ್ಪನವರ ಕಾದಂಬರಿಯನ್ನಾಧರಿಸಿ ಗಿರೀಶ್‌ಕಾರ್ನಾಡ್ ಮತ್ತು ಬಿ.ವಿ.ಕಾರಂತರು ನಿರ್ದೇಶಿದ ವಂಶವೃಕ್ಷ, ತ.ರಾ.ಸು. ಕಾದಂಬರಿಯಾಧಾರಿಸಿ ಜಿ.ವಿ.ಅಯ್ಯರ್ ನಿರ್ದೇಶಿಸಿದ ಹಂಸಗೀತೆ, ಕಾರಂತರ ಕಾದಂಬರಿಯನ್ನು ಆಧರಿಸಿ ಬಿ.ವಿ.ಕಾರಂತರು ನಿರ್ದೇಶಿಸಿದ ಚೋಮನದುಡಿ ಮುಂತಾದ ಚಿತ್ರಗಳು ತೆರೆಕಂಡವು. ಹೊಸ ಅಲೆ ಚಿತ್ರಗಳು ವಸ್ತುವಿನ ಆಯ್ಕೆಯಲ್ಲಿ ಪ್ರದರ್ಶಿಸಿದ ಗಟ್ಟಿತನ ಸಾಹಿತ್ಯದ ಮೂಲದಿಂದಲೇ ಬಂದಿದ್ದರೂ ಹೊಸ ಕಾಣ್ಕೆ ನೀಡಿದ್ದರಲ್ಲಿ ಅನುಮಾನವಿಲ್ಲ. ಊಳಿಗಮಾನ್ಯ ಪದ್ಧತಿಯ ವಿರುದ್ಧ ಧ್ವನಿ ಎತ್ತಿದ ಚಿತ್ರಗಳು ಕೆಲವಾದರೆ, ವ್ಯಕ್ತಿಯ ಅಂತರ್ಗತ ಸ್ವಾತಂತ್ರ್ಯದ ಕುರಿತು ಮಾತನಾಡಿದ ಚಿತ್ರಗಳು, ಸಮಾಜ ವ್ಯವಸ್ಥೆಯನ್ನು ಕುರಿತು ಮಾತನಾಡಿದ ಚಿತ್ರಗಳನ್ನೂ ಕಾಣಬಹುದು. ಹೊಸ ಅಲೆ ಎಂದು ಕರೆಸಿಕೊಳ್ಳುವ ಪ್ರಕಾರದ ಸ್ವಂತಿಕೆ, ಗುಣಮಟ್ಟಕ್ಕೆ ಬಲಿಯಾಗುತ್ತಾ ಹೋಯಿತು. ಕಾಲಾತ್ಮಕ ಚಿತ್ರಗಳಲ್ಲಿ ಚಲನಚಿತ್ರ ಸಾಹಿತ್ಯವನ್ನೇ ಹೆಚ್ಚಾಗಿ ಅವಲಂಬಿಸಿದ್ದರೆ. ಜನಪ್ರಿಯ ಚಿತ್ರಗಳಲ್ಲಿ ಸಾಹಿತ್ಯವೇ ಚಲನಚಿತ್ರಕ್ಕೆ ಋಣಿಯಾಯಿತು.

ಚಿತ್ರರಂಗಕ್ಕೆ ಅಪ್ಪಟ ಕನ್ನಡದ ಸಾಂಸ್ಕೃತಿಕ ಆತ್ಮ ಬಂದದ್ದು ಅದು ಸಾಹಿತ್ಯವನ್ನಾಧಿರಿಸಿದ್ದರಿಂದ. ಸಾಹಿತ್ಯವನ್ನಾಧಿರಿಸದೆಯೂ ಒಳ್ಳೆದು ಚಿತ್ರ ಕೊಡಲು ಸಾಧ್ಯ. ಆದರೆ ಅಂತಹ ಪ್ರಯತ್ನ ಮಾತ್ರ ಅಪರೂಪ. ಯಾವುದೇ ಭಾಷೆಯ ಸಾಹಿತ್ಯ ಆ ಪ್ರದೇಶದ ಜನಾಂಗದ ಸಾಂಸ್ಕೃತಿಕ ಅಭಿವ್ಯಕ್ತಿಯಾಗಿರುತ್ತದೆ. ಆದ್ದರಿಂದಲೇ ಹೆಚ್ಚಾಗಿ ಕಾದಂಬರಿ ಆಧಾರಿತ ಚಿತ್ರಗಳನ್ನು ತೆರೆಗಿತ್ತ ಎಪ್ಪತ್ತರ ದಶಕಕ್ಕೆ ಅಪ್ಪಟ ಕನ್ನಡದ ಸಾಂಸ್ಕೃತಿಕ ಆತ್ಮ ದೊರಕಿತ್ತು. ಎಪ್ಪತ್ತರ ದಶಕದಲ್ಲಿ ಕಾದಂಬರಿಯನ್ನಾಧರಿಸಿದ ಚಿತ್ರಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದವು. ಎಂಭತ್ತರ ದಶಕದಲ್ಲಿ ಕ್ಷೀಣಿಸಲಾರಂಭಿಸಿದವು. ಈ ಕಾಲಘಟ್ಟದಲ್ಲಿ ಕಾದಂಬರಿಯನ್ನಾಧರಿಸಿದ ಚಿತ್ರಗಳು ನಿರ್ಮಾಣವಾದರೂ ಅಲ್ಲೆಲ್ಲ ಬಹುತೇಕ ಸ್ವಾರ್ಥ, ಸೇಡು, ದ್ವೇಷ, ಹಿಂಸೆ ಮುಂತಾದ ಅಂಶಗಳೇ ವಿಜೃಂಭಿಸಿದವು. 'ಅಂತ' ಇಂತಹ ಚಿತ್ರಗಳಿಗೆ ಬುನಾದಿಯಾಯಿತು. ಗಿರೀಶ್ ಕಾಸರವಳ್ಳಿಯವರ ' ಆಕ್ರಮಣ', ದೊರೆ ಭಗವಾನರ 'ಮುನಿಯನ ಮಾದರಿ', ಕೆ.ವಿ.ಜಯರಾಂರ 'ಬೆತ್ತಲೆಸೇವೆ'

ಶಾಂತಾರಾಂರ 'ಮರಳಿ ಗೂಡಿಗೆ', ಕೃಷ್ಣ ಮಾಸಡಿಯವರ 'ಅವಸ್ಥೆ' ನಾಗಭರಣರ 'ಆಸ್ಫೋಟ' ಬರಗೂರರ 'ಸೂರ್ಯ' ಮುಂತಾದವುಗಳನ್ನು ಇಲ್ಲಿ ಉದಾಹರಿಸಬಹುದು. ತ್ತೊಂಬತ್ತರ ದಶಕವು ಚಿತ್ರರಂಗದ ಅಭಿರುಚಿಯನ್ನು ಬದಲಿಸಿದವು. ನೆರೆ ರಾಜ್ಯಗಳ ಯಶಸ್ವಿ ಚಿತ್ರಗಳನ್ನು ರೀಮೇಕ್ ಮಾಡುವ ಸಂಪ್ರದಾಯ ಆರಂಭವಾಯಿತು. ಚಿತ್ರರಂಗದ ಆರಂಭದ ಸಮಯದಲ್ಲಿ ಡಬ್ಬಿಂಗ್ ಹಾವಳಿಯನ್ನು ಎದುರಿಸಿದಂತೆ ಈಗ ರೀಮೇಕ್ ಹಾವಳಿ ಹೆಚ್ಚಾಯಿತು. ಕನ್ನಡದಲ್ಲಿ ಇಂತಹ ಚಿತ್ರಗಳು ಸಾಲುಸಾಲಾಗಿ ಬಂದವು. ಇಂತಹ ಸಂದರ್ಭದಲ್ಲಿ ಕನ್ನಡತನವನ್ನು ಉಳಿಸುವಲ್ಲಿ ಸ್ವಲ್ಪ ಮಟ್ಟಿಗೆ ಹೆಣಗಿದವೆಂದರೆ ಸಾಹಿತ್ಯವನ್ನಾಧರಿಸಿದ ಚಿತ್ರಗಳು. ಕತೆ, ನಾಟಕ, ಕಾವ್ಯ, ಕಾದಂಬರಿ ಹೀಗೆ ಹಲವು ಸೃಜನಶೀಲ ಕೃತಿಗಳು ತೆರೆಗೆ ಬಂದವು. ಅರವತ್ತರ ದಶಕದಿಂದ ಆರಂಭವಾದ ಕಾದಂಬರಿ ಮತ್ತು ಚಲನ ಚಿತ್ರಗಳ ಸಂಬಂಧದಿಂದ ಕನ್ನಡ ಚಿತ್ರರಂಗ ಹಲವು ಗಟ್ಟಿಯಾದ ಕಥಾ ಸತ್ವವನ್ನೊಳಗೊಂಡ ಚಿತ್ರಗಳನ್ನು ನೀಡಲು ಸಾಧ್ಯವಾಯಿತು. ಕೋಡ್ಲು ರಾಮಕೃಷ್ಣ ನಿರ್ದೇಶನದ ಉದ್ಭವ, ಲೋಕೇಶ್‌ರ ಭುಜಂಗಯ್ಯನ ದಶಾವತಾರ, ಗಿರೀಶ್ ಕಾಸರವಳ್ಳಿಯವರ ಮನೆ, ತಾಯಿಸಾಹೇಬ, ಗಿರೀಶ್ ಕಾರ್ನಾಡರ ಕಾನೂರು ಹೆಗ್ಗಡತಿ, ಕವಿತಾ ಲಂಕೇಶ್ವರ ದೇವೀರಿ, ತೆರೆಕೆಂಡೆವು. ಹಲವಾರು ಕಾದಂಬರಿ ಆಧರಿತ ಚಿತ್ರಗಳು ಬಂದರೂ ಸತ್ವದ ದೃಷ್ಟಿಯಿಂದ ಗಂಭೀರ ಕೃತಿಗಳನ್ನು ಆಯ್ದು ಕೊಂಡದ್ದು ಕಡಿಮೆಯೆಂದೇ ಹೇಳಬೇಕು. ೯೦ರ ದಶಕದಲ್ಲಿ ರಿಮೇಕನ ಹಾವಳಿ ಹೆಚ್ಚಾಯಿತು. ಇದರ ನಡುವೆಯೂ ಮತದಾನ, ದ್ವೀಪ, ಸಿಂಗಾರೆವ್ವ, ಚಿಗುರಿದ ಕನಸು ಇಂತಹ ಚಿತ್ರಗಳು ತೆರೆಕಂಡವು.

ಹೀಗೆ ೬೦ರ ದಶಕದಲ್ಲಿ ನಿರ್ಮಾಣಗೊಳ್ಳಲಾರಂಭಿಸಿದ ಕನ್ನಡ ಕಾದಂಬರಿಗಳನ್ನಾಧರಿಸಿದ ಸಿನಿಮಾಗಳು ಹಲವಾರು ಏಳು-ಬೀಳುಗಳೊಂದಿಗೆ, ವಸ್ತು ವೈವಿಧ್ಯದೊಂದಿಗೆ ೨೧ನೆಯ ಶತಮಾನದಲ್ಲೂ ಮುಂದುವರಿದಿವೆ. ಈಗಾಗಲೇ ಅಧ್ಯಾಯ ಮೂರರಲ್ಲಿ ಚರ್ಚೆ ಮಾಡಿರುವ 'ದೇಸೀ ಸಂಸ್ಕೃತಿ'ಯ ಅಂಶಗಳು ಅಲ್ಲಲ್ಲಾ ಒಂದಲ್ಲ ಒಂದು ರೀತಿಯಲ್ಲಿ ಅಭಿವ್ಯಕ್ತಗೊಂಡಿವೆ. ವಿವಿಧ ಸಮುದಾಯಗಳಲ್ಲಿನ ಸಂಪ್ರದಾಯ ಆಚರಣೆಗಳು, ನಂಬಿಕೆ-ನಡವಳಿಕೆಗಳು, ಪ್ರಾದೇಶಿಕ ಜೀವನ ವಿಧಾನಗಳು, ಮಾನವೀಯ ಸಂಬಂಧಗಳು, ಮೌಲ್ಯಗಳು,

ಬದುಕಿನ ಆದರ್ಶಗಳು, ಪರಂಪರೆ- ಆಧುನಿಕತೆಗಳೊಳಗಿನ ಸಂಘರ್ಷಗಳು, ಗ್ರಾಮ ಮತ್ತು ನಗರ ಬದುಕುಗಳೊಳಗಿನ ಮುಖಾಮುಖಿ, ಸ್ವದೇಶೀ ಮತ್ತು ವಿದೇಶೀ ಸಂಸ್ಕೃತಿಗಳೊಳಗಿನ ಮುಖಾಮುಖಿ, ರಾಷ್ಟ್ರೀಯ ಪ್ರಜ್ಞೆ, ಕನ್ನಡ ಪ್ರಜ್ಞೆ ಇವೆಲ್ಲಾ ದೇಸೀ ಸಂಸ್ಕೃತಿಯ ವ್ಯಾಪ್ತಿಯೊಳಗಡೆ ಬರುತ್ತದೆ. ಕನ್ನಡ ಕಾದಂಬರಿಗಳನ್ನಾಧರಿಸಿದ ಚಿತ್ರಗಳಲ್ಲಿ ಈ ಎಲ್ಲಾ ಅಂಶಗಳನ್ನೂ ನಾವು ಕಾಣಬಹುದಾಗಿದೆ. ಇಂಥ ಸಂದರ್ಭದಲ್ಲಿ ಕಲಾತ್ಮಕ - ವಾಣಿಜ್ಯಾತ್ಮಕ ಎಂಬ ಭೇದವರ್ಣಿಸಿದೆ ನಾವು ಸಿನಿಮಾಗಳಲ್ಲಿ ದೇಸೀ ಸಂಸ್ಕೃತಿಯನ್ನು ಗುರುತಿಸಬೇಕಾಗುತ್ತದೆ. ಹಾಗೆ ನೋಡಿದರೆ ಪುಟ್ಟಣ್ಣ ಕಣಗಾಲ್ - ಅವರು ನಿರ್ದೇಶಿಸಿರುವ ಬಹುತೇಕ ಎಲ್ಲಾ ಕಾದಂಬರಿಯಾಧಾರಿತ ಸಿನಿಮಾಗಳಲ್ಲೂ ದೇಸೀ ಸಂಸ್ಕೃತಿಯಿದೆ. ಆದರ್ಶದಾಂಪತ್ಯ, ಸಂಪ್ರದಾಯ, ಆಚರಣೆ ಮುಂತಾದ ಅಂಶಗಳನ್ನು ಅವೆಲ್ಲಾ ಕಲಾತ್ಮಕವಾಗಿ ಕಟ್ಟಿಕೊಡುತ್ತವೆ.

ವಿವಿಧ ಸಾಹಿತ್ಯ ಪಂಥಗಳೊಂದಿಗಿನ ಸಿನಿಮಾ ಸಂಬಂಧವನ್ನು ಈಗಾಗಲೇ ಪ್ರಸ್ತಾಪಿಸಿದೆ. ಅದೇ ರೀತಿ ಕನ್ನಡದಲ್ಲಿನ ಹೊಸ ಅಲೆಯ ಚಿತ್ರಗಳೂ ಕಥೆ ಕಾದಂಬರಿಗಳನ್ನಾಧರಿಸಿಯೇ ಬಂತೆಂಬುದನ್ನೂ ಗಮನಿಸಲಾಗಿದೆ. ಸಿನಿಮಾಕ್ಕೆ ಸಂಬಂಧಿಸಿದಂತೆ 'ದೇಸೀ ಸಂಸ್ಕೃತಿ'ಯ ಕುರಿತು ಮಾತನಾಡುವಾಗ ನಾವು ಕಲಾತ್ಮಕ ಹಾಗೂ ಪ್ರಾದೇಶಿಕ ಚಿತ್ರಗಳನ್ನು ಹೆಚ್ಚಾಗಿ ಉದಾಹರಿಸುತ್ತೇವೆ. ಈ ಬಗೆಯ ಚಿತ್ರಗಳು ಸಾಹಿತ್ಯದ ಪಂಥ ಪರಿಕಲ್ಪನೆಗಳನ್ನು ಮೀರಿ ನಿಂತಿವೆಯೆನ್ನ ಬಹುದು. ಯಾಕೆಂದರೆ ಕನ್ನಡದ ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ (ನವ್ಯೋತ್ತರ) ಈ ಎಲ್ಲಾ ಪಂಥಗಳ ಹಾಗೂ ಜನಪ್ರಿಯ - ಗಂಭೀರ ಎಂಬ ಪರಿಕಲ್ಪನೆಗಳ ಕಾದಂಬರಿಗಳನ್ನಾಧರಿಸಿಯೂ ಕಲಾತ್ಮಕ ಚಿತ್ರಗಳು ನಿರ್ಮಾಣಗೊಂಡಿವೆ. ಅವುಗಳಲ್ಲಿ ಕೆಲವು ದೇಸೀ ಸಂಸ್ಕೃತಿ ದೃಷ್ಟಿಯಿಂದಲೂ ಗಮನಾರ್ಹವೆನಿಸಿವೆ.

ಉದಾಹರಣೆಗೆ 'ಚೋಮನ ದುಡಿ' 'ಕಾನೂರು ಹೆಗ್ಗಡತಿ' ಮುಂತಾದವು. ನವೋದಯ ಕಾಲದ ಕಾದಂಬರಿಗಳು, ಫಣಿಯಮ್ಮ, ದ್ವೀಪ ಮೊದಲಾದವು ಜನಪ್ರಿಯ ಲೇಖಕರೆಂದು ಪರಿಗಣಿತದಾರವರ ಕಾದಂಬರಿಗಳು ಸಂಸ್ಕಾರ, ಸಿಂಗಾರೆವ್ವ ಇತ್ಯಾದಿಗಳು ನವ್ಯ ಕಾಲಘಟ್ಟದ ಕಾದಂಬರಿಗಳು,

[illegible]

[illegible]

ಕೊಟ್ರಹೈಸ್ಕೂಲಿಗೆ ಸೇರಿದ್ದು ದಲಿತ-ಬಂಡಾಯ (ನವೋತ್ತರ) ಕಾಲದ ಕಾದಂಬರಿ. ಇವೆಲ್ಲಾ ಆಯಾಕಾಲದ ಪ್ರದೇಶ ಹಾಗೂ ಜನಸಮುದಾಯಗಳ ಸಂಸ್ಕೃತಿ, ಆಚಾರ-ವಿಚಾರಗಳನ್ನು ಕಲಾತ್ಮಕವಾಗಿ ಹಿಡಿದಿಟ್ಟ ಸಿನಿಮಾಗಳು. ಇವುಗಳಲ್ಲಿ ವಸ್ತು ಪ್ರತಿಪಾದನೆ, ಸನ್ನಿವೇಶ ಚಿತ್ರಣ, ದೃಶ್ಯ ಸಂಯೋಜನೆ ದೃಷ್ಟಿಯಿಂದ ದೇಸೀ ಸಂಸ್ಕೃತಿಯೂ ಬಿಂಬಿತವಾಗಿದೆ. ಅಂಥ ಕೆಲವು ಚಿತ್ರಗಳ ಬಗೆಗೆ ಇಲ್ಲಿ ವಿಶ್ಲೇಷಿಸಬಹುದಾಗಿದೆ.

ಫಣಿಯಮ್ಮ ಬ್ರಾಹ್ಮಣ ಸಮಾಜದಲ್ಲಿನ ವಿಧವೆಯರ ಸ್ಥಿತಿಯನ್ನು ಕುರಿತ ಚಿತ್ರ. ಬಾಲ್ಯದಲ್ಲಿಯೇ ವಿವಾಹವಾದ ಫಣಿಯಮ್ಮ, ಕೆಲವೇ ದಿನಗಳಲ್ಲಿ ಗಂಡನನ್ನು ಕಳೆದುಕೊಂಡವಳು. ದೀರ್ಘಕಾಲ ವೈಧಮ್ಯದಲ್ಲೇ ಬದುಕಿದವಳು. ಅನುಭವ ಪಕ್ವವಾಗದಂತೆ ವೈಚಾರಿಕವಾಗಿ ಚಿಂತಿಸುವ ಫಣಿಯಮ್ಮ ತನ್ನಂತೆಯೇ ಮತ್ತೊಂದು ಹೆಣ್ಣು ವ್ಯಥೆ ಪಡುವುದನ್ನು ತಪ್ಪಿಸುವ ಪ್ರಯತ್ನ ಮಾಡುತ್ತಾಳೆ. ಮಡಿ ಹೆಂಗಸಾಗಿ ಎಲ್ಲರಿಗೂ ಬೇಕಾಗಿ ಬದುಕಿದರೂ ಅವಳ ಅಳಲನ್ನು ಗಮನಿಸದ ಸಂಬಂಧಿಕರ ವರ್ತನೆ ವಿಡಂಬನೆಗೊಳಗಾಗಿದೆ. ವೈಧವ್ಯ ಬ್ರಾಹ್ಮಣ ಸಮಾಜದಲ್ಲಿನ ಕ್ರೂರ ಪದ್ಧತಿ. ಗಂಡ ಸತ್ತ ನಂತರ ಹೆಣ್ಣು ಮಂಗಳಕರವೆನಿಸಿದ ಎಲ್ಲ ವಸ್ತುಗಳನ್ನು ತೆಗೆಯುವ ಮತ್ತು ಮಂಗಳ ಕಾರ್ಯಗಳಲ್ಲಿ ಭಾಗವಹಿಸಲು ಅನರ್ಹಳಾಗುತ್ತಾಳೆ. ಆಕೆಯ ವಯೋ ಸಹಜವಾದ ಎಲ್ಲ ಕಾಮನೆಗಳನ್ನು ಹತ್ತಿಕ್ಕಿಕೊಂಡು ವೃದ್ಧ ಹೆಂಗಸರಂತೆ ಪೂಜೆ, ಉಪವಾಸಗಳನ್ನು ಮಾಡುತ್ತಾ ಬದುಕಬೇಕಾದ ಅನಿವಾರ್ಯತೆ, ಗಂಡ ಸತ್ತ ನಂತರ ನಿರ್ಲಕ್ಷ್ಯಕ್ಕೆ ಒಳಗಾಗುವ ಇವಳು ತನ್ನ ಪ್ರಸ್ತುತತೆಯನ್ನು ಉಳಿಸಿಕೊಳ್ಳಲು ಎಲ್ಲಾ ಕೆಲಸಗಳನ್ನುಮಾಡಬೇಕಾದ ಅನಿವಾರ್ಯತೆಗೆ ಒಳಗಾಗುತ್ತಾಳೆ. ಇವುಗಳ ಮಧ್ಯದಲ್ಲಿಯೇ ಆಗಾಗ ಕ್ಷೌರಿಕನಿಗೆ ತಲೆ ಕೊಡಬೇಕಾದ ಸಂಕಟ ಇವೆಲ್ಲವುಗಳನ್ನು ನುಂಗಿಕೊಂಡು ಬದಕುವ ಸ್ಥಿತಿ ಫಣಿಯಮ್ಮನದು.

ತುಂಬಿದ ಮನೆಯಲ್ಲಿ ಹುಟ್ಟಿದ ಫಣಿಯಮ್ಮನಿಗೆ ಅಂದಿನ ಕಾಲದ ಸಂಪ್ರದಾಯದಂತೆ ಬಾಲ್ಯವಿವಾಹ ಮಾಡುತ್ತಾರೆ. ಅದು ಹಿರಿಯರ ಇಚ್ಛೆಯಂತೆ ನಡೆಯುವುದು. ಫಣಿಯಮ್ಮನನ್ನು ಕೇಳಿದರೂ ಅದು ಅವಳಿಗೆ ತಿಳಿಯದಂಥ ವಯಸ್ಸಿರುತ್ತದೆ. ಹಿರಿಯರು ಸಹ ಅಂದಿನ ಸಂಪ್ರದಾಯದಂತೆ ನಕ್ಷತ್ರ, ಗೋತ್ರ, ಎಲ್ಲವನ್ನೂ ನೋಡಿ ಸರಿಯಾಗಿಕೊಡಿ ಬಂದ ಮೇಲೆ ವಿವಾಹ

ಮಾಡುತ್ತಾರೆ. ಮೈನೆರೆಯುವ ಮೊದಲೇ ಮದುವೆ ಮುಗಿಸಬೇಕಾದ ಸಂಪ್ರದಾಯ ಫಣಿಯಮ್ಮನ ಬದುಕನ್ನು ನರಕವಾಗಿಸುತ್ತದೆ. ಮದುವೆಯಾಗಿ ಕೆಲವೇ ದಿನಗಳಲ್ಲಿ ಗಂಡ ಹಾವು ಕಡಿದು ಸತ್ತಾಗ ಫಣಿಯಮ್ಮ ಸ್ವಲ್ಪವೂ ಅಳುವುದಿಲ್ಲ. ಆದರೆ ಎಳ್ಳಮವಾಸ್ಯೆಯಲ್ಲಿ ತೆಗೆದುಕೊಂಡ ಬಳೆ ಒಡೆಯುವಾಗ ಅಳುತ್ತಾಳೆ. ಅಷ್ಟೇ ಅಲ್ಲದೆ. ಮೈನೆರೆದ ಮೇಲೆ ಯಾವ ಕರುಣೆಯೇ ಇಲ್ಲದೆ ತಲೆ ಬೋಳಿಸುತ್ತಾರೆ. ಇನ್ನೂ ಆರಳಿ ಬದುಕಬೇಕಾದ ಫಣಿಯಮ್ಮ ಇಂಥ ಕ್ರೂರ ಸಂಪ್ರದಾಯದ ಉರುಳಲ್ಲಿ ಸಿಲುಕುತ್ತಾಳೆ. ನಡುವಯಸ್ಸು ದಾಟಿದ ಗಂಡನಿಗೆ ಆಕಸ್ಮಾತ್ ಹೆಂಡತಿ ಸತ್ತರೆ ತಕ್ಷಣ ಮತ್ತೊಂದು ಮದುವೆಗೆ ಅವಕಾಶವಿದೆ. ಆದರೆ ಅತಿ ಚಿಕ್ಕ ವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡ ಫಣಿಯಮ್ಮನಂತಹ ಹೆಣ್ಣು ಮಕ್ಕಳಿಗೆ ಭವಿಷ್ಯವೇ ಇಲ್ಲದಂತೆ ಮಾಡುವುದು ನಮ್ಮಲ್ಲಿಯ ಸಂಪ್ರದಾಯ.

'ಫಣಿಯಮ್ಮ' ಚಿತ್ರದ ಪೂರ್ವಾರ್ಧ ಶೋಷಣೆಯನ್ನು ಚಿತ್ರಿಸಿದರೆ, ಉತ್ತಾರಾರ್ಧ ಅವಳನ್ನು ಉದಾತ್ತೀಕರಿಸುವಂತಿದೆ. ಬ್ರಾಹ್ಮಣ್ಯವನ್ನು. ಅದರ ಹಲವು ಆಚರಣೆಗಳ ಅರ್ಥಹೀನತೆಯನ್ನು ಫಣಿಯಮ್ಮ ಮನಸ್ಸಿನಲ್ಲೇ ಪ್ರಶ್ನಿಸುತ್ತಾಳೆ. ಆದರೆ ಅದನ್ನು ವಿರೋಧಿಸುವ ಧ್ವನಿ ಆಕೆಗಿನ್ನೂ ಬಂದಿರುವುದಿಲ್ಲ. ಫಣಿಯಮ್ಮ ಜಾತಿಮತ ಭೇದವಿಲ್ಲದೆ ಎಲ್ಲರಿಗೂ ಸಹಾಯ ಮಾಡುತ್ತಾಳೆ. ಕಡೆಗೆ ಒಪ್ಪೊತ್ತಿನ ಊಟವನ್ನು ತ್ಯಜಿಸಿ ಹಣ್ಣು-ನೀರು ಮಜ್ಜಿಗೆಯಲ್ಲಿ ಬದುಕುತ್ತಾಳೆ. ತನಗೆ ಮಕ್ಕಳಿಲ್ಲದಿದ್ದರೂ ಹತ್ತಾರು ಬಾಣಂತಿಯರ ಆರೈಕೆ ಮಾಡುತ್ತಾಳೆ. ಮಕ್ಕಳನ್ನು ಸಾಕುತ್ತಾಳೆ. ಯಾರ ಮನೆಯಾದರೂ ಸರಿ ಖರ್ಚಿಲ್ಲದೇ ಬದುಕಿ ಅವರ ಕಷ್ಟಕ್ಕೆ ಸಹಾಯ ಮಾಡುತ್ತಾಳೆ. ಎಲ್ಲಕ್ಕಿಂತ ಮುಖ್ಯವಾಗಿ ದಾಕ್ಷಾಣಿಯ ಪ್ರಸಂಗದಲ್ಲಿ ಆಕೆಯ ವರ್ತನೆ, ಆಕೆ ಅನುಭವಿಸಿದ ಎಲ್ಲ ಕಷ್ಟಗಳ ಪರಿಣಾಮದಂತಿದೆ. ಚಿಕ್ಕ ವಯಸ್ಸಿನಲ್ಲೇ ಗಂಡನನ್ನು ಕಳೆದು ಕೊಂಡದಾಕ್ಷಾಯಣಿ ಕೇಶ ಮಂಡನಕ್ಕೆ ಒಪ್ಪದೇ ಗಲಾಟೆ ಮಾಡಿದಾಗ ಹಿರಿಯರೆನಿಸಿ ಕೊಮಡದವರೆಲ್ಲಾ ಅವಳನ್ನು ಒತ್ತಾಯ ಮಾಡುತ್ತಾರೆ. ಆದರೆ ಫಣಿಯಮ್ಮ ವಾಸ್ತವವನ್ನು ಅರಿತವಳು. ಇದನ್ನು ಗಮನಿಸಿ ಸುಮ್ಮನಿರುತ್ತಾಳೆ.

ಈ ಚಿತ್ರದಲ್ಲಿ ಬ್ರಾಹ್ಮಣ ಸಮಾದಲ್ಲಿ ಆಚರಿಸುವ ಆಚರಣೆ, ಸಂಪ್ರದಾಯಗಳು ಮೂಡಿ ಬಂದಿವೆ. ಹೆಣ್ಣು ಮೈನೆರೆಯುವುದಕ್ಕೆ ಮುಂಚೆ ಮದುವೆ ಮಾಡುವುದು. ವಿಧವೆಯಾದರೆ ಅವಳು

ಮಂಗಳಕರವೆನಿಸಿದ ವಸ್ತುಗಳನ್ನು ತೊಡದೆ ಇರುವುದು. ಇವು ಬ್ರಾಹ್ಮಣರ ಆಚರಣೆಗಳು. ಚಿತ್ರದಲ್ಲಿ ಬ್ರಾಹ್ಮಣ ಸಮಾಜದ ಆಚರಣೆಗಳು ತೋರಿಸುವುದರ ಜೊತೆಗೆ ಅವನ್ನು ವಿರೋಧಿಸುವುದನ್ನು ಚಿತ್ರಿಸಿದ್ದಾರೆ. ಚಿತ್ರದಲ್ಲಿ ಫಣಿಯಮ್ಮ ಸಂಪ್ರದಾಯದಲ್ಲಿ ಇದ್ದು ಕೊಂಡೇ ಸಂಪ್ರದಾಯವನ್ನು ·ವಿರೋಧಿಸುವುದನ್ನು ಕಾಣಬಹುದು. ದೇಸೀ ಸಂಸ್ಕೃತಿಯ ನೆಲೆಯಲ್ಲಿ ಈ ಚಿತ್ರವನ್ನು ನೋಡುವುದಾದರೆ ಬ್ರಾಹ್ಮಣ ಸಮಾಜದ ಆಚರಣೆ ಮತ್ತು ಸಂಪ್ರದಾಯಗಳನ್ನು ಚಿತ್ರಿಸಿರುವುದು ನಮ್ಮ ದೇಸೀ ಸಂಸ್ಕೃತಿಯ ಭಾಗವಾಗಿದೆ.

ಭುಜಂಗಯ್ಯನ ದಶಾವತಾರ ಶ್ರೀ ಕೃಷ್ಣ ಆಲನಹಳ್ಳಿಯವರ ಕಾದಂಬರಿ ಆಧರಿತ ಚಿತ್ರ. ಕೃಷಿಕನಾದ ಭುಜಂಗಯ್ಯ ಮಳೆಯಿರದ ಕಾರಣಕ್ಕೆ ಹೋಟೇಲು ವ್ಯಾಪಾರ ಮಾಡುತ್ತಾನೆ. ಅಲ್ಲಿಗೆ ಬಳೆಗಾರ ಶೆಟ್ಟಿ ಹಾಗೂ ಆತನ ಮಗಳು ಬರುತ್ತಾರೆ. ಹೆಂಡತಿ ಮುಗಿಸಿಕೊಂಡು ಹೋದ ಬಳಿಕ ಬಳೆಗಾರನ ಮಗಳು ಕೈ ಹಿಡಿಯುತ್ತಾಳೆ. ಕಣ್ಣು ಕಳೆದುಕೊಳ್ಳುವ ಗಂಡನಿಗೆ ಕಣ್ಣಾಗುತ್ತಾಳೆ. ಗೌಡರ ಮಗ ಆಕೆಯನ್ನು ಕೆಡಿಸುತ್ತಾನೆ. ಆದರೆ ಭುಜಂಗಯ್ಯ ಆತನಿಗೆ ಹಾವು ಕಡಿದು ಔಷಧಿ ಇಲ್ಲದಾದಾಗ ಬಾಯಿಯಿಂದ ವಿಷಯ ಹಿರಿ ಆತನನ್ನು ಬದುಕಿಸಿ ತಾನು ಸಾಯುತ್ತಾನೆ. ಅತ್ತ ಆತನ ಹೆಂಡತಿ ಅವಮಾನ ಸಹಿಸಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಕಾದಂಬರಿಯಂತೆ ಸಿನಿಮಾವು ಎಲ್ಲಾ ಅಂಶಗಳಲ್ಲೂ ದೇಸೀ ಸಂಸ್ಕೃತಿಯನ್ನು ಬಿಂಬಿಸುತ್ತದೆ. ದೇಸೀ ಭಾಷೆ, ದೇಸೀ ವೈದ್ಯ ಪದ್ಧತಿ, ದೇಸೀ ಜೀವನ ಕ್ರಮ, ದೇಸೀ ಪರಿಸರ ಸನ್ನಿವೇಶಗಳಿಂದ ಕೂಡಿದ ಸಿನಿಮಾವಿದು. ಮೈಸೂರು ಕಡೆಯ ಗ್ರಾಮೀಣ ಭಾಷೆಯ ಸೊಗಡು ಸಿನಿಮಾಕ್ಕೆ ದೇಸೀ ಸಂಸ್ಕೃತಿಯ ಅನನ್ಯತೆಯನ್ನು ತಂದುಕೊಡುವಲ್ಲಿ ಪ್ರಧಾನ ಪಾತ್ರ ವಹಿಸಿದೆಯೆನ್ನಬಹುದು. ಬೈಗುಳವು ಗ್ರಾಮೀಣ ಭಾಷೆಯ ಒಂದು ಅವಿಭಾಜ್ಯ ಅಂಗ ಪ್ರಸ್ತುತ ಸಿನಿಮಾದ ಭಾಷೆಯಲ್ಲೂ ಬೈಗುಳದ ಕೆಲವು ವಿಶಿಷ್ಟ ನುಡಿಗಟ್ಟುಗಳು ದೇಸೀ ಸಂಸ್ಕೃತಿಯನ್ನು ಬಿಂಬಿಸುವಲ್ಲಿ ಸಹಕಾರಿಯಾಗುತ್ತವೆ.ಭುಜಂಗಯ್ಯನ ಹೆಂಡತಿ ಪಾರ್ವತಿಯ ಸಿಟ್ಟಿನಿಂದ ಬೈಯುವ ಸನ್ನಿವೇಶವನ್ನೇ ಇಲ್ಲಿ ಉದಾಹರಿಸಬಹುದು. ಎಕ್ಕುಟ್ಟೋಗ, ವಂಸನಿರ್‍ವಂಸವಾಗ, ಬೇವಾರ್ಸಿ, ಬಿಕ್ನಾಸಿ ಯಾವ ದೊಣ್ಣೆ ನಾಯಕ್ನ ಅಪ್ಪಣೆನೂ ಬೇಕಾಗಿಲ್ಲ. ಇತ್ಯಾದಿ ಬೈಗುಳದ ಪರಿಭಾಷೆಗಳು ಗಮನ ಸೆಳೆಯುತ್ತವೆ.

ದೇಸೀ ವೈದ್ಯ ಪದ್ಧತಿಯನ್ನು ಚಿತ್ರಿಸಿರುವುದಕ್ಕೆ ಹಾವು ಕಡಿದದ್ದಕ್ಕೆ ಭುಜಂಗಯ್ಯನು ನಾಟಿ ಔಷಧಿ ನೀಡುವ ಸಂದರ್ಭವು ದೇಸೀ ವೈದ್ಯ ಪದ್ಧತಿಗೆ ಉತ್ತಮ ಉದಾಹರಣೆಯಾಗುತ್ತದೆ. ನಾಟಿ ಚಿಕಿತ್ಸಾ ಕ್ರಮವನ್ನೂ ನಾವಿಲ್ಲಿ ಕಾಣಬಹುದಾಗಿದೆ. ಗ್ರಾಮೀಣ ಬದುಕಿನ ಎಲ್ಲಾ ವಿವರಗಳನ್ನೂ ಸಾಮಾಜಿಕ ಬದುಕಿನ ಎಲ್ಲಾ ಸೂಕ್ಷ್ಮಗಳನ್ನೂ ಸಿನಿಮಾವು ಸಮರ್ಥವಾಗಿ ಕಟ್ಟಿಕೊಡುತ್ತದೆ. ಸಮಾಜದಲ್ಲಿನ ಶ್ರೇಣೀಕರಣ ವ್ಯವಸ್ಥೆ, ಜಾತಿ ವೈಷಮ್ಯ, ದೊಡ್ಡವರೆನಿಸಿಕೊಂಡವರ ಸಣ್ಣತನ, ಸಾಮಾನ್ಯ ಮನುಷ್ಯರಲ್ಲಿರುವ ದೊಡ್ಡತನ, ಕೌಟುಂಬಿಕ ಬದುಕಿನ ಬಿಕ್ಕಟ್ಟುಗಳು, ಮಾನವ ಸಂಬಂಧದ ಸೂಕ್ಷ್ಮಗಳು, ವ್ಯಕ್ತಿ - ವ್ಯಕ್ತಿಗಳ ನಡುವಿನ ಸಂಬಂಧ, ಗಂಡು - ಹೆಣ್ಣು ನಡುವಿನ ಸಂಬಂಧ, ವ್ಯಕ್ತಿ - ಸಮಾಜದ ನಡುವಿನ ಸಂಬಂಧ, ಇವನ್ನೆಲ್ಲಾ ಗ್ರಾಮೀಣ ನೆಲೆಯಲ್ಲಿ ಅರ್ಥಪೂರ್ಣವಾಗಿ ಚಿತ್ರಿಸುತ್ತದೆ. ಗ್ರಾಮೀಣ ಪ್ರದೇಶಗಳ ಶ್ರಮ ಜೀವನ, ವೃತ್ತಿ ಜೀವನ ಬಳೆಮಾರುವ ವೃತ್ತಿ, ಸಂಪ್ರದಾಯ, ಪಂಚಾಯತಿ ವ್ಯವಸ್ಥೆ, ನ್ಯಾಯ-ತೀರ್ಮಾನ, ನಂಬಿಕೆ-ನಡವಳಿಕೆ, ಆಚಾರ-ವಿಚಾರಗಳನ್ನೆಲ್ಲಾ ಚಿತ್ರದಲ್ಲಿ ಕಾಣಬಹುದಾಗಿದೆ.

ದೇಸೀ ಭಾಷೆಯನ್ನು ಸಿನಿಮಾವೊಂದರಲ್ಲಿ ಸಮರ್ಥವಾಗಿ ಹೇಗೆ ಬಳಸಿಕೊಳ್ಳ ಬಹುದೆಂಬುದಕ್ಕೆ ಈ ಚಿತ್ರವು ಉದಾಹರಣೆಯಾಗುತ್ತದೆ. ಧ್ವನಿ ಪೂರ್ಣವಾಗಿ, ರೂಪಕಾತ್ಮಕವಾಗಿ ಭಾಷೆಯನ್ನು ಹೇಗೆ ದುಡಿಸಿಕೊಳ್ಳಬಹುದೆಂಬುದಕ್ಕೆ ಭುಜಂಗಯ್ಯನ ಮಾತುಗಳನ್ನು ಗಮನಿಸಬಹುದು. ''ಆಕಾಶಕ್ಕೇಣಿ ಹಾಕಿ ಚಪ್ಪರ ಕಟ್ಟುವವನು'' ಎಂಬಲ್ಲಿ ಭುಜಂಗಯ್ಯ ತನ್ನ ಸಾಮರ್ಥ್ಯದ ಬಗೆಗೆ ಆತ್ಮ ವಿಶ್ವಾಸದಿಂದ ರೂಪಕಾತ್ಮಕವಾಗಿ ಹೇಳಿಕೊಳ್ಳುತ್ತಾನೆ. ''ಓದ ಜೀವಾನ ಉಳಿಸಾಕಾಗಲ್ಲಿ. ಆದ್ರೆ ಓಗ್ತಾ ಇರೋ ಜೀವಾನ ಉಳಿಸೆ ಓದ್ರೆ ತೆಪ್ಪಾಯ್ತದೆ''. ಸಿನಿಮಾದ ಕೊನೆಯ ಭಾಗದಲ್ಲಿ ಭುಜಂಗಯ್ಯನಾಡುವ ಈ ಮಾತು ಸಾಮರ್ಥ್ಯ ಮನುಷ್ಯನ ದೊಡ್ಡತನಕ್ಕೆ ಕನ್ನಡಿ ಹಿಡಿಯುತ್ತದೆ. ಹೀಗೆ ಭುಜಂಗಯ್ಯನ ದಶಾವತರಾ ಸಿನಿಮಾವು ಎಲ್ಲಾ ಅಂಶಗಳಲ್ಲೂ ದೇಸೀ ಸಂಸ್ಕೃತಿಯನ್ನು ಬಿಂಬಿಸುತ್ತದೆ.

ಪರಸಂಗದ ಗೆಂಡೆತಿಮ್ಮ ಶ್ರೀ ಕೃಷ್ಣ ಆಲನಹಳ್ಳಿಯವರ ಅದೇ ಹೆಸರಿನ ಕಾದಂಬರಿ ಆಧರಿಸಿದ ಚಿತ್ರ. ಈ ಚಿತ್ರವನ್ನು ನಿರ್ದೇಶಿಸಿದವರು ಮಾರುತಿ ಶಿವರಾಂ. ಪಟ್ಟಣದಿಂದ ಪದಾರ್ಥ ತಂದು ಮಾರುವ ಹಳ್ಳಿಯ ಮುಗ್ಧ ತಿಮ್ಮನ ಕತೆಯಿದು. ಗೌವಳ್ಳಿಯ ಗೆಂಡೆತಿಮ್ಮ ಊರಿಂದೂರಿಗೆ ಎಲೆ ಅಡಿಕೆ ಮಾರಿ ಬುದುಕುತ್ತಿದ್ದ ತೀರಾ ಸಾಮಾನ್ಯ ವ್ಯಕ್ತಿ. ಮುಗ್ಧ ಮರಂಕಿ ಮಡದಿಯಾಗಿ ಬಂದಾಗ ಅನ ಬದುಕಿನಲ್ಲಿ ಬೀಸಿದ ಹೊಸಗಾಳಿ ನಿಧಾನವಾಗಿ ಊರನ್ನೆಲ್ಲ ಆವರಿಸುತ್ತದೆ. ಪೇಟೆರುಚಿ ಕಂಡಿದ್ದ ಮರಂಕಿ ಬಳಸುವ ಗಮುಲು ಎಣ್ಣೆ, ಸ್ನೋ, ಪೌಡರ್, ಸಾಬೂನು, ಲಂಗ, ಬಾಡಿ, ಊರಲ್ಲಿ ಕ್ರಾಂತಿಯನ್ನೇ ಎಬ್ಬಿಸುತ್ತದೆ. ಅವಳ ಬರುವಿನಿಂದ ಗೆಂಡೆತಿಮ್ಮನ ವೈಯಕ್ತಿಕ ಬದುಕಿನಲ್ಲಿ ಸಾಕಷ್ಟು ಬದಲಾವಣೆಗಳಾಗುತ್ತವೆ. ಬೆಳಿಗ್ಗೆ ಎದ್ದ ಕೂಡಲೆ ಮರಂಕಿ ಗಂಡನಿಗೆ ನಂಜನಗೂಡು ಹಲ್ಲು ಪುಡಿಯಿಂದ ಹಲ್ಲುಜ್ಜುವ ರೂಢಿ ಮಾಡಿಸಿದ್ದಳು. ಮದುವೆಗೆ ಮುಂಚೆ ಅವನಿಗೆ ಹಲ್ಲುಜ್ಜುವ ರೂಢಿಯೇ ಇರಲಿಲ್ಲ. ಅವನ ಹಲ್ಲಿನ ಹಸಿ ಹಳದಿಯ ಪಾಚಿ ಕಳಚಿದ್ದು ಮರಂಕಿಯ ಒತ್ತಾಯದಿಂದ, ವ್ಯಾಪಾರಕ್ಕೆ ಹೋಗಿ ಬಂದ ತಕ್ಷಣ ಸ್ನಾನ ಮಾಡಿ ಬಟ್ಟೆ ಬದಲಾಯಿಸುವುದು. ವಾರಕ್ಕೊಂದು ಸಲವಾದರೂ ಮುಖ ಕ್ಷೌರಮಾಡಿಸಿಕೊಳ್ಳುವುದು, ತಲೆ ಬಾಚಿಕೊಳ್ಳುವುದು ಇತ್ಯಾದಿಗಳನ್ನು ದಿನ ನಿತ್ಯ ಪಾಲಿಸುವಂತೆ ಮಾಡಿದಳು. ಇವೆಲ್ಲವೂ ಅವನಿಗೆ ಖುಷಿ ಕೊಟ್ಟರೂ ಕೆಲವೊಮ್ಮೆ ಕಿರಿಕಿರಿಗೆ ಕಾರಣವಾಗುತ್ತಿದ್ದವು. ಮಗನ ಜೀವನ ಶೈಲಿಯಲ್ಲಾದ ಈ ಬದಲಾವಣೆ ತಾಯಿಗೆ ಹಿಡಿಸದೆ ಅವಳು ಮಾಡುವ ಆಕ್ಷೇಪ ಅತ್ತೆ-ಸೊಸೆಯರ ಜಗಳಕ್ಕೆ ನಾಂದಿಯಾಗಿ ಮನೆ ಎರಡು ಪಾಲಾಗುತ್ತದೆ.

ಈ ಬದಲಾವಣೆ ಗೆಂಡೆತಿಮ್ಮನ ಬದುಕಿಗೇ ಸೀಮಿತವಾಗದೆ ಊರ ಬದುಕಿಗೂ ಹರಡುತ್ತದೆ. ಮರಂಕಿ ಊರಿಗೆ ತಂದ ಶೃಂಗಾರ ಸಾಮಾಗ್ರಿ, ಗೆಂಡೆ ತಿಮ್ಮನ ಗೂಡೆಯ ಮೂಲಕ ಮನೆ ಮನೆ ಮುಟ್ಟಿತು. ಅಲ್ಲಿಯೂ ಹಿರಿಯರ ಕಿರಿಯರ ವೈಷಮ್ಯಕ್ಕಿದು ಕಾರಣವಾಗುತ್ತದೆ. ಊರಹೆಣ್ಣು ಮಕ್ಕಳು ದಿನವೂ ತಲೆ ಬಾಚುವುದು. ಸ್ನೋ ಪೌಡರ ಬಳಸುವುದು ಹುಡುಗರಿಗೆ ಖುಷಿ ಕೊಟ್ಟರೆ ಹಿರಿಯರು ಭಯಗ್ರಸ್ತರಾದರು. ಇಷ್ಟು ಕಾಲ ಋತುಮಾನಗಳಲ್ಲದೆ ಬೇರಾವ ಶಕ್ತಿಯೂ ಗೌವಳ್ಳಿಯ ಬದುಕನ್ನು ಯಾವ ಬಗೆಯ ಏರಿಳಿತಕ್ಕೂ ಒಳಗೂ ಮಾಡಿರಲಿಲ್ಲ. ನೆಮ್ಮದಿಯಿಂದಿದ್ದ ಇಲ್ಲಿನ ಜೀವನಕ್ಕೆ ಇತ್ತೀಚೆಗೆ ಬಿರುಗಾಳಿ ಬೀಸತೊಡಗಿತ್ತು.

[illegible]

ದುರ್ಗಂಧಮಯವಾದ ಊರ ಬೀದಿಗಳಲ್ಲಿ ಆಗೀಗ ಸುಗಂಧದ ತೆರೆಯೊಂದು ಹರಿದಂತೆ, ಹಠಾತ್ತನೆ ಕಾಮನ ಬಿಲ್ಲಿನ ಬಣ್ಣಗಳು ಹೆಣ್ಣುಗಳಾಗಿ ಓಡಾಡುತ್ತಿರುವಂತೆ ಗೌವುಳ್ಳಿಯ ಪ್ರಾಯದ ಹುಡುಗರಿಗೆ ಚಿತ್ರ ವಿಚಿತ್ರವಾದ ಅನುಭವಗಳಾಗತೊಡಗಿದವು. ಊರಿನ ಒಂದಲ್ಲ ಒಂದು ಮನೆಯಲ್ಲಿ ಏನಾದರೊಂದು ಆಶ್ಚರ್ಯ ಸಂಭವಿಸಿ ಎಲ್ಲರೂ ತಲ್ಲಣಗೊಳ್ಳುವುದು ಸಾಮಾನ್ಯವಾಗಿ ಬಿಟ್ಟಿತು. ಇವೆಲ್ಲದರ ಪರಿಣಾಮ ಗೌವುಳ್ಳಿಯ ಹಿರಿಯರು ಗೆಂಡೆತಿಮ್ಮನನ್ನು 'ಮನೆಹಾಳ'ನೆಂದು ಗಡೀಪಾರು ಮಾಡಿದರು. ಈ ನೋವಿನಲ್ಲಿ ಗೆಂಡೆ ತಿಮ್ಮ ಆತ್ಮಹತ್ಯೆ ಮಾಡಿಕೊಂಡರೆ, ಮರಂಕಿ ತಾನು ಗಂಡನಲ್ಲಿ ಪಡೆಯದ ಸುಖ ಬೇರೆಡೆ ಪಡೆದನೆಂದು ಅವನು ಸತ್ತಿರಬೇಕೆಂದು ತಿಳಿದು ನೇಣುಹಾಕಿಕೊಳ್ಳುತ್ತಾಳೆ. ಆದರೆ ಈ ದುರಂತ ಹಳ್ಳಿಯ ಬದುಕಿನಲ್ಲಿ ಆರಂಭವಾದ ಸಂಘರ್ಷಕ್ಕೆ ಮಂಗಳ ಹಾಡದೆ ಬೆಳೆಸುತ್ತದೆ. ಹಿರಿಯರು ಎಷ್ಟೇ ಪರಂಪರೆಯ ಶೃಂಖಲೆಯಲ್ಲಿ ಬಂಧಿಸ ಹೊರಟರೂ ಮನೆ ಮನೆಯಲ್ಲೂ 'ಮರಂಕಿ'ಯರು ತಲೆಯೆತ್ತಿ ಹಳ್ಳಿಯಲ್ಲಿ ಹೊಸ ಅಲೆ ಏಳುತ್ತದೆ. ನಾಗರೀಕತೆ ಗ್ರಾಮೀಣ ಪರಿಸರವನ್ನು ಮೌಲ್ಯಗಳನ್ನು ನಾಶಮಾಡುತ್ತದೆ.

ಈ ಚಿತ್ರದಲ್ಲಿ ನಾಗರೀಕತೆಯ ಪರಿಣಾಮವನ್ನು ತುಂಬಾ ಸೊಗಸಾಗಿ ಚಿತ್ರಿಸಿದ್ದಾರೆ. ಪಟ್ಟಣದ ಜೀವನವನ್ನು ರೂಢಿಸಿಕೊಂಡಿದ್ದ ಮರಂಕಿ ನಾಗರೀಕತೆಗೆ ಒಳಗಾದವಳು. ಇದರ ಪ್ರಭಾವದಿಂದ ಅವಳು ಬಳಸುತ್ತಿದ್ದ ಸ್ನೋ, ಪೌಡರ್ ಇವೆಲ್ಲವೂ ಹಳ್ಳಿಯ ಮುಗ್ಧ ಜನರನ್ನು ಕೆಡೆಸುವಂತೆ ಮಾಡಿತು. ಇವುಗಳ ಬಳಕೆಯಿಂದ ಹಳ್ಳಿಯ ಜನರಲ್ಲಿ ಬದಲಾವಣೆ ಕಂಡು ಬಂದಿತು. ಆದರೆ ಅದೇ ಹಳ್ಳಿಯ ನಾಶಕ್ಕೂ ಕಾರಣವಾಯಿತು. ಇವರಲ್ಲಿದ್ದ ಮುಗ್ಧತೆಯು ಇದರಿಂದ ದೂರವಾಗಲಾರಂಭಿಸಿತು. ಕೊನೆಗೆ ಪ್ರತಿಯೊಂದು ಮನೆಯಲ್ಲೂ ಮರಂಕಿಯರು ಕಾಣಿಸಿಕೊಳ್ಳಲು ಪ್ರಾರಂಭಿಸಿದರು. ಹೀಗೆ ಈ ಚಿತ್ರದಲ್ಲಿ ನಗರೀಕರಣದಿಂದ ನಮ್ಮ ಗ್ರಾಮೀಣ ಜನತೆಗೆ ಯಾವ ರೀತಿಯ ಪರಿಣಾಮಕ್ಕೆ ಒಳಗಾದರು ಎಂಬುದನ್ನು ತೋರಿಸಿದ್ದಾರೆ.

ಸಂಸ್ಕಾರ ಪಟ್ಟಾಭಿರಾಮರೆಡ್ಡಿ ನಿರ್ದೇಶನದ ಯು. ಆರ್. ಅನಂತಮೂರ್ತಿಯವರ ಕಾದಂಬರಿ ಆಧಾರಿತ ಚಿತ್ರ. ಈ ಚಿತ್ರದ ಮುಖ್ಯ ವಿಶೇಷತೆ ಎಂದರೆ ಹೊಸ ಅಲೆಯ ಚಿತ್ರಗಳಿಗೆ ಇದು ನಾಂದಿ.

ದೂರ್ವಾಸಪುರದ ಕಿರೀಟ ಪ್ರಾಣೇಶಚಾರ್ಯರು. ದಕ್ಷಿಣದಲ್ಲೇ ಅವರಂಥ ವಿದ್ವಾಂಸರು ಮತ್ತೊಬ್ಬರಿಲ್ಲ ಎನ್ನುವ ಕೀರ್ತಿ ಜೊತೆಗೆ ಎಲ್ಲ ಪ್ರವೃತ್ತಿಗಳಿಗೆ ಕಡಿವಾಣ ಹಾಕಿ. ರೋಗಿಷ್ಟ ಹೆಂಡತಿ ತಮ್ಮ ಯಜ್ಞಭೂಮಿ ಎಂದು ಹಿಗ್ಗಿ ಬಾಳಿದವರು. ಈ ರೀತಿ ಇರುವಾಗ ಅಗ್ರಹಾರದಲ್ಲಿ ಒಬ್ಬನೇ ಎದುರಾಳಿ ನಾರಣಪ್ಪ. ಇವನು ಕಡಿಕೋಡಿ, ಹಟವಾದಿ, ಹುಚ್ಚ, ಬಹಿಷ್ಕಾರ ಹಾಕಿಸಿದರೆ ಮುಸಲ್ಮಾನಾಗಿ ಬಿಡುತ್ತೇನೆಂದು ಹೇಳುವವನು. ಇದಕ್ಕೆ ಹೆದರಿ ಅವನು ಚಂದ್ರಿಯನ್ನು ತಂದಿಟ್ಟುಕೊಂಡರೂ, ಸಾರಾಯಿ ಭಕ್ತನಾದರೂ, ದೇವರ ಕೊಳದ ಮೀನಿಗೇ ಕೈಯಿಟ್ಟರೂ ಅಗ್ರಹಾರದ ಬ್ರಾಹ್ಮಣರು ಸಹಿಸಿದರು. ಅವನಿಗೋ ಅಗ್ರಹಾರದ ಬಗೆಗೇ ತಿರಸ್ಕಾರ ಆಚಾರ್ಯರೊಬ್ಬರೇ ಅಲ್ಲಿರುವ ಬ್ರಾಹ್ಮಣ ಎನ್ನುವ ಅವನಿಗೆ ಅಲ್ಲಿನ ಬ್ರಾಹ್ಮಣರೆಲ್ಲಾ ಲೇವಡಿಯ ವಸ್ತುಗಳು.

ಕೊನೆಯಲ್ಲಿ ಗೆಲ್ಲೋದು ನಾನೊ, ನೀವೋ, ನೋಡುವ ಆಚಾರ್ಯರೆ, ಎಷ್ಟು ದಿನ ಈ ಬ್ರಾಹ್ಮಣ್ಯ ಉಳಿಯುತ್ತೆ ಎನ್ನುವ ಸವಾಲು ನಾರಣಪ್ಪನದು. ಅಗ್ರಹಾರದಲ್ಲಿ ಕೊನಗೆ ಗೆಲ್ಲುವುದು ಸನಾತನ ಧರ್ಮವನ್ನು ಹಿಡಿದ ತಮ್ಮ ತಪಸ್ಸೋ ಅಥವಾ ರಾಕ್ಷಸ ಸ್ವಭಾವವೋ ನೋಡಿಯೇ ಬಿಡುವ ಹಟ ಆಚಾರ್ಯರಿಗೆ. ಇಂಥ ಹೊತ್ತಿನಲ್ಲಿ ಪ್ಲೇಗ್‌ಗೆ ಬಲಿಯಾದ ನಾರಣಪ್ಪನ ಶವಸಂಸ್ಕಾರ ದೊಡ್ಡ ಸಮಸ್ಯೆಯಾಗಿಬಿಡುತ್ತದೆ. ಧರ್ಮ ಶಾಸ್ತ್ರಗಳಲ್ಲೂ ಸಿಗದ ಉತ್ತರವನ್ನು ಇಷ್ಟದೈವ ಮಾರುತಿಯಿಂದ ಪಡೆಯಲು ಪ್ರಯತ್ನಿಸಿ ಆಚಾರ್ಯರು ಸೋಲುತ್ತಾರೆ. ಇಂಥ ವಿಚಿತ್ರ ಮನಸ್ಥಿತಿಯಲ್ಲಿ ಗುಡಿಯಿಂದ ಬರುತ್ತಿದ್ದ ಆಚಾರ್ಯರು ಕಾಡಿನ ಕತ್ತಲ ಹಾದಿಯಲ್ಲಿ ನಾರಣಪ್ಪನ ಸೂಳೆ ಚಂದ್ರಿಯನ್ನು ಹಠಾತ್ತಾಗಿ ಕೂಡಿ ಬಿಡುತ್ತಾರೆ. ಈ ಅನಿರೀಕ್ಷಿತ ಘಟನೆ ಅವರ ಬದುಕಿಗೇ ಹೊಸ ತಿರಿವು ಕೊಡುತ್ತದೆ. ಚಂದ್ರಿಯ ಸಮ್ಮಾದ ನಂತರ ನಿಸರ್ಗ ಚೆಲುವಿಗೆ ಕಣ್ತೆರೆದ ಆಚಾರ್ಯರಿಗೆ "ಯಾವುದರ ವಿರುದ್ಧ ಹೋರಾಡುತ್ತ ಬಂದೆನೋ ಅದೇ ನಾನಾಗಿ ಬಿಟ್ಟೆ" ಎನ್ನುವ ಯೋಚನೆ ಬಲವಾಗುತ್ತದೆ. ಅವರ ಹೆಂಡತಿಯ ಸಾವು ಬಿಡುಗಡೆಯಾಗಿ ಊರು ಬಿಟ್ಟು ಹೊರಟ ಆಚಾರ್ಯರು ಕೊನೆಗೆ ಬಂದ ಕ್ರಿಯೆಯನ್ನು ಆಯ್ದುಕೊಂಡು ಅದಕ್ಕೆ ಹೊಣೆಗಾರರಾಗಿ ಬಾಳನ್ನು ರೂಪಿಸಿಕೊಳ್ಳುವ ನಿಶ್ಚಯದೊಡನೆ ಊರಿಗೆ ಹಿಂದಿರುಗುತ್ತಾರೆ.

ಈ ಮೊದಲೇ ಹೇಳಿದ ಹಾಗೆ 'ದೇಸೀ ಸಂಸ್ಕೃತಿ' ಎಂದರೆ ಅದರಲ್ಲಿ ವಿವಿಧ ಸಮುದಾಯಗಳಲ್ಲಿನ ಸಂಪ್ರದಾಯ ಆಚರಣೆಗಳು, ನಂಬಿಕೆ - ನಡವಳಿಕೆಗಳು ಮಾನವೀಯ ಸಂಬಂಧಗಳು, ಮೌಲ್ಯಗಳು, ಬದುಕಿನ ಆದರ್ಶಗಳು, ಪರಂಪರೆ ಆಧುನಿಕತೆಗಳೊಳಗಿನ ಸಂಘರ್ಷಗಳು ಇತ್ಯಾದಿ ಅಂಶಗಳು ದೇಸೀ ಸಂಸ್ಕೃತಿಯಲ್ಲಿ ಬರುತ್ತವೆ.

ವಿಶ್ಲೇಷಣೆಗೆ ಎತ್ತಿಕೊಳ್ಳಲಾಗಿದ್ದ 'ಘಟಶ್ರಾದ್ಧ' ಹಾಗೂ 'ಫಣಿಯಮ್ಮ' ಚಿತ್ರದಲ್ಲಿ ಬ್ರಾಹ್ಮಣ ಸಮಾಜದ ಆಚರಣೆ ನಂಬಿಕೆಗಳು ಮೂಡಿ ಬಂದಿರುವುದನ್ನು ಕಾಣಬಹುದು. 'ಸಂಸ್ಕಾರ' ಚಿತ್ರದಲ್ಲಿಯೂ ಬ್ರಾಹ್ಮಣ ಸಮಾಜದಲ್ಲಿರು ಅಗ್ರಹಾರದ ಚಿತ್ರಣವನ್ನು ಹೆಚ್ಚಾಗಿ ಕಾಣಬಹುದಾಗಿದೆ. ಅಷ್ಟೇ ಅಲ್ಲದೆ ಸಂಪ್ರದಾಯ ಹಾಗೂ ಮಾನವ ಪ್ರವೃತ್ತಿಗಳ ನಡುವಿನ ಘರ್ಷಣೆಯೂ ಇದೆ.

ಸಿಂಗಾರೆವ್ವ ಟಿ . ಎಸ್. ನಾಗಾಭರಣ ನಿರ್ದೇಶನದ ಈ ಚಿತ್ರ ಚಂದ್ರಶೇಖರ ಕಂಬಾರರ 'ಸಿಂದಾರೆವ್ವ ಮತ್ತು ಅರಮನೆ' ಕಾದಂಬರಿಯನ್ನು ಆಧರಿಸಿದ್ದು. ಇದು ಒಂದು ಹೆಣ್ಣಿನ ಅರಮನೆಯ ಕಥೆ ಮಾತ್ರವಾಗದೆ. ಹಳೆ ಮೌಲ್ಯಗಳ ಅವನತಿ ಹೊಸದರ ಉದಯದ ಸಂಕೇತವೂ ಆಗಿದೆ.

ನಂದಗಾವದ ಗೌಡ ತನ್ನ ಚೆಲುವೆ ಮಗಳು ಸಿಂಗಾರವ್ವನನ್ನು ಹಣದಾಸೆಗೆ ಮೊದಲು ಹೆಣದ ಜೊತೆ ಮದುವೆ ಮಾಡುತ್ತಾನೆ. ನಂತರ ಸರಗಂ ದೇಸಾಯಿಯಂಥ ಜೀವಂತ ಹೆಣಕ್ಕೆ ಕಟ್ಟುತ್ತಾನೆ. ಹೆಣ್ಣಿನ ತೊಡೆ ಕಂಡು ಬೇಹೋಶ್ ಆಗುವ ದೇಸಾಯಿ ಹೆಂಡತಿಯ ಆಸೆ, ಆಕಾಂಕ್ಷೆಗೆ ಸ್ಪಂದಿಸಲಾರ, ಈ ಕೀಳಿರಿಮೆ, ಆತ್ಮ ಮರುಕದಲ್ಲಿ ಆವನು ಸಿಂಗಾರವ್ವನಿಂದ ದೂರ ಉಳಿಯುತ್ತಾನೆ. ಹೆತ್ತವನ ಹಣದಾಸೆ, ತಾಳಿ ಕಟ್ಟಿದವನ ವಿಕೃತಿ, ಬರಿದಾದ ಮಡಿಲು ಸಿಂಗಾರವ್ವನನ್ನು ಕಂಗೆಡಿಸುತ್ತದೆ. ಸಾಲದ್ದಕ್ಕೆ ಗೌಡನ ಮೇಲಿನ ದ್ವೇಷ, ಹೊಲೆಯ ಮರ್ಯಾ ಸಿಂಗಾರವ್ವನ ಮೇಲೆ ಅಕ್ರಮಣ ಮಾಡುತ್ತಾನೆ. ಈ ಎಲ್ಲ ಬವಣೆಗಳಲ್ಲಿ ಬೆಂದು ಬೇಸತ್ತ ಸಿಂಗಾರವ್ವ ಗಂಡನ ಮೇಲಿನ ತಿರಸ್ಕಾರ, ಹತಾಶೆ, ತಂದೆಯ ಮೇಲಿನ ಹಟದಲ್ಲಿ ಮರ್ಯಾನನ್ನು ಕೂಡಿ ಗರ್ಭಿಣಿಯಾಗುತ್ತಾಳೆ. ಇದೇ ಕಾರಣಕ್ಕೆ ದೇಸಾಯಿ ಆತ್ಮಹತ್ಯೆ ಮಾಡಿಕೊಂಡಾಗ, ತಪ್ಪು ತನ್ನ ಮೇಲೆ ಹಾಕಿಕೊಂಡು ಜೈಲು ಸೇರಿದ ಸಿಂಗಾರವ್ವ ತನ್ನ ತಪ್ಪಿಗೆ ಪ್ರಾಯಶ್ಚಿತ್ತ ಎನ್ನುವಂತೆ ಮಗು ಹುಟ್ಟಿದೊಡನೆ ಸಾಯುತ್ತಾಳೆ.

ಸಿರಿಯ ನಡುವೆಯೇ ಹುಟ್ಟಿ, ಚೆಲುವಿನ ಖಣಿಯಾಗಿಯೂ, ಬದುಕಿನ ಎಲ್ಲ ಸುಖಕ್ಕೆ ಎರನಾಗಿ ಸಿಂಗಾರವ್ವ ಎದುರಿಸುವ ಬವಣೆಗಳು ಒಂದೆರಡಲ್ಲ. ಮಕ್ಕಳಾಸೆಗೆ ಕದ್ದು ಮಾಡಿಸುವ ಪೂಜೆಯಲ್ಲಿ ಜಂಗಮನ ಅನಿರೀಕ್ಷಿತ ಸಾವು, ಅದನ್ನು ಮುಚ್ಚಲು ಹೋದಾಗ ಮರ್ಯಾನ ಆಕ್ರಮಣ, ಸೀಗೆ ಮೆಳೆಯ ಪ್ರಸಂಗವಂತೂ ಅವಳನ್ನು ದಿಕ್ಕುಗೆಡಿಸುತ್ತದೆ. ಊರವರ 'ಬಂಜೆ' ಎಂಬ ನಿಂದೆಗೆ ಉತ್ತರವಾಗಿ ಗಂಡನ ವಿಕೃತಿಗೆ ಪ್ರತಿಕ್ರಿಯೆಯಾಗಿ ಮರ್ಯಾನಿಂದ ಬಸುರಾದರೂ ಅವಳನ್ನು ಪಾಪಪ್ರಜ್ಞೆ ಕಾಡುತ್ತದೆ. ತನ್ನದು ತಪ್ಪಲ್ಲ ಎಂದು ಸಾಧಿಸಲು ಅವಳು ಕನಸು ಮನಸಿನಲ್ಲೂ ಹೆಣಗುತ್ತಾಳೆ. ತಾನು ಹಾದು ಬಂದ ಅಗ್ನಿದಿವ್ಯದಲ್ಲಿ ಅವಳು ಈ ದ್ವಂದ್ವವನ್ನು ಗೆದ್ದುಕೊಂಡು ಗಟ್ಟಿಯಾಗುತ್ತಾಳೆ.

ಸಿಂಗಾರೆವ್ವ ಉತ್ತರ ಕರ್ನಾಟಕ ಭಾಷೆಯಲ್ಲಿ ಮೂಡಿ ಬಂದಿರುವ ಒಂದು ಉತ್ತಮ ಚಿತ್ರ. ಈ ಚಿತ್ರದಲ್ಲಿ ಪ್ರತಿಯೊಂದು ಸನ್ನಿವೇಶದಲ್ಲಿ ದೇಸೀ ಸಂಸ್ಕೃತಿಯನ್ನು ಕಾಣಬಹುದು. ಮಗಳಿಗೆ ಮದುವೆ ಮಾಡಲು ಪಕ್ಕದ ಊರಿಗೆ ಹೋಗುವಾಗ ಎತ್ತಿನ ಬಂಡಿಯನ್ನು ಬಳಸಿರುವುದು. ಅಲ್ಲಿನ ಹಾಡಿನ ದೃಶ್ಯ ಇದು ದೇಸೀ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಚಿತ್ರದಲ್ಲಿ ಬಳಸಿರುವ ಉಡುಪುಗಳು ಇಳಕಲ್, ಸೀರೆ, ಪೇಟದ ಬಳಕೆ ಇತ್ಯಾದಿಗಳು ಬಳಸಿರುವುದನ್ನು ಕಾಣಬಹುದು. ಸಿಂಗಾರೆವ್ವ ಮಕ್ಕಳಾಸೆಗೆ ಕದ್ದು ಪೂಜೆ ಮಾಡಿಸುವುದು ಅವರ ನಂಬಿಕೆಯನ್ನು ಕಾಣಬಹುದು. ಸೀಗೆ ಮಳೆಯ ಪ್ರಸಂಗವು ಅಲ್ಲಿನ ಜನ ನಂಬಿರುವ ದೈವವಾಗಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ 'ಸಿಂಗಾರೆವ್ವ' ಚಿತ್ರವು ದೇಸೀ ಸಂಸ್ಕೃತಿಯಲ್ಲಿ ಮೂಡಿ ಬಂದಿರುವ ಒಂದು ಉತ್ತಮ ಚಿತ್ರವೆಂದು ಹೇಳಬಹುದು.

ಕಾನೂರು ಹೆಗ್ಗಡತಿ ಕುವೆಂಪು ಅವರ ಮಹತ್ವದ ಕಾದಂಬರಿ. ಮಲೆನಾಡಿ ಒಕ್ಕಲಿಗ ಕುಟುಂಬವೊಂದರ ಒಳಗೆ ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯವನ್ನು ಚಿತ್ರಿಸಿರುವುದು ಇದರ ಮುಖ್ಯವಸ್ತು. ಇಲ್ಲಿಯ ಪುರುಷ ಪ್ರಧಾನ ವ್ಯವಸ್ಥೆ ಹೆಣ್ಣು ಹೆಗ್ಗಡಿತಿಯಾದರೂ ಹಿಂಸೆಯಿದೆ. ತನಗಿಂತ ಬಹಳಷ್ಟು ಹಿರಿಯನಾದ ಚಂದ್ರಯ್ಯ ಗೌಡರ ಎರಡನೇ ಹೆಂಡತಿಯಾಗಿ ಬರುವ ಸುಬ್ಬಮ್ಮ. ಮಕ್ಕಳಾಗಲಿಲ್ಲವೆಂಬ ಕಾರಣಕ್ಕೆ ಪಡುವ ಕಷ್ಟ ಅಪಾರ. ಅದರಂತೆ ಗಂಡನ ಪ್ರೀತಿಯ

ಕೊರತೆಯೊಂದಿಗೆ ಪಡುವ ಮಾನಸಿಕ, ದೈಹಿಕಹಿಂಸೆ, ಈ ಚಲನ ಚಿತ್ರದ ಪ್ರಧಾನ ವಸ್ತು. ಹೆಗ್ಗಡತಿ ಸುಬ್ಬಮ್ಮ ಅನಕ್ಷರಸ್ಥೆ ಬಡ ಕುಟುಂಬದವಳು ಮತ್ತು ಇಪ್ಪತ್ತನೇ ಶತಮಾನದ ಪೂರ್ವಾರ್ಧದವಳು. ಸುಬ್ಬಮ್ಮ ಮದುವೆಯಾಗವುದೇ ವಯಸ್ಸಾದವನನ್ನು ಅದೂ ಆಕೆಯ ಯಾವ ಒಪ್ಪಿಗೆಯನ್ನು ಪಡೆಯದೇ ಆದ ಮದುವೆ. ಅದು ಆ ಕಾಲದ ಸಂಪ್ರದಾಯವೇ ಆಗಿತ್ತು. ಅದರ ಬಗ್ಗೆ ಸುಬ್ಬಮ್ಮನಿಗೂ ಬೇಸರವಿಲ್ಲ. ಶ್ರೀಮಂತರ ಮನೆಗೆ ಸೇರುವ ಉತ್ಸಾಹವೇ ಆಕೆಗಿದೆ. ಆದರೆ ಬಂದ ನಂತರವೇ ಇಲ್ಲಿಯ ಪರಿಸ್ಥಿತಿ ಅರಿವಾಗುವುದು. ಮನೆಗೆ ಹಿರಿಯವಳಾದ ಗಂಡನ ಅತ್ತಿಗೆ, ಆಕೆಯ ಮಕ್ಕಳು, ತನ್ನ ಗಂಡನ ಹಿರಿಯ ಹೆಂಡತಿಯ ಮಕ್ಕಳು, ಮನೆ ತುಂಬಾ ಕೆಲಸದವರು, ಇವುಗಳ ಮಧ್ಯೆ ಗಂಡ-ಹೆಂಡತಿಯ ಭೇಟಿ ರಾತ್ರಿಯೇ ಆಗುವುದು. ಯಾವೊಂದು ನಿರ್ಧಾರವನ್ನು ಗಂಡನ ಅನುಮತಿಯಿಲ್ಲದೇ ತೆಗುಕೊಳ್ಳುವಂತಿಲ್ಲ. ಅಷ್ಟಕ್ಕೂ ಆಕೆಗೆ ನೋಟಿನ ಗುರುತೇ ಇಲ್ಲ. ಒಟ್ಟಿನಲ್ಲಿ ಆಕೆ ಇರುವುದು ಬಂಗಾರದ ಪಂಜರದಲ್ಲಿ. ಕಾನೂರು ಹೆಗ್ಗಡತಿಯ ಸುಬ್ಬಮ್ಮನಿಗೆ ಒಂದು ವ್ಯಕ್ತಿತ್ವವಿದೆ ಎನ್ನುವ ಯಾವ ಕಲ್ಪನೆಯನ್ನೂ ಚಂದ್ರಯ್ಯಗೌಡ ಹೊಂದಿರುವುದಿಲ್ಲ. ಅವಳೂ ಆ ಬಗ್ಗೆ ತಲೆಕೆಡಿಸಿ ಕೊಳ್ಳುವುದಿಲ್ಲ. ಆದರೆ ಆಕೆಗೆ ಮಕ್ಕಲಾಗಲಿಲ್ಲ ಎನ್ನುವ ಕಾರಣಕ್ಕೆ ಅವಮಾನಕ್ಕೀಡಾಗುತ್ತಾಳೆ. ಅಲ್ಲದೇ ಹೂವಯ್ಯನೊಂದಿಗೆ ಸಂಬಂಧ ಹೊಂದಿರುವ ಆರೋಪಕ್ಕೆ ಗುರಿಯಾಗುತ್ತಾಳೆ. ಕ್ಷುಲ್ಲಕ ಕಾರಣಕ್ಕೆ ಗಂಡ ಕೆಲಸದವರ ಎದುರಿನಲ್ಲೇ ಕತ್ತಿ ಹಿಡಿದು ಅಟ್ಟಿಸಿಕೊಂಡು ಬರುತ್ತಾನೆ. ಒದೆಯುತ್ತಾನೆ ಹೊಡೆಯುತ್ತಾನೆ. ಆದರೆ ಅವಳೆಂದೂ ಪ್ರತಿಭಟಿಸುವುದಿಲ್ಲ. ಕೊನೆಗೆ ಗಂಡ ಮತ್ತೊಬ್ಬ ಹೆಂಗಸನ್ನು ತಂದಿಟ್ಟು ಕೊಂಡಾಗ ಅಪ್ರತಿಭಳಾಗುತ್ತಾಳೆ. ಆದರೂ ಗಂಡನನ್ನು ಎದುರಿಸುವ ಶಕ್ತಿ ಇವಳಲ್ಲಿರುವುದಿಲ್ಲ. ಕಾರಣ ತವರಿನಲ್ಲಿ ಗಟ್ಟಿಯಾದ ನೆಲೆಯೂ ಇಲ್ಲ. ಬದುಕಿಗೆ ಬೇರೆ ದಾರಿಯೇ ಇಲ್ಲದೆ. ಹಿಂಸೆ ಅನುಭವಿಸುತ್ತಾಳೆ. ಆ ಜಗಳವೇ ಒಂದು ಕಾರಣವಾಗಿ, ಗಂಡನ ಹೆದರಿಕೆಯಿಂದ ಅರ್ಧ ರಾತ್ರಿಯಲ್ಲಿ ಮನೆ ಬಿಟ್ಟು ಓಡಿ ತವರು ಸೇರುತ್ತಾಳೆ.

ಗಂಡನ ಅನಾರೋಗ್ಯದ ಸಮಯದಲ್ಲಿ ಅವನ ಸೇವೆ ಮಾಡಲು ಸುಬ್ಬಮ್ಮ ಹಿಂದಿರುತ್ತಾಳೆ. ಆ ಹೊತ್ತಿಗೆ ಚಂದ್ರಯ್ಯಗೌಡನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಆದರೆ ಅದರಿಂದ ಈಗ ಸುಬ್ಬಮ್ಮನಿಗೆ ಯಾವುದೇ ಪ್ರಯೋಜನವಿಲ್ಲ.

ಅನಾರೋಗ್ಯದಿಂದ ಗಂಡ ಸತ್ತ ನಂತರ ಸುಬ್ಬಮ್ಮನಿಗೆ ಸ್ವಲ್ಪ ಸ್ವಾತಂತ್ರ ಸಿಕ್ಕಂತಾದರೂ ಸಾಮಾಜಿಕ ಗೌರವ ಕಡಿಮೆಯಾಗುತ್ತದೆ. ಈ ಸಂದರ್ಭದಲ್ಲಿ ಉಂಟಾದ ಒಂಟಿತನ, ಅವಳಿಗಿರುವ ಯೌವನ, ಜಾಗೃತವಾದ ಅತೃಪ್ತ ಕಾಮ ಎಲ್ಲವನ್ನೂ ಉಪಯೋಗಿಸಿಕೊಂಡ ಮನೆಯ ಕೆಲಸದ ಸೇರೆಗಾರ, ಸುಬ್ಬಮ್ಮನನ್ನು ಮತ್ತೊಂದು ರೀತಿಯಲ್ಲಿ ಹಿಂಸಿಸುತ್ತಾನೆ. ಮೊದಲು ನಿರಾಕರಿಸಿದ ಸುಬ್ಬಮ್ಮ ಕಡೆಗೆ ಸೋಲುತ್ತಾಳೆ. ಗರ್ಭಿಣಿಯೂ ಆಗಿ ಕುಟುಂಬದ ಮಾರ್ಯಾದೆ ಕಾಪಾಡಲು ಅವೈಜ್ಞಾನಿಕ ರೀತಿಯಲ್ಲಿ ಗರ್ಭಾಪಾತಕ್ಕೆ ಪ್ರಯತ್ನಿಸಿ ಸಾವನ್ನಪ್ಪುತ್ತಾಳೆ.

ದ್ವೀಪ ನಾ.ಡಿಸೋಜಾ ಅವರ ಅದೇ ಹೆಸರಿನ ಎಂಬ ಕಿರುಕಾದಂಬರಿಯನ್ನಾಧರಿಸಿದ ಪ್ರಾದೇಶಿಕ ಚಿತ್ರ ಸೌಂದರ್ಯ ನಿರ್ದೇಶಿಸಿದ 2000 ತೆರೆಕಂಡಿತು. ಲಿಂಗನ ಮಕ್ಕಿ ಅಣೆಕಟ್ಟಿನಿಂದ ಮುಳುಗಡೆಯಾದ ಉತ್ತರ ಕನ್ನಡ ಜಿಲ್ಲೆಯ ಸಂತ್ರಸ್ತ ಗ್ರಾಮವೊಂದರ ಬವಣೆಯ ಕಥೆಯಿದು. ಅಣೆಕಟ್ಟೆನಂತರ ಆಧುನಿಕ ಅಭಿವೃದ್ಧಿ ಯೋಜನೆಗಳಿಂದ ಜನರ ಪಾರಂಪರಿಕ ಜೀವನದ ಮೇಲಾಗುತ್ತಿರುವ ಪರಿಣಾಮ, ಪರ್ಯಾಯವಾಗಿ ಸರಕಾರವು ಕಲ್ಪಿಸಿಕೊಡುತ್ತಿರುವ ಪುನರ್ವಸತಿ ಯೋಜನೆಯು ಅನುಷ್ಠಾನಗೊಳ್ಳುವಲ್ಲಿ ಆಗುತ್ತಿರುವ ಲೋಪ-ದೋಷಗಳು, ಇತ್ಯಾದಿ ಅಂಶಗಳನ್ನು ಮುಖ್ಯ ವಸ್ತುವಾಗಿರಿಸಿ ಕೊಂಡು ಕಾದಂಬರಿ ರಚನೆಯಾಗಿದೆ. ಈ ಕಥಾ ಹಂದರದೊಳಗೆ ಪ್ರೀತಿಸಿದ ಗಂಡು-ಹೆಣ್ಣುಗಳ ಆಂತರಿಕ ತುಮುಲಗಳು, ದುರಂತದಲ್ಲಿ ಪರ್ಯಾವಸಾನಗೊಳ್ಳುವ ದಾಂಪತ್ಯ ದಾಂಪತ್ಯೇತರ ಪ್ರೀತಿ ಮೊದಲಾದ ಸಂಗತಿಗಳೂ ಸೇರಿಕೊಂಡಿವೆ. ಒಟ್ಟಿನಲ್ಲಿ ಕಾದಂಬರಿಯು ಮುಳುಗಡೆ ಸಮಸ್ಯೆಯನ್ನು ಚಿತ್ರಸುವ ನೆಪದಲ್ಲಿ ಮನುಷ್ಯ ಸಂಬಂಧಗಳ ಸೂಕ್ಷ್ಮಗಳನ್ನು ಮನೋಜ್ಞವಾಗಿ ಕಟ್ಟಿಕೊಡುತ್ತದೆ.

ಆದರೆ ಸಿನಿಮಾದಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ. ಮೂಲಕಥೆ ಕಿರು ಕಾದಂಬರಿಯಾಗಿರುವುದರಿಂದ ಅಲ್ಲಿ ಸಾಂಸ್ಕೃತಿಕ ವಿವರಗಳಿಗೆ ಅಷ್ಟೊಂದು ಅವಕಾಶಸಿಕ್ಕಿಲ್ಲ ಸಿನಿಮಾದಂತಹ ದೃಶ್ಯ ಮಾಧ್ಯಮದಲ್ಲಿ ಸಂಸ್ಕೃತಿ ಚಿತ್ರಣಕ್ಕೆ ಸಾಕಷ್ಟು ಅವಕಾಶಗಳಿವೆ. ಅದರಲ್ಲೂ 'ದ್ವೀಪ' ವಂತೂ ಅಪ್ಪಟ ದೇಸೀ ಸಂಸ್ಕೃತಿ ಎನ್ನಬಹುದಾದ ಸಾಂಸ್ಕೃತಿಕ ಪರಿಸರದಲ್ಲಿ

ಚಿತ್ರೀಕರಣಗೊಂಡ ಸಿನಿಮಾ ವಾಸ್ತು (ಮನೆ) ಉಡುಗೆ-ತೊಡುಗೆ, ವೃತ್ತಿ, ಔಷದೋಪಚಾರ, ಉಟೋಪಚಾರ ಎಲ್ಲವುಗಳಲ್ಲೂ ಕರಾವಳಿ ಹಾಗೂ ಮಲೆನಾಡುಗಳ ದೇಸೀತನ ಎದ್ದುಕಾಣುತ್ತದೆ. ಭಾಷೆಯ ಬಳಕೆಯಲ್ಲೂ ಬಹುಮಟ್ಟಿಗೆ ದೇಸೀತನವನ್ನು ಸಾಧಿಸಲಾಗಿದೆ. ಮೂಲ ಕೃತಿಯಲ್ಲಿ ಕೃಷ್ಣಯ್ಯ - ನಾಗವೇಣಿಯರ ಮಾನಸಿಕ ತೊಳಲಾಟಕ್ಕೆ ಹೆಚ್ಚಿನ ಮಹತ್ವಕೊಟ್ಟರೆ ಸಿನಿಮಾದಲ್ಲಿ ಅದು ಸಾಂದರ್ಭಿಕ ಸನ್ನಿವೇಶವಾಗಿಯಷ್ಟೇ ಬಂದಿದೆ. ಕಾದಂಬರಿಯಲ್ಲಿಲ್ಲ ಕೆಲವೊಂದು ಸನ್ನಿವೇಶಗಳನ್ನು ಸಿನಿಮಾದಲ್ಲಿ ಅಳವಡಿಸಿಕೊಳ್ಳಲಾಗಿದೆ. ಅದರಿಂದಾಗಿ ದೇಸೀ ಸಂಸ್ಕೃತಿಯ ಅಭಿವ್ಯಕ್ತಿಗೆ ಹೆಚ್ಚಿನ ಅವಕಾಶ ಸಿಕ್ಕಂತಾಗಿದೆ. ಕೃಷ್ಣಯ್ಯ ಕಾಯಿಲೆಗೆ ತುತ್ತಾಗುವುದು. ನಾಗವೇಣಿ ಆತನಿಗೆ ಔಷದೋಪಚಾರ ಮೂಡಿಸುವುದು. ಇವೆಲ್ಲಾ ಸಿನಿಮಾದ ದೃಶ್ಯ ಸಂಯೋಜನೆಗಳು ಅದೇ ರೀತಿ ಮೂಲಕೃತಿಯಲ್ಲಿ ಗಣಪಯ್ಯನ ತಂದೆಗೆ (ಮುದುಕನಿಗೆ) ಅಷ್ಟೊಂದು ಪ್ರಾಧಾನ್ಯವಿಲ್ಲದಿದ್ದರೂ ಸಿನಿಮಾದಲ್ಲಿ ಪಾತ್ರಕ್ಕೆ ವಿಶೇಷ ಮಹತ್ವ ಪ್ರಾಪ್ತವಾಗಿದೆ. ಕಾದಂಬರಿಯ (ಮಧ್ಯದಲ್ಲೇ) ಆತ ಸಾವನ್ನಪ್ಪುತ್ತಾನೆ. ಆ ಸಾವು ಕೃತಿಯಲ್ಲಿ ಅಷ್ಟೊಂದು ಮಹತ್ವ ಪಡೆದು ಕೊಳ್ಳುವುದಿಲ್ಲ ಆದರೆ ಸಿನಿಮಾದಲ್ಲಿ ಮುದುಕನ ಸಾವಿಗೆ ವಿಶೇಷ ಮಹತ್ವವಿದೆ. ಇಲ್ಲಿ ಆತ ಸಾಂಸ್ಕೃತಿಕ ಸಂಘರ್ಷದ ಕೇಂದ್ರ ಬಂದುವಾಗುತ್ತಾನೆ. ಈ ಅರ್ಥದಲ್ಲಿ ಸಿನಿಮಾ ಮೂಲ ಕೃತಿಗಿಂತಲೂ ಹೆಚ್ಚು ಪರಿಣಾಮಕಾರಿಯೆನಿಸುತ್ತದೆ.

ಆದರೆ ಮೇಲ್ಜಾತಿಯವನಾಗಿ ಕಾಣುವ ಮುದುಕ 'ಭೂತ'ದ ಕೋಲ ಕಟ್ಟುವ ಸಿನಿಮಾದ ಕಲ್ಪನೆ ಸಾಂಸ್ಕೃತಿಕವಾಗಿ ನೋಡಿದರೆ ವಿರೋದಾಭಾಸವೆನಿಸುತ್ತದೆ. ಕಾದಂಬರಿಯಲ್ಲಿ ಈ ಚಿತ್ರಣವಿಲ್ಲ ಪ್ರಸ್ತುತ ಕಲ್ಪನೆಯಿಂದ ಪರಂಪರೆ ಮತ್ತು ಆಧುನಿಕತೆಗಳ ನಡವಿನ ಸಾಂಸ್ಕೃತಿಕ ಸಂಘರ್ಷವೇನೋ ಪ್ರೇಕ್ಷಕರನ್ನು ತಟ್ಟುತ್ತದೆ. ಆದರೆ ಪ್ರಾದೇಶಿಕ ಸಂಸ್ಕೃತಿಯ ವಾಸ್ತವಿಕತೆಗೆ ಕುಂದುಂಟಾಗುತ್ತದೆ. ಇದು ಮೂಲತಃ ಉತ್ತರ ಕನ್ನಡ ಜಿಲ್ಲೆಗೆ ಸಂಬಂಧಿಸಿದ ಘಟನಾವಳಿಯಾದರೂ ಸಿನಿಮಾದ ದೃಶ್ಯ ಸಂಯೋಜನೆಯಲ್ಲಿ ಉತ್ತರ ಕನ್ನಡ, ದಕ್ಷಿಣಕನ್ನಡ ಮತ್ತು ಮಲೆನಾಡು ಪರಿಸರಗಳ ಮಿಶ್ರಣವಿದ್ದಂತಿದೆ.

೫.೪ ಕಾವ್ಯ ಅಥವಾ ಕವನಗಳು ಮತ್ತು ಚಲನಚಿತ್ರ

ಸಾಹಿತ್ಯ ಚರಿತ್ರೆಯಲ್ಲಿ ಕಾವ್ಯಕ್ಕೆ ಮೊದಲ ಆದ್ಯತೆ, ಗೇಯ ಗುಣವನ್ನು ಹೊಂದಿರುವ ಕಾವ್ಯ ಮಾನವನ ಸಹಜ ಅಭಿವ್ಯಕ್ತಿಯ ಮಾಧ್ಯಮವೂ ಆಗಿದೆ. ಸಾಹಿತ್ಯದ ಮೊದಲ ಪ್ರಕಾರವಾದ ಕಾವ್ಯ ಕಾಲಕ್ಕಗುಣವಾಗಿ ತನ್ನ ಛಂದಸ್ಸನ್ನು ರೀತಿಯನ್ನು ಬದಲಿಸಿಕೊಂಡು ಬಂದಿದೆ. ಶಿಷ್ಟ ಕಾವ್ಯಗಳು ಸಿನಿಮಾವಾದುದು ಕಡಿಮೆ. ಆದರೆ ಮಧ್ಯಕಾಲೀನ ಸಂದರ್ಭದ ವಚನ, ಕೀರ್ತನೆ, ತತ್ವಪದಗಳು ಹಾಗೂ ಹೊಸಗನ್ನಡದ ಅನೇಕ ಕವಿತೆಗಳು ಸಿನಿಮಾ ಹಾಡುಗಳಾಗಿ ಬಳಕೆಯಾದುದಿದೆ. ಭಕ್ತ, ಕನಕದಾಸ, ಸಂತಶಿಶುನಾಳ ಶರೀಫ ಮುಂತಾದ ಸಿನಿಮಾಗಳಲ್ಲಿ ಆಯಾ ಕವಿಗಳ ಹಾಡುಗಳು ಹೇರಳವಾಗಿ ಬಳಕೆಯಾಗಿವೆ.

ರಂಗಭೂಮಿಯ ಪ್ರಭಾವದಲ್ಲಿ ಸಿದ್ಧವಾದ ಸಿನಿಮಾಗಳಲ್ಲಿ ರಂಗಭೂಮಿಯಂತೆಯೇ ಹಾಡುಗಳನ್ನು ಬಳಸಲಾಯಿತು. ಚಲನಚಿತ್ರವು ಕನ್ನಡ ನೆಲಕ್ಕೆ ಕಾಲಿಡುವಾಗಲೇ ಭಾವಗೀತೆಯ ಪ್ರಕಾರವೂ ಕಾಲಿಟ್ಟದ್ದೊಂದು ಆಕಸ್ಮಿಕವೇ. ಪ್ರಸಿದ್ಧ ಕವಿಗಳ ಕವನಗಳನ್ನು ಚಲನ ಚಿತ್ರಗಳ ಸನ್ನಿವೇಶಕ್ಕೆ ಅಳವಡಿಸಿಕೊಳ್ಳುವ ಮೂಲಕ ಜನಪ್ರಿಯ ಗೊಳಿಸಲಾಯಿತು. ಹೀಗೆ ಬಳಸಿಕೊಂಡ ಜನಪ್ರಿಯ ಗೀತೆಗಳಲ್ಲಿ ಕುವೆಂಪು ಅವರ ದೋಣಿ ಸಾಗಲಿ ಮುಂದೆ ಹೋಗಲಿ, ಜೀವನಾ ಸಂಜೀವನಾ, ಯಾವ ಜನ್ಮದ ಮೈತ್ರಿ, ನಾನೇ ವೀಣೆ ನೀನೆ ತಂತಿ, ನಡೆ ಮುಂದೆ ನಡೆಮುಂದೆ, ತೆರೆದಿದೆ ಮನೆ ಓ ಬಾ ಅತಿಥಿ, ಬೇಂದ್ರೆಯವರ ಮೂಡಲ ಮನೆಯ, ಇಳಿದು ಬಾ ತಾಯಿ, ಉತ್ತರ ಧ್ರುವದಿಂ ದಕ್ಷಿಣಧ್ರುವಕೂ, ನೀಹಿಂಗ ನೋಡಬ್ಯಾಡ, ಯುಗ ಯುಗಾದಿ ಕಳೆದರೂ, ನನ್ನ ಮನೆ ಇದು ಹಂಗಿನ ಅರಮನೆಯಲ್ಲ. ಕೆ. ಎಸ್. ನರಸಿಂಹ ಸ್ವಾಮಿಯವರ ಇವಳು ಯಾರು ಬಲ್ಲೆಯೇನು, ಅಂತಿಂಥಹೆಣ್ಣು ನೀನಲ್ಲ, ನನ್ನವಳು ನನ್ನದೆಯ ಹೊನ್ನಾಡನಾವಾಳುವವಳು, ಅಡಿಗರ ನೆನೆ ನೆನೆ ಆ ದಿನವ, ಯಾವ ಮೋಹನ ಮುರಳಿ, ಬಿ. ಆರ್. ಲಕ್ಷ್ಮಣ್‌ರಾವ್‌ರ ಬಾರೆ ರಾಜಕುಮಾರಿ, ರಾಜರತ್ನಂರವರ ಹೇಳ್ಕೊಳೋಕೊಂದೂರು, ಸಿದ್ದಲಿಂಗಯ್ಯಯನವರ ಆ ಬೆಟ್ಟದಲ್ಲಿ ಬೆಳದಿಂಗಳಲ್ಲಿ. ಜಿ. ಎಸ್. ಶಿವರುದ್ರಪ್ಪನವರ ವೇದಾಂತಿ ಹೇಳಿದನು, ಹಾಡು ಹಳೆಯದಾದರೇನು, ಕೈಯಾರೆ ಕಿಯಣ್ಣರೈ ಯವರ ಹಿಂದೂಸ್ಥಾನವು ಎಂದೂ ಮರೆಯದ,

ಎಚ್. ಎಸ್. ವೆಂಕಟೇಶ್ ಮೂರ್ತಿಯವರ ಚಿನ್ನಾರಿ ಮುತ್ತ ಚಿತ್ರದ ಹಾಡುಗಳು ಕಂಬಾರರ - ಕಾಡು ಕುದುರೆ ಓಡಿ ಬಂದಿತ್ತಾ, ಇವ ಯಾವ ಊರಿನ ಮಾವ, ಸಂಗೀತ ಸಂಗೀತ, ಲಂಕೇಶ್ವರ ಕೆಂಪಾದವೊ ಎಲ್ಲಕೆಂಪಾವೊ, ಎಲ್ಲಿದ್ದೆ ಇಲ್ಲಿ ತನಕ ಹೀಗೆ ಹಲವು ಗೀತೆಗಳನ್ನು ಬಳಸಿಕೊಳ್ಳಲಾಯಿತು.

ಕನ್ನಡದ ಪ್ರಖ್ಯಾತ ಕವನ ಸಂಕಲನವೊಂದನ್ನು ಸ್ವಾತಂತ್ರ್ಯ ಚಳುವಳಿಗೆ ಸಂಬಂಧಪಟ್ಟ ಕಥೆಯೊಂದಕ್ಕೆ ಸಂಯೋಜಿಸಿ ನಿರ್ಮಿಸಿದ ಸಿನಿಮಾ 'ಮೈಸೂರು ಮಲ್ಲಿಗೆ' ಇದು ಕೆ. ಎಸ್. ನರಸಿಂಹಸ್ವಾಮಿಯವರ ಅದೇ ಹೆಸರಿನ ಕವನ ಸಂಕಲನದ ಹಾಡುಗಳು ಅಥವಾ ಭಾವಗೀತೆಗಳ ಆಧಾರದಿಂದ ಹೆಣೆದ ಕತೆಯಾಗಿದೆ. 'ಕೋಟೆ' ಚಲನ ಚಿತ್ರವು ಕತೆಯನ್ನು ಹಾಡುಗಳಲ್ಲಿ ಹೇಳಿರುವಂಥದ್ದು. ಇದರಲ್ಲಿ ಸಂಭಾಷಣೆಯಿಲ್ಲ ಆದರೆ ಪರಿಣಾಮ ಮಾತ್ರ ತೀವ್ರವಾಗಿದೆ. ದೃಶ್ಯಕಟ್ಟಿ ಕೊಡುವ ಅನುಭವವನ್ನು ತೀವ್ರಗೊಳಿಸಲು ಹಾಡುಗಳನ್ನು ಬಳಸಿಕೊಳ್ಳಲಾಗಿದೆ.

ಸಿನಿಮಾ ಹಾಡುಗಳಾಗಿ ಬಳಕೆಗೊಂಡ ಇಂತಹ ಕಾವ್ಯ ಕವಿತೆಗಳು ಒಂದರ್ಥದಲ್ಲಿ ಕನ್ನಡದ ದೇಸೀ ಸಂಸ್ಕೃತಿಯ ಭಾಗಗಳೇ ಆಗಿವೆ. ಆದರೆ ನಾಟಕ, ಕಥೆ, ಕಾದಂಬರಿಗಳಂತೆ ದೇಸೀ ಸಂಸ್ಕೃತಿ ವಿನ್ಯಾಸವನ್ನು ಇಲ್ಲಿ ಗುರುತಿಸಲು ಸಾಧ್ಯವಿಲ್ಲ ಹಾಗಾಗಿ ಅಂತಹ ವಿನ್ಯಾಸಗಳುಳ್ಳ ಜನಪದ ಗೀತೆಗಳೇ ಇಲ್ಲಿ ಮುಖ್ಯವಾಗುತ್ತವೆ. ಹಾಗೆ ಸಿನಿಮಾಗಳಲ್ಲಿ ಬಳಕೆಗೊಂಡ ಅಂತಹ ಜನಪದ ಗೀತೆಗಳ ಬಗೆಗೆ ಪ್ರತ್ಯೇಕವಾಗಿ ಚರ್ಚಿಸಲಾಗಿದೆ.

ಹೀಗೆ ದೇಸೀ ಸಂಸ್ಕೃತಿ ಅಭಿವ್ಯಕ್ತಿಯ ಹಿನ್ನೆಲೆಯಲ್ಲಿ ಸಾಹಿತ್ಯ ಮತ್ತು ಸಿನಿಮಾ ಸಂಬಂಧವನ್ನು ವಿವರಿಸುತ್ತಾ ಹೋಗಬಹುದು. ವಿವಿಧ ಸಾಹಿತ್ಯ ಪ್ರಕಾರಗಳ - ಕೃತಿಗಳ ಆಧಾರದಿಂದ ಹುಟ್ಟಿಕೊಂಡ ಸಿನಿಮಾಗಳನ್ನು ಉದಾಹರಿಸುತ್ತಾ ಹೋಗಬಹುದು[೧]. ಹಾಗೆ ನೋಡಿದರೆ ಅದುವೇ ಒಂದು ಪ್ರತ್ಯೇಕ ಅಧ್ಯಯನವಾಗುವಷ್ಟು ವಿಷಯ ವ್ಯಾಪ್ತಿಯನ್ನು ಪಡೆದಿದೆ.[೨]

---

೧. ಕಥೆ, ಕಾದಂಬರಿಗಳನ್ನಾಧರಿಸಿದ ಇಂತಹ ಇತರ ಕೆಲವು ಚಿತ್ರಗಳ ಬಗೆಗೆ ೪ ಮತ್ತು ೬ನೇಯ ಅಧ್ಯಾಯಗಳಲ್ಲಿ ಪ್ರಸ್ತಾಪಿಸಲಾಗಿದೆ.

೨. ಇವುಗಳಲ್ಲಿ ಕನ್ನಡ ಕಾದಂಬರಿಗಳನ್ನಾಧರಿಸಿದ ಸಿನಿಮಾಗಳ ಬಗೆಗೆ ಈಗಾಗಲೇ ವಿಸ್ತೃತ ಅಧ್ಯಯನವೊಂದು ನಡೆದಿದೆ. ಮೊದಲ ಅಧ್ಯಾಯದಲ್ಲಿ ಅದರ ವಿವರಗಳಿವೆ.

ಆದುದರಿಂದ ಮಾದರಿಗಾಗಿ ಕೆಲವನ್ನೆಷ್ಟೇ ಇಲ್ಲಿ ಉಲ್ಲೇಖಿಸಲಾಗಿದೆ. ಇಲ್ಲೆಲ್ಲಾ ಮೂಲ ಸಾಹಿತ್ಯ ಕೃತಿಯನ್ನು ಸಿನಿಮಾವಾಗಿಸುವಾಗ ಮೂಲ ಪಠ್ಯದ ಬಗೆಗೆ ಇರಿಸಿಕೊಂಡಿರುವ ಬದ್ಧತೆಯ ಕುರಿತಾಗಲಿ, ಮಾಡಿಕೊಂಡಿರುವ ಮಾರ್ಪಾಟುಗಳ ಬಗೆಗಾಗಲಿ, ಸಿನಿಮಾ ಮಾಧ್ಯಮವು ಮೂಲ ಕೃತಿಯ ಅರ್ಥ ಆಶಯಗಳನ್ನು ವಿಸ್ತರಿಸಿದಬಗೆಗಾಗಲಿ, ಅವುಗಳನ್ನು ಪರಿಣಾಮಕಾರಿಯಾಗಿ ಸಂವನಹನಗೊಳಿಸಿವೆಯೇ? ಇಲ್ಲವೇ? ಎನ್ನುವುದರ ಬಗೆಗಾಗಲಿ ಹೆಚ್ಚಿನ ಚರ್ಚೆನಡೆಸಿಲ್ಲ. ಅದು ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶವೂ ಅಲ್ಲ. ಸಾಹಿತ್ಯ ಮತ್ತು ಸಿನಿಮಾದ ಸಂಬಂಧವನ್ನು ಹೇಳುತ್ತಾ, ನಮ್ಮ ಸಾಹಿತ್ಯ ಕೃತಿಗಳಲ್ಲಿರುವಂತೆ ಅವುಗಳನ್ನಾಧರಿಸಿದ ಸಿನಿಮಾಗಳಲ್ಲೂ 'ದೇಸೀ ಸಂಸ್ಕೃತಿ' ಹೇಗೆ ಬಿಂಬಿತವಾಗಿದೆಯೆಂಬುದನ್ನು ಕೆಲವೇ ಕೆಲವು ಉದಾಹರಣೆಗಳೊಂದಿಗೆ ವಿಶಧ ಪಡಿಸಲಾಗಿದೆ. ಚರ್ಚೆಯ ಸಂದರ್ಭದಲ್ಲಿ 'ದೇಸೀ ಸಾಹಿತ್ಯ' ವೆಂದೇ ಪರಿಗಣಿತವಾದ ಜನಪದ ಅಥವಾ ಮೌಖಿಕ ಸಾಹಿತ್ಯವನ್ನೂ ಶಿಷ್ಟ ಸಾಹಿತ್ಯವೆಂದು ಪರಿಗಣಿತವಾದ ಲಿಖಿತ ಸಾಹಿತ್ಯವನ್ನೂ ಪ್ರತ್ಯೇಕವಾಗಿ ಗಮನಿಸಲಾಗಿದೆ.

ಅಧ್ಯಾಯ-೬

ಕನ್ನಡ ಸಿನಿಮಾ ಮತ್ತು ದೇಸೀ ಸಮುದಾಯಗಳ ಸಂವೇದನೆ

ಅಭಿವ್ಯಕ್ತಿ ಮತ್ತು ಸಂವಹನ ದೃಷ್ಟಿಯಿಂದ ನಮ್ಮ ಸಿನಿಮಾಗಳು ಮಾಸ್ (Mass) ಮತ್ತು ಕ್ಲಾಸ್ (Class) ಎಂಬ ಎರಡು ತೀರಗಳಲ್ಲಿ ಸಾಗಿ ಬಂದಿವೆ. 'ಮಾಸ್' ಎಂದಾಗ ಫಾರ್ಮುಲಾ ಮುಖ್ಯವಾದರೆ 'ಕ್ಲಾಸ್' ಎಂದಾಗ ಸಿದ್ಧಾಂತ ಮುಖ್ಯವಾಗುತ್ತದೆ. ಮಾಸ್ ಉದ್ದೇಶವಾಗಿರುವ ಸಿನಿಮಾಗಳಿಗೆ 'ಸಮೂಹ'ವನ್ನು ತಲುಪುವ ತವಕವಾದರೆ 'ಕ್ಲಾಸ್' ಉದ್ದೇಶವಾಗಿರುವ ಸಿನಿಮಾಗಳಿಗೆ 'ನಿರ್ದಿಷ್ಟ ವರ್ಗ'ವನ್ನು ತಲುಪುವ ತುಡಿತ. ಈ ಎರಡೂ ಬಗೆಯ ಉದ್ದೇಶಗಳನ್ನು ಮೇಳೈಸಿಕೊಂಡು ನಿರ್ಮಾಣವಾಗಿರುವ ಸಿನಿಮಾಗಳು ಕಡಿಮೆಯೆಂದೇ ಹೇಳಬೇಕು. ಮೊದಲನೆಯದು ವಾಣಿಜ್ಯಾತ್ಮಕ (ವ್ಯಾಪಾರೀ) ಚಿತ್ರಗಳ ಸಾಲಿಗೆ ಸೇರಿದರೆ ಎರಡನೆಯದು ಕಲಾತ್ಮಕ ಚಿತ್ರಗಳಿಗೆ ಸಂಬಂಧಪಟ್ಟದ್ದಾಗಿದೆ. ಪ್ರಸ್ತುತ ದೇಸೀ ಸಮುದಾಯಗಳ ಸಂವೇದನೆ ಎಂಬುದನ್ನು ನಾವು 'ಕ್ಲಾಸ್' ಮಾದರಿಯ ಸಿನಿಮಾಗಳಲ್ಲಿ ಗುರುತಿಸಲು ಸಾಧ್ಯ. ಇಲ್ಲಿ ನಿರ್ದಿಷ್ಟ ವೃತ್ತಿ ಅಥವಾ ಜಾತಿ ಸಮುದಾಯಗಳ ಸಂವೇದನೆಗಳು ಮುಖ್ಯವಾಗುತ್ತವೆ.

ಒಂದರ್ಥದಲ್ಲಿ ಈ ಸಮುದಾಯಗಳ ಸಂವೇದನೆ ಎನ್ನುವುದು ಸಮಕಾಲೀನ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಯಿಂದ ಪ್ರೇರಿತವಾದ ಪರಿಕಲ್ಪನೆಯಾಗಿದೆ. ಹಾಗೆ ನೋಡಿದರೆ ನಮ್ಮ ಸಿನಿಮಾಗಳಲ್ಲಿ ಬಹು ಹಿಂದಿನಿಂದಲೇ ವಿವಿಧ ಸಮುದಾಯಗಳ ಸಂಸ್ಕೃತಿಗಳ ಭಾಗಶಃ ವಾಗಿಯಾದರೂ ಅಭಿವ್ಯಕ್ತಿಯಾಗಿರುವುದನ್ನು ನಾವು ಗುರುತಿಸಬಹುದಾಗಿದೆ. ಆದರೆ ಅವು ಇವತ್ತಿನ ಸಂವೇದನೆ ಎಂಬ ಪರಿಕಲ್ಪನೆಯಂತೆ ಪ್ರಬಲವಾದ ಉದ್ದೇಶವನ್ನಿಟ್ಟು ಕೊಂಡಿದ್ದ ಅಭಿವ್ಯಕ್ತಿಗಳಾಗಿರಲಿಲ್ಲ. ಉದಾಹರಣೆಗೆ ಡಾ. ರಾಜ್‌ಕುಮಾರ್ ಅಭಿನಯದ ಕೆಲವು ಚಿತ್ರಗಳನ್ನೇ ಗಮನಿಸಬಹುದು.

'ಕವಿರತ್ನ ಕಾಳಿದಾಸ' ಚಿತ್ರದಲ್ಲಿ ಕುರುಬ ಸಮುದಾಯದ ಸಂಸ್ಕೃತಿಯ ಅಭಿವ್ಯಕ್ತಿ ಇದೆ. 'ಸನಾದಿ ಅಪ್ಪಣ್ಣ' ಚಿತ್ರದಲ್ಲಿ ಕೊರವ ಸಮುದಾಯದ ಸಾಂಸ್ಕೃತಿಕ ವಿವರಗಳಿವೆ. 'ಬಂಗಾರದ ಮನುಷ್ಯ' ಚಿತ್ರದಲ್ಲಿ ಕೃಷಿಕ ಸಮುದಾಯದ ಅಭಿವ್ಯಕ್ತಿಯಿದೆ. 'ಒಂದು ಮುತ್ತಿನ ಕಥೆ'ಯಲ್ಲಿ ಮುತ್ತು ಹುಡುಕಲು ಸಮುದ್ರದಲ್ಲಿ ಮುಳುಗುಹಾಕುವ ಬೆಸ್ತ ಸಮುದಾಯದ ವಿವರಗಳಿವೆ. 'ಗಿರಿಕನ್ಯೆ' ಚಿತ್ರದಲ್ಲಿ ಬುಡಕಟ್ಟು ಸಮುದಾಯವೊಂದರ ಚಿತ್ರಣವಿದೆ. ಇಂತಹ ಅನೇಕ ಸಿನಿಮಾಗಳನ್ನು ನಾವು ಕಾಣಬಹುದು. ಬಹುತೇಕ ಇಲ್ಲೆಲ್ಲಾ ಮನರಂಜನೆಯ ದೃಷ್ಟಿಯಿಂದ ಸಮುದಾಯಗಳ ಸಂಸ್ಕೃತಿಯನ್ನು ಒಂದು ರೀತಿಯಿಂದ ಜನಪ್ರಿಯಗೊಳಿಸಲಾಗಿದೆ. ಈ ಕಾರಣಕ್ಕಾಗಿ ಇಂಥವು 'ಮಾಸ್' ಉದ್ದೇಶದ ಸಿನಿಮಾಗಳು. ಆದರೆ ಸಮಕಾಲೀನ ಸಂದರ್ಭದಲ್ಲಿ ಇಂತಹ ಸಮುದಾಯಗಳ ಸಂಸ್ಕೃತಿಗಳು ಸಾಹಿತ್ಯದಂತೆ ಸಿನಿಮಾಗಳಲ್ಲೂ ಸಂವೇದನೆಗಳಾಗಿ ಅಭಿವ್ಯಕ್ತಿಗೊಳ್ಳುತ್ತವೆ. ಹಾಗಾಗಿಯೇ ಅಂಥವು 'ಕ್ಲಾಸ್' ಸಿನಿಮಾಗಳೆನಿಸಿಕೊಂಡಿವೆ. ಆದರೆ ಅವು ನಿರ್ದಿಷ್ಟ ಸಮುದಾಯಗಳಿಗೆ ಎಷ್ಟರ ಮಟ್ಟಿಗೆ ಸಂವಹನಗೊಳ್ಳುತ್ತವೆ? ತಲುಪುತ್ತವೆ? ಎಂಬ ಪ್ರಶ್ನೆಯೂ ಜನತೆಯಲ್ಲಿ ಹುಟ್ಟಿಕೊಳ್ಳುತ್ತದೆ. ಸಿನಿಮಾದಂತಹ ದೃಶ್ಯ ಮಾಧ್ಯಮದ ಉದ್ದೇಶ ಹೆಚ್ಚು ಜನರನ್ನು ಪರಿಣಾಮಕಾರಿಯಾಗಿ ತಲುಪಬೇಕೆಂಬುದು, ಆದರೆ ನಾನಾ ಕಾರಣಗಳಾಗಿ ಈ 'ಕ್ಲಾಸ್' ಮಾದರಿಯ ಸಿನಿಮಾಗಳು ಹಾಗಾಗದಿರುವುದು· ವಿಪರ್ಯಾಸ. ಅದೇನೇ ಇದ್ದರೂ ಪ್ರಜ್ಞಾವಂತ ಪ್ರೇಕ್ಷಕರನ್ನಾದರೂ ಅವು ತಲುಪುತ್ತವೆಂಬುದು ಸಮಾಧಾನದ ಸಂಗತಿ. ಅದರಂತೆ ಸಮಕಾಲೀನ ಸಂದರ್ಭದ ಕನ್ನಡ ಸಿನಿಮಾಗಳಲ್ಲಿ ನಾವು ದಲಿತ ಸಂವೇದನೆ, ಬುಡಕಟ್ಟು ಸಂವೇದನೆ, ಅಲೆಮಾರಿ ಸಂವೇದನೆ, ಮುಸ್ಲಿಂ ಸಂವೇದನೆ ಇತ್ಯಾದಿಗಳನ್ನು ಗುರುತಿಸಲು ಸಾಧ್ಯ. ಚೋಮನದುಡಿ, ಅಮಾಸ ಮುಂತಾದ ಸಿನಿಮಾಗಳಲ್ಲಿ ದಲಿತ ಸಂವೇದನೆಯ ಅಭಿವ್ಯಕ್ತಿಯಿದ್ದರೆ, ಭೂಮಿಗೀತದಲ್ಲಿ ಬುಡಕಟ್ಟು ಸಂವೇದನೆಯಿದೆ. 'ಅಲೆಮಾರಿ' ಚಿತ್ರದಲ್ಲಿ ಸ್ವತಃ ಅಲೆಮಾರಿ ಸಮುದಾಯದ ಸಂವೇದನೆಯಿದ್ದರೆ 'ಮುನ್ನುಡಿ' 'ಹಸೀನಾ' ದಂತಹ ಸಿನಿಮಾಗಳಲ್ಲಿ ಮುಸ್ಲಿಂ ಸಂವೇದನೆಯ ಅಭಿವ್ಯಕ್ತಿಯಿದೆ. ಸಾಗರ ದೀಪ, ಕರಾವಳಿ ಮುಂತಾದ ಚಿತ್ರಗಳಲ್ಲಿ ಬೆಸ್ತ ಸಮುದಾಯದ ಸಂವೇದನೆಯಿದೆ.

ಇವುಗಳಲ್ಲದೆ ಇತರ ಕೆಲವು ದೇಸೀ ಸಮುದಾಯಗಳ ಅಭಿವ್ಯಕ್ತಿಯನ್ನು ಕನ್ನಡ ಸಿನಿಮಾಗಳಲ್ಲಿ ನಾವು ಅಲ್ಲಲ್ಲಿ ಗುರುತಿಸಬಹುದಾಗಿದೆ. ಅದೇ ರೀತಿ ಇವತ್ತು ಸಾಹಿತ್ಯ ಹಾಗೂ ಸಮಾಜಶಾಸ್ತ್ರ ಶಿಸ್ತುಗಳಲ್ಲಿನ ಅತ್ಯಂತ ಪ್ರಚಲಿತವಿರುವ 'ಸ್ತ್ರೀ' ಸಂವೇದನೆ ಕೂಡಾ ಸಿನಿಮಾಗಳಲ್ಲಿ ಅಭಿವ್ಯಕ್ತಿಗೊಳ್ಳುತ್ತಿದೆ. ಆದರೆ ಸ್ತ್ರೀ ಸಂವೇದನೆಯೆಂಬುದು ಪ್ರತ್ಯೇಕ ಅಧ್ಯಯನ ವಿಷಯವಾಗಬಲ್ಲುದರಿಂದ ಇಲ್ಲಿ ಅದನ್ನು ವಿಶೇಷವಾಗಿ ಪರಿಗಣಿಸಿಲ್ಲ. ದೇಸೀ ಸಮುದಾಯಗಳ ಭಾಗವಾಗಿ ಬಂದಿರುವ ನಿರ್ದಿಷ್ಟ ಸಮುದಾಯಗಳ ಮಹಿಳೆಯರ ಸಂವೇದನೆಗಳನ್ನಷ್ಟೇ ಇಲ್ಲಿ ಸಾಂದರ್ಭಿಕವಾಗಿ ಪ್ರಸ್ತಾಪಿಸಲಾಗುವುದು.

೬.೧ ದಲಿತ ಸಂವೇದನೆ

ಸಾಹಿತ್ಯದಲ್ಲೂ ಸಂಸ್ಕೃತಿ ಚಿಂಚನೆಯಲ್ಲೂ ಇದು ಸಾಕಷ್ಟು ಚರ್ಚೆಗೆ ಗ್ರಾಸವಾಗಿರುವ ಒಂದು ಸಾಮುದಾಯಿಕ ಸಂವೇದನೆಯೆನ್ನಬಹುದು. 'ದಲಿತ' 'ದಲಿತರು' ಎಂಬ ಪರಿಕಲ್ಪನೆಯ ಪದ ಪ್ರಯೋಗಗಳು ಎಪ್ಪತ್ತರ ದಶಕದಲ್ಲಿ ಅಸ್ಪೃಶ್ಯ ವಿದ್ಯಾವಂತರ ಬೌದ್ಧಿಕತೆಯ ಫಲವಾಗಿ ಬೆಳಕು ಕಂಡವು. ಅಸ್ಪೃಶ್ಯರ ಅಥವಾ ಅವಮಾನಿತರ ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಹಾಗೂ ಸಾಹಿತ್ಯದ ಎಚ್ಚರದ ನೆಲೆಗಳಿಂದಲೇ ಹುಟ್ಟಿಕೊಂಡವು, ಬಹಳ ಮುಖ್ಯವಾಗಿ ಶೋಷಣೆಯ ವಿರುದ್ಧದ ಪ್ರತಿಕ್ರಿಯೆಯಾಗಿ, ಬಿಡುಗಡೆಯ ಮಾರ್ಗದರ್ಶಿಯಾಗಿ ಚಲಾವಣೆಗೆ ಬಂದವು. ತುಳಿತಕ್ಕೆ ಒಳಗಾದ, ಸಾಮಾಜಿಕವಾಗಿ, ಆರ್ಥಿಕವಾಗಿ ಶೋಷಣೆಗೆ ಒಳಗಾದ, ದಮನಕ್ಕೆ ಒಳಗಾದ, ತಿರಸ್ಕರಿಸಲ್ಪಟ್ಟ, ಜಾತಿಯ ಅವಮಾನದಿಂದ ಹೀನಾಯ ಬದುಕನ್ನು ಅನುಭವಿಸಿದ, ಶ್ರೇಣೀಕೃತ ವರ್ಗದಿಂದ ಬಹಿಷ್ಕರಿಸಲ್ಪಟ್ಟ ಮುಂತಾದ ಅರ್ಥದಲ್ಲಿ ಪ್ರಜ್ಞಾಪೂರ್ವಕವಾಗಿದೆ ಪದಗಳನ್ನು ಬಳಸಿದ್ದಾರೆ.

ಸಾಹಿತ್ಯಕ್ಕೂ ಸಿನಿಮಾಕ್ಕೂ ಇರುವ ಸಂಬಂಧವನ್ನು ಈಗಾಗಲೇ ಪ್ರಸ್ತಪಿಸಲಾಗಿದೆ. ಅದರಂತೆ ಸಮಕಾಲೀನ ಸಾಹಿತ್ಯದ ಪ್ರಭಾವದಿಂದಲೇ ಸಿನಿಮಾದಲ್ಲೂ ಈ ಸಂವೇದನೆ ಕಾಣಿಸಿಕೊಂಡಿತೆನ್ನಬಹುದು. ಅಷ್ಟು ಮಾತ್ರವಲ್ಲದೆ ಪ್ರಸ್ತುತ ಇಲ್ಲಿ ಚರ್ಚೆಗೊಳಗಾಗಲಿರುವ ಸಿನಿಮಾಗಳು ಸಾಹಿತ್ಯ ಕೃತಿಗಳನ್ನಾದರಿಸಿಯೇ ನಿರ್ಮಾಣವಾದವುಗಳು. ದಲಿತ ಸಂವೇದನೆಯನ್ನು ಬಿಂಬಿಸುವ ಹಲವು ಚಿತ್ರಗಳಿವೆ. ಉದಾಹರಣೆಗೆ ಕೆ. ಎಸ್. ಎಲ್. ಸ್ವಾಮಿ ನಿರ್ದೇಶನದ ಭಾಗ್ಯಜ್ಯೋತಿ, ಸಿದ್ದಲಿಂಗಯ್ಯ ನಿರ್ದೇಶನದ ಹೇಮಾವತಿ, ಬರಗೂರು ರಾಮಚಂದ್ರಪ್ಪ ನಿರ್ದೇಶನ ಒಂದು ಊರಿನಕತೆ, ಟಿ.ಎಸ್.ನಾಗಭರಣ ನಿರ್ದೇಶಕನದ ಕೊಟ್ರೇಶಿ ಕನಸು, ಬಿ.ವಿ.ಕಾರಂತರು ನಿರ್ದೇಶಿಸಿದ ಚೋಮನದುಡಿ, ಸ್ವತಃ ಶಿವರಾಮ ಕಾರಂತರು ನಿರ್ದೇಶಿಸಿದ ಮಲೆಯ ಮಕ್ಕಳು, ಬಸವ ಲಿಂಗಯ್ಯ ನಿರ್ದೇಶನದ ಅಮಾಸ ಇತ್ಯಾದಿ ಚಿತ್ರಗಳು ದಲಿತ ಸಂವೇದನೆಯನ್ನು ಒಳಗೊಂಡಿವೆ.

‘ದಲಿತ ಸಂವೇದನೆ’ ಎಂದಾಗ ಶೋಷಣೆಯ ವಿವಿಧ ನೆಲೆಗಳನ್ನಷ್ಟೇ ಅಲ್ಲದೆ ಆ ಸಮುದಾಯದ ಬದುಕಿನ ಸಾಂಸ್ಕೃತಿಕ ಸಂಗತಿಗಳನ್ನು ಪರಿಗಣಿಸಬೇಕಾಗುತ್ತದೆ.

ಆದರಂತೆ ಕನ್ನಡದ ಕೆಲವು ಸಿನಿಮಾಗಳು ದಲಿತರ ಬದುಕಿನ ಸಾಂಸ್ಕೃತಿಕ ವಿವರಗಳನ್ನು, ಅವರ ನೋವು ನಲಿವುಗಳನ್ನು, ಸಮಾಜದಲ್ಲಿ ಅವರಿಗಿರುವ ಸ್ಥಾನಮಾನಗಳನ್ನು ಹೇಗೆ ಅನಾವರಣಗೊಳಿಸಿವೆ ಎಂಬುದನ್ನು ಇಲ್ಲಿ ಚರ್ಚಿಸಲಾಗುವುದು. ಇದಕ್ಕೆ ಉದಾಹರಣೆಗಾಗಿ ಕೆಲವು ಚಿತ್ರಗಳನ್ನು ಇಲ್ಲಿ ಗಮನಿಸಬಹುದು.

ಭಾಗಜ್ಯೋತಿ ೧೯೭೫ರಲ್ಲಿ ತೆರೆಕಂಡ ಮಂಗಳಾ ಸತ್ಯನ್ ಕಾದಂಬರಿಯನ್ನಾಧರಿಸಿದ ಈ ಚಿತ್ರವನ್ನು ನಿರ್ದೇಶಿಸಿದವರು ಕೆ. ಎಸ್. ಎಲ್. ಸ್ವಾಮಿ. ಈ ಚಿತ್ರದಲ್ಲಿ ಬ್ರಾಹ್ಮಣ ಹುಡುಗ ಹರಿಜನ ಹುಡುಗಿಯನ್ನು ಪ್ರೀತಿಸಿ ಮದುವೆಯಾಗುತ್ತಾನೆ. ತಂದೆಯ ಅನಾರೋಗ್ಯದ ಕಾರಣ ಊರಿಗೆ ಬಂದು ತಂದೆ ತಾಯಿಯ ಇಚ್ಛೆಯಂತೆ ಮತ್ತೊಂದು ಹುಡುಗಿಯನ್ನು ಮದುವೆಯಾಗುತ್ತಾನೆ. ಹರಿಜನ ಹುಡುಗಿ ಗರ್ಭಿಣಿಯಾಗುತ್ತಾಳೆ. ಮಗುವಿನ ತಾಯಿ ಆಗುತ್ತಾಳೆ. ಆದರೆ ತಂದೆಯ ಇಚ್ಛೆಯಂತೆ ಮದುವೆಯಾದ ಹುಡುಗಿಗೆ ಮಗುವಾಗುವುದಿಲ್ಲ. ಕಡೆಗೆ ಮಗುವಿನ ಗೀಳಿನಿಂದ ಹಾಸಿಗೆ ಹಿಡಿಯುತ್ತಾಳೆ. ಹರಿಜನ ಹುಡುಗಿಯ ಮಗುವೇ ಅವಳಿಗೆ ಆಧಾರವಾಗುತ್ತದೆ. ಕಡೆಗೆ ಹರಿಜನರ ಹುಡುಗಿಯನ್ನು ಸೊಸೆ ಎಂದು ಸ್ವೀಕರಿಸುವಂತೆ ಮಾಡುತ್ತಾಳೆ.

ಗ್ರಹಣ ಟಿ. ಎಸ್. ನಾಗಭರಣ ನಿರ್ದೇಶಿಸಿದ ಈ ಚಿತ್ರ ೧೯೮೧ರಲ್ಲಿ ತೆರೆಕಂಡಿತು. ಚಿತ್ರದಲ್ಲಿ ಗ್ರಾಮವೊಂದರಲ್ಲಿ ನಡೆಯುವ ವಿಧಿಯಾಚರಣೆ ವಿವರಗಳಿವೆ. ಹದಿನೈದು ದಿನಗಳ ಕಾಲ ನಡೆಯುವ ಈ ಆಚರಣೆಯ ಸಂದರ್ಭದಲ್ಲಿ ಕೆಲವು ‘ಅಸ್ಪೃಶ್ಯರನ್ನು ಆಯ್ದು ಅವರಿಗೆ ಜನಿವಾರ ಹಾಕಿ ‘ಬ್ರಾಹ್ಮಣ’ರನ್ನಾಗಿಸುವ ಧಾರ್ಮಿಕ ವಿಧಿಗಳಿವೆ. ಜನಿವಾರ ಹಾಕಿ ದೈವವನ್ನು ಹೊತ್ತಿರುವಾಗಲೇ ಅವರಲ್ಲಿ ಒಬ್ಬ ಸಾವನಪ್ಪುತ್ತಾನೆ. ಹೆಣ ತೆಗೆಯಲು ಬ್ರಾಹ್ಮಣರಾಗಲೀ, ಹರಿಜನರಾಗಲೀ ಮುಂದೆ ಬರದಿರುವಾಗ ಪೊಲೀಸರೇ ಎತ್ತಿ ಹಾಕುತ್ತಾರೆ.

ಮುಂದೆ ಹೀಗಾಗದಿರಲು ವಿದ್ಯಾವಂತ ಯುವಕನೊಬ್ಬ ಎಲ್ಲವನ್ನು ತಿಳಿಹೇಳಿದರೂ ಆವರ ನಂಬಿಕೆ ಬದಲಾಗುವುದಿಲ್ಲ. ಎಲ್ಲಿಯವರೆಗೆ ವಿದ್ಯೆ ಇರುವುದಿಲ್ಲವೋ ಅಲ್ಲಿಯವರೆಗೆ ಇಂಥ ಸಂಪ್ರದಾಯಗಳು ಸಾಯುವುದಿಲ್ಲ ಎಂಬುದನ್ನು ಈ ಚಿತ್ರ ಸಾರುತ್ತದೆ.

ಬೆತ್ತಲೆಸೇವೆ ಕೆ.ವಿ. ಜಯರಾಂ ನಿರ್ದೇಶನದ ಈ ಚಿತ್ರ ೧೯೮೩ರಲ್ಲಿ ತೆರೆಕಂಡಿತು. ಬಿ.ಎಲ್.ವೇಣು ಅವರ ಕಾದಂಬರಿಯನ್ನಾಧರಿಸಿ ತಯಾರಾದ ಚಿತ್ರ. ದಲಿತ ವರ್ಗದವರನ್ನು ಮೂಢ ಸಂಪ್ರದಾಯ, ಮೂಢ ನಂಬಿಕೆಗಳ ಸಂಕೋಲೆಗಳಿಂದ ಬಂಧಿಸಿ ದೇವರ ಹೆಸರಿನಲ್ಲಿ ಬೆತ್ತಲೆ ಸೇವೆಯಂತಹ ಕ್ರೂರ ವಿಧಿಗಳಿಗೊಳಪಡಿಸುವ ಪರಂಪರೆಯು, ಹೇಗೆ ಆಳುವ ವರ್ಗದ ಶೋಷಣೆಯ ಎಳೆಯಾಗುತ್ತದೆಂಬ ವಿವರಗಳಿವೆ. ಈ ಚಿತ್ರದಲ್ಲಿ ಮೂಢನಂಬಿಕೆಯಿಂದ ಸಂಪ್ರದಾಯದ ಹೆಸರಲ್ಲಿ ದಲಿತ ಹೆಣ್ಣು ಮಕ್ಕಳನ್ನು ಬೆತ್ತಲೆಸೇವೆ ಮಾಡುವಂತೆ ಮಾಡುವುದರ ಮೂಲಕ ಶೋಷಣೆ ಮಾಡುತ್ತಿರುವುದನ್ನು ಕಾಣಬಹುದಾಗಿದೆ.

ಚೋಮನದುಡಿ ಶಿವಕಾರಂತರ ಪ್ರಸಿದ್ಧ ಕಾದಂಬರಿಯನ್ನಾಧರಿಸಿ ೧೯೮೫ ರಲ್ಲಿ ತೆರೆಕಂಡ ಈ ಚಿತ್ರವನ್ನು ಬಿ.ವಿ.ಕಾರಂತರ ಅವರು ನಿರ್ದೇಶಿಸಿದ್ದಾರೆ. ದಲಿತನಾದ ಚೋಮನ ಸುತ್ತಲೂ ಹೆಣದ ಕತೆಯಾಗಿದೆ. ತುಂಡು ಭೂಮಿಯ ಒಡೆತನವಾದರೂ ದೊರೆಯಬೇಕೆಂಬುದು ದಲಿತ ಚೋಮನ ಆಸೆ. ಇದಕ್ಕೆ ಸಾಮಾಜಿಕವಾದ ಬಂಧನಗಳಿವೆ. ಸಾಂಪ್ರದಾಯಿಕ ಕಟ್ಟುಪಾಡುಗಳಿಂದಾಗಿ ಚೋಮನು ಕೃಷಿಕ ನಾಗಲಾರ. ಅವನು ಜೀತದ ಆಳಿನಂತೆ ಬದುಕುವುದನ್ನು ಬಿಟ್ಟು ಇನ್ನೇನೂ ಮಾಡಲಾರ. ಆತನ ಒಡೆಯನಿಗೆ ಚೋಮನು ಕೃಷಿಕನಾಗಲಿ ಎಂಬ ಭಾವನೆ ಇದ್ದರೂ ಕೂಡ ತನ್ನ ತಾಯಿಯ ಮತ್ತು ಸುತ್ತಲಿನ ಸಮಾಜದ ಕಟ್ಟುಪಾಡುಗಳಿಗೆ ಹೆದರಿ ಆತನು ಚೋಮನಿಗೆ ಒಂದು ತುಂಡು ಭೂಮಿಯನ್ನೂ ಕೊಡುವುದಿಲ್ಲ. ಚೋಮನ ಆಸೆ ಆಸೆಯಾಗಿಯೇ ಉಳಿದು ಆತನ ಕೃಷಿ ಕಾರ್ಮಿಕನಾಗಿಯೇ ಮುಂದುವರೆಯಬೇಕಾದ ಪರಿಸ್ಥಿತಿ ಇರುತ್ತದೆ. ಇಂತಹ ಅಸಹಾಯಕ ಸ್ಥಿತಿಯಲ್ಲಿ 'ದುಡಿ'ಯೊಂದೇ ಆತನ ಸಂಗಾತಿಯಾಗಿದ್ದು ಅದರೊಂದಿಗೆ ತನ್ನ ನೋವನ್ನು ತೋಡಿಕೊಂಡು ಅದನ್ನು ಬಡಿಯುತ್ತಲೇ ತಾನು ಕೊನೆಯನ್ನು ಕಾಣುವ ದುರಂತ ಚಿತ್ರಣವೇ ಸಿನಿಮಾದ ವಸ್ತು.

ಇದರೊಂದಿಗೆ ದೇಸೀ ಸಂಸ್ಕೃತಿ ಮತ್ತು ವಿದೇಶೀ ಸಂಸ್ಕೃತಿಗಳೊಳಗಿನ ಸಂಘರ್ಷದ ನೆಲೆಯನ್ನು ಕಾಣಬಹುದಾಗಿದೆ. ಕ್ರೈಸ್ತಧರ್ಮಕ್ಕೆ ಮತಾಂತರಗೊಳ್ಳುವ ಪ್ರಲೋಭನೆಗಿಂತಲೂ ತಾನು ನಂಬಿದ (ಪಂಜುರ್ಲಿ) ದೈವ ಆತನಿಗೆ ಮುಖ್ಯವಾಗುತ್ತದೆ. ಆದರೆ ನಂತರದ ತಲೆಮಾರಿನ ಆತನ ಮಕ್ಕಳಿಗೆ ಸಂಪ್ರದಾಯ - ಪರಂಪರೆ - ದೇಸೀ ಸಂಸ್ಕೃತಿಯೆಂಬುದು ಅಪ್ಯಾಗಿ ಕಾಡುವುದಿಲ್ಲ. ಅವರು ಮತಾಂತಗೊಂಡರೆ ಮುಂದಿನ ತಮ್ಮ ಬದುಕು ಸುಗಮವಾಗಬಹುದೆಂದು ಭಾವಿಸುತ್ತಾರೆ. ಇವೆಲ್ಲವುಗಳ ಜೊತೆಗೆ ದಲಿತ ಹೆಣ್ಣು ಮಗಳೊಬ್ಬಳು (ಚೋಮನ ಮಗಳು) ವಿದೇಶೀ ಅಧಿಕಾರಿಯೊಬ್ಬನ ಕಾಮಪಿಸಾಸೆಗೆ ತುತ್ತಾಗುವ ದರುಂತವೂ ಇಲ್ಲಿದೆ. ಒಟ್ಟಿನಲ್ಲಿ ದಕ್ಷಿಣ ಕನ್ನಡ ಪರಿಸರದ ದಲಿತ ಸಮುದಾಯದ ಸಂಕೀರ್ಣ ಅನುಭವ, ಸಂವೇದನೆಗಳ ಪರಿಣಾಮಕಾರಿ ಚಿತ್ರಣ ಈ ಸಿನಿಮಾದಲ್ಲಿದೆ. ಸ್ವತಃ ಶಿವರಾಮ ಕಾರಂತರೇ ಸಿನಿಮಾ ನಿರ್ಮಿಸಿ ನಿರ್ದೇಶಿಸಿದ ಅವರ 'ಕುಡಿಯರಕೂಸು' ಕಾದಂಬರಿ ಆಧಾರಿತ ಮಲೆಯ ಮಕ್ಕಳು ಸಿನಿಮಾದಲ್ಲೂ ಬೆಳ್ತಂಗಡಿ ಪರಿಸರದ ಮಲೆಕುಡಿಯ ಸಮುದಾಯದವರ ಚಿತ್ರಣವಿದೆ. ಆದರೆ ಇಲ್ಲಿ ದಲಿತ ಬದುಕಿನ ಸಮಸ್ಯೆಯ ಅಭಿವ್ಯಕ್ತಿಗಿಂತಲೂ ಅವರ ಸಾಂಸ್ಕೃತಿಕ ವಿವರಗಳಿಗೇ ಹೆಚ್ಚಿನ ಆದ್ಯತೆ ಸಂದಿದೆಯೆನ್ನಬಹುದು. ಮಲೆಯ ಮಕ್ಕಳ ಸಾಹಸಮಯ ಬದುಕು ಇಲ್ಲಿ ಅನಾವರಣಗೊಂಡಿದೆ. ಇವು 'ಸಂವೇದನೆ' ಎಂಬ ಪರಿಕಲ್ಪನೆ ಚಾಲ್ತಿಗೆ ಬರುವ ಪೂರ್ವದಲ್ಲಿ ತೆರೆಕಂಡ ಚಿತ್ರಗಳು. ಆದರೂ ಸಮಕಾಲೀನ ಚಿಂತನೆಗೆ ಪೂರಕವಾಗುವ ಸಂಗತಿಗಳು ಸಹಜವಾಗಿಯೇ ಇಲ್ಲಿ ಮೂಡಿ ಬಂದಿವೆ.

ಅಮಾಸ ದೇವನೂರು ಮಹಾದೇವ ಅವರ ಕಥೆಯನ್ನಾಧರಿಸಿದ ಅದೇ ಹೆಸರಿನ ಚಿತ್ರ 'ಚೋಮನ ದುಡಿ' ಬಿಡುಗಡೆಯಾದ ಎಷ್ಟೋ ವರ್ಷಗಳ ನಂತರ ತೆರೆಕಂಡ ದಲಿತ ಸಂವೇದನೆಯ ಇನ್ನೊಂದು ಚಿತ್ರ. ಅಮಾಸ ೨೦೦೫ರಲ್ಲಿ ತೆರೆಕಂಡ ಈ ಚಿತ್ರವನ್ನು ಬಸವಲಿಂಗ ನಿರ್ದೇಶಿಸಿದ್ದಾರೆ. ಇದು ದೇವನೂರು ಮಹಾದೇವ ಅವರ ಕಥೆ. ಅಮವಾಸೆಯ ದಿನ ಹುಟ್ಟಿದ ಅನಾಥ ಬಾಲನ ಕತೆ. ಅಮವಾಸೆಯ ದಿನ ಹುಟ್ಟಿದನೆಂದೇ ಇವನಿಗೆ ಅಮಾಸ ಎಂದು ಕರೆಯುತ್ತಾರೆ. ಅಮಾಸನು ಕುರಿಯಯ್ಯ ಎನ್ನುವ ಕುರಿ ಕಾಯುವ ಮುದುಕನಲ್ಲಿ ಬೆಳೆಯುತ್ತಿರುತ್ತಾನೆ. ಕುರಿಯಯ್ಯನ ಬದುಕೇ ಅಮಾಸನಲ್ಲಿಯೂ ಪುನರಾರ್ವತನೆಗೊಳ್ಳುತ್ತದೆ.

ಇದು ಅನ್ಯಾಯದ ಚಕ್ರದ ಪುನರಾವರ್ತನವನ್ನು ಸೂಚಿಸುತ್ತದೆ. ತಂದೆ ತಾಯಿ ಇಲ್ಲದ ಇವನನ್ನು ಕುರಿಮಯ್ಯ ಸಾಕಿ ಬೆಳೆಸುತ್ತಾನೆ. ಊರಿನ ಜಾತ್ರೆಯಲ್ಲಿ ಹುಲಿವೇಶ ಹಾಕಿ ಕುಣಿಯುವುದು ಸಂಪ್ರದಾಯ. ಈ ಸಂಪ್ರದಾಯದಂತೆ ದಲಿತರು ಹುಲಿವೇಶ ಹಾಕಿ ಕುಣಿಯುವಾಗ ಅಮಾಸನೂ ಅವರೊಡನೆ ಸೇರಿಕೊಳ್ಳುತ್ತಾನೆ. ಈ ಮೊದಲು ಎಲ್ಲೂ ಕುಣಿಯದ ಅವನು ತಾಳಕ್ಕೆ ತಕ್ಕಂತೆ ಚೆನ್ನಾಗಿ ಕುಣಿಯುತ್ತಾನೆ. ಊರಿನ ಜನರೆಲ್ಲರೂ ಅವನು ವೇಷಹಾಕಿ ಕುಣಿಯುವುದನ್ನು ನೋಡಿ. ಬೆರಳುಕಚ್ಚಿಕೊಳ್ಳುತ್ತಾರೆ.

ಅಂತಹ ಅದ್ಭುತವಾದ ಕಲೆಯನ್ನು ಅಮಾಸ ಹೊಂದಿರುತ್ತಾನೆ. ಹಳ್ಳಿಯ ಗೌಡನಿಗೆ ಅಮಾಸ ಯಾರೆಂಬುದು ಗೊತ್ತಿರುವುದಿಲ್ಲ. ಆದರೆ ಅವನ ಕುಣಿತವನ್ನು ನೋಡಿ ಮೆಚ್ಚಿ ಮುದುಕನಿಗೆ ಆ ಹುಡುಗ ಯಾರು ಎಂದು ಕೇಳಿದಾಗ ಅದನು 'ಅಮಾಸ' ಎಂದು ಹೇಳುತ್ತಾನೆ. ಮರುದಿನ ಅವನಿಗೆ ಮನೆಗೆ ಬರಲು ಹೇಳುತ್ತಾನೆ. ಇದು ಚಿತ್ರದ ಕಥೆ.

ಅಮಾಸನ ಜೀವನದ ವಿವಿಧ ಘಟನೆಗಳನ್ನು ಇಲ್ಲಿ ಚಿತ್ರಿಸಲಾಗಿದೆ. ಕಪ್ಪು ಬಣ್ಣವನ್ನು ಸಂಕೇತವಾಗುವಂತೆ ಬಳಸಲಾಗಿದೆ ಹುಲಿವೇಶದ ಕುಣಿತಕ್ಕೆ ಸಮಾಂತರವಾಗಿರುವ ಹಳ್ಳಿಯ ಕೌರ್ರ ಜೀವನ ಮೂಡಿ ಬಂದಿದೆ. ಇಲ್ಲಿಯ ಕುಣಿತ ಒಂದು ವರ್ಗದವರ ಜೀವನ ನಿಷ್ಠೆಯನ್ನು ತೋರಿಸಿದರೂ ಇನ್ನೊಂದು ವರ್ಗದ ಜನ ಏನೆಲ್ಲಾ ಇದ್ದು ಈ ನಿಷ್ಠೆಗೆ ಪರಕೀಯರಾಗಿ ಉಳಿಯುತ್ತಾರೆ. ಇಲ್ಲಿ 'ಅಮಾಸ'ನು ಗೌಡ ಹೇಳಿದಾಗ ಬಂದು ವೇಷಹಾಕಿ ಕುಣಿಯುವುದು ಒಂದೆಡೆ ಅವನ ನಿಷ್ಠೆಯನ್ನು ತೋರಿಸಿದರೆ, ಇನ್ನೊಂದೆಡೆ ಅವನು ಗೌಡನಿಂದ ಶೋಷಣೆಗೆಗೊಳಗಾಗುವ ಪರಿಯನ್ನು ಚಿತ್ರಿಸುತ್ತದೆ. ಕೆಳಗಿನ ಸ್ತರದಲ್ಲಿರುವವರು. ಮೇಲಿನ ಸ್ತರದಲ್ಲಿರುವವರಿಂದ ತಮಗೆ ಆಗುತ್ತಿರುವ ಅನ್ಯಾಯಗಳ ಪರಿವೆಯೇ ಇಲ್ಲದೆ. ಅದಕ್ಕೆ ಬಲಿಯಾಗುತ್ತಿರುವ, ಅದು ಗೊತ್ತಾದರೂ ಏನು ಮಾಡಲಾಗದ ಅಸಹಾಯಕತೆಯಲ್ಲಿ ದಿನ ಕಳೆಯುವುದನ್ನು ಇಲ್ಲಿ ಕಾಣಬಹುದು.

ಹೀಗೆ ದಲಿತ ಬದುಕಿನ ಸಾಂಸ್ಕೃತಿಕ ವಿವರಗಳನ್ನು, ನಂಬಿಕೆ ನಡವಳಿಕೆಗಳನ್ನು, ಬಡತನ ಕಷ್ಟ ಕಾರ್ಪಣ್ಯಗಳನ್ನು ಶೋಷಣೆಯ ವಿವಿಧ ನೆಲೆಗಳನ್ನು ಮೇಲೆ ನೋಡಿದ ಕೆಲವು ಚಿತ್ರಗಳು ಒಂದಲ್ಲಿ ಒಂದು ರೀತಿಯಲ್ಲಿ ಅಭಿವ್ಯಕ್ತ ಪಡಿಸುತ್ತವೆ.

ಇವುಗಳಲ್ಲಿ ಕೆಲವು ಸಿನಿಮಾಗಳು ಕಲಾತ್ಮಕವಾಗಿ ನಿರ್ಮಾಣಗೊಂಡರೆ, ಇನ್ನೂ ಕೆಲವು ವಾಣಿಜ್ಯತ್ಮಕವಾಗಿ ನಿರ್ಮಾಣಗೊಂಡಿವೆ. ಅವೇನೇ ಇದ್ದರೂ ಅವುಗಳಲ್ಲಿ ಪ್ರತಿಬಿಂಬಿತವಾಗಿರುವ ದಲಿತ ಬದುಕಿನ ಸಂವೇದನೆ ನಮಗಿಲ್ಲಿ ಪ್ರಸ್ತುತವೆನಿಸುತ್ತವೆ.

೬.೨ ಬುಡಕಟ್ಟು ಸಂವೇದನೆ

ಸಾಹಿತ್ಯದಲ್ಲಿ ಇದನ್ನು ನಾವು ದಲಿತ ಸಂವೇದನೆಯ ಒಂದು ಭಾಗವಾಗಿಯೇ ಗಮನಿಸುತ್ತಾ ಬಂದಿದ್ದೇವೆ. ಬಹುಪಾಲು ಬುಡಕಟ್ಟುಗಳು ದಲಿತರೂ ಆಗಿರುವುದರಿಂದ ಸಹಜವಾಗಿಯೇ ಸಾಹಿತ್ಯ ಸಂದರ್ಭದಲ್ಲಿ ಬುಡಕಟ್ಟುಗಳನ್ನೂ ದಲಿತರನ್ನೂ ಪ್ರತ್ಯೇಕವಾಗಿ ಪರಿಗಣಿಸಿಲ್ಲ. ಉದಾಹರಣೆಗೆ ಈಗಾಗಲೇ ದಲಿತ ಸಂವೇದನೆಯಾಗಿ ಪ್ರಸ್ತಾಪಿಸಿರುವ ಶಿವರಾಮ ಕಾರಂತರ 'ಕುಡಿಯರ ಕೂಸು' ಕಾದಂಬರಿಯನ್ನಾಧರಿಸಿದ 'ಮಲೆಯ ಮಕ್ಕಳು' ಸಿನಿಮಾದಲ್ಲಿ ಬರುವ ಮಲೆಕುಡಿಯರು ಬುಡಕಟ್ಟಗಳೂ ಹೌದು, ದಲಿತರೂ ಹೌದು, ಆದರೆ ಇಲ್ಲಿ ನಾವು ಪ್ರಸ್ತಾಪಿಸಲಿರುವುದು ಬುಡಕಟ್ಟು ಸಮುದಾಯಗಳಿಗೇ ವಿಶಿಷ್ಟವಾದ ಸಂವೇದನೆಗಳ ಅಭಿವ್ಯಕ್ತಿಯುಳ್ಳ ಸಿನಿಮಾದ ಬಗೆಗೆ. ಆಧುನಿಕತೆಯ ಪರಿಣಾಮದಿಂದಾಗಿ ನಮ್ಮ ಬುಡಕಟ್ಟುಗಳ ದೇಸೀ ಸಂಸ್ಕೃತಿ ನಾಶವಾಗುತ್ತಿರುವುದನ್ನು, ನವನಾಗರಿಕತೆ, ನಗರೀಕರಣಗಳ ಪ್ರಭಾವದಿಂದಲಾಗಿ ಬುಡಕಟ್ಟುಗಳೆದುರಿಸುತ್ತಿರುವ ಸಂದಿಗ್ಧತೆಯನ್ನು, ಈ ಸಿನಿಮಾ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಕೇಸರಿ ಹರವು ನಿರ್ದೇಶನದ **ಭೂಮಿಗೀತ** ಇಂಥದೊಂದು ಚಿತ್ರವಾಗಿ ಗಮನ ಸೆಳೆಯುತ್ತದೆ. ಸರಕಾರದ ಆಧುನಿಕ ಯೋಜನೆಯನ್ನು ಕಾರ್ಯಗತಗೊಳಿಸಲು ತಲೆತಲಾಂತರಗಳಿಂದ ಕಾಡು ಪ್ರದೇಶದಲ್ಲಿ ತಮ್ಮದೇ ಆದ ನಂಬಿಕೆ ಜೀವನ ಕ್ರಮಗಳೊಂದಿಗೆ ಬದುಕಿದ್ದ ಬುಡಕಟ್ಟೊಂದನ್ನು ಒಕ್ಕಲೆಬ್ಬಿಸುವ ಸಮಸ್ಯೆಯತ್ತ ಈ ಚಿತ್ರ ಬೆಳಕು ಚೆಲ್ಲುತ್ತದೆ.

ಒಬ್ಬ ಸರ್ಕಾರದ ಪ್ರತಿನಿಧಿ ತನ್ನೆಲ್ಲ ಚಾಣಾಕ್ಷತೆಯಿಂದ ಬುಡಕಟ್ಟು ಜನರನ್ನು ಅವರ 'ಹಾಡಿ'ಯಿಂದ ಎತ್ತಂಗಡಿ ಮಾಡಿಸುವುದು, ಕಮಿಷನರ್ ಸಾಹೇಬ ಚಿತ್ರದುದ್ದಕ್ಕೂ ಜೀವಯ್ಯ ಮತ್ತು ಅವನ ಗುಂಪನ್ನು ಓಡಿಸುವ ಕುರಿತು ಚಿಂತಿಸುವುದು ಇದು ಚಿತ್ರದ ಕಥೆಯಾಗಿದೆ. ಮೊದಲ ಹಂತದಲ್ಲಿ 'ದುಡ್ಡು' ಒಂದು ತಂತ್ರಕ್ಕೆ ದಾರಿಯಾದರೆ, ಅನಂತರ ಅವನ ಸ್ಕೀಮ್‌ಗಳಿಗೆ ಸಿಗುವುದು 'ಗಣೆ' ಮತ್ತು 'ಚಪ್ಪಲಿ'. ಬೇಟೆಗೆಂದು ಹೋದವರನ್ನು ಅರಣ್ಯ ರಕ್ಷಕರು ಹಿಡಿಯುವರು.

ಆ ಜನರನ್ನು ರಂಗಯ್ಯ ದುಡ್ಡಿನಿಂದ ಬಿಡಿಸಿಕೊಂಡು ಬರುತ್ತಾನೆ. ಆನಂತರ ಕಾಡು ಬಿದಿರೆಯವರು ಹಾಡಿಯ ನಡುವೆ ಕುಳಿತು ಮಾತಾಡಿ ಕೊಳ್ಳುತ್ತಾರೆ. ಅವರಾಗಲೇ ಒಲ್ಲದ ದುಡ್ಡನ್ನು ಮುಟ್ಟಿರುವುದು, ಅದರಲ್ಲಿಯ ಒಂದು ನಾಣ್ಯ ಅಚಾನಕ್ಕಾಗಿ ಉಳಿದುಕೊಂಡಿರುವುದು,
ಇವೆಲ್ಲವೂ ಅವರನ್ನು ಗೊಂದಲಕ್ಕೀಡು ಮಾಡುತ್ತದೆ. ತಾವು ಬದುಕುತ್ತಿರುವ ಪರಿಸರದೊಂದಿಗೆ ಆ ಬುಡಕಟ್ಟು ಜನರಿರುವ ಭಾವನಾತ್ಮಕ ಸಂಬಂಧ ತಾವು ನಂಬಿದ ದೈವ, ತಮ್ಮ ಜೀವನಕ್ರಮಕ್ಕೂ ಪ್ರಕೃತಿಗೂ ಇರುವ ಬಿಡಿಸಲಾರದ ನಂಟು ಇತ್ಯಾದಿ ಸಂಗತಿಗಳು ಅವರನ್ನು ಅಲ್ಲಿಂದ ಬೇರೆಕಡೆಗೆ ಹೋಗಗೊಡುವುದಿಲ್ಲ. ಹಾಗಾಗಿ ಇಲ್ಲಿ ಕೂಡಾ ಅವರ 'ದೇಸೀ ಸಂಸ್ಕೃತಿ'ಗೂ ಆಧುನಿಕತೆಗೂ ಮಧ್ಯೆ ಒಂದು ರೀತಿಯ ಸಾಂಸ್ಕೃತಿಕ ಸಂಘರ್ಷ ವೇರ್ಪಡುತ್ತದೆ. ಸಹಜವಾಗಿಯೇ ಕೊನೆಗೆ ಆಧುನಿಕತೆಯೇ ಮೇಲುಗೈ ಸಾಧಿಸುತ್ತದೆ. ಆಧುನಿಕತೆಯಿಂದಾಗಿ ನಮ್ಮ ಎಷ್ಟೋ ಬುಡಕಟ್ಟುಗಳ ದೇಸೀ ಸಂಸ್ಕೃತಿ, ಪರಂಪರೆ ನಾಶವಾಗುತ್ತಿರುವುದನ್ನು 'ಭೂಮಿಗೀತ' ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ.

ಚಿತ್ರದಲ್ಲಿ ಬುಡಕಟ್ಟು ಸಮುದಾಯಕ್ಕೆ ವಿಶಿಷ್ಟವಾದ ಉಡುಗೆ-ತೊಡುಗೆ, ಆಚಾರ-ವಿಚಾರ, ಹಾಡು-ಕುಣಿತ ಇತ್ಯಾದಿಗಳು ಅರ್ಥ ಪೂರ್ಣವಾಗಿ ಬಳಕೆಯಾಗಿವೆ. ಸನ್ನಿವೇಶ ಚಿತ್ರಣ ಹಾಗೂ ಭಾಷಾ ಬಳಕೆಯಲ್ಲಿ ಏಕರೂಪತೆ ಇಲ್ಲದಿರುವುದು ಸ್ವಲ್ಪಮಟ್ಟಿನ ಸಮಸ್ಯೆಯಾಗಿದೆ. ಉದಾಹರಣೆಗೆ ಪಾತ್ರಗಳ ವೇಷ ಭೂಷಣಗಳಲ್ಲಿ ಆಫ್ರಿಕ್, ಮಧ್ಯಭಾರತ, ದಕ್ಷಿಣಭಾರತ ಮುಂತಾದೆಡೆಗಳ ಬುಡಕಟ್ಟು ಸಮುದಾಯಗಳು ಬಳಸುವ ಉಡುಗೆ-ತೊಡುಗೆ ಹಾಗೂ ಪರಿಕರಗಳ ಮಿಶ್ರಣವಿದೆ. ಚಿತ್ರದಲ್ಲಿ ಬಳಸಿರುವ ಭಾಷಾ ಶೈಲಿಯೂ ಒಂದೇ ತೆರನಾಗಿಲ್ಲ. ವಿಶೇಷವಾಗಿ ಜೀವಯ್ಯನ ಮಾತುಗಳು ಒಮ್ಮೆ ಮಹದೇಶ್ವರ ಬೆಟ್ಟದ ಕೆಳಗಿನ ಜನ ಆಡುವ ಮಾತಾದರೆ, ಮತ್ತೊಮ್ಮೆ, ಉತ್ತರ ಕರ್ನಾಟಕದ ಗ್ರಾಮೀಣ ಭಾಷೆಯಂತಿದೆ ಇನ್ನೂ ಕೆಲವು ಸಂದರ್ಭಗಳಲ್ಲಿ ಸಂಸ್ಕೃತ ಭೂಮಿಷ್ಟವಾಗಿರುದೂ ಉಂಟು. ಆದೇನೇ ಇದ್ದರೂ 'ಭೂಮುಗೀತ' ಚಿತ್ರವು ಬುಡಕಟ್ಟು ಸಮುದಾಯದ ಸಂವೇದನೆಯನ್ನು ಬಿಂಬಿಸುವ ಮಹತ್ವದ ಚಿತ್ರವಾಗಿದೆ.

'ಭೂಮಿಗೀತ' ಚಿತ್ರದಂತೆ **ಮಲೆಯ ಮಕ್ಕಳು** ಚಿತ್ರವೂ ಬುಡಕಟ್ಟು ಸಂವೇದನೆಯುಳ್ಳ ಮತ್ತೊಂದು ಚಿತ್ರವಾಗಿದೆ.

ಕಾರಂತರು ತಾವು ಬರೆದ ಕುಡಿಯರಕೂಸು ಕಾದಂಬರಿಯನ್ನೇ 'ಮಲೆಯಮಕ್ಕಳು' ಚಿತ್ರವಾಗಿ ನಿರ್ದೇಶಿಸಿದರು. ನಿಸರ್ಗದ ಮಡಿಲಲ್ಲಿ ಬದುಕುವ ಜನಾಂಗವೊಂದರ ಕಥೆಯಿದು. ಇಲ್ಲಿ ನಿರ್ದಿಷ್ಟ ಬುಡಕಟ್ಟು ಸಮುದಾಯವೊಂದರ ಪರಿಸರ, ಜೀವನ ವಿಧಾನ, ಬಡತನ, ಈರ್ಷ್ಯೆ, ಚೆಲವು-ಸುಖದ ಹಂಬಲ, ಅದಕ್ಕಾಗಿ ಕೊಲೆಯಂಥ ಕಠಿಣ ಕ್ರಿಯೆಗೂ ಸಿದ್ಧರಾಗುವ ಹೆಣ್ಣು ಮಕ್ಕಳು ಇತ್ಯಾದಿ ಚಿತ್ರಣಗಳಿವೆ.

ಕೆಂಚನ ಮೊಮ್ಮಗನಾದ ಕರಿಯನು 'ಕೆಳಮಲೆ'ಯ ಗುರಿಕಾರನೆನಿಸಿ ಕೊಳ್ಳಬೇಕಾದರೆ ಬರುವ ಕಷ್ಟಗಳು, ಕೆಂಚನ ಸಾವಿನ ನಂತರ ಕರಿಯನ ತಾರುಣ್ಯಾವಸ್ಥೆಯಲ್ಲಿ ಉಂಟಾಗುವ ಪಲ್ಲಟಗಳ ಚಿತ್ರಣವಿದೆ. ಕರಿಯನ ಬಾಲ್ಯವಸ್ಥೆಯಲ್ಲಿ ಬರುವ ಅನುಭವಗಳಿಗೂ ನಂತರ ಉಂಟಾಗುವ ಈ ಪಲ್ಲಟಕ್ಕೂ ಸೇತುವೆಯಂತೆ ವರ್ತಿಸುವುದೇ ಅಲ್ಲಿಯ ನಿಸರ್ಗ . 'ಕಲ್ಕುಡ'ನ ಬಗೆಗಿನ ಕೆಂಚನ ಭೀತಿ, ತನ್ನ ಮಲೆ ದೇವರುಗಳನ್ನು ತಾನು ಮರೆತಿರುವುದರಿಂದ ತನಗೆ ಕಷ್ಟಗಳು ಉಂಟಾಗಿರಬಹುದೆ ಎಂಬ ಭೀತಿ ಮತ್ತು ಈ ಎಲ್ಲ ಬುಡಕಟ್ಟು ದೇವರುಗಳನ್ನು ಮೀರಿದವನು ಸುಬ್ರಮಣ್ಯದ ಸುಬ್ರಮಣ್ಯೇಶ್ವರ ಎಂಬ ಅವನ ಆಳವಾದ ನಂಬಿಕೆ ಇವೆಲ್ಲವೂ ಕೆಂಚನ ವಿಶಿಷ್ಟ ಜಗತ್ತನ್ನು ಪರಿಚಯ ಮಾಡಿಕೊಡುತ್ತವೆ.

ಕೆಂಪಿ ಈ ಚಿತ್ರದಲ್ಲಿ ಬರುವ ಮತ್ತೊಂದು ಪಾತ್ರ. ಕೆಂಪಿಯು ಕುಡಿಯರ ಜನ ಜೀವನದಲ್ಲಿ ನೈಸರ್ಗಿಕವಾಗಿ ಅರಳಿದ ಹೂವಿನಂತೆ ತನ್ನ ಜೀವನವನ್ನು ಸಾಗಿಸಿದವಳು. ಮೇಲು ಮಲೆಯಿಂದ ಕೆಳಮಲೆಯ ಸೊಸೆಯಾಗಿ ಬರುತ್ತಾಳೆ. ಹಾಗೆಯೇ ಕೆಳಮಲೆಯ ಬಲಿಷ್ಠ ಮತ್ತು 'ಕರಡಿಯನ್ನು ಕೊಂದವನೆಂದು' ಪ್ರಖ್ಯಾತನಾದ ತುಕ್ರನ ಎರಡನೆಯ ಮಡದಿಯಾಗಿ ಬರುತ್ತಾಳೆ. ಕುಡಿದ ಅಮಲಿನಲ್ಲಿ ಅವಳ ಗಂಡನಾದ ತುಕ್ರನು ಅವಳೆಡೆಗೆ ಬಡಿಗೆಯೊಂದನ್ನು ಬೀಸಿದನೆಂಬುದನ್ನೇ ನೆವ ಮಾಡಿಕೊಂಡು ಅವಳು ಜಗಳವಾಡಿ ಹಿರೆಮಲೆಯ ತನ್ನ ತವರನ್ನು ಸೇರುತ್ತಾಳೆ. ಮುಂದೆ ತನ್ನ ಮೊದಲಿನ ಗಂಡ ತುಕ್ರನ ಮೇಲೆ ಹಗೆ ಸಾಧಿಸುವುದಕ್ಕೆ ಎನ್ನುವಂತೆ ಹಿರಿಮಲೆಯ ಬೂದನನ್ನೇ ಮದುವೆಯಾಗಿ ಮತ್ತೆ ಕಿರಿಯಮಲೆಗೇ ಬರುತ್ತಾಳೆ. ಅಂದರೆ ಮೊದಲು ಮದುವೆಯಾದ ತುಕ್ರನನ್ನು

ಬಿಟ್ಟು ಅಲ್ಲಿಯೇ ಇದ್ದ ಬೂದನನ್ನು ಮದುವೆಯಾಗಿ ಕಿರಿಮಲೆಗೆ ಬಂದು ತುಕ್ರನ ಎದುರಿನಲ್ಲಿಯೇ ಹೊಸ ಸಂಸಾರವನ್ನು ಹೂಡುತ್ತಾಳೆ. ಈ ಬದಲಾವಣೆಯು ಕುಡಿಯರಂಥ ಸಮಾಜದಲ್ಲಿ ಎಷ್ಟು ಸಹಜವಾಗಿ ನಡೆದು ಹೋಗುತ್ತದೆಂದರೆ ಯಾವ ಕುಡಿಯನಗೂ ಇದು ಅಸಹಜವೆನಿಸುವುದಿಲ್ಲ. ಇದೇ ಕೆಂಪಿ ಮತ್ತೆ ಅಲ್ಲಿಯ ಮಲೆಯ ಧನಿಗಳಾದ ತಿರುಮಲಭಟ್ಟರೊಡವೆ ಕೂಡ ದೈಹಿಕವಾದ ಸಂಬಂಧವನ್ನು ಗುಪ್ತವಾಗಿ ಹೊಂದಿರುತ್ತಾಳೆ. ಗಂಡಬಿಟ್ಟ ಅವಳು ತನಗೆ ಬೇಕಾದವನೊಡನೆ ಮತ್ತೆ ಮದುವೆಯಾಗುವ ಅವಕಾಶ ಮತ್ತು ಸ್ವಾತಂತ್ರ್ಯ ಕುಡಿಯರ ಸಮಾಜದಲ್ಲಿದೆ.

ಹೀಗೆ 'ಮಲೆಯ ಮಕ್ಕಳು' ಚಿತ್ರದಲ್ಲಿ ಕುಡಿಯ ಎಂಬ ಒಂದು ಬುಡಕಟ್ಟು ಸಮುದಾಯದ ಪರಿಸರ, ಜೀವನ ವಿಧಾನ, ಬಡತನ ಮುಂತಾದ ಅಂಶಗಳು ಚಿತ್ರಿತವಾಗಿವೆ.

೬.೩ ಅಲೆಮಾರಿ ಸಂವೇದನೆ :

ಸಾಹಿತ್ಯ ಸಂದರ್ಭದಲ್ಲಿ ಇದೂ ಕೂಡ ದಲಿತ ಸಂವೇದನೆಯ ಒಂದು ಭಾಗವಾಗಿಯೇ ಕಾಣಿಸಿಕೊಂಡಿದೆ. ಸಿನಿಮಾದಲ್ಲಿ ಕೂಡಾ ಪ್ರತ್ಯೇಕವಾಗಿ ಗುರುತಿಸುವಷ್ಟು ಪರಿಣಾಮಕಾರಿಯಾಗಿ ಈ ಸಮುದಾಯದ ಸಂವೇದನೆ ಬಳಕೆಯಾಗಿಲ್ಲ. ಕನ್ನಡದ ಸಂದರ್ಭದಲ್ಲಿ ಇದಕ್ಕೆ ಸಾಕಷ್ಟು ಅವಕಾಶವಿದ್ದರೂ ಅಂತಹ ಸಿನಿಮಾಗಳ ಸಂಖ್ಯೆ ಇಲ್ಲವೆನ್ನುವಷ್ಟು ಕಡಿಮೆ. ಇದ್ದರೂ ಅವು ಸಾಕ್ಷ್ಯ ಚಿತ್ರಗಳ ಹಂತಕ್ಕೆ ನಿಂತು ಬಿಡುತ್ತವೆ. ಅಂಥಾದ್ದರಲ್ಲಿ ಕವಿತಾ ಲಂಕೇಶ್ ನಿರ್ದೇಶನದ **ಅಲೆಮಾರಿ** ಚಿತ್ರ ಇಲ್ಲಿ ಗಮನಾರ್ಹವೆನಿಸುತ್ತದೆ. ಇದು ಕರ್ನಾಟಕದ ಲಂಬಾಣಿ ಸಮುದಾಯದ ಬದುಕನ್ನಾಧರಿಸಿದ ಚಿತ್ರ. ಲಂಬಾಣಿಗಳು ಇಂದು ತಾಂಡಾಗಳನ್ನು ಕಟ್ಟಿಕೊಂಡು ಅಲ್ಲಲ್ಲಿ ನೆಲೆಯೂರಿದ್ದರೂ ಮೂಲತಃ ಅವರು ದಕ್ಷಿಣ ಭಾರತಕ್ಕೆ ಅಲೆಮಾರಿಗಳಾಗಿಯೇ ಬಂದವರು ಇಂತಹ ಸಮುದಾಯದ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ಅವರ ತಾಂಡಕ್ಕೆ ಬಂದ ಸ್ವಯಂ ಸೇವಕಿ (NGO ಕಾರ್ಯಕರ್ತೆ) ಯೊಬ್ಬಳ ಮೂಲಕ ಅಲ್ಲಿನ ವಾಸ್ತವ ಸಂಗತಿಗಳನ್ನು ಚಿತ್ರವು ಕಲಾತ್ಮಕವಾಗಿ ಅನಾವರಣಗೊಳಿಸುತ್ತದೆ. ಲಂಬಾಣಿ ಹೆಣ್ಣು ಮಕ್ಕಳ ಮುಗ್ಧತೆ, ಅನಕ್ಷರತೆ ಅದನ್ನು ಉಪಯೋಗಿಸಿಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳುವ ಸ್ವಾರ್ಥ ರಾಜಕಾರಣಿಗಳು, ಇಂಥ ಸಂದರ್ಭದಲ್ಲಿ ಸರಕಾರದ ಸಮಾಜ ಸುಧಾರಣಾ ಯೋಜನೆಯ ಅನುಷ್ಠಾನಕ್ಕಾಗಿ ಅಲ್ಲಿಗಾಗಮಿಸುವ ಸಮಾಜ ಸೇವಾ ಕಾರ್ಯಕರ್ತೆಯ ಪ್ರಯತ್ನಶೀಲತೆ, ಅದಕ್ಕೆ ಅಡ್ಡಿಯಾಗುವ ಸಮುದಾಯದ ಮುಖಂಡರ ಅವಿವೇಕಿತನ, ಸ್ವಾರ್ಥಪರತೆ, ಇಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲೂ ಆಕೆಯನ್ನು ಬೆಂಬಲಿಸಿ ನಿಲ್ಲುವ ಸಮುದಾಯದ ಪ್ರಜ್ಞಾವಂತ ಮಹಿಳೆಯೊಬ್ಬಳ ಉದಾರಗುಣ ಇತ್ಯಾದಿ ಸಂಗತಿಗಳನ್ನು ಆ ಸಮುದಾಯದ ವರ್ಣಮಯ ಸಾಂಸ್ಕೃತಿಕ ಬದುಕಿನ ಹಿನ್ನೆಲೆಯೊಂದಿಗೆ ಇಲ್ಲಿ ಚಿತ್ರಿಸಲಾಗಿದೆ.

ಹಗಲುವೇಷ ಬರಗೂರು ರಾಮಚಂದ್ರಪ್ಪ ನಿರ್ದೇಶನದ ಈ ಚಿತ್ರವು ೨೦೦೦ರಲ್ಲಿ ತೆರೆಕಂಡಿತು. ಇದು ಅಲೆಮಾರಿ ಸಂವೇದನೆಯನ್ನು ಬಿಂಬಿಸುವ ಮತ್ತೊಂದು ಚಿತ್ರವಾಗಿದೆ.ಕನ್ನಡ ನಾಡಿನ ಅಲೆಮಾರಿಗಳಲ್ಲಿ ವೇಷಗಾರ ಸಮುದಾಯದವರೂ ಸೇರುತ್ತಾರೆ. ಊರಿಂದೂರಿಗೆ

ಅಲೆಯುತ್ತಾ ಪುರಾಣಗಳ ವಿವಿಧ ಕಥಾ ಪಾತ್ರಗಳ ವೇಷತೊಟ್ಟು ಅಭಿನಯಿಸುವ ಈ ಸಮುದಾಯದ ವ್ಯಕ್ತಿಯೊಬ್ಬನನ್ನು ಕೇಂದ್ರವಾಗಿದ್ದು ಕೊಂಡು ಪ್ರಸ್ತುತ ಸಿನಿಮಾವನ್ನು ನಿರ್ಮಿಸಲಾಗಿದೆ.

ನಿರ್ಲಕ್ಷಿತ ಜನ ಸಮುದಾಯವೊಂದು ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರೀಯವಾಗಿ ಪಾಲ್ಗೊಂಡ ಮಹತ್ವದ ಘಟನೆಯೊಂದರ ಸುತ್ತ ಸಿನಿಮಾವು ನಿರ್ಮಾಣಗೊಂಡಿದೆ. ಆ ಜನಸಾಮಾನ್ಯರ ಪ್ರತಿನಿಧಿಯೇ ಕಥಾನಾಯಕ ರಾಮ. ಹಲವು ವೇಷಧಾರಿಯಾಗಿ ಶ್ರೀರಾಮಚಂದ್ರ, ಶ್ರೀಕೃಷ್ಣ, ಸವಾರಮೆಯ ಕಳ್ಳ-ಹೀಗೆ ವಿವಿಧ ಪಾತ್ರಗಳಲ್ಲಿ ನಟಿಸಿ ಜನಸಾಮಾನ್ಯರನ್ನು ರಂಜಿಸುವ ರಾಮ ಸ್ವಾತಂತ್ರ್ಯ ಹೋರಾಟದಲ್ಲಿ ಜನಸಾಮಾನ್ಯ ನಾಯಕನಾಗಿ ಬ್ರಿಟಿಷರ ವಿರುದ್ಧ ಸೆಣಸುವ ಚಿತ್ರಣ ಇಲ್ಲಿದೆ. ಹಳ್ಳಿಯ ಮುಗ್ಧರ ಅಂತಃ ಕರಣದ ಮಿಡಿತವೂ ಇದೆ. ಚಿತ್ರದಲ್ಲಿ ವೇಷಗಾರ ಸಮುದಾಯರವರ ಬದುಕು ಸಶಕ್ತವಾಗಿ ಅನಾವರಣಗೊಂಡಿದೆ. ಅವರ ಜೀವನ ಕ್ರಮ, ಹೊಟ್ಟೆ ಪಾಡಿಗಾಗಿ ವಿವಿಧ ವೇಷಗಳನ್ನು ತೊಟ್ಟು ಊರೂರು ಅಲೆಯುವ ಸಂದರ್ಭಗಳು, ವಾಸಕ್ಕೆ ನಿರ್ದಿಷ್ಟ ನೆಲೆಯಿಲ್ಲದಂಥ ಆ ಸಮುದಾಯದ ಅಲೆಮಾರಿಸ್ಥಿತಿ ಇತ್ಯಾದಿ ಸಂಗತಿಗಳೆಲ್ಲ ಮನ ಮುಟ್ಟುವಂತೆ ಮೂಡಿಬಂದಿವೆ.

೬.೪ ಮುಸ್ಲಿಂ ಸಂವೇದನೆ

ಬಂಡಾಯ ಚಳುವಳಿಯ ಸಂದರ್ಭದಲ್ಲಿ ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡ ಸಾಂಸ್ಕೃತಿಕ ಸಂವೇದನೆಗಳಲ್ಲಿ ಮುಸ್ಲಿಂ ಸಂವೇದನೆ ಕೂಡಾ ಒಂದು. ಸಾರಾ ಅಬೂಬಕ್ಕರ್, ಬೋಳುವಾರು ಮಹಮ್ಮದ್ ಕುಂಞ, ಫಕೀರ್ ಮಹಮ್ಮದ್ ಕಟ್‌ಪಾಡಿ, ಬಾನುಮಸ್ತಾಕ್ ಮುಂತಾದ ಬರಹಗಾರರು ಬಹು ಸಂಖ್ಯಾತರಿಗೆ ಅದುವರೆಗೆ ತೀರಾ ಅಪರಿಚಿತವಾಗಿದ್ದ ಸಾಂಸ್ಕೃತಿಕ ಲೋಕವನ್ನು ಕನ್ನಡದ ಓದುಗರಿಗೆ ಪರಿಚಯಿಸುವ ಸಾಹಸಕ್ಕೆ ತೊಡಗಿದರು. ಅದರ ಫಲವಾಗಿ 'ಚಂದ್ರಗಿರಿಯ ತೀರದಲ್ಲಿ' ಯಂಥ ಕೃತಿಗಳು ಹುಟ್ಟಿಕೊಂಡು ಸಾಂಸ್ಕೃತಿಕ ಕ್ರಾಂತಿಯನ್ನೇ ಉಂಟುಮಾಡಿದವು. ಸಾಕಷ್ಟು ವಿವಾದವನ್ನೂ ಸೃಷ್ಟಿಸಿದವು. ಸಾಂಸ್ಕೃತಿಕ ಕ್ರಾಂತಿ ವಿಚಾರ ಕ್ರಾಂತಿಗೂ ಆಹ್ವಾನ ನೀಡಿತೆಂದರೆ ತಪ್ಪಾಗಲಾರದು. ಸಾಹಿತ್ಯದಿಂದ ಪ್ರಭಾವಿತವಾಗಿ ಇತ್ತೀಚಿನ ವರ್ಷಗಳಲ್ಲಿ ಸಿನಿಮಾಕ್ಕೂ ಈ ಸಂವೇದನೆ ಪರಿಣಾಮಕಾರಿಯಾಗಿ ಕಾಲಿರಿಸಿತು. ಅವುಗಳಲ್ಲಿ ಪ್ರಥಮ ಪ್ರಯತ್ನವಗಿ ಪಿ.ಶೇಷಾದ್ರಿ ನಿರ್ದೇಶನದ **ಮುನ್ನುಡಿ** ಸಿನಿಮಾ ಮಹತ್ವವನ್ನು ಪಡೆದುಕೊಳ್ಳುತ್ತದೆ. ಇದು ಬೊಳುವಾರು ಮಹಮ್ಮದ ಕುಂಞ ಯವರ 'ಮುತ್ತುಚ್ಚೇರ' ಕಥೆಯನ್ನಾಧರಿಸಿದ ಚಿತ್ರ.

ಬೋಳುವಾರರ 'ಮುತ್ತುಚ್ಚೇರ' ಉತ್ಕೃಷ್ಟ ಕತೆಯಾಗಿದೆ. ಬಡಮುಸ್ಲಿಂ ಹೆಣ್ಣು ಮಗಳನ್ನು ಧರ್ಮದ ಹೆಸರಿನಲ್ಲೇ ಕೊಂಡುಕೊಳ್ಳುವ ವಿಷಯವನ್ನೊಳಗೊಂಡ ಕತೆಯಿದು. 20ನೇ ಶತಮಾನದಲ್ಲಿ ಗುಲಾಮಿತನದ ಸರಪಳಿಯನ್ನು ನೆನಪಿಸುವ ಕಥೆ. ಮಾನವೀಯತೆಯಿಲ್ಲದೇ ಪ್ರಾಣಿಗಳಂತೆ ಹೆಣ್ಣಿನ ವ್ಯವಹಾರ ನಡೆಸುವ ಅರಬ್ ಶ್ರೀಮಂತರಿಗೆ ಹೆಣ್ಣಿನ ತಂದೆ ತಾಯಿಗಳೇ ಸ್ವತಃ ನಿಂತು ಮದುವೆ ಮಾಡುವ ಅಸಹಾಯಕತೆ, ಆರ್ಥಿಕತೆಯ ಚಿತ್ರಣವು ಈ ಕಥೆಯಲ್ಲಿದೆ.

ಕತೆಯಲ್ಲಿ ಬರುವ ಬಿರಾನ್‌ಕೊಯಾ ಮುಸ್ಲಿಂ ಹೆಣ್ಣು ಮಕ್ಕಳನ್ನು ಅರಬ್ ಶ್ರೀಮಂತರೊಂದಿಗೆ ಮದುವೆ ಮಾಡಿಸುವ ದಲ್ಲಾಳಿ - ಬಿರಾನ್ ಕೊಯಾನಿಗೆ ಈ ಕಸುಬು ಇಷ್ಟವಿಲ್ಲದಿದ್ದರೂ ಆವನ ಬದುಕಿಗೆ ಅದುವೇ ಆಧಾರ. ಹಾಗಾಗಿ ಇಲ್ಲಿ ಅರಬ್ ಶ್ರೀಮಂತರಿಗೆ ತಮ್ಮ ಮುಗ್ಧ ಮಕ್ಕಳನ್ನು ತಂದೆ ತಾಯಿಗಳೇ ನಿಂತು ಮದುವೆ ಮಾಡುವ ಅಸಹಾಯಕ ಆರ್ಥಿಕ ಸ್ಥಿತಿಗಳ ಚಿತ್ರಣವಿದೆ.

ಬಿರಾನ್ ಕೊಯಾನ ಆರ್ಥಿಕ ಪರಿಸ್ಥಿತಿಯೂ ತುಂಬಾ ಕಷ್ಟದಾಯಕವಾದುದು. ಅರಬ್‌ನಿಂದ ಬರುವ ಶೇಖ್‌ರಿಗೆ ಮುತ್ತುಚ್ಚೇರದ ಹೆಣ್ಣುಗಳನ್ನು ಕೊಡಿಸಿ ಅದರಲ್ಲಿ ಬಂದ ಕಮೀಷನ್ ಹಣದಿಂದ ತನ್ನ ಮನೆಯನ್ನು ನಡೆಸುವಾತ - ಬೇರೆಯವರ ಹೆಣ್ಣು ಮಕ್ಕಳನ್ನು ಶೇಖ್‌ರಿಗೆ ಕೊಡಿಸಿ ಆದರಿಂದ ಬರುವ ಹಣದಿಂದ ತನ್ನ ಹೆಣ್ಣು ಮಕ್ಕಳ ಮದುವೆ ನಿರೀಕ್ಷಿಸಿದಾತ.

ಈ ಕಥೆಯಲ್ಲಿ ರುಬಿಯಾಬಿ ದಿಕ್ಕಿಲ್ಲದ ಹೆಣ್ಣು. ಒಬ್ಬ ಮಗಳೊಂದಿಗೆ ವಾಸಿಸುತ್ತಿರುವ ಇವಳಿಗೆ ಮತ್ತೇ ಬರುತ್ತೇನೆಂದು ಹೇಳಿ ಕುರಾನಿನ ಮೇಲೆ ಆಣೆಯಿಟ್ಟು ಹೋದ-ಅರಬ್ ಮತ್ತೆಂದೂ ಬರುವುದಿಲ್ಲ. ಅವನಿಂದ ಹುಟ್ಟಿದ ಹೆಣ್ಣುಮಗುವೇ ಉನ್ನಿಸಾ. ರುಬಿಯಾಬಿ ಮುಂದೆ ತನ್ನ ಮಗಳನ್ನೂ ಅನಿವಾರ್ಯವಾಗಿ ಅರಬ್‌ನಿಗೆ ಕೊಡಲು ಸಿದ್ಧವಾದಾಗ ಮುತ್ತುಚ್ಚೇರ ಊರಿನ ಯೂಥ್ ಲೀಗ್‌ನವರು ಇದನ್ನು ವಿರೋಧಿಸುತ್ತಾರೆ. ಅರಬರು ಬೇಕಾದಾಗ ಉಪಯೋಗಿಸಿ ನಂತರ ಬಿಸಾಟಿ ಹೋಗುತ್ತಾರೆ ಎಂದು ಯುವಕರು ಹೇಳಿದಾಗ - ರುಬಿಯಾಬಿ ''ನಾನು ಅರಬನಿಗೆ ತನ್ನ ಮಗಳನ್ನು ಕೊಡುವುದಿಲ್ಲ. ಆದರೆ ನಿಮ್ಮಲ್ಲಿ ಯಾರಾದರೂ ಒಬ್ಬರು ಅವಳನ್ನು ಮದುವೆಯಾಗಲು ಸಿದ್ಧರಿದ್ದಿರಾ?'' ಎಂದಾಗ ಯುವಕರು ಬಂದದಾರಿಗೆ ಸುಂಕವಿಲ್ಲದಂತೆ ಹೋಗುತ್ತಾರೆ. ಇದು ಆ ಯುವಕರ ನಿಷ್ಕ್ರಿಯತೆ ಸೂಚಿಸುತ್ತದೆ. ಮಗಳನ್ನು ಅರಬ್‌ನಿಗೆ ಕೊಡಲು ಮುಂದಾಗಿ ಕೊನೆಗೆ ಕೊಡುವುದಿಲ್ಲವೆಂದು ರುಬಿಯಾಬಿಯ ಮೂಲಕ ಹೇಳಿಸುವುದರೊಂದಿಗೆ ಲೇಖಕರು ಬಂಡಾಯದ ಧ್ವನಿ ಎತ್ತುತ್ತಾರೆ.

ಮೂಲ ಕಥೆ ಮತ್ತು ಅದನ್ನಾಧರಿಸಿದ ಸಿನಿಮಾ ಮಂಗಳೂರು ಪರಿಸರದ 'ಬ್ಯಾರಿ' ಸಮುದಾಯದ ಜೀವನ ವಿವರಗಳನ್ನೊಳಗೊಂಡಿವೆ. 'ಬ್ಯಾರಿ' ಸಮುದಾಯವು ದಕ್ಷಿಣ ಕನ್ನಡ ಪರಿಸರದಲ್ಲಿರುವ ಮುಸ್ಲಿಮರ ಒಂದು ಉಪಪಂಗಡ. ತಮ್ಮದೇ ಆದ ವಿಶಿಷ್ಟ ಭಾಷೆ ಹಾಗೂ ಜೀವನ ಕ್ರಮವನ್ನು ಹೊಂದಿರುವ 'ಬ್ಯಾರಿ'ಗಳ ಹೆಣ್ಣು ಮಕ್ಕಳು ಧಾರ್ಮಿಕ ಕಂದಾಚಾರಕ್ಕೆ ಸಿಕ್ಕು ನಲುಗುತ್ತಿದ್ದಾರೆ. ಬಡವರಾದರಂತೂ ಅವರ ಬವಣೆ ಹೇಳತೀರದು.

ಅಂಥ ಪಿಡುಗುಗಳಲ್ಲಿ 'ಅರಬ್ಬೀ ಮದುವೆ' ಕೂಡ ಒಂದು. ವ್ಯಾಪಾರಕ್ಕಾಗಿ ಕಡಲ ತೀರದ ಈ ಪ್ರದೇಶಕ್ಕೆ ಬರುವ ಶ್ರೀಮಂತ ಅರಬ್ಬೀ ಪುರುಷರು ಸ್ಥಳೀಯ ವ್ಯಾಪಾರಸ್ಥರ ಮತ್ತು ದಲ್ಲಾಳಿಗಳ ಸಹಕಾರದಿಂದ ಎಳೆಯ ಪ್ರಾಯದ ಬಡ ಬ್ಯಾರಿ ಹೆಣ್ಣು ಮಕ್ಕಳನ್ನು ಮದುವೆಯಾಗುತ್ತಾರೆ. ತಿಂಗಳ ಕಾಲ ಅವರೊಂದಿಗೆ ಸುಖಿಸಿ ತಮ್ಮ ವ್ಯಾಪಾರವನ್ನೂ ಮುಗಿಸಿಕೊಂಡು ಸ್ವದೇಶಕ್ಕೆ ಮರಳುತ್ತಾರೆ. ಗಂಡ ಮತ್ತೆ ತನ್ನತ್ತ ಬರುತ್ತಾನೆಂಬ ನಿರೀಕ್ಷೆಯಲ್ಲಿರುವ ಹೆಣ್ಣು ಮಗಳ ಬದುಕು ಬೆಂಗಾಡಾಗುತ್ತದೆ. ಆತ ಮರಳಿ ಬರುವುದೇ ಇಲ್ಲ. ಏತನ್ಮಧ್ಯೆ ಆ ಅರಬ್ಬಿಗೆ ಹುಟ್ಟಿದ ಹೆಣ್ಣು ಸಂತಾನವನ್ನು ತಂದೆಯಿಲ್ಲವೆಂಬ ಕಾರಣಕ್ಕೆ ಯಾವ ಹುಡುಗರೂ ಮದುವೆಯಾಗಲು ಸಿದ್ಧರಿರುವುದಿಲ್ಲ. ಈ ಪರಿಸ್ಥಿತಿಯಲ್ಲಿ ಮತ್ತೆ ತನ್ನ ಮಗಳನ್ನೂ ಅರಬ್ಬಿಗೇ ನಿಕಾಹ್ ಮಾಡಿಕೊಡಬೇಕಾದ ಅನಿವಾರ್ಯತೆ, ಸಂದಿಗ್ಧತೆ ಅದಕ್ಕೊಪ್ಪದೆ ಹೋದಲ್ಲಿ ಆತ್ಮಹತ್ಯೆಯೊಂದೇ ಗತಿ ಎಂಬ ದುರ್ಭರ ಸ್ಥಿತಿ. ಇಂತಹ ಹೇಯ ಸಂಪ್ರದಾಯ, ಕಂದಾಚಾರಗಳಿಗೆ ತುತ್ತಾದ ಹೆಣ್ಣು ಮಗಳೊಬ್ಬಳು ಕೊನೆಗೆ ಅದರಿಂದ ರೋಸಿ ಹೋಗಿ ಅದಕ್ಕೆ ಕಾರಣರಾದ ದಲ್ಲಾಳಿಗಳ, ಸಾಹುಕಾರರ, ಮೌಲ್ವಿಗಳ ಹಾಗೂ ಅರಬ್ಬೀಗಳ ವಿರುದ್ಧ ಪ್ರತಿಭಟಿಸಿ ನಿಲ್ಲುವ ಹೃದಯ ಸ್ಪರ್ಶಿ ಸನ್ನಿವೇಶವೇ ಚಿತ್ರದ ಕಥಾವಸ್ತು. ಹಿನ್ನೆಲೆಯಾಗಿ ದಕ್ಷಿಣ ಕನ್ನಡ ಕರಾವಳಿ ಪ್ರದೇಶದ ಅದೇ ರೀತಿ ಅಲ್ಲಿನ ಬ್ಯಾರಿ ಸಮುದಾಯದ ಸಾಂಸ್ಕೃತಿಕ ವಿವರಗಳು ಚಿತ್ರವನ್ನು ಅನನ್ಯವಾಗಿಸಿವೆ. ಇದು ಇಲ್ಲಿನ 'ದೇಸೀತನ'ವೂ ಹೌದು, ಬ್ಯಾರಿ ಭಾಷೆಗೆ ಬದಲಾಗಿ ಕನ್ನಡ ಭಾಷೆಯನ್ನು ಬಳಸಲಾಗಿದೆ. ಅದರಲ್ಲೂ ಪ್ರಾದೇಶಿಕತೆಯನ್ನು ಬಹುಮಟ್ಟಿಗೆ ಕಾಯ್ದುಕೊಳ್ಳುವ ಉದ್ದೇಶದಿಂದ ಸಂಭಾಷಣೆಯಲ್ಲಿ ಮಂಗಳೂರು ಕನ್ನಡವನ್ನು ಅಳವಡಿಸಲು ಪ್ರಯತ್ನಿಸಲಾಗಿದೆ. ಈ ಪ್ರಯತ್ನದಲ್ಲಿ ನಿರ್ದೇಶಕರು ಕಲಾವಿದರು ಪೂರ್ಣ ಪ್ರಮಾಣದಲ್ಲಿ ಸಫಲರಾಗದಿದ್ದರೂ ಒಟ್ಟಾರೆಯಾಗಿ ಚಿತ್ರದ ಉದ್ದೇಶ ಸಾರ್ಥಕವಾಗಿದೆಯೆನ್ನಬಹುದು. ಸಂಗೀತ ಹಾಗೂ ಹಾಡುಗಳ ದೃಷ್ಟಿಯಿಂದಲೂ ಚಿತ್ರ ವಿಶಿಷ್ಟತೆಯನ್ನು ಕಾಯ್ದುಕೊಂಡಿದೆ. ಸ್ಥಳೀಯ ಬ್ಯಾರಿಗಳಿಗೂ ಕೇರಳದ ಮಾಪಿಳ್ಳೆಗಳಿಗೂ ಸಾಮಾನ್ಯವಾದ 'ಮಾಪಿಳ್ಳೆಪಾಟ್ಟು' ಧಾಟಿಯಲ್ಲಿ ಸಂಯೋಜಿಸಲಾದ ಹಾಡುಗಳು ಚಿತ್ರಕ್ಕೆ ಮತ್ತುಷ್ಟು ಪ್ರಾದೇಶಿಕತೆಯ ಸೊಗಡನ್ನು ತಂದು ಕೊಟ್ಟಿವೆ.

''ಕಡಲ ತೆರೆಗಳು ಮರಳ ಹಲಗೆಯ ಮೇಲೆ ಬರೆದಿವೆ ಮುನ್ನುಡಿ''. ''ಅರಬಿಯ ಕಡಲಲಿ ಬಂದವನು'' ಇತ್ಯಾದಿ ಹಾಡುಗಳನ್ನು ಇಲ್ಲಿ ಗಮನಿಸಬಹುದು. ಬ್ಯಾರಿ ಸಮುದಾಯಕ್ಕೆ ವಿಶಿಷ್ಟವಾದ 'ದಪ್ಪಿನ ಪಾಟ್ಟ್' ಹಾಗೂ 'ದಪ್ಪುಕುಣಿತ' ವನ್ನೂ ಸಿನಿಮಾದಲ್ಲಿ ಅಳವಡಿಸಿಕೊಳ್ಳಲಾಗಿದೆ. ಬ್ಯಾರಿ ಸಮುದಾಯದ ಸಾಂಸ್ಕೃತಿಕ ಬದುಕಿಗೆ ವಿಶಿಷ್ಟವಾದ ಹಲವು ಪಾರಿಭಾಷಿಕ ಪದಗಳನ್ನು ಸಿನಿಮಾದಲ್ಲಿ ಬಳಸಲಾಗಿದೆ. ಕೊಪ್ಪು, ಕುಪ್ಪಾಯ, ಕುಪ್ಪಿಬಳೆ, ಲೇಸ್, ಅಲೀಕತ್, ನಿಕಾಹ್, ಮಹರ್, ಕಬೂಲ್, ತಲ್ಲಾಖ್ ಮುಂತಾದ ಪದಗಳನ್ನಿಲ್ಲಿ ಉದಾಹರಿಸಬಹುದು. ಇವುಗಳಲ್ಲಿ ಕೆಲವು ಅನ್ಯದೇಶೀಯ ಪದಗಳಾಗಿವೆ. ಉಡುಗೆ-ತೊಡುಗೆ, ಆಹಾರ ಪದ್ಧತಿಗಳಲ್ಲೂ ಸ್ಥಳೀಯ ಬ್ಯಾರಿ ಸಮುದಾಯದ ಅನನ್ಯತೆ ಎದ್ದು ಕಾಣುತ್ತದೆ. ಮೇಲೆ ಪಟ್ಟಿ ಮಾಡಿದ ಪದಗಳಲ್ಲಿ ಕುಪ್ಪಾಯ, ಲೇಸ್ ಮುಂತಾದವು ಬ್ಯಾರಿ ಹೆಣ್ಣು ಮಕ್ಕಳ ಉಡುಗೆಗಳಾದರೆ ಕೊಪ್ಪು, ಅಲೀಕತ್ ಮುಂತಾದವು ಅವರ ತೊಡುಗೆಗಳು. ಕರಾವಳಿ ಪ್ರದೇಶದ ಆಹಾರದಲ್ಲಿ ವಿಶಿಷ್ಟವಾದ ಮೀನು ಸಾರಿನ ಪ್ರಸ್ತಾಪವೂ ಇಲ್ಲಿದೆ. 'ಬ್ಯಾರಿ' ಎಂಬುದು ಬೇರ - ವ್ಯಾಪಾರ ಎಂಬ ವೃತ್ತಿ ವಾಚಕ ಪದವಾಗಿದ್ದು ಅದಕ್ಕೆ ಪೂರಕವಾಗಿ ಇಲ್ಲಿ ಮರದ ಮಿಲ್ಲಿನ ವ್ಯಾಪಾರ-ಉದ್ದಿಮೆಯ ಉಲ್ಲೇಖವಿದೆ. ಒಟ್ಟಿನಲ್ಲಿ ದೇಸೀ ಸಮುದಾಯವೊಂದರ ಸಾಂಸ್ಕೃತಿಕ ಬದುಕಿನ ನೋವು-ಸಂಕಟ-ಸಮಸ್ಯೆಗಳನ್ನು ಪ್ರಜ್ಞಾವಂತ ಪ್ರೇಕ್ಷಕರ ಮನಮುಟ್ಟುವಂತೆ ಕಲಾತ್ಮಕವಾಗಿ ಸಂವಹನ ಗೊಳಿಸುವಲ್ಲಿ 'ಮುನ್ನಡಿ' ಯಶಸ್ವಿಯಾಗಿದೆ. ಇಲ್ಲಿನ ಪ್ರತಿಭಟನೆಯ ಧ್ವನಿ ಇಂತಹ ಸಾಮಾಜಿಕ-ಧಾರ್ಮಿಕ ಪಿಡುಗಳಿಗೆ ತುತ್ತಾಗಿ ನಲುಗುವ ಎಲ್ಲಾ ಹೆಣ್ಣು ಮಕ್ಕಳ ಬಾಳಿಗೆ ಒಂದು 'ಮುನ್ನಡಿ' ಯಾಗಬೇಕೆಂಬ ಸದಾಶಯ ಚಿತ್ರದಲ್ಲಿದೆ.

ಇತ್ತೀಚಿಗೆ ತೆರೆಕಂಡ ಗಿರೀಶ್ ಕಾಸರವಳ್ಳಿ ನಿರ್ದೇಶನದ **ಹಸೀನಾ** ಚಿತ್ರ, ಬಾನುಮುಸ್ತಾಕ್ ಅವರ ಕರಿನಾಗರಗಳು ಕಥೆಯನ್ನಾಧರಿಸಿದುದು. ಹೆಣ್ಣು, ಆಸ್ತಿ, ಹಕ್ಕು, ಪತಿ ಮತ್ತು ಮಕ್ಕಳ ಜೀವನ ನಿರ್ವಹಣೆಯ ಬಗ್ಗೆ ಹೆಣೆದಿರುವ ಬಾನುರವರ 'ಹೆಜ್ಜೆ ಮೂಡದಹಾದಿ' ಯಲ್ಲಿ ಮತ್ತು 'ಬೆಂಕಿಮಳೆ' ಎಂಬ ಕಥೆಗಳು ಇಸ್ಲಾಂನ ಬದುಕನ್ನು, ಸಾಂಸ್ಕೃತಿಕ ಲೋಕವನ್ನು, ಹೆಣ್ಣಿನ ತಲ್ಲಣಗಳನ್ನು ಸಮರ್ಥವಾಗಿ ಬಿಚ್ಚಿಡುತ್ತವೆ. 'ಕರಿನಾಗರಗಳು' ಕತೆ ಪುರಷನ ಬಾದ್ಯತೆಗಳ ಬಗ್ಗೆ ಎಚ್ಚರಿಸಿದರೆ .

[illegible]

ದಾರ್ಮಿಕ ಗ್ರಂಥದಲ್ಲಿರುವ ಉಲ್ಲೇಖ 'ಷರಿಯತ್ ಪ್ರಕಾರ ಇನ್ನೊಂದು ಮದುವೆಯಾದರೂ ಇಬ್ಬರನ್ನೂ ಸಮಾನವಾಗಿ ನೋಡಿಕೊಳ್ಳುವುದು ಅವನ ಬಾದ್ಯತೆ' ಎಂಬ ಉಕ್ತಿಯನ್ನು ಉದಾಹರಿಸುತ್ತಾರೆ. ಬಸಿರು ಬಾಣಂತನ ಮಕ್ಕಳ ಆರೈಕೆಯಲ್ಲೇ ನಲುಗಿ ಹೋಗುವ ಹೆಣ್ಣುಗಳ ಸಂತಾನಹರಣ ಶಸ್ತ್ರ ಚಿಕಿತ್ಸೆಯ ವಿಷಯವೂ ಕತೆಯಲ್ಲಿ ಬರುತ್ತದೆ. ಸಂಪ್ರದಾಯಿಕ ನೆಲೆಯಲ್ಲಿ ಅವಳು ತನ್ನ ದೇಹದ ಮೇಲೆ ಯಾವ ನಿಯಂತ್ರಣವನ್ನು ಹೊಂದಿಲ್ಲ. ಅದಕ್ಕೆ ಅವಳ ಧಾರ್ಮಿಕ ನಂಬಿಕೆಗಳೇ, ಸರಳವಾಗುವ ಸಮಸ್ಯೆಯನ್ನು ಜಟಿಲಗೊಳಿಸಿದ್ದಿದೆ. ಕೊನೆಗೂ ಸಂತಾನ ಹರಣ ಚಿಕಿತ್ಸೆಗೆ ಸಿದ್ಧವಾಗುವ 'ಕರಿನಾಗರ'ಗಳು ಕತೆಯ ಅಮೀನಾಳು ಸಮಸ್ಯೆಯ ಜಟಿಲ ಪೊರೆಯನ್ನು ಕಳಚಿಕೊಳ್ಳುತ್ತಾಳೆ. ಹೀಗೆ ಮುಸ್ಲಿಂ ಸಮಾಜದಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ಎದ್ದುನಿಂತ ದಿಟ್ಟ ಮಹಿಳೆಯರೂ ಇದ್ದಾರೆ.

ಅಪರಾತ್ರಿಯಲ್ಲಿ ಮಸೀದಿ ಮುಂದೆ ಕುಳಿತ ಅಶ್ರಫ್‌ಳಿಗಾಗಿ ಕತ್ತಲೆಯ ಮರೆಯಿಂದ ಕೊಟ್ಟಿಕೊಡಲು ಪ್ರಯತ್ನಿಸುವ ಅಮೀನ, ಕರಿನಾಗರಗಳು ಕಥೆಯ ಆರೀಫ್ ಮನೆಯ ಮಗಳಾದರೂ ಅಪರಿಚಿತಳಂತೆ ಮನೆ ಹೊರಗೆ ಕುಳಿತ ನಾದಿನಿಗಾಗಿ ತುಡಿಯುವ ಮನಸ್ಸು; ಗುಸ್ಸಾಲಿನ್ ಮರಿಯಂಬಿಯ ಹಸಿವು ತಣಿಸುವ ಕೆಲಸದವರು ; ಬಡ ಮಗುವಿಗೆ ತನ್ನ ಮಗನ ಬಟ್ಟೆಯನ್ನೇ ಎತ್ತಿಕೊಡುವ ರಜಿಯಾ ; ಅಶ್ರಫ್‌ಗಳನ್ನೂ ಅವಳ ಮಕ್ಕಳನ್ನೂ ಮನೆಗೆ ಕರೆದೊಯ್ದು ಸಹಕರಿಸುವ ಹನೀಫ್ ಚಿಕ್ಕಮ್ಮ ; ಮುತುವಲ್ಲಿಗಳ ಮೇಲಿನ ಸಿಟ್ಟನ್ನು ರಫಿಯಾ ಚರಂಡಿ ಕೊಚ್ಚೆಗೆ ಕಲ್ಲೆಸೆದು 'ನಾಯಿ ಅಂದ್ರೆನಾಯಿ' ಎಂದು ತೀರಿಸಿಕೊಳ್ಳುವುದು ; ಕೊನೆಗೂ ಅಮಿನ ಹತ್ತು ಹಡೆದು ಕೊಟ್ಟಿದ್ದೀನಲ್ಲಾ, ಇನ್ನಾದರೂ ಆಪರೇಷನ್ ಮಾಡಿಸಿಕೊಳ್ಳೋಣಾಂತ. 'ನಾನು ಬರೋದು ಒಂದು ವಾರ ಆಗುತ್ತೆ' ಎಂದು ಮಕ್ಕಳನ್ನು ನೋಡಿಕೊಳ್ಳಲು ಮುತವಲ್ಲಿಗೆ ಹೇಳಿದ ಅಮೀನ ಕೊನೆಗೂ ಬಂಡಾಯವೆಳುವುದು ಅರ್ಥ ಪೂರ್ಣವಾಗಿದೆ. ಈ ಕಥಾ ಬಿತ್ತಿಯನ್ನು ಆಧರಿಸಿ ಹಸಿನಾ ಚಿತ್ರ ನಿರ್ಮಾಣವಾಗಿದೆ.

'ಮುನ್ನುಡಿ'ಯಲ್ಲಿನ ಮುಸ್ಲಿಂ ಸಮುದಾಯ (ಬ್ಯಾರಿ) ಮಂಗಳೂರು ಪರಿಸರದ್ದಾದರೆ, 'ಹಸೀನಾ'ದಲ್ಲಿ ಚಿತ್ರಿತವಾಗಿರುವ ಮುಸ್ಲಿಂ ಸಮುದಾಯ ಘಟ್ಟದ ಮೇಲಿನ ಬಯಲು ಸೀಮೆಯದ್ದು. ಎರಡೂ ಸಮುದಾಯಗಳೂ ಮೂಲತಃ ಇಸ್ಲಾಂ ಧರ್ಮಕ್ಕೆ ಸೇರಿದ್ದಾದರೂ ಭಾಷೆಯಲ್ಲಿ ಆಚಾರ-ವಿಚಾರಗಳಲ್ಲಿ ಜೀವನ ಕ್ರಮದಲ್ಲಿ ಈ ಎರಡು ಸಮುದಾಯಗಳೊಳಗೆ ಎದ್ದು ಕಾಣುವ ಭಿನ್ನತೆಯಿದೆ. ಪ್ರಾದೇಶಿಕತೆಯ ದೃಷ್ಠಿಯಿಂದಲೂ ಅನನ್ಯವಾದ ಎರಡು ಸಮುದಾಯಗಳಿವು. ಇದು ಮುಸ್ಲಿಂ ಹೆಣ್ಣು ಮಕ್ಕಳನ್ನು ವಿಶೇಷವಾಗಿ ಕಾಡುವಂತಹ 'ತಲ್ಲಾಖ' ಸಮಸ್ಯೆಯನ್ನು ಕೇಂದ್ರವಾಗಿಟ್ಟುಕೊಂಡು ತಯಾರಿಸಿದ ಚಿತ್ರವಾಗಿದೆ. ತಲ್ಲಾಖನಿಂದ ದೊರೆಯ ಬಹುದಾದ ಪರಿಹಾರದ ಹಣ ತನ್ನ ಅಂಧ ಮಗಳ ಚಿಕಿತ್ಸೆಗೆ ಉಪಯೋಗವಾದೀತೆಂಬ ನಿರೀಕ್ಷೆಯಿಂದ ಸ್ವತಃ ತಾನೇ ತನ್ನ ಗಂಡನಿಂದ ತಲ್ಲಾಖ್ ಪಡೆಯಲು ಹಂಬಲಿಸುವ ಮುಸ್ಲಿಂ ಹೆಣ್ಣು ಮಗಳೊಬ್ಬಳ ಶೋಚನೀಯ ಬದುಕು ಇಲ್ಲಿ ಚಿತ್ರಿತವಾಗಿದೆ. ಕೊನೆಗೂ ತಲ್ಲಾಖೆಗೆ ಅನುಮತಿ ಸಿಕ್ಕಾಗ ಕಾಲ ಮಿಂಚಿ ಹೋಗಿರುತ್ತದೆ. ತನ್ನ ಗಂಡನ ಶೋಷಣೆಗೆ ತುತ್ತಾಗಿ ಅಂಧ ಮಗಳು ಪ್ರಾಣವನ್ನು ಕಳೆದು ಕೊಳ್ಳಬೇಕಾದ ಪರಿಸ್ಥಿತಿ ಒದಗಿಬರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ತನ್ನ ಪ್ರಯೋಜನಕ್ಕೆ ಬಾರದ ತಲ್ಲಾಖನ್ನು ನಿರಾಕರಿಸುತ್ತಾಳೆ. ಇಸ್ಲಾಂ ಧರ್ಮದೊಳಗಿನ ಪುರುಷ ಪ್ರಧಾನ ವ್ಯವಸ್ಥೆಗೆ ಗಂಡಂದಿರ ಶೋಷಣೆಗೆ, ದಬ್ಬಾಳಿಕೆಗೆ ಈ ಚಿತ್ರ ಕನ್ನಡಿ ಹಿಡಿಯುತ್ತದೆ. ಇದು ಉರ್ದು ಮನೆ ಮಾತಾಗಿರುವ ಮುಸ್ಲಿಂ ಸಮುದಾಯದ ಕಥೆಯಾದುದರಿಂದ ಚಿತ್ರದಲ್ಲಿ ಸಹಜವಾಗಿಯೇ ಉರ್ದು ಮಿಶ್ರಿತ ಕನ್ನಡವನ್ನೇ ಬಳಸಲಾಗಿದೆ. ಇಲ್ಲಿನ 'ದೇಸೀ ಸಂಸ್ಕೃತಿ' ಬಯಲು ಸೀಮೆಯ ಮುಸ್ಲಿಂ ಸಮುದಾಯದ ಜೀವನ ಕ್ರಮವನ್ನೂ ಅಲ್ಲಿನ ಪ್ರಾದೇಶಿಕತೆಯನ್ನೂ ಒಳಗೊಂಡಿದೆ.

ಹೀಗೆ ಪ್ರಾರಂಭದಿಂದಲೂ ವಿವಿಧ ದೇಸೀ ಸಮುದಾಯಗಳ ಸಂವೇದನೆಗಳು ಕನ್ನಡ ಸಿನಿಮಾಗಳಲ್ಲಿ ಬಗೆ ಬಗೆಯಾಗಿ ಚಿತ್ರಿತವಾಗಿರುವುದನ್ನು ಕಾಣಬಹುದಾಗಿದೆ. ಕೆಲವು ಸಿನಿಮಾಗಳಲ್ಲಿ ದೇಸೀ ಸಮುದಾಯಗಳ ಸಾಂಸ್ಕೃತಿಕ ವಿವರಳಷ್ಟೇ ಅನಾವರಣಗೊಂಡರೆ ಇನ್ನು ಕೆಲವು ಸಿನಿಮಾಗಳಲ್ಲಿ ಅವರ ಬದುಕಿನ ಸೂಕ್ಷ್ಮಗಳು, ಸಮಸ್ಯೆಗಳು, ಚಿಕಿತ್ಸಕ ದೃಷ್ಟಿಯಿಂದ ಚಿತ್ರಿತವಾಗಿವೆ.

ಸಾಹಿತ್ಯದಲ್ಲಿ ಕಾಣಿಸಿಕೊಂಡಂತೆ ಸಿನಿಮಾದಲ್ಲೂ ವಿವಿಧ ದೇಸೀ ಸಮುದಾಯಗಳ ಸಂವೇದನೆಗಳು ಆಯಾ ಕಾಲದ ವೈಚಾರಿಕ ಚಿಂತನೆಗಳಿಗೆ ಅನುಗುಣವಾಗಿ ಮೂಡಿ ಬಂದುದನ್ನು ನಾವಿಲ್ಲಿ ಗುರುತಿಸಬಹುದಾಗಿದೆ. ವಿವಿಧ ಸಮುದಾಯಗಳ ಜೀವನ ವಿಧಾನ, ಶೋಷಿತ ಸಮುದಾಯಗಳ ಬಡತನ, ಕಷ್ಟಕಾರ್ಪಣ್ಯಗಳು, ಅಸಹಾಯಕತೆ ಇತ್ಯಾದಿ ಅಂಶಗಳೆಲ್ಲ ಕನ್ನಡದ ಕೆಲವು ಸಿನಿಮಾಗಳಲ್ಲಿ ಅಭಿವ್ಯಕ್ತವಾಗಿವೆ. ಬೆರಳೆಣಿಕೆಯ ಕೆಲವು ಸಿನಿಮಾಗಳಲ್ಲಿ ಶೋಷಣೆಗೆ ವಿರುದ್ಧವಾದ ಪ್ರತಿಭಟನೆಯ ಧ್ವನಿಗಳು ಕೇಳಿಬಂದಿವೆ. ಸಮಕಾಲೀನ ಸಂದರ್ಭದಲ್ಲಿ ದೇಸೀ ಸಮುದಾಯಗಳನ್ನು ಕಾಡುವ ಸಾಂಸ್ಕೃತಿಕ ಸಂಘರ್ಷದ ನೆಲೆಗಳು ಇತ್ತೀಚಿನ ಕೆಲವು ಸಿನಿಮಾಗಳಲ್ಲಿವೆ.

ಇಲ್ಲಿ ಮುಖ್ಯವಾಗಿ 'ಕೆಳವರ್ಗ'ದ ಸಮುದಾಯಗಳ ಸಂವೇದನೆಯನ್ನಷ್ಟೇ ಗಮನಿಸಲಾಗಿದೆ. ಹಾಗೆ ನೋಡಿದರೆ ನಮ್ಮ ಗ್ರಾಮೀಣ ಪರಿಸರದಲ್ಲಿ ಬದುಕುತ್ತಿರುವ ಎಲ್ಲಾ ಸಮುದಾಯಗಳೂ ದೇಸೀ ಸಮುದಾಯಗಳೇ. ಎಲ್ಲಾ ಸಮುದಾಯಗಳ ಜನರಿಗೂ ಅವರದೇ ಆದ ಅನುಭವ ಸಂವೇದನೆಗಳಿರುತ್ತವೆ. ಬೇನೆ-ಬೇಸರಗಳಿರುತ್ತವೆ. ನಮ್ಮ ಸಾಹಿತ್ಯ-ಕಲೆಗಳಲ್ಲಿ ನಾವು 'ಕೆಳವರ್ಗದ ಸಂವೇದನೆ'ಗಳನ್ನು ಗುರುತಿಸಿದಂತೆ 'ಮೇಲ್ವರ್ಗದ ಸಂವೇದನೆ'ಗಳನ್ನೂ ಗುರುತಿಸಬಹುದಾಗಿದೆ. ಅದರಂತೆ 'ಘಟಶ್ರಾದ್ಧ', 'ಸಂಸ್ಕಾರ', 'ಫಣಿಯಮ್ಮ' ದಂಥ ಸಿನಿಮಾಗಳಲ್ಲಿ ಬ್ರಾಹ್ಮಣ ಸಮುದಾಯದ ಸೂಕ್ಷ್ಮ ಸಂವೇದನೆಗಳಿವೆ. ಸಾವಿತ್ರಿ, ನಾಯಿನೆರಳುಗಳಂತಹ ಸಿನಿಮಾಗಳೂ ಇದೇ ಸಾಲಿಗೆ ಸೇರುತ್ತವೆ. 'ಕಾನೂರ ಹೆಗ್ಗಡತಿ' ಸಿನಿಮಾದಲ್ಲಿ ಮಲೆನಾಡಿನ ಒಕ್ಕಲಿಗ ಸಮುದಾಯದ ಆಚಾರ-ವಿಚಾರ ನೋವು - ನಲಿವುಗಳ ಚಿತ್ರಣವಿದೆ. ಹೀಗೆ ಹಲವನ್ನು ಹೆಸರಿಸುತ್ತಾ ಹೋಗಬಹುದು. ಸಾಹಿತ್ಯ ಮತ್ತು ಸಿನಿಮಾ ಸಂಬಂಧವನ್ನು ಗುರುತಿಸುವ ಹಿಂದಿನ ಅಧ್ಯಾಯದಲ್ಲಿ ತತ್ಸಂಬಂಧವಾಗಿ ಈಗಾಗಲೇ ವಿವರಿಸಲಾಗಿದೆ.

ಅಧ್ಯಾಯ-೭

ಸಮಾಪನ

ಕನ್ನಡ ಸಿನಿಮಾಗಳಲ್ಲಿ ಅಭಿವ್ಯಕ್ತವಾಗಿರುವ ದೇಸೀ ಸಂಸ್ಕೃತಿಯ ಸ್ವರೂಪ ಮತ್ತು ನೆಲೆಗಳನ್ನು ಇದವರೆಗಿನ ಅಧ್ಯಾಯಗಳಲ್ಲಿ ವಿಶ್ಲೇಷಿಸಲಾಗಿದೆ. ಸಿನಿಮಾದಂಥ ಸಮ್ಮಿಶ್ರ ಕಲಾ ಮಾಧ್ಯಮವನ್ನು ಶುದ್ಧಾಂಗವಾಗಿ ದೇಸೀ ಸಂಸ್ಕೃತಿಗೆ ಅನ್ವಯಿಸಿ ಚರ್ಚೆ ಮಾಡುವುದು ಕಷ್ಟ ಸಾಧ್ಯವೆಂಬುದು ಅಧ್ಯಯನದುದ್ದಕ್ಕೂ ವ್ಯಕ್ತವಾಗಿದೆ. ತಂತ್ರಜ್ಞಾನ ಪ್ರಧಾನವಾದ ಸಿನಿಮಾ ನಮ್ಮ ನಾಡಿಗೆ ವಿದೇಶದಿಂದ ಬಂತೆಂಬುದು ನಿಜವಾದರೂ ನಂತರದ ಬೆಳವಣಿಗೆಗಳನ್ನು ನೋಡಿದರೆ ಅದು ದೇಶೀಯವಾಗಿ ಬೆಳೆದುದೂ ಅಷ್ಟೇ ಸತ್ಯವೆನ್ನಬಹುದು. ಈ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಅದು 'ದೇಸೀ ಸಂಸ್ಕೃತಿ'ಯನ್ನು ಎಷ್ಟರ ಮಟ್ಟಿಗೆ ಯಾವೆಲ್ಲ ಸ್ವರೂಪಗಳಲ್ಲಿ ಅಳವಡಿಸಿಕೊಂಡು ಬೆಳೆಯಿತೆಂಬುದನ್ನು ಒಟ್ಟಾರೆ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ಇವೆಲ್ಲವುಗಳ ಜತೆಗೆ ಸಿನಿಮಾಕ್ಕೆ ಸಂಬಂಧಪಟ್ಟಂತೆ ಬಹು ಮುಖ್ಯ ಸಂಗತಿಯೊಂದನ್ನು ನಾವು ಅರಿತಿರಬೇಕಾಗುತ್ತದೆ. ಒಟ್ಟಾರೆ ಸಿನಿಮಾಗಳಲ್ಲಿ ಅಥವಾ ನಿರ್ದಿಷ್ಟ ಸಿನಿಮಾವೊಂದರಲ್ಲಿ ಅಭಿವ್ಯಕ್ತವಾಗಿರುವ (ಹಾಸುಹೊಕ್ಕಾಗಿರುವ) ಸಂಸ್ಕೃತಿಯನ್ನು ಇದು ದೇಸೀ ಸಂಸ್ಕೃತಿ, ಇದು ವಿದೇಶೀ ಸಂಸ್ಕೃತಿ, ಇದು ಪಾಶ್ಚಾತ್ಯ ಸಂಸ್ಕೃತಿ, ಇದು ಪೌರ್ವಾತ್ಯ ಸಂಸ್ಕೃತಿ, ಇದು ಗ್ರಾಮೀಣ ಸಂಸ್ಕೃತಿ, ಇದು ನಗರ ಸಂಸ್ಕೃತಿ, ಇದು ವೈದಿಕ ಸಂಸ್ಕೃತಿ, ಇದು ಅವೈದಿಕ ಸಂಸ್ಕೃತಿ, ಇದು ಭಾರತೀಯ ಸಂಸ್ಕೃತಿ, ಇದು ಕನ್ನಡ ಸಂಸ್ಕೃತಿ. ಇದು ಜಾಗತಿಕ ಸಂಸ್ಕೃತಿ ಇತ್ಯಾದಿಯಾಗಿ ವಿಶ್ಲೇಷಿಸಬಹುದು. ಆದರೆ ಇವೆಲ್ಲಗಳ ಆಚೆಗಿನ ಸಂಸ್ಕೃತಿಯೊಂದು ಸಿನಿಮಾದಲ್ಲಿರುತ್ತದೆ. ಅದುವೇ 'ಸಿನಿಮಾ ಸಂಸ್ಕೃತಿ'.

[illegible]

ಮೇಲೆ ಹೆಸರಿಸಿದ ಎಲ್ಲಾ ಬಗೆಯ ಸಂಸ್ಕೃತಿಗಳೂ ಅಂತಿಮವಾಗಿ ಸಿನಿಮಾ ಸಂಸ್ಕೃತಿಯೊಂದನ್ನು ಕಟ್ಟಿಕೊಡುವತ್ತ ತುಡಿಯುತ್ತಿರುತ್ತವೆ. ಒಂದು ರೀತಿಯಲ್ಲಿ ಅದು 'ಜನಪ್ರಿಯ ಸಂಸ್ಕೃತಿ'ಯೂ ಹೌದು. ಈ ಸಿನಿಮಾ ಸಂಸ್ಕೃತಿಯೆಂದರೆ ಇಂಥದ್ದೇ ಎಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟಸಾಧ್ಯ. ಸಿನಿಮಾವೆಂದಾಗ ಕೆಲವರಲ್ಲಿ ಸಾಮಾನ್ಯವಾದ ಕೆಲವು ಕಲ್ಪನೆಗಳಿರುತ್ತವೆ. ಅದೇ ರೀತಿ ಹಲವರಲ್ಲಿ ಸಾಮಾನ್ಯವಾದ ಕೆಲವು ನಿರೀಕ್ಷೆಗಳಿರುತ್ತವೆ. ಪ್ರೇಮ-ಪ್ರಣಯ, ಲೈಂಗಿಕತೆಯ ದೃಶ್ಯಗಳು, ದ್ವೇಷ - ಅಸೂಯೆ, ಹೊಡೆದಾಟಗಳ ದೃಶ್ಯಗಳು ನಾಯಕ-ಪ್ರತಿನಾಯಕ (ವಿಲನ್) ಕಲ್ಪನೆಗಳು, ಹಾಡು-ನೃತ್ಯಗಳ ಸನ್ನಿವೇಶಗಳು ಇತ್ಯಾದಿ ಪರಿಕರಗಳು ಸೇರುವಿಕೆಯಿಂದ ನಿರ್ಮಾಣವಾದ ಸಂಸ್ಕೃತಿಯೇ 'ಸಿನಿಮಾ ಸಂಸ್ಕೃತಿ' ಯೆನ್ನಬಹುದು. ಮಾನವ ಬದುಕಿನ ಯಾವುದೇ ಸಂಸ್ಕೃತಿ - ಸಂಗತಿಯನ್ನು ಬಳಸಿಕೊಂಡರೂ ಸಿನಿಮಾ ಅದನ್ನು ತನ್ನ ಸಂಸ್ಕೃತಿಗೆ ಅಳವಡಿಸಿಕೊಳ್ಳುತ್ತದೆ ಎಂಬುದೇ ಈ ತಿಳುವಳಿಕೆಯ ಮಥಿತಾರ್ಥ. ಆದರೆ ಇದಕ್ಕೆ ಹೊರತಾದ ಸಿನಿಮಾಗಳೂ ಇಲ್ಲವೇ? ಎಂಬ ಪ್ರಶ್ನೆಯೂ ಇಲ್ಲಿ ಪ್ರಸ್ತುತವೆನಿಸುತ್ತದೆ.

ಹೀಗೆ ಸಿನಿಮಾ ಎಂಬುದೇ 'ನಮ್ಮ ಸಂಸ್ಕೃತಿ'ಗೆ ಹೊರತಾದುದು, ವಿದೇಶೀ ಸಂಸ್ಕೃತಿಗೆ ಸಂಬಂಧಪಟ್ಟದು ಎಂಬ ಭಾವನೆ ನಮ್ಮ ಜನರಲ್ಲಿರುವುದು ಸರ್ವೇ ಸಾಮಾನ್ಯ. ಅಂಥ ವಿದೇಶೀ ಸಂಸ್ಕೃತಿಗೆ ನಿಷ್ಟವಾದ ಸಿನಿಮಾದಲ್ಲಿ ದೇಸೀ ಸಂಸ್ಕೃತಿಯನ್ನು ಹುಡುಕುವುದು ಒಂದೊಮ್ಮೆಗೆ ವಿಪರ್ಯಾಸವೆನಿಸಿದರೂ ಅಷ್ಟೇ ಮಹತ್ವದ ಸಂಗತಿಯೂ ಹೌದು. ಹಾಗೆ ನೋಡಿದರೆ ವಿದೇಶೀ ಮೂಲದ ಅನೇಕ ಆಧುನಿಕ ತಂತ್ರಜ್ಞಾನ ಮಾಧ್ಯಮಗಳು, ವಿದ್ಯುನ್ಮಾನ ಮಾಧ್ಯಮಗಳು, ಮನರಂಜನೆಯ ಮಾಧ್ಯಮಗಳು ದೇಸೀಯವಾಗಿ ಬೆಳೆದಿಲ್ಲವೇ? ಅಷ್ಟೇಯಾಕೆ ಆಧುನಿಕ ಸಾಹಿತ್ಯದ ಹಲವಾರು ಪ್ರಕಾರಗಳು ಪಾಶ್ಚಾತ್ಯ ಪ್ರಭಾವದಿಂದ ಹುಟ್ಟಿಕೊಂಡವು ಅವೆಲ್ಲಾ ನಮ್ಮ ದೇಸೀ ಸಂಸ್ಕೃತಿಯ ಭಾಗವಾಗಿ ಬೆಳೆದಿಲ್ಲವೆ? ದೇಸೀ ಸಂಸ್ಕೃತಿಯನ್ನು ಸಶಕ್ತವಾಗಿ ಅಭಿವ್ಯಕ್ತಿಗೊಳಿಸಿಲ್ಲವೆ? ಸಿನಿಮಾವನ್ನೂ ಕೂಡಾ ಇದೇ ದೃಷ್ಟಿ ಕೋನದಿಂದ ನೋಡಬೇಕಾಗುತ್ತದೆ.

ಸಿನಿಮಾ ತಂತ್ರಜ್ಞಾನವಾಗಲಿ, ಮಾಧ್ಯಮವಾಗಲಿ ವಿದೇಶೀ ಮೂಲವೆಂಬುದು ಸರ್ವ ವಿಧಿತವಾದ ಸಂಗತಿಯಾದರೂ ನಮ್ಮ ಸಿನಿಮಾ ಎಷ್ಟರ ಮಟ್ಟಿಗೆ ನಮ್ಮದಾಗಿದೆ? ನಮ್ಮ ಸಂಸ್ಕೃತಿಯ ಭಾಗವಾಗಿದೆ? ನಮ್ಮ ತನವನ್ನು ಬೆಳೆಸಿಕೊಂಡಿದೆ? ಎಂಬುದನ್ನು ಅರಿತುಕೊಳ್ಳುವುದೂ ಅವಶ್ಯವೆನಿಸುತ್ತದೆ. ಇಲ್ಲಿ ನಮ್ಮದು, ನಮ್ಮ ಸಂಸ್ಕೃತಿ, ನಮ್ಮತನ ಅರ್ಥಾತ್ 'ದೇಸೀ ಸಂಸ್ಕೃತಿ' ಎಂದರೆ ಯಾವುದು? ಸಿನಿಮಾ ಎಂದಾಕ್ಷಣ ಅದರ ವಿದೇಶಿ ಮೂಲ, ಜಾಗತಿಕ ಪರಿಪ್ರೇಕ್ಷ್ಯ ನಮ್ಮ ಕಣ್ಣಮುಂದೆ ನಿಲ್ಲುವುದರಿಂದ ಆ ದೃಷ್ಟಿಕೋನದಿಂದಲೇ ನಮ್ಮ ಸಿನಿಮಾವನ್ನು ಪರಿಭಾವಿಸಿದಾಗ ಅದರಲ್ಲಿ ಬಿಂಬಿತವಾಗಿರುವ ಭಾರತೀಯ ಸಂಸ್ಕೃತಿಯೂ ದೇಸೀ ಸಂಸ್ಕೃತಿ ಎನಿಸಿಕೊಳ್ಳುತ್ತದೆ. ದೇಸೀ ಸಂಸ್ಕೃತಿ - ದೇಸೀ ಸಂಸ್ಕೃತಿ - ದೇಸೀಯತೆ ಇತ್ಯಾದಿ ಪರಿಭಾಷೆಗಳೆಲ್ಲಾ ಮೂಲತಃ ದೇಶ/ಸ್ವದೇಶ ಪರಿಕಲ್ಪನೆಯಿಂದ ಬಂದುದು. ದೇಸೀಯತೆ-ದೇಸೀ ಸಂಸ್ಕೃತಿ ಎಂಬುದು ಅದರ ಪದ ಸ್ವರೂಪದಿಂದ ದೇಶ ವ್ಯಾಪಕತೆಯನ್ನು ಪಡೆದರೆ 'ದೇಶೀ ಸಂಸ್ಕೃತಿ' ಎಂಬುದು ಅದರಲ್ಲಿನ ಗ್ರಾಮ್ಯ ರೂಪದಿಂದ ಗ್ರಾಮೀಣ/ಪ್ರಾದೇಶಿಕ ಮಿತಿಗೆ ಅನ್ವಯವಾಗುತ್ತದೆ.

ಭಾರತದ ಸಂದರ್ಭದಲ್ಲಿ ಭಾರತೀಯ ಪುರಾಣ ಇತಿಹಾಸದ ಕಥೆಗಳು, ಭಾರತೀಯವೆಂದು ಪರಿಗಣಿತವಾದ ಮೌಲ್ಯ-ಆದರ್ಶಗಳು, ಸಂಪ್ರದಾಯ ನಡವಳಿಕೆಗಳು, ಆಚಾರವಿಚಾರಗಳು, ಬಾಂಧವ್ಯದ ಎಳೆಗಳು, ದೈವಭಕ್ತಿ, ದೇಶಭಕ್ತಿ, ಧಾರ್ಮಿಕ ಪ್ರಜ್ಞೆಗಳು ಇತ್ಯಾದಿಗಳು ಕನ್ನಡ ಸಿನಿಮಾಗಳಲ್ಲಿ ಅಭಿವ್ಯಕ್ತವಾದ ದೇಸೀ ಸಂಸ್ಕೃತಿಯ ಅಂಶಗಳಾದರೆ. ಕರ್ನಾಟಕದ ಸಂದರ್ಭದಲ್ಲಿ ಇಲ್ಲಿನ ವಿವಿಧ ಜನಪದ, ಅದರ ಜಾನಪದ, ಸ್ಥಳೀಯ ಚರಿತ್ರೆಯ ಕಥೆಗಳು, ಕನ್ನಡ ನಾಡುನುಡಿ ಕುರಿತಾದ ಪ್ರಜ್ಞೆವಿವಿಧ ನೆಲೆಗಳಲ್ಲಿ ಸಾಂಸ್ಕೃತಿಕ ಸಂಘರ್ಷದ ಅಭಿವ್ಯಕ್ತಿ ಇತ್ಯಾದಿಗಳು ದೇಸೀ ಸಂಸ್ಕೃತಿಯ ಪ್ರಮುಖ ಅಂಶಗಳು.

ಈ ದೇಸೀ ಸಂಸ್ಕೃತಿಯ ಅಂಶಗಳು ಸಿನಿಮಾದಲ್ಲಿ ಯಾವೆಲ್ಲ ರೂಪಗಳಲ್ಲಿ ಅಂದರೆ ಸಿನಿಮಾದ ಯಾವೆಲ್ಲ ಅಂಗಗಳಲ್ಲಿ ಅಳವಡಿಕೆಯಾಗಿದೆ ಎಂಬುದನ್ನೂ ಪ್ರಸ್ತುತ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಆದರಂತೆ ಸಿನಿಮಾದ ಶೀರ್ಷಿಕೆ, ಕಥೆ-ಚಿತ್ರಕಥೆ, ಸಂಭಾಷಣೆ, ಹಾಡು-ಸಂಗೀತ, ನೃತ್ಯ, ಸನ್ನಿವೇಶ ಚಿತ್ರಣ, ಪ್ರಸಾಧನ (ವಸ್ತ್ರವಿನ್ಯಾಸ) ಇತ್ಯಾದಿಗಳಲ್ಲಿ ದೇಸೀ ಸಂಸ್ಕೃತಿಯ ಅಂಶಗಳು ಕಾಣಿಸಿಕೊಳ್ಳುತ್ತವೆ. ದೇಸೀ ಗಾದೆ, ನುಡಿಗಟ್ಟುಗಳೇ ಕೆಲವು ಸಿನಿಮಾಗಳಿಗೆ ಹೆಸರಾಗಿರುವುದುಂಟು, ಜನಪದ ಕಥೆ ಅಥವಾ ಜನಪದ ಆಶಯವುಳ್ಳ ಕಥೆಗಳು ಕೆಲವು ಸಿನಿಮಾಗಳಿಗೆ ವಸ್ತುವಾಗಿವೆ. ಸಂಭಾಷಣೆಯಲ್ಲಿ ಕೆಲವೊಮ್ಮೆ ಗ್ರಾಮ್ಯ ಮತ್ತು ಭಾಷೆ, ಬೈಗುಳ, ದೇಸೀ ನುಡಿಗಟ್ಟುಗಳನ್ನು ಬಳಸುವುದುಂಟು ಕೆಲವೊಮ್ಮೆ ಜನಪದ ಹಾಡುಗಳನ್ನು ಯಥಾ ಪ್ರಕಾರ ಬಳಸಿಕೊಂಡರೆ ಮತ್ತೆ ಕೆಲವೊಮ್ಮೆ ಚಿತ್ರದ ಸನ್ನಿವೇಶಕ್ಕೆ ತಕ್ಕ ಬದಲಾವಣೆಯೊಂದಿಗೆ ಬಳಸಿಕೊಳ್ಳುವುದುಂಟು, ಕೆಲವೊಮ್ಮೆ ಜನಪದ ಗೀತೆಯನ್ನು ಮೂಲ ಜನಪದ ಧಾಟಿ ಅಥವಾ ರಾಗವನ್ನು ಆಧುನಿಕ ಸಿನಿಮಾ ಸಂಗೀತಕ್ಕೆ ಕಸಿ ಮಾಡಿಕೊಳ್ಳುವುದು ಇನ್ನೊಂದು ಕ್ರಮ. ಸನ್ನಿವೇಶ ಚಿತ್ರಣಗಳಲ್ಲಿ ಕೆಲವೆಡೆ ಭೌತಿಕ ಜಾನಪದ ಬಳಕೆಯಾಗುವುದುಂಟು. ಪರಂಪರೆಯನ್ನು ಬಿಂಬಿಸುವ ಮನೆಗಳು, ಮನೆಯೊಳಗಿನ ಪರಿಕರಗಳು, ನೈಜವಾದ ದೇಸೀ ಪರಿಸರ ಇತ್ಯಾದಿ ಚಿತ್ರಣ ಬರುವುದುಂಟು ಕಥೆ ಸನ್ನಿವೇಶಕ್ಕೆ ತಕ್ಕಂತೆ ಪಾತ್ರಗಳ ವಸ್ತ್ರವಿನ್ಯಾಸ, ಉಡುಗೆ, ತೊಡುಗೆಗಳಲ್ಲಿ ದೇಸೀ ತನ ಎದ್ದು ಕಾಣಿಸುವುದುಂಟು.

ಕನ್ನಡ ಸಿನಿಮಾ ಮತ್ತು ದೇಸೀ ಸಂಸ್ಕೃತಿ ಎಂಬ ಶೀರ್ಷಿಕೆಯಡಿಯಲ್ಲಿ ದೇಸೀ ಸಂಸ್ಕೃತಿ ಅಂದರೆ ಏನು? ಕನ್ನಡ ಸಿನಿಮಾಗಳಲ್ಲಿ ದೇಸೀ ಸಂಸ್ಕೃತಿ ಎಂಬುದು ಇದೆಯೇ? ಇದ್ದರೆ ಯಾವ ಸ್ವರೂಪದಲ್ಲಿ? ಇತ್ಯಾದಿ ಸಂಗತಿಗಳನ್ನು ವ್ಯಾಪಕವಾಗಿ ಚರ್ಚಿಸಲಾಗಿದೆ. ಪ್ರಸ್ತುತ ಅಧ್ಯಯನದ ಮೂಲಕ ಕಂಡು ಕೊಂಡ ಒಟ್ಟಾರೆ ಫಲಿತಗಳನ್ನು ಈ ರೀತಿ ಕ್ರೋಢೀಕರಿಸಬಹುದು.

- ‘ದೇಸೀ ಸಂಸ್ಕೃತಿ’ ಪರಿಕಲ್ಪನೆಯನ್ನು ವ್ಯಾಪಕವಾದ ಪರಿಪ್ರೇಕ್ಷ್ಯದಲ್ಲಿ ಅರ್ಥೈಸಿಕೊಳ್ಳಬೇಕಾದ ಅಗತ್ಯವಿದೆ.
- ದೇಸೀ ಸಂಸ್ಕೃತಿ ಪರಿಕಲ್ಪನೆಗಿರುವ ವಿವಿಧ ವ್ಯಾಖ್ಯಾನಗಳನ್ನು ಮತ್ತು ಅರ್ಥಚ್ಛಾಯಗಳನ್ನು ಗಮನಿಸಿದಾಗ ಎದ್ದು ಕಾಣುವ ಅಂಶಗಳೆಂದರೆ ನಮ್ಮ ಸಂಸ್ಕೃತಿ,

- ಸ್ಥಳೀಯ ಸಂಸ್ಕೃತಿ, ಪ್ರಾದೇಶಿಕ ಸಂಸ್ಕೃತಿ, ಗ್ರಾಮೀಣ ಸಂಸ್ಕೃತಿ ಎಂಬಿತ್ಯಾದಿ ಅರ್ಥಗ್ರಹಿಕೆಗಳಿವೆ.
- ಭಾರತದ ಸಂದರ್ಭದಲ್ಲಿ ಇಲ್ಲಿನ ಪ್ರತಿಯೊಂದು ಪ್ರದೇಶದ ಪ್ರಾದೇಶಿಕ-ಸಮುದಾಯದ ಅನನ್ಯತೆಯಿಂದ ಹಿಡಿದು ಭಾರತೀಯತೆ ಎನ್ನುವ ಅಖಂಡ ಪರಿಕಲ್ಪನೆವರೆಗೆ ಇದರ ವ್ಯಾಪ್ತಿಯಿದೆ.
- ಅದರಂತೆ ಕನ್ನಡ ಸಿನಿಮಾಗಳಲ್ಲಿ ಕನ್ನಡದ ಅಥವಾ ಕರ್ನಾಟಕದ ದೇಸೀ ಸಂಸ್ಕೃತಿಯನ್ನೆಷ್ಟೇ ಅಲ್ಲದೆ ಭಾರತೀಯ ಎನ್ನಬಹುದಾದ 'ದೇಸೀ ಸಂಸ್ಕೃತಿ'ಯನ್ನು ಅಭಿವ್ಯಕ್ತಿಪಡಿಸಲಾಗಿದೆ.
- ಭಾರತೀಯ ಪುರಾಣ-ಇತಿಹಾಸ ಕಥೆಗಳು, ಬಂಧುತ್ವ ಪರಿಕಲ್ಪನೆಗಳು, ಮೌಲ್ಯ ಆದರ್ಶಗಳು, ಹಬ್ಬ ಹರಿದಿನಗಳು, ನಂಬಿಕೆ - ನಡವಳಿಕೆಗಳು, ದೈವಭಕ್ತಿ-ದೇಶಭಕ್ತಿಗಳು ಕನ್ನಡ ಸಿನಿಮಾಗಳಲ್ಲಿ ಅಭಿವ್ಯಕ್ತಿಗೊಂಡರೆ ಅವೂ ಕೂಡಾ 'ದೇಸೀ ಸಂಸ್ಕೃತಿ'ಯ ಭಾಗಗಳೇ ಆಗುತ್ತವೆ.
- ಕನ್ನಡ ನಾಡಿನ ಸಂದರ್ಭದಲ್ಲಿ ಇಲ್ಲಿನ ಜನಪದ ಹಾಗೂ ಅದರ ಜಾನಪದ-ಇಷ್ಟನ್ನೇ ದೇಸೀ ಸಂಸ್ಕೃತಿಯ ಭಾಗವಾಗಿ ಗುರುತಿಸದೆ ನಾಡು-ನುಡಿಯ ಬಗೆಗಿನ ಅಭಿಮಾನದ ಅಭಿವ್ಯಕ್ತಿಯನ್ನು ಇಲ್ಲಿ ದೇಸೀ ಸಂಸ್ಕೃತಿಯ ಭಾಗವೆಂದೇ ಪರಿಗಣಿಸಲಾಗಿದೆ.
- 'ಜನಪದ' ಎಂದಾಗ ಇಲ್ಲಿ ವಿವಿಧ ದೇಸೀ ಸಮುದಾಯಗಳು ಮುಖ್ಯವಾಗುತ್ತದೆ. ಒಂದರ್ಥದಲ್ಲಿ ಕನ್ನಡ ನಾಡಿನ ಮಟ್ಟಿಗೆ ಇಲ್ಲಿರುವ ಎಲ್ಲಾ ಸಮುದಾಯಗಳೂ ದೇಸೀ ಸಮುದಾಯಗಳು.
- ಆದರೆ ಈ ಎಲ್ಲಾ ಸಮುದಾಯಗಳ ಸಂಸ್ಕೃತಿಯನ್ನು ನಮ್ಮ ಸಿನಿಮಾಗಳಲ್ಲಿ ಅಭಿವ್ಯಕ್ತ ಪಡಿಸುವುದು ಕಷ್ಟಸಾಧ್ಯ.

- ನಮ್ಮ ಬಹುಪಾಲು ಸಿನಿಮಾಗಳು ಸನ್ನಿವೇಶ ಚಿತ್ರಣಗಳಲ್ಲಿ ಜನಪ್ರಿಯ ಸಂಸ್ಕೃತಿಯ ಮಾದರಿಯೊಂದನ್ನು ರೂಪಿಸಿಕೊಂಡದ್ದನ್ನು ಕಾಣುತ್ತೇವೆ.
- ಮದುವೆ, ಮರಣಗಳಂತಹ ಜೀವನಾವರ್ತನದ ಆಚರಣೆಗಳಲ್ಲಾಗಲಿ, ಹಬ್ಬ-ಹರಿದಿನಗಳಂತಹ ವಾರ್ಷಿಕಾವರ್ತನದ ಆಚರಣೆಗಳಲ್ಲಾಗಲಿ ಈ 'ಜನಪ್ರಿಯ' ಸಂಸ್ಕೃತಿಯ ವಿಧಿ ವಿಧಾನಗಳನ್ನೇ ಬಹುತೇಕ ಸಿನಿಮಾಗಳಲ್ಲಿ ಅಳವಡಿಸಿಕೊಳ್ಳಲಾಗುತ್ತದೆ.
- ಇದು ಬಹುಮಟ್ಟಿಗೆ 'ಭಾರತೀಯ ಸಂಸ್ಕೃತಿ' ಅಥವಾ 'ಕನ್ನಡ ಸಂಸ್ಕೃತಿ' ಎಂದು ಬಿಂಬಿತವಾದ ವೈದಿಕ ಸಂಸ್ಕೃತಿಯೇ ಆಗಿರುತ್ತದೆ.
- ಆದರೆ ಸಮುದಾಯಗಳ ಪ್ರಜ್ಞೆ-ಸಂವೇದನೆಗಳು ಸಿನಿಮಾಗಳಲ್ಲೂ ಕಾಣಿಸಿಕೊಳ್ಳತೊಡಗಿದಾಗ ನಿರ್ದಿಷ್ಟ ಸಮುದಾಯಗಳ ವಿಶಿಷ್ಟ ಸಂಸ್ಕೃತಿಯ ಅಭಿವ್ಯಕ್ತಿಯೂ ಪ್ರಾರಂಭವಾಯಿತು.
- ಅದರಂತೆ ದಲಿತ ಸಮುದಾಯ, ಬುಡಕಟ್ಟು ಸಮುದಾಯ, ಅಲೆಮಾರಿ ಸಮುದಾಯ, ಮುಸ್ಲಿಂ ಸಮುದಾಯ ಮುಂತಾದ ಕನ್ನಡ ನಾಡಿನ ದೇಸೀ ಸಮುದಾಯಗಳ ಸಾಂಸ್ಕೃತಿಕ ಸಂವೇದನೆಗಳು ಕೆಲವು ಸಿನಿಮಾಗಳಲ್ಲಿ ಸಶಕ್ತವಾಗಿ ಅಭಿವ್ಯಕ್ತಿಗೊಂಡಿದೆ.
- ಸಮುದಾಯಗಳ ಜತೆಗೆ ನಿರ್ದಿಷ್ಟ ಪ್ರದೇಶಗಳೂ ಇಲ್ಲಿ ಮಹತ್ವ ಪಡೆದುಕೊಳ್ಳುತ್ತವೆ.
- ಕೆಲವು ಸಮುದಾಯಗಳು ನಿರ್ದಿಷ್ಟ ಪ್ರದೇಶಗಳಲ್ಲಷ್ಟೇ ವಾಸಿಸುತ್ತವೆ.
- ಹಾಗಾಗಿ ಪ್ರಾದೇಶಿಕತೆಗೂ ಸಮುದಾಯಗಳಿಗೂ ವಿಶಿಷ್ಟ ಸಂಬಂಧಗಳಿವೆ.
- ಭಾಷೆ, ಆಚಾರ-ವಿಚಾರ, ಉಡುಗೆ-ತೊಡುಗೆ, ನಂಬಿಕೆ-ನಡವಳಿಕೆ, ಆಟ-ವಿನೋದ, ಆಹಾರ ಪದ್ಧತಿ, ಇತ್ಯಾದಿಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗುತ್ತವೆ.

- ಕನ್ನಡ ಸಿನಿಮಾ ಕನ್ನಡ ನಾಡಿನ ಇಂತಹ 'ಪ್ರಾದೇಶಿಕತೆ' ಗಳನ್ನು ಎಷ್ಟರ ಮಟ್ಟಿಗೆ ಬಳಸಿಕೊಂಡಿದೆ? ಎಂಬುದರ ಚರ್ಚೆಯೂ ಪ್ರಸ್ತುತ ಅಧ್ಯಯನದಲ್ಲಿದೆ.
- 'ಜಾನಪದ'ವೆಂಬ ವ್ಯಾಪಕ ಪರಿಕಲ್ಪನೆಯಲ್ಲಿ ಭೌತಿಕ ಜಾನಪದ, ಭಾಷಿಕ ಜಾನಪದ, ಆಚರಣಾತ್ಮಕ ಜಾನಪದ, ಕ್ರಿಯಾತ್ಮಕ ಜಾನಪದ ಇತ್ಯಾದಿ ಎಲ್ಲವೂ ಸಮಾವೇಶಗೊಳ್ಳುತ್ತೇವೆ.
- ಇವೆಲ್ಲವುಗಳು ಬಳಕೆಯನ್ನು ಕನ್ನಡ ಸಿನಿಮಾ ತನ್ನ ಮಿತಿಯೊಳಗಡೆ ಮಾಡಿರುವುದನ್ನು ಅಧ್ಯಯನದಲ್ಲಿ ಗಮನಿಸಲಾಗಿದೆ.
- ಜನಪದ-ಜಾಪನದ ಎಂದಾಗ ಅದರಲ್ಲಿ ವಿವಿಧ ಜನ ಸಮುದಾಯಗಳು, ಅವುಗಳ ರೀತಿ-ರಿವಾಜುಗಳು, ಜೀವನಾವರ್ತನದ ಮತ್ತು ವಾರ್ಷಿಕಾವರ್ತನದ ಆಚರಣೆಗಳು, ಭಾಷೆ-ಸಾಹಿತ್ಯ (ಪ್ರಾದೇಶಿಕ ಮತ್ತು ಸಾಮಾಜಿಕ ಭಾಷಾ ಪ್ರಭೇದಗಳು) ಗ್ರಾಮೀಣ ಕಲೆ, ಕ್ರೀಡೆಗಳು, ಗ್ರಾಮದೇವತೆಗಳ ಆರಾಧನೆಗಳು, ಹಬ್ಬ, ಜಾತ್ರೆಗಳು - ಇವೆಲ್ಲಾ ಒಳಗೊಳ್ಳುತ್ತವೆ.
- ಸಾಹಿತ್ಯಕ್ಕೂ ಸಿನಿಮಾಕ್ಕೂ ಅವಿನಾಭಾವ ಸಂಬಂಧವಿರುವುದನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾಗಿದೆ.
- ಆ ಸಂಬಂಧ ಹಲವು ನೆಲೆಗಳಲ್ಲಿ ಸಾಗಿರುವುದನ್ನು ಗಮನಿಸಲಾಗಿದೆ.
- ಪರಂಪರಾಗತವಾದ ಪುರಾಣ, ಜನಪದ ಸಾಹಿತ್ಯದಿಂದ ಹಿಡಿದು ಆರಂಭದ ರಂಗಭೂಮಿ ಸಾಹಿತ್ಯ ಹಾಗೂ ಗ್ರಂಥಸ್ಥ ಶಿಷ್ಟ ಸಾಹಿತ್ಯದವರೆಗೂ ಅದರ ಹರವು ಇದೆ.
- ಹಾಡು ಅಥವಾ ಕಥೆಯ ರೂಪದಲ್ಲಿ ಈ ಸಾಹಿತ್ಯಿಕ ಸಂಬಂಧ ಸಿನಿಮಾಗಳಲ್ಲಿ ಹಾಸುಹೊಕ್ಕಾಗಿದೆ.
- ಆಧುನಿಕ ಕನ್ನಡ ಸಾಹಿತ್ಯ ಬೆಳವಣಿಗೆಯನ್ನು ಕನ್ನಡ ಸಿನಿಮಾದ ಬೆಳವಣಿಗೆಯನ್ನು ಅಕ್ಕಪಕ್ಕದಲ್ಲಿಟ್ಟು ನೋಡಿದಾಗ ನಮ್ಮ ಸಾಹಿತ್ಯ ಪಂಥಗಳಿಗೆ ಅನುಗುಣವಾಗಿಯೇ ಸಿನಿಮಾ ಕೂಡಾ ಬೆಳೆದು ಬಂದುದು ಸ್ಪಷ್ಟವಾಗುತ್ತದೆ.

- ದೇಸೀ ಸಂಸ್ಕೃತಿಯ ಹಿನ್ನೆಲೆಯಲ್ಲಿ ನೋಡಿದರೂ ಕನ್ನಡದ ಮೌಖಿಕ ಮತ್ತು ಲಿಖಿತ ಸಾಹಿತ್ಯ ಸಿನಿಮಾಕ್ಕೆ ಮಹತ್ವದ ಕೊಡುಗೆಯನ್ನು ನೀಡಿದೆಯೆನ್ನಬಹುದು.
- ದೇಸೀ ಸಮುದಾಯಗಳ ಸಂವೇದನೆಯ ವಿಷಯದಲ್ಲಂತೂ ಕನ್ನಡ ಸಾಹಿತ್ಯಕ್ಕೆ ನಮ್ಮ ಸಿನಿಮಾ ತುಂಬಾ ಋಣಿಯಾಗಿದೆಯನ್ನಬೇಕು.
- ಕಾರಂತರ 'ಕುಡಿಯರ ಕೂಸು' 'ಚೋಮನ ದುಡಿ' ಯಂಥ ಕಾದಂಬರಿಗಳಿಂದ ಹಿಡಿದು ದೇವನೂರು ಮಹಾದೇವರ 'ಅಮಾಸ' ದಂಥ ಕಥೆಗಳವರೆಗೆ ಅದರ ವ್ಯಾಪ್ತಿ ಬಹಳ ದೊಡ್ಡದು.
- ಕೆಲವೊಂದು ಸಂದರ್ಭಗಳಲ್ಲಿ ಜನಪದ ಸಾಹಿತ್ಯದಿಂದ ಶಿಷ್ಯ ಸಾಹಿತ್ಯ, ಶಿಷ್ಟ ಸಾಹಿತ್ಯದಿಂದ ಸಿನಿಮಾ - ಈ ರೀತಿಯ ಬಹು ಸಂಬಂಧೀ ನೆಲೆಗಳನ್ನೂ ಗುರುತಿಸಬಹುದಾಗಿದೆ. ಕಾರ್ನಾಡರ ನಾಗಮಂಡಲ ನಾಟಕವನ್ನಾಧರಿಸಿದ ಸಿನಿಮಾವಾಗಲಿ ಕಂಬಾರರ ಕೆಲವು ನಾಟಗಳನ್ನು ಧರಿಸಿದ ಸಿನಿಮಾಗಳಾಗಲಿ - ಈ ಬಗೆಯ ಬಹು ಸಂಬಂಧಿ ಆಯ್ಹಾಮವುಳ್ಳವು.
- ಈ ರೀತಿ ಕನ್ನಡ ಸಾಹಿತ್ಯದೊಂದಿಗೆ ನಿಕಟ ಸಂಬಂಧವಿರಿಸಿಕೊಂಡು ಬೆಳೆದು ಬಂದ ನಮ್ಮ ಸಿನಿಮಾ ಸಾಹಿತ್ಯದ ಬಹುತೇಕ ಎಲ್ಲಾ ಚಿಂತನೆಗಳನ್ನೂ ತನ್ನೊಳಗೆ ಅಳವಡಿಸಿಕೊಳ್ಳಲು ಪ್ರಯತ್ನಿಸಿದೆ. ಅಲ್ಲಿನ ಎಲ್ಲಾ ವಿದ್ಯಮಾನಗಳಿಗೂ ತನ್ನ ಮಿತಿಯೊಳಗಡೆಯೇ ಸ್ಪಂದಿಸಿವೆ.
- ಸಿನಿಮಾ ಮಾಧ್ಯಮವು ತಾನು ನಿರ್ಮಾಣಗೊಳ್ಳುವ ನೆಲದ ಅಥವಾ ಪ್ರದೇಶದ ಸಂಸ್ಕೃತಿಯನ್ನು ಕಲಾತ್ಮಕವಾಗಿ ಅಭಿವ್ಯಕ್ತಿಸುವುದರ ಜತೆಗೆ ತನ್ನ ಕಾಲದ (ಸಮಕಾಲೀನ) ವಿದ್ಯಮಾನಗಳಿಗೂ ಕ್ರಿಯಾತ್ಮಕವಾಗಿ ಸ್ಪದಿಸುತ್ತವೆಂಬುದು ಇದರಿಂದ ಸ್ಪಷ್ಟವಾಗುತ್ತದೆ.
- ಆದುದರಿಂದಲೇ ಸಾಹಿತ್ಯದಂತೆ ಸಿನಿಮಾದಲ್ಲೂ ಸಾಂಸ್ಕೃತಿಕ ಸಂಘರ್ಷದ ಪ್ರತಿಪಾದನೆಯೂ ಇರುವುದುಂಟು.

- ಇಂತಹ ಸಂಘರ್ಷ ಸಿನಿಮಾದಲ್ಲಿ ತೀರಾ ಆಧುನಿಕವಾದುದೇನಲ್ಲ.
- ಗ್ರಾಮ-ನಗರ, ಅವಿದ್ಯಾವಂತ - ವಿದ್ಯಾವಂತ, ಬಡವ-ಬಲ್ಲಿದ, ಸ್ವದೇಶೀ- ವಿದೇಶೀ, ಕನ್ನಡ-ಇಂಗ್ಲೀಷ್, ಕೃಷಿ ಬದುಕು-ಔದ್ಯೋಗಿಕ ಬದುಕು, ಕುಲಕಸಬು-ಆಧುನಿಕ ವೃತ್ತಿಬದುಕು ಇತ್ಯಾದಿ ನೆಲೆಗಳಲ್ಲಿ ಈ ಸಾಂಸ್ಕೃತಿಕ ಸಂಘರ್ಷವೆಂಬುದು ಬಹಳಷ್ಟು ಹಿಂದಿಯೇ ಕನ್ನಡ ಸಿನಿಮಾಗಳಲ್ಲಿ ಕಾಣಿಸಿಕೊಂಡಿತು.
- ಇತ್ತೀಚಿನ ದಿನಗಳಲ್ಲಿ ಸಮಕಾಲೀನ ಸಂಸ್ಕೃತಿ ಚಿಂತನೆಗಳು ಪೂರಕವೆಂಬಂತೆ ಅದು ಭಿನ್ನ ಆಯಾಮಗಳಲ್ಲಿ ಕಾಣಿಸಿಕೊಳ್ಳತೊಡಗಿದೆ.
- ವರ್ತಮಾನ ಸಂದರ್ಭದ ನಗರೀಕರಣ, ಕೈಗಾರಿಕೀಕರಣ, ಜಾಗತೀಕರಣದಂಥ ವಿದ್ಯಮಾನಗಳಿಗೂ ದೇಸೀ ಸಂಸ್ಕೃತಿಗೂ ನಡುವೆ ನಡೆಯುವ ಸಂಘರ್ಷದ ನೆಲೆಗಳನ್ನೂ ಈಚಿನ ಕೆಲವು ಸಿನಿಮಾಗಳಲ್ಲಿ ಕಾಣಬಹುದಾಗಿದೆ.
- ಸಾಹಿತ್ಯಕೃತಿಗಳನ್ನಾಧರಿಸಿದ ಸಿನಿಮಾಗಳಷ್ಟೇ ಅಲ್ಲದೆ ಇತರ ಸಿನಿಮಾಗಳಲ್ಲೂ ಈ ತೆರನಾದ ಅಭಿವ್ಯಕ್ತಿಯಿದೆ.
- ಬರಗೂರು ರಾಮಚಂದ್ರಪ್ಪನವರ ಬಹುಪಾಲು ಸಿನಿಮಾಗಳು ಈ ಬಗೆಯವು.
- ಕೇಸರಿ ಹರವೂ ಅವರ 'ಭೂಮಿಗೀತ'ವನ್ನೂ, ಸೌಂದರ್ಯ ಅವರ 'ದ್ವೀಪ'ವನ್ನೂ ನಾಗಭರಣ ಅವರ 'ಚಿಗುರಿದ ಕನಸು', ಲಿಂಗದೇವರು ಅವರ 'ಕಾಡ ಬೆಳದಿಂಗಳು' ಸಿನಿಮಾಗಳನ್ನು ಈ ಸಾಲಿಗೆ ಸೇರಿಸಬಹುದು.
- ಇವೆಲ್ಲಾ 'ಪರಂಪರೆ ಮತ್ತು ಆಧುನಿಕತೆ' ಎಂಬ ಸಂಘರ್ಷದ ಮೂಲ ಪರಿಕಲ್ಪನೆಯ ವಿಭಿನ್ನ ನೆಲೆಗಳೆಂದು ಹೇಳಬಹುದು.
- ಇಂತಹ ಸಾಂಸ್ಕೃತಿಕ ಸಂಘರ್ಷದ ಚಿತ್ರಣ ಕೂಡಾ ಸಿನಿಮಾದಲ್ಲಿ ದೇಸೀ ಸಂಸ್ಕೃತಿ ಅಭಿವ್ಯಕ್ತಿಗೊಳ್ಳುವ ಒಂದು ವಿಧಾನವೆನ್ನಬಹುದು.
- ಕೆಲವೆಡೆ ಸಂಘರ್ಷದ ವಾಸ್ತವ ಚಿತ್ರಣವಷ್ಟೇ ಇದ್ದರೆ ಮತ್ತೆ ಕೆಲವಡೆ ದೇಸೀ ಸಂಸ್ಕೃತಿ ಪರವಾದ ಆಶಯವಿದೆ.

- ವಸ್ತು, ಅಭಿವ್ಯಕ್ತಿ, ಅಭಿರುಚಿ, ಸಂವಹನ ಹಾಗೂ ಪರಿಣಾಮಗಳ ದೃಷ್ಟಿಯಿಂದ ಹೆಚ್ಚು ಉದ್ಯಮಶೀಲವಾಗಿರುವ ಚಿತ್ರಗಳು 'ವಾಣಿಜ್ಯ ಚಿತ್ರ' ಗಳೆನಿಸುತ್ತವೆ.
- ಈ 'ಅಂಶಗಳು ಗಂಭೀರ ಚಿಂತನೆಗೆ ದಾರಿ ಮಾಡಿಕೊಟ್ಟು ಸಿನಿಮಾವನ್ನು ಶದ್ಧಕಲೆಯಾಗಿಸುವ ಗುರಿಯನ್ನಿಟ್ಟು ಕೊಂಡರೆ ಅಂಥ ಸಿನಿಮಾಗಳು 'ಕಲಾತ್ಮಕ ಚಿತ್ರ' ಗಳೆನಿಸುತ್ತವೆ.
- ಇದೇನೇ ಆದರೂ 'ಸಂಸ್ಕೃತಿ' ಎಂಬುದು ಎಲ್ಲಾ ಬಗೆಯ ಚಿತ್ರಗಳಲ್ಲೂ ಇದ್ದೇ ಇರುತ್ತದೆ.
- ಕೆಲವು ಸಿನಿಮಾಗಳು ಸಂಸ್ಕೃತಿಯನ್ನು ಹೆಚ್ಚು ರಂಜನೀಯವಾಗಿ ನಿರ್ವಹಿಸಿ, ನಿರೂಪಿಸಿದರೆ, ಮತ್ತೆ ಕೆಲವು ಸಿನಿಮಾಗಳು ಗಂಭೀರವಾಗಿ ಸಮಸ್ಯಾತ್ಮಕವಾಗಿ ನಿರ್ವಹಿಸಿ ನಿರೂಪಿಸುತ್ತವೆ.
- 'ದೇಸೀ ಸಂಸ್ಕೃತಿ'ಯ ವಿಷಯದಲ್ಲೂ ಈ ಮಾತು ಅನ್ವಯವಾಗುತ್ತದೆ. ಒಟ್ಟಿನಲ್ಲಿ ವಿದೇಶೀ ಮೂಲದ ತಂತ್ರಜ್ಞಾನ ಪ್ರಧಾನವಾದ ಸಿನಿಮಾ ಭಾರತದಲ್ಲಿ 'ಭಾರತೀಯ'ವಾಗಿ ಬೆಳೆದಂತೆ ಕನ್ನಡದಲ್ಲಿ 'ಕನ್ನಡತನ' ವನ್ನು ಮೈಗೂಡಿಸಿ ಕೊಂಡು ಬೆಳೆದಿದೆ.
- 'ಕನ್ನಡ ಚಿತ್ರ' ಏಕಕಾಲಕ್ಕೆ ಭಾರತೀಯ ಚಿತ್ರ'ವೂ ಹೌದು.
- ಆದೇ ರೀತಿ ಕೆಲವು ಕನ್ನಡ ಚಿತ್ರಗಳು ಜಾಗತಿಕ ಮಟ್ಟದಲ್ಲೂ ಗುರುತಿಸಿಕೊಂಡಿವೆ.
- ವಿಶ್ವಮಟ್ಟದ ಚಿತ್ರಗಳೆಂದರೆ ಅವು ಕೇವಲ ಹಾಲಿವುಡ್ ಚಿತ್ರಗಳೆಂಬ ಗ್ರಹಿಕೆಯಿರುವ ಇವತ್ತಿನ ಸಂರ್ಭದಲ್ಲಿ ಕನ್ನಡ ಚಿತ್ರಗಳೇನಾದರೂ ಜಾಗತಿಕ ಮಟ್ಟದಲ್ಲಿ ಹೆಸರುಗಳಿಸಿದ್ದರೆ ಅದಕ್ಕೆ 'ದೇಸೀ ಸಂಸ್ಕೃತಿ'ಯ ಅಭಿವ್ಯಕ್ತಿಯೇ ಕಾರಣವೆಂದರೂ ತಪ್ಪಾಗಲಾರದು.
- ವಿದೇಶೀ ಸಿನಿಮಾ ತಂತ್ರಜ್ಞಾನದ ಪ್ರೇರಣೆ - ಪ್ರಭಾವದಿಂದ ನಮ್ಮ ಸಿನಿಮಾಗಳು ಹುಟ್ಟಿಕೊಂಡಿದ್ದರೂ.

ಇಂದಿಗೂ ವಿದೇಶೀ ಮೂಲದ 'ಸಿನಿಮಾ ಸಂಸ್ಕೃತಿ' ಯನ್ನು ತಮ್ಮೊಳಗೆ ಅಳವಡಿಸಿ ಕೊಂಡಿದ್ದರೂ ಇಂದಿಗೂ ವಿದೇಶೀ ಮೂಲದ 'ಸಿನಿಮಾ ಸಂಸ್ಕೃತಿ'ಯನ್ನು ತಮ್ಮೊಳಗೆ ಅಳವಡಿಸಿಕೊಂಡಿದ್ದರೂ ಹಲವು ಅಂಶಗಳಿಂದ ಅವು 'ದೇಸೀ ಸಂಸ್ಕೃತಿ'ಗೆ ನಿಷ್ಟವಾಗಿದೆ.

- ಯಾವುದೇ ಹಾಲಿವುಡ್ ಸಿನಿಮಾದಲ್ಲಿ ಕಾಣಸಿಗಲಾರದ ಹಾಡು-ಸಂಗೀತ-ನೃತ್ಯ-ಕುಣಿತ-ಸನ್ನಿವೇಶ ಚಿತ್ರಣಗಳು ನಮ್ಮ ಸಿನಿಮಾಗಳಲ್ಲಿವೆ.
- ಅದು ಕನ್ನಡ ಸಿನಿಮಾವಾಗಿರಬಹುದು ಇಲ್ಲವೇ ಯಾವುದೇ ಭಾರತೀಯ ಸಿನಿಮಾವಾಗಿರಬಹುದು.
- ಈ ಅರ್ಥದಲ್ಲೂ ನಮ್ಮ ಸಿನಿಮಾಗಳು 'ದೇಸೀ ಸಂಸ್ಕೃತಿ' ಪ್ರತಿಪಾದಕಗಳೇ ಆಗಿವೆ.
- 'ವಾಣಿಜ್ಯ ' ಮತ್ತು 'ಕಲಾತ್ಮಕ' ಎಂಬ ಪರಿಕಲ್ಪನೆಗಳ ನಡುವಿನ ಅಂತರವನ್ನು ಮೀರಬಲ್ಲ, ಗೆರೆಯನ್ನು ಅಳಿಸಬಲ್ಲ ಪ್ರಯತ್ನಗಳು ನಮ್ಮಲ್ಲಿ ನಡೆಯುತ್ತಾ ಬಂದಿವೆ.
- ವಾಣಿಜ್ಯ ಚಿತ್ರಗಳೆನಿಸಿಕೊಂಡ ಪುಟ್ಟಣ್ಣ ಕಣಗಾಲರ ಬಹುಪಾಲು ಚಿತ್ರಗಳಲ್ಲಿ ಕಲಾತ್ಮಕ ಗುಣಗಳಿವೆ.
- ಉದ್ಯಮಶೀಲವಾಗಿ ಅತ್ಯಂತ ಯಶಸ್ವಿಗಳಿಸಿರುವ ಇತ್ತೀಚಿನ ಆಪ್ತಮಿತ್ರ, ಮುಂಗಾರುಮಳೆ ಯಂಥ ಚಿತ್ರಗಳು ಕಲೆಯ ದೃಷ್ಟಿಯಿಂದಲೂ ಹಿಂದೆ ಬಿದ್ದಿಲ್ಲ.
- ಸ್ವತಃ ನಿರ್ದೇಶಕರಾದ ಬರಗೂರು ರಾಮಚಂದ್ರಪ್ಪನವರೇ ಹೇಳಿರುವಂತೆ ಅವರ ಇತ್ತೀಚಿನ ಚಿತ್ರ 'ಜನಪದ' ವಾಣಿಜ್ಯ ಮತ್ತು ಕಲಾತ್ಮಕವೆಂಬ ಭೇದವನ್ನು ಒಡೆಯುವ ಒಂದು ಪ್ರಯತ್ನ.

  ಈ ಎಲ್ಲಾ ಬಗೆಯ ಚರ್ಚೆಗಳೂ ಅಂತಿಮವಾಗಿ ಕಲೆಯ ಮೂಲಕ ಪ್ರೇಕ್ಷಕರಿಗೆ ರಂಜನೆಯನ್ನು ನೀಡಿ, ಹಣ ಸಂಪಾದಿಸುವ ಉದ್ಯಮವೇ ಚಿತ್ರೋದ್ಯಮ ಎಂಬ ತೀರ್ಮಾನಕ್ಕೆ ನಮ್ಮನ್ನು ಕೊಂಡೊಯ್ಯಬಹುದು.
- ಆದರೆ ಸಿನಿಮಾದ ಬಗೆಗೆ ಇಷ್ಟು ಸರಳವಾದ ತೀರ್ಮಾನಕ್ಕೆ ಬರುವುದು ಕಷ್ಟ.

- ಇವೆಲ್ಲವುಗಳ ಜತೆಗೆ ಪ್ರೇಕ್ಷಕರ ಸದಭಿರುಚಿಯನ್ನು ಮೂಡಿಸುವ ಅವರನ್ನು ಚಿಂತನೆಗೆ ಹಚ್ಚುವ, ಸಮಾಜದ ಸಮಸ್ಯೆಗಳತ್ತ ಬೆಳಕು ಚೆಲ್ಲುವ, ಸಮಕಾಲೀನ ವಿದ್ಯಮಾನಗಳಿಗೆ ಕ್ರಿಯಾತ್ಮಕವಾಗಿ ಸ್ಪಂದಿಸುವ ಗಂಭೀರ ಉದ್ದೇಶಗಳೂ ಕೆಲವು ಸಿನಿಮಾಗಳಿಗಿರುತ್ತವೆ ಎಂಬ ಅಂಶವನ್ನು ನಾವು ಮರೆಯುವಂತಿಲ್ಲ.
- ಇವೆಲ್ಲವುಗಳ ನಡುವೆ ಸಿನಿಮಾಗಳಲ್ಲಿ 'ದೇಸೀ ಸಂಸ್ಕೃತಿ'ಯ ಪಾತ್ರವೇನು? ಎಂಬ ಪ್ರಶ್ನೆ ಮೂಡುವುದೂ ಸಹಜ.
- ಅದು ಆಯಾ ನಿದೇಶಕರ ಅಥವಾ ಚಿತ್ರದ ಒಟ್ಟಾರೆ ನಿರ್ವಹಣೆಯನ್ನ ಅವಲಂಬಿಸಿರುತ್ತದೆ ಎಂಬ ಉತ್ತರವೂ ಇಲ್ಲಿ ಅಷ್ಟೇ ಸಹಜವೆನಿಸುತ್ತದೆ.

ಒಟ್ಟಾರೆಯಾಗಿ ಇಲ್ಲಿ ಕನ್ನಡ ಸಿನಿಮಾಗಳಲ್ಲಿ ಅಭಿವ್ಯಕ್ತಗೊಂಡ ದೇಸೀ ಸಂಸ್ಕೃತಿಯ ವಿವಿಧ ನೆಲೆಗಳನ್ನು ಗುರುತಿಸಿ ವಿಶ್ಲೇಷಿಸಲಾಗಿದೆ. ಸಿನಿಮಾಕ್ಕೆ ಸಂಬಂಧಪಟ್ಟ ಈ ಬಗೆಯ ಸಂಸ್ಕೃತಿ ನಿಷ್ಠವಾದ ಅಧ್ಯಯನದಿಂದ ಮಹತ್ವದ ಅಂಶಗಳನ್ನು ಕಂಡುಕೊಳ್ಳಬಹುದು. ಆಯಾ ನಾಡಿನ ಜನತೆಯ ಸಂಸ್ಕೃತಿ ನಿರ್ದಿಷ್ಟ ದೇಶ - ಭಾಷೆಯ ಸಿನಿಮಾಗಳಲ್ಲಿ ಹೇಗೆ ಪಡಿಮೂಡಿದೆಯೆಂಬದನ್ನು ಅರಿತುಕೊಳ್ಳಬಹುದು. ಆದರೆ ಹೇಳಿ ಕೇಳಿ ಸಿನಿಮಾವು ಒಂದು ಮನರಂಜನಾ ಮಾಧ್ಯಮ ಅದರಂತೆ ಸಂಸ್ಕೃತಿಯನ್ನು ರಂಜನೀಯ ಗೊಳಿಸುವತ್ತ ಬಹುಪಾಲು ಸಿನಿಮಾಗಳು ಗಮನ ಹರಿಸುತ್ತವೆ. ಆದುದರಿಂದ ಇಂತಹ ಕಲಾ ಮಾಧ್ಯಮದ ಕುರಿತಾದ ರಸಗ್ರಹಣ ನಿಷ್ಠವಾದ ಅಧ್ಯಯನ ಕೂಡಾ ಅಷ್ಟೇ ಮುಖ್ಯವಾಗುತ್ತದೆ. ಪ್ರಸ್ತುತ ಅಧ್ಯಯನದ ಉದ್ದೇಶ ರಸಗ್ರಹಣವಲ್ಲ. ಹಾಗಂತ ಸಂಸ್ಕೃತಿಯನ್ನು ಸಿನಿಮಾದ ಒಂದು ಬಿಡಿ ಭಾಗವೆಂದು ಪರಿಗಣಿಸಿ ನಡೆಸಿದ ಅಧ್ಯಯನವೂ ಇದಲ್ಲ. ಈಗಾಗಲೇ ಪ್ರಸ್ತಾಪಿಸಿದಂತೆ. ಸಂಸ್ಕೃತಿಯನ್ನು ಕಲೆಯಾಗಿಸುವಲ್ಲಿ ನಿರ್ದಿಷ್ಟ ಸಿನಿಮಾವೊಂದು ಎಷ್ಟರ ಮಟ್ಟಿಗೆ ಸಫಲವಾಗಿದೆಯೆಂಬುದನ್ನು ಗಮನಿಸುವ ಪ್ರಯತ್ನವು ಇಲ್ಲಿದೆ.

ಆದರೆ ಇಂಥ ಪ್ರಯತ್ನ ಒಂದು ಮಿತಿಯೊಳಗಡೆಯೇ ನಡೆದಿದೆ. ರಸಗ್ರಹಣದ ತತ್ವ ಸಿದ್ಧಾಂತಗಳಿಗೆ ಅನುಗುಣವಾಗಿ ಈ ಅಧ್ಯಯನವನ್ನು ನಡೆಸಿಲ್ಲ. ಅದಕ್ಕಾಗಿ ಪ್ರತ್ಯೇಕ 'ಸಿನಿಮಾ ಮೀಮಾಂಸೆ' ಯೊಂದನ್ನು ರೂಪಿಸಿಕೊಂಡು ಅಧ್ಯಯನ ನಡೆಸಲು ಸಾಧ್ಯವಾದರೆ ಅದು ಇನ್ನಷ್ಟು ಮೌಲಿಕವೆನಿಸಬಹುದು.

ಅವೆಲ್ಲಾ ಏನೇ ಇದ್ದರೂ ನಾವು ಈ ಅದ್ಯಯನದಿಂದ ಕಂಡು ಕೊಳ್ಳಬಹುದಾದ ಪ್ರಮುಖ ಅಂಶವೆಂದರೆ ಸಿನಿಮಾ ವಿದೇಶೀ ಮೂಲದ ತಂತ್ರಜ್ಞಾನ ಪ್ರಧಾನವಾದ ಮಾಧ್ಯಮವಾದರೂ ನಮ್ಮ ಸಿನಿಮಾ ಹಲವು ದೃಷ್ಟಿಗಳಿಂದ 'ನಮ್ಮದಾಗಿ'ಯೇ ಬಳೆದು ನಿಂತಿದೆಯೆಂಬುದು. ಹಾಗಾಗಿ ಸಿನಿಮಾದ ಮೂಲ ಕಲ್ಪನೆ - ತಂತ್ರಜ್ಞಾನಗಳು ವಿದೇಶೀಯವಾದುದಾದರೂ ಅದರ ಪ್ರೇರಣೆಯಿಂದ ಹುಟ್ಟಿದ ನಮ್ಮ ಸಿನಿಮಾದ ಆತ್ಮ-ಅಂಗೋ ಪಾಂಗಗಳೆಲ್ಲಾ 'ನಮ್ಮವೇ' ಆಗಿವೆ. ಅಥವಾ ದೇಶೀಯವಾದುದೇ ಆಗಿದೆ. ಎಂಬ ತೀರ್ಮಾನಕ್ಕೆ ಬರಬಹುದಾಗಿದೆ 'ಸಿನಿಮಾಕ್ಕೇ ವಿಶಿಷ್ಟವಾದ' 'ಸಿನಿಮಾ ಸಂಸ್ಕೃತಿ' ಯೊಂದು ಅದರಲ್ಲಿದ್ದಾಗಲೂ ಈ ಮಾತು ಸತ್ಯವಾಗುತ್ತದೆ.

ಇದು ಪ್ರಸ್ತುತ ಕ್ಷೇತ್ರ ಅಥವಾ ವಿಷಯಕ್ಕೆ ಸಂಬಂಧಪಟ್ಟ ಅಂತಿಮವಾದ ಅಧ್ಯಯನವೇನಲ್ಲ ತನ್ನದೇ ಆದ ಮಿತಿಯೊಳಗಡೆ ಈ ಅಧ್ಯಯನ ಸಾಗಿದೆ ಹಾಗೆ ನೋಡಿದರೆ ಇಲ್ಲಿನ ಕೆಲವು ಪ್ರಮುಖ ಅಧ್ಯಾಯಗಳೂ ಸ್ವತಂತ್ರವಾಗಿ ಪ್ರತ್ಯೇಕ ಅಧ್ಯಯನಗಳಿಗಾಗುವಷ್ಟು ವಿಷಯ ವ್ಯಾಪ್ತಿಯನ್ನು ಹೊಂದಿದೆ. ದೇಸೀ ಸಂಸ್ಕೃತಿಯ ಒಂದು ಭಾಗವೆಂದು ಪರಿಗಣಿತವಾದ ಕನ್ನಡ ನಾಡು ನುಡಿಯ ಪ್ರಜ್ಞೆಗೆ ಸಂಬಂಧಿಸಿದಂತೆಯೇ ಸಿನಿಮಾಕ್ಕೆ ಅನ್ವಯಿಸಿ ಪ್ರತ್ಯೇಕ - ಅಧ್ಯಯನ ಕೈಗೊಳ್ಳಬಹುದಾಗಿದೆ. ಕೇವಲ ಚಲನಚಿತ್ರ ಗೀತೆಗಳನ್ನಾಧರಿಸಿಯೇ ಆ ತೆರನಾದ ಅಧ್ಯಯನ ಸಾಧ್ಯವಿದೆ. ನಿರ್ದಿಷ್ಟ ನಿರ್ದೇಶಕರ ಅಥವಾ ನಿರ್ದಿಷ್ಟ ನಟನಟಿಯರನ್ನು ಕೇಂದ್ರವಾಗಿಸಿಕೊಂಡೂ ಇಂತಹ ಪರಿಕಲ್ಪನಾತ್ಮಕ ಅಧ್ಯಯನವನ್ನು ನಡೆಸಬಹುದಾಗಿದೆ.

ಜನಪದ ಕಥೆ ಐತಿಹ್ಯ - ಪುರಾಣಗಳನ್ನಾಧರಿಸಿದ ಚಿತ್ರಗಳ ಅಧ್ಯಯನವೂ ಅನನ್ಯವಾಗಿ ಸಾಗಬಹುದು. ಅಷ್ಟೇ ಅಲ್ಲದೆ ಸಿನಿಮಾ ಕುರಿತಾದ ಬಹು ಆಯಾಮಗಳ ವಿವಿಧ ದೃಷ್ಟಿಕೋನಗಳ ಅಧ್ಯಯನವೂ ಸಾಧ್ಯವಿದೆ. ಅಧ್ಯಯನ ಸಂದರ್ಭದಲ್ಲಿ ಗಮನಿಸಿರುವಂತೆ ಸಿನಿಮಾ ಎಂಬುದು ಸಾಹಿತ್ಯ, ಕಲೆ, ಸಂಸ್ಕೃತಿ, ಉದ್ಯಮಗಳ ಸಂಗಮ ಮನರಂಜನೆಯ ಜತೆಗೆ ನೈತಿಕತೆಯ ಪ್ರತಿಪಾದನೆಯೇ ಅವರ ಉದ್ದೇಶ ಹಾಗಾಗಿ ಈ ಎಲ್ಲಾ ನಿಟ್ಟಿನಲ್ಲೂ ಸಿನಿಮಾದ ಅಧ್ಯಯನದ ಸಾಧ್ಯ. ಸಾಹಿತ್ಯಿಕ ದೃಷ್ಟಿಕೋನದಿಂದ, ಕಲೆಯ ದೃಷ್ಟಿ ಕೋನದಿಂದ, ಸಂಸ್ಕೃತಿಯ ದೃಷ್ಟಿಕೋನದಿಂದ, ತಂತ್ರಜ್ಞಾನ ದೃಷ್ಟಿಕೋನದಿಂದ, ವಾಣಿಜ್ಯ ದೃಷ್ಟಿಕೋನದಿಂದ, ರಸಗ್ರಹಣ-ಪ್ರೇಕ್ಷಕಾಭಿರುಚಿ ನೆಲೆಯಿಂದ ಅದೇ ರೀತಿ ಪರಿಣಾಮದ ನೆಲೆಯಿಂದ ಒಟ್ಟಾರೆ ಸಿನಿಮಾವನ್ನು ಅಧ್ಯಯನಕ್ಕೊಳ ಪಡಿಸಬಹುದುದಾಗಿದೆ. ಇತರ ಅಭಿವ್ಯಕ್ತಿ ಮಾಧ್ಯಮಗಳೊಂದಿಗೂ ಸಿನಿಮಾಕ್ಕೆ ಅವಿನಾಭಾವ ಸಂಬಂಧವಿದೆ. ಅಂಥವುಗಳಲ್ಲಿ ಸಾಹಿತ್ಯ ಸಂಗೀತಗಳೊಂದಿಗಿನ ಸಿನಿಮಾದ ನಂಟನ್ನು ಪ್ರಸ್ತುತ ನಿಭಂದದಲ್ಲಿ ಗಮನಿಸಲಾಗಿದೆ. ಇತ್ತೀಚಿನ ಒಂದು ಬೆಳವಣಿಗೆಯೆಂದರೆ ಸಿನಿಮಾಗಳನ್ನಾಧರಿಸಿ ಯಕ್ಷಗಾನ ಪ್ರಸಂಗ ಪ್ರದರ್ಶನಗಳು ಹುಟ್ಟಿಕೊಳ್ಳುತ್ತಿರುವುದು. ಆಪ್ತಮಿತ್ರ ಸಿನಿಮಾವನ್ನಾಧರಿಸಿದ ನಾಗವಲ್ಲಿ ಯಕ್ಷಗಾನ, ಮುಂಗಾರು ಮಳೆ ಚಿತ್ರವನ್ನಾಧರಿಸಿದ ಪ್ರೇಮಾಭಿಷೇಕ ಯಕ್ಷಗಾನ, ರಕ್ತಕಣ್ಣೀರು ಚಿತ್ರವನ್ನಾಧರಿಸಿದ ಯಕ್ಷಗಾನ ಇತ್ಯಾದಿಗಳನ್ನು ಇಲ್ಲಿ ಉದಾಹರಿಸಬಹುದು ಈ ಹಿನ್ನೆಲೆಯಲ್ಲಿ ಸಿನಿಮಾಕ್ಕೆ ಇತರ ಅಭಿವ್ಯಕ್ತ ಮಾಧ್ಯಮದೊಂದಿಗಿರುವ ಸಂಬಂಧದ ಕುರಿತಾಗಿಯೂ ವ್ಯಾಪಕ ಆಯಾಮದ ಅಧ್ಯಯನ ಸಾಧ್ಯವಿದೆ. ಈ ಎಲ್ಲಾ ವಿಧಾನಗಳನ್ನು ಅಳವಡಿಸಿಕೊಂಡರೆ ಒಂದು ರೀತಿಯ ಬಹುಶಿಸ್ತೀಯ ಅಧ್ಯಯನವೂ ಸಾಧ್ಯವಾಗಬಹುದು. ಸಿನಿಮಾ ಕುರಿತಾದ ಅಧ್ಯಯನಕ್ಕೆ ಇಂತಹ ಬಹುಮಾರ್ಗಗಳಿರುವಾಗ ಭಾಷೆ, ಸಾಹಿತ್ಯ, ಸಂಸ್ಕೃತಿಯ ಹಿನ್ನಲೆಯಲ್ಲಿ ರಚಿತವಾದ ಪ್ರಸ್ತುತ ನಿಬಂಧವು ಅಂತಹ ಒಂದು ಮಾರ್ಗದಲ್ಲಿ ಸಾಗಲು ನಡೆಸಿದ ಅಲ್ಪ ಪ್ರಯತ್ನವಷ್ಟೇ. ಇದು ಮುಂದೆ ಕೆಲವಾದರೂ ಉತ್ತಮ ಅಧ್ಯಯನಗಳಿಗೆ ಪ್ರೇರಕವಾಗಬಲ್ಲದೆಂಬ ನಿರೀಕ್ಷೆ ಈ ಪ್ರಯತ್ನದ ಹಿಂದಿದೆ.

ಅನುಬಂಧ

ಅ) ಅಧ್ಯಯನಕ್ಕೆ ಬಳಸಿಕೊಂಡ ಕೆಲವು ಪ್ರಾತಿನಿಧಿಕ ಚಲನ ಚಿತ್ರಗಳು

ಆ) ಆಕರ ಗ್ರಂಥಗಳು

ಇ) ಪತ್ರಿಕೆಗಳು

ಈ) ಕೆಲವು ಆಯ್ದು ಸಿನಿಮಾಗಳ ಸ್ಥಿರ ಛಾಯಾಚಿತ್ರಗಳು

ಅ) ಅಧ್ಯಯನಕ್ಕೆ ಬಳಸಿಕೊಂಡ ಕೆಲವು ಪ್ರಾತಿನಿಧಿಕ ಚಲನ ಚಿತ್ರಗಳು

೧. **ಸತಿಸುಲೋಚನಾ**:೧೯೩೪: ವೈ.ವಿ.ರಾವ್

೨ **ಬೇಡರ ಕಣ್ಣಪ್ಪ**:೧೯೫೪: ಹೆಚ್. ಎಲ್. ಎನ್. ಸಿಂಹ

೩ **ಕಿತ್ತೂರು ಚೆನ್ನಮ್ಮ**:೧೯೬೧:ಬಿ. ಆರ್. ಪಂತುಲು

೪ **ದೇವ ಸುಂದರಿ**:೧೯೬೨:ಸಿವಿ.ರಾಜ

೫ **ಕರುಣೆಯೇ ಕುಟುಂಬದ ಕಣ್ಣು** ; ೧೯೬೨ ; ಟಿ.ವಿ. ಸಿಂಗ್ ಠಾಕೂರ್

೬ **ಚಂದವಳ್ಳಿಯ ತೋಟ** ; ೧೯೬೪ ; ಟಿ.ವಿ.ಸಿಂಗ್ ಠಾಕೂರ್

೭ **ಸತ್ಯಹರಿಶ್ಚಂದ್ರ** : ಹುಣಸೂರು ಕೃಷ್ಣಮೂರ್ತಿ

೮ **ಸಂಧ್ಯಾರಾಗ** ; ೧೯೬೬ ; ಎ.ಸಿ. ನರಸಿಂಹಮೂರ್ತಿ, ಎಸ್.ಕೆ. ಭಗವಾನ್

೯ **ಮಂತ್ರಾಲಯ ಮಹಾತ್ಮೆ** : ೧೯೬೬: ಟಿ.ವಿ. ಸಿಂಗ್‌ಠಾಕೂರ್

೧೦ **ಇಮ್ಮಡಿ ಪುಲಿಕೇಶಿ**: ೧೯೬೭: ಎನ್.ಸಿ. ರಾಜನ್

೧೧ **ಗೆಜ್ಜೆ ಪೂಜೆ** ; ೧೯೭೦ ; ಎಸ್.ಕೆ. ಆರ್.ಪುಟ್ಟಣ್ಣ ಕಣಗಾಲ್

೧೨ **ಸಂಸ್ಕಾರ** ; ೧೯೭೦ ; ಪಟ್ಟಾಭಿರಾಮರೆಡ್ಡಿ

೧೩ **ಬಂಗಾರದ ಮನುಷ್ಯ** ; ೧೯೭೨ ; ಸಿದ್ದಲಿಂಗಯ್ಯ

೧೪ **ನಾಗರಹಾವು** ; ೧೯೭೨ ; ಎಸ್. ಆರ್. ಪುಟ್ಟಣ್ಣಕಣಗಾಲ್

೧೫ **ದೂರದ ಬೆಟ್ಟ**: ೧೯೭೩: ಸಿದ್ಧಲಿಂಗಯ್ಯ

೧೬ **ಬೂತಯ್ಯನ ಮಗ ಅಯ್ಯು** ; ೧೯೭೪ ; ಸಿದ್ಧಲಿಂಗಯ್ಯ

೧೭ **ಮೂಡಿಮಡಿದವರು** ; ೧೯೭೪ ; ಕೆ. ಎಂ. ಶಂಕರಪ್ಪ

೧೮ **ಭಾಗ್ಯಜ್ಯೋತಿ** ; ೧೯೭೫ ; ಕೆ. ಎಸ್. ಎಲ್. ಸ್ವಾಮಿ (ರವೀ)

೧೯ **ಮಯೂರ** ; ೧೯೭೫ ; ವಿಜಯ್ ಚೋಮನ ದುಡಿ ; ೧೯೭೫ ; ಟಿ.ವಿ.ಕಾರಂತ್

೨೦ **ಕಾಕನಕೋಟೆ** ; ೧೯೭೭ ; ಸಿ.ಆರ್. ಸಿಂಹ

೨೧ **ಋಷ್ಯಶೃಂಗ** ; ೧೯೭೭ ; ವಿ. ಆರ್. ಕೆ. ಪ್ರಸಾದ್

೨೨ **ಸನಾದಿ ಅಪ್ಪಣ್ಣ** ; ೧೯೭೭ ; ವಿಜಯ್

೨೩ **ಹೇಮಾವತಿ** ; ೧೯೭೭ ; ಸಿದ್ದಲಿಂಗಯ್ಯ

೨೪ **ಘಟಶ್ರಾದ್ಧ** ; ೧೯೭೭ ; ಗಿರೀಶ್ ಕಾಸರವಳ್ಳಿ

೨೫ **ಒಂದು ಊರಿನ ಕಥೆ** ; ೧೯೭೮ ; ಬರಗೂರು ರಾಮಚಂದ್ರಪ್ಪ

೨೬ **ಪರಸಂಗದ ಗೆಂಡೆತಿಮ್ಮ** ; ೧೯೭೮ ; ಮಾರುತಿ ಶಿವರಾಂ

೨೭ **ಒಂದಾನೊಂದು ಕಾಲದಲ್ಲಿ** ; ೧೯೭೮ ; ಗಿರೀಶ್ ಕಾರ್ನಾಡ್

೨೮ **ಮಲೆಯ ಮಕ್ಕಳು** ; ೧೯೭೮ ; ಕೆ. ಎಸ್. ಕಾರಂತ

೨೯ **ಹುಲಿಯ ಹಾಲಿನ ಮೇವು** ; ೧೯೭೯ ; ವಿಜಯ್

೩೦ **ಗ್ರಹಣ** ; ೧೯೮೧ ; ಟಿ. ಎಸ್. ನಾಗಾಭರಣ

೩೧ **ಬರ** ; ೧೯೮೨ ; ಎಂ. ಎಸ್. ಸತ್ಯು

೩೨ **ಫಣಿಯಮ್ಮ** ; ೧೯೮೩ ; ಪ್ರೇಮಾಕಾರಂತ್

೩೩ **ಮಲಯ ಮಾರುತ** ; ೧೯೮೬ ; ರವೀ (ಲಲಿತಾರವೀ)

೩೪ **ಮೈಲಾರ ಲಿಂಗ** ; ೧೯೮೯ ; ಗುರುರಾಜ ಕಾಟೆ

೩೫ **ಸಂತ ಶಿಶುನಾಳ ಷರೀಫ** ; ೧೯೯೦ ; ಟಿ. ಎಸ್. ನಾಗಾಭರಣ

೩೬ **ಮೈಸೂರು ಮಲ್ಲಿಗೆ** ; ೧೯೯೨ ; ಟಿ. ಎಸ್. ನಾಗಾಭೂಷಣ

೩೭ **ಸಂಗ್ಯಾಬಾಳ್ಯಾ** ; ೧೯೯೨ ; ಸುಂದರ ಕೃಷ್ಣ ಅರಸ್

೩೮ **ಒಡ ಹುಟ್ಟಿದವರು** ; ೧೯೯೪ ; ದೊರೆ - ಭಗವಾನ್

೩೯ **ಅರಗಿಣಿ** ; ೧೯೯೫ ; ಪಿ. ಹೆಚ್. ವಿಶ್ವನಾಥ್

೪೦ **ಕೊಟ್ರೇಶಿ ಕನಸು** ; ೧೯೯೫ ; ನಾಗತಿಹಳ್ಳಿ ಚಂದ್ರಶೇಖರ್

೪೧ **ಗಾನಯೋಗಿ ಪಂಚಾಕ್ಷರಿ ಗವಾಯಿ** ; ೧೯೯೫ ; ಚಿಂದೋಡಿ ಬಂಗಾರೇಶ್

೪೨ **ಅಮೇರಿಕಾ ! ಅಮೇರಿಕಾ !** ೧೯೯೭ ; ನಾಗತಿಹಳ್ಳಿ ಚಂದ್ರಶೇಖರ್

೪೩ **ನಾಗಮಂಡಲ** ; ೧೯೯೭ ; ಟಿ. ಎಸ್. ನಾಗಾಭರಣ

೪೪ **ಭೂಮಿಗೀತ ;** ೧೯೯೭ ; ಕೇಸರಿಹರವೂ

೪೫ **ಮುಂಗಾರಿನ ಮಿಂಚು ;** ೧೯೯೭ ; ಎಸ್. ವಿ. ರಾಜೇಂದ್ರ ಸಿಂಗ್ ಬಾಬು

೪೬ **ತಾಯಿ ಸಾಹೇಬ ;** ೧೯೯೮ ; ಗಿರೀಶ್ ಕಾಸರವಳ್ಳಿ

೪೭ **ಕಾನೂರು ಹೆಗ್ಗಡಿತಿ ;** ೧೯೯೯ ; ಗಿರೀಶ್ ಕಾರ್ನಾಡ್

೪೮ **ಹಗಲುವೇಷ ;** ೨೦೦೦ ; ಬರಗೂರು ರಾಮ ಚಂದ್ರಪ್ಪ

೪೯ **ಮುನ್ನುಡಿ** ; ೨೦೦೦ ; ಪಿ. ಶೇಷಾದ್ರಿ

೫೦ **ಕಡ್ಲಿಮಟ್ಟಿ ಸ್ಟೇಷನ್ ಮಾಸ್ಟರ್** ; ೨೦೦೦ ; ಶಂಕರಲಿಂಗ ಸುಗ್ನಳ್ಳಿ

೫೧ **ದ್ವೀಪ ;** ೨೦೦೨ ; ಗಿರೀಶ್ ಕಾಸರವಳ್ಳಿ

೫೨ **ಹಸೀನ** ; ೨೦೦೫ ; ಗಿರೀಶ್ ಕಾಸರವಳ್ಳಿ

೫೩ **ಅಮಾಸ** ; ೨೦೦೫ ; ಬಸವಲಿಂಗ

೫೪ **ಗಂಡುಗಲಿ ಕುಮಾರರಾಮ** ; ೨೦೦೬ ; ಪಟ್ಟಾಭಿರಾಮ

೫೫ **ಜನಪದ ;** ೨೦೦೭ ; ಬರಗೂರು ರಾಮ ಚಂದ್ರಪ್ಪ

೫೬ **ಕಾಡ ಬೆಳದಿಂಗಳು** ; ೨೦೦೭ ; ಲಿಂಗದೇವರು

ಆ) ಆಕರ ಗ್ರಂಥಗಳು

೧ ಅಕ್ಷರ ಕೆ.ವಿ. ; ೨೦೦೪ ; **ವಿಶ್ವಾತ್ಮಕ ದೇಶಭಾಷೆ - ಷೆಲ್ಡನ್ ಪೊಲಾಕ್** ; ಕರ್ನಾಟಕ ಸಾಹಿತ್ಯ ಅಕಾಡೆಮಿ ; ಅಕ್ಷರ ಪ್ರಕಾಶನ, ಸಾಗರ.

೨ ಅನಂತಮೂರ್ತಿ ಯು.ಆರ್ ; ೧೯೯೨ ; **ಸಮಕ್ಷಮ**; ಅಕ್ಷರ ಪ್ರಕಾಶನ, ಸಾಗರ

೩ ಅನಂತ ಮೂರ್ತಿ .ಯು.ಆರ್ ; ೧೯೯೨ ; **ಸಂಸ್ಕಾರ** ; ಅಕ್ಷರ ಪ್ರಕಾಶನ ಹೆಗ್ಗೋಡು

೪ ಅನಂತಮೂರ್ತಿ ಯು.ಆರ್. ; ೧೯೯೩ ; **ಎರಡು ದಶಕದ ಕಥೆಗಳು** ; ಅಕ್ಷರ ಪ್ರಕಾಶನ ಸಾಗರ

೫ ಅರ್ಜುನ ಗೊಳಸಂಗಿ ; ೨೦೦೩ ; **ಕನ್ನಡ ದಲಿತ ಸಾಹಿತ್ಯ** ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು,

೬ ಅವಧಾನಿ ಜಿ.ಎಸ್, ; ೧೯೯೦ ; **ಪರಸ್ಪರ** ; ಶ್ರೀ ರಾಘವೇಂದ್ರ ಪ್ರಕಾಶನ ; ಅಂಕೋಲ

೭ ಆಮೂರ ಜಿ.ಎಸ್ (ಸಂ) ; ೨೦೦೪ ; **ಸ್ವಾತಂತ್ರ್ಯೋತ್ತರ ಕನ್ನಡ ಕಥಾ ಲೋಕ** ; ಅಂಕಿತ ಪುಸ್ತಕ ಬೆಂಗಳೂರು

೮ ಕಟ್ಟೀಮನಿ ಆರ್.ವಿ. ; ೨೦೦೧ ; **ಚಿತ್ರ ಜಗತ್ತು** ; ಸೋನು ಎಂಟರ್ ಪ್ರೈಸಸ್ ಬೆಂಗಳೂರು

೯ ಕರಿಸಿದ್ದಪ್ಪ ಸಿ.ಆರ್ (ಸಂ) : ೧೯೮೧: **ಸಂಕ್ರಮಣ ಶತಕ** ; ಸಂಕ್ರಮಣ ಪ್ರಕಾಶನ : ಧಾರವಾಡ

೧೦ ಕೀರ್ತಿನಾಥ ಕುರ್ತಕೋಟಿ ;೧೯೯೬ ; **ವಿಮರ್ಶೆಯ ವಿನಯ ನಾಟಕ** ; ಮನೋಹರ ಗ್ರಂಥಮಾಲಾ, ಧಾರವಾಡ

೧೧ ಕೀರ್ತಿನಾಥ ಕುರ್ತಕೋಟಿ ; ೧೯೯೬ ; **ಮಿಮರ್ಶೆಯ ವಿನಿಯ ಕಾದಂಬರಿ** ; ಮನೋಹರ ಗ್ರಂಥಮಾಲಾ, ಧಾರವಾಡ

೧೨ ಕುವೆಂಪು ; ೨೦೦೨ ; **ಕಾನೂರು ಹೆಗ್ಗಡತಿ** ; ಉದಯ ರವಿ ಪ್ರಕಾಶನ, ಮೈಸೂರು

ಕೃಷ್ಣ ಹಾಸನ (ಅನು) ; ೧೯೮೭ ; **ಇಕಿರು** ; ಅಕ್ಷರ ಪ್ರಕಾಶನ, ಸಾಗರ

೧೩ ಖ್ವಾಜಾ ಅಹಮ್ಮದ್ ಅಬ್ಬಾಸ್ ; ೧೯೭೭ ; **ಚಲನ ಚಿತ್ರಗಳ ನಿರ್ಮಾಣ** ; ನ್ಯಾಷನಲ್ ಬುಕ್‌ಟ್ರಸ್ಟ್ ; ಇಂಡಿಯಾ

೧೪ ಗಂಗಾಧರ ಕುಷ್ಟಗಿ (ಸಂ) ; ೧೯೭೨ ; **ತಲೆ ಮಾರಿನ ತಳಮಳ**; ಕವಿತಾ ಪ್ರಕಾಶನ ; ರಾಯಚೂರು

೧೫ ಗಂಗಾಧರ ಮೊದಲಿಯಾರ್ ; ೧೯೯೮ ; **ಕನ್ನಡ ಸಿನಿಮಾ ಇತಿಹಾಸ ಪುಟಗಳಲ್ಲಿ** ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೧೬ ಗಿರೀಶ್ ಕಾರ್ನಾಡ ; ೨೦೦೫ ; **ನಾಗಮಂಡಲ** ; ಮನೋಹರ ಗ್ರಂಥ ಮಾಲಾ, ಧಾರವಾಡ

೧೭ ಗಿರೀಶ್ ಕಾಸರವಳ್ಳಿ ; ೧೯೮೩ ; **ಸಿನಿಮ ಕಲೆ - ನೆಲೆ** ; ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು

೧೮ ಗೋಪಿ ಕಾನ ಕಾನಹಳ್ಳಿ ; ೧೯೮೦ ; **ಬಯೋಸ್ಕೊಪ್** ; ಅಂಜನ ಪ್ರಕಾಶನ ಬೆಂಗಳೂರು

೧೯ ಚಂದ್ರಶೇಖರ್ ಬಿ.ಎಸ್ ; ೨೦೦೩ : **ಸಂವಹನ ಮಾಧ್ಯಮಗಳು** ; ಕನ್ನಡ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦ ಚಂದ್ರ ಶೇಖರ ಕಂಬಾರ ; ೨೦೦೪ ; **ನೆಲಸಂಪಿಗೆ** ; ಕರ್ನಾಟ ಪುಸ್ತಕ ಪ್ರಾಧಿಕಾರ ಬೆಂಗಳೂರು

೨೧ ಚಂದ್ರಶೇಖರ ಕಂಬಾರ ; ೨೦೦೪ ; **ದೇಶೀಯ ಚಿಂತನೆ** ; ಅಂಕಿತ ಪುಸ್ತಕ, ಬೆಂಗಳೂರು

೨೨ ತ.ರಾ.ಸು ; ೧೯೫೮ ; **ನಾಗರಹಾವು** ; ಕಾವ್ಯಾಲಯ ಪ್ರಕಾಶಕರು, ಮೈಸೂರು

೨೩ ದಿವಾಕರ (ಅನು) ; ೧೯೮೫ ; **ಭಾರತದಲ್ಲಿ ಚಲನ ಚಿತ್ರ ಸಂಸ್ಕೃತಿಯ ಪ್ರಸ್ತುತ ಸನ್ನಿವೇಶ** (ಬಹಾದೂರ ಮೂಲ) ; ಅಕ್ಷರ ಪ್ರಕಾಶನ, ಸಾಗರ

೨೪ ನಾಗರಾಜ ; ೧೯೯೦ ; **ಡಾ.ರಾಜಕುಮಾರ್ ಸಿನಿಮಾ ಬದುಕು, ಸಾಧನೆ** ; ವಾಸನ್ ಬುಕ್ ಡಿಪೋ

೨೫ ನಾಗರಾಜ್ ಡಿ.ಆರ್. ; ೧೯೯೬ ; **ಸಾಹಿತ್ಯ ಕಥನ** ;

೨೬ ನಾಯಕ ಜಿ. ಎಚ್. ; ೨೦೦೪ ; **ಕನ್ನಡ ಸಣ್ಣ ಕಥೆಯ** ; ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ

೨೭ ನಾಯಕ ಡಿ.ಬಿ. ; ೨೦೦೩ ; **ಸಮೂಹ ಮಾಧ್ಯಮಗಳು ಮತ್ತು ಸಮಾಜ** ; ಬಂಜಾರ ಪ್ರಕಾಶನ, ಗುಲ್ಬರ್ಗಾ

೨೮ ನಾರಾಯಣ ಕೆ.ವಿ. ಮತ್ತು ಇತರರು (ಅನು) ; ೧೯೮೫ ; **ಆಫ್ರಿಕನ್ ಸಿನಿಮಾ** ; ಪುಸ್ತಕಚಂದನ, ಬೆಂಗಳೂರು

೨೯ ಪಂಡಿತಾರಾಧ್ಯ (ಸಂ) ; ೧೯೯೯ ; **ಸಾಹಿತ್ಯ ವಿಮರ್ಶೆ** ; ಸಾಹಿತ್ಯ ಅಕಾಡೆಮಿ, ಬೆಂಗಳೂರು

೩೦ ಪೂರ್ವಾಚಾರ್ ಎಂ. ; ೨೦೦೨ ; **ಭಾರತೀಯ ಸಿನಿಮಾ (ಪ್ರೇಕ್ಷಕರು ಮತ್ತು ಸ್ತ್ರೀ ಪಾತ್ರ)** ; ವಿಶ್ವಕರ್ಮ ಪ್ರಕಾಶನ, ವಿದ್ಯಾನಗರ ಶಿವಮೊಗ್ಗ

೩೧ ಪ್ರಭಾಕರ್ ನಾ. ; ೨೦೦೨ ; **ತ.ರಾ.ಸು** ; ನವಕರ್ನಾಟಕ ಪ್ರಕಾಶನ ಬೆಂಗಳೂರು

೩೨ ಬರಗೂರು ರಾಮಚಂದ್ರಪ್ಪ ; ೧೯೯೯ ; **ಒಂದು ಊರಿನ ಕತೆಗಳು** ; ಅಂಕಿತ ಪುಸ್ತಕ; ಬೆಂಗಳೂರು

೩೩ ಬರಗೂರು ರಾಮಚಂದ್ರಪ್ಪ ; ೨೦೦೪ ; **ಪರಂಪರೆಯೊಂದಿಗೆ ಪಿಸುಮಾತು** ; ಅಂಕಿತ ಪುಸ್ತಕ; ಬೆಂಗಳೂರು

೩೪ ಮಂಜುನಾಥ ಬೇವಿನಕಟ್ಟಿ ; ೨೦೦೪ ; **ದೇಸೀ Vs ಜಾಗತೀಕರಣ** ; ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು

೩೫ ಮಂಜುನಾಥ್ ಹ.ಸಂ ; ೨೦೦೦ ; **ಚಲನ ಚಿತ್ರರಂಗಕ್ಕೆ ಪ್ರವೇಶ** ; ಪ್ರಶಾಂತ ಪ್ರಕಾಶನ, ಬೆಂಗಳೂರು

೩೬ ಮಹಾಬಲೇಶ್ವರ ಕಾಟ್ರಹಳ್ಳಿ ; ೧೯೯೩ ; **ಸಾಹಿತ್ಯ ಮತ್ತು ಸಿನಿಮಾ** ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೩೭ ಮಲ್ಲೇಪುರಂ ಜಿ.ವೆಂಕಟೇಶ್ ; ೧೯೬೫ ; **ಸಾಹಿತ್ಯ ಮತ್ತು ಪುರಾಣ** ; ಶ್ರೀ ಅರವಿಂದ ಪ್ರಕಾಶನ, ಚಡಚಣ

೩೮ ಮಾನಸ ಕೆ.ವಿ. ;೨೦೦೩; **ಕನ್ನಡ ಕಾದಂಬರಿ ಆಧಾರಿತ ಚಲನಚಿತ್ರಗಳ ಅಧ್ಯಯನ** (ಕುವೆಂಪು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿ ಎಚ್.ಡಿ. ಮಹಾಪ್ರಬಂಧ)

೩೯ ಮುರಳೀಧರ ಉಪಾಧ್ಯ ಹಿರಿಯಡಕ(ಸಂ) ; ೧೯೯೬ ; **ಬಿ.ವಿ. ಕಾರಂತ** ; ಕರ್ನಾಟಕ ಸಂಘ, ಪುತ್ತೂರು

೪೦ ರಂಗರಾಜ ವನದುರ್ಗ ; ೨೦೦೪ ; **ದಲಿತ ಸಂವೇದನೆ** ; ಸಿವಿಜಿ ಪಬ್ಲಿಕೇಷನ್ಸ್ ; ಬೆಂಗಳೂರು

೪೧ ರಹಮತ್ ತರೀಕೆರೆ ; ೨೦೦೪ ; **ಸಾಂಸ್ಕೃತಿಕ ಅಧ್ಯಯನ** ; ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು

೪೨ ರಾಘವೇಂದ್ರ ಜೋಷಿ (ಅನು) ; ೨೦೦೧ ; **ಅಜ್ಞಾದಿ** ; ಭಾಮಾ ಪ್ರಕಾಶನ, ಬೆಂಗಳೂರು

೪೩ ರಾಜೇಂದ್ರ ಚೆನ್ನಿ ; ೧೯೮೯ ; **ದೇಶೀವಾದ** ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೪೪ ರುದ್ರಮೂರ್ತಿ ಶಾಸ್ತ್ರಿ ಸು. ; ೨೦೦೫ ; **ಕುಮಾರ ರಾಮ** ; ಭಾಗ್ಯಲಕ್ಷ್ಮೀ ಪ್ರಕಾಶನ, ಬೆಂಗಳೂರು

೪೫ ವ್ಲಾದಿಮಿರ್ ಬಸ್ಕಾಕೋವ್ ; ೧೮೬೮ ; **ಸೋವಿಯತ್ ಸಿನೆಮಾ** ; ಸೋವಿಯತ್ ದೇಶದ ಪ್ರಕಟಣೆ ; ಮದ್ರಾಸ್

೪೬ ವಿಜಯಾ ಮತ್ತು ಇತರರು (ಸಂ) ;೨೦೦೧; **ಕನ್ನಡ ಚಲನ ಚಿತ್ರ ಇತಿಹಾಸ** ; ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೭ ವಿದ್ಯಾಶಂಕರ್ .ಎನ್ ; ೧೯೮೫ ; **ಸ್ವಂತಿಕೆಯ ಅನ್ವೇಕ್ಷಣೆಯಲ್ಲಿ ಮೂರನೇ ಜಗತ್ತಿನ ಸಿನಿಮಾ – ೧** ; ಪುಸ್ತಕ ಚಂದನ

೪೮ ವಿವಿಧ ಲೇಖಕರು ; ೧೯೮೩ ; **ಸಿನೆಮಾ – ಸರ್ಕಾರ – ಸಮಾಜ** ; ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೪೯ ವಿವಿಧ ಲೇಖಕರು ; ೧೯೮೫ ; **ಸಿನಿಮಾ – ಆಶ್ರಯ – ಅಭಿವ್ಯಕ್ತಿ** ; ಪ್ರತಿಭಾಯುವ ವೇದಿಕೆ ; ಬೆಂಗಳೂರು

೫೦ ಶರಶ್ಚಂದ್ರ ; ೧೯೯೦; **ಭಾರತೀಯ ಸಿನಿಮಾ** ; ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ

೫೧ ಶಿವರಾಮ ಕಾರಂತ ; ೨೦೦೩ ; **ಚೋಮನ ದುಡಿ** ; ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್ ; ಬೆಂಗಳೂರು

೫೨ ಶ್ರೀನಿವಾಸ ಮೂರ್ತಿ ಪಿ.ಜಿ. ; ೧೯೯೫ ; **ಕನ್ನಡ ಚಲನ ಚಿತ್ರರಂಗ** ; ಕನ್ನಡ ಸಾಹಿತ್ಯ ಪರಿಷತ್ತು ; ಬೆಂಗಳೂರು

೫೩ ಷರೀಷಾ .ಕೆ. ; ೨೦೦೪ ; **ಬಂಡಾಯ - ಮುಸ್ಲಿಂ ಸಂವೇದನೆ** ; ಸಿವಿಜಿ ಪಬ್ಲಿಕೇಷನ್, ಬೆಂಗಳೂರು

೫೪ ಸತೀಶ್ ಕುಲಕರ್ಣಿ ; ೨೦೦೪ ; **ಬಂಡಾಯದ ಗಟ್ಟಿದನಿ** ; ಕರ್ನಾಟಕ ಸಾಹಿತ್ಯ ಅಕಾಡೆಮಿ ; ಬೆಂಗಳೂರು

೫೫ ಸತ್ಯ ಲಿಂಗರಾಜ ಬಿ.ಆರ್. ; ೨೦೦೪ ; **ಸಿನಿಮಾ ಸಿನಿಮಾ** ; ಕೂಡ ಪ್ರಕಾಶನ ; ಮೈಸೂರು

೫೬ ಸುಂದರಂ ಆರ್ವಿಯಸ್ ; ೨೦೦೨ ; **ದೇಶೀ- ದೇಶೀಯತೆ- ದೇಶೀವಾದ** ; ಅರಕಲಗೂಡು ವರದರಾಜುಲು ಕಾಂತಮ್ಮ ಮಹಿಳಾ ಕಾಲೇಜು, ಹಾಸನ

೫೭ ಸುಬ್ಬಣ್ಣ ಕೆ.ವಿ. ; ೧೯೭೪ ; **ಚಲನ ಚಿತ್ರದ ಮಹನೌಕೆ** ; ಅಕ್ಷರ ಪ್ರಕಾಶನ, ಸಾಗರ

೫೮ ಸುಬ್ಬಣ್ಣ ಕೆ.ವಿ. ; ೧೯೭೯ ; **ಅಭಿವೃದ್ಧಿಗಾಗಿ ಸಿನಿಮಾ** ; ಅಕ್ಷರ ಪ್ರಕಾಶನ, ಸಾಗರ

೫೯ ಸುಬ್ಬಣ್ಣ.ಕೆ.ವಿ ಮತ್ತು ಅಕ್ಷರ ಕೆ.ವಿ ; ೧೯೮೦ ; **ಸಿನಿಮಾದ ದೂರ ಚಿತ್ರಗಳು ಸಮೀಪ ಚಿತ್ರಗಳು** ; ಅಕ್ಷರ ಪ್ರಕಾಶನ, ಸಾಗರ

೬೦ ಸುಬ್ಬಣ್ಣ ಕೆ.ವಿ. ; ೧೯೮೧ ; **ಸಿನಿಮಾದ ಯಂತ್ರ ಭಾಷೆ** ; ಅಕ್ಷರ ಪ್ರಕಾಶನ, ಸಾಗರ

೬೧ ಸುಬ್ಬಣ್ಣ ಕೆ.ವಿ. ; ೧೯೮೩ ; **ಅಭಿವೃದ್ಧಿಗಾಗಿ ಸಿನಿಮಾ** ; ಅಕ್ಷರ ಪ್ರಕಾಶನ, ಸಾಗರ

೬೨ ಸುಬ್ಬಣ್ಣ ಕೆ.ವಿ. ; ೧೯೮೭ ; **ಬೈಸಿಕಲ್ ಥೀವ್ಸ್** ; ನಿನಾಸಮ್ ಚಿತ್ರ ಸಮಾಜ, ಹೆಗ್ಗೋಡು

೬೩ ಸುಬ್ಬಣ್ಣ ಕೆ.ವಿ. ; ೧೯೮೫ ; **ನನ್ನ ಪ್ರೀತಿಯ ಹಿರೋಶಿಮಾ** ; ಅಕ್ಷರ ಪ್ರಕಾಶನ, ಸಾಗರ

೬೪ ಸುರೇಶ್ .ಬಿ. ; ೨೦೦೪ ; **ಬೆಳ್ಳಿ ಅಂಕ** ; ಇಳಾ ಪ್ರಕಾಸನ, ಬೆಂಗಳೂರು

೬೫ ಸುರೇಂದ್ರ ನಾಥ (ಅನಂ) ; ೧೯೮೩ ; **ಸಿನಿಮಾ ಮತ್ತು ವಾಸ್ತವತೆ** : ಅಕ್ಷರ ಪ್ರಕಾಶನ, ಸಾಗರ

೬೬ ಸೋಜ ನಾ.ಡಿ.; ೨೦೦೪ ; **ದ್ವೀಪ** ; ರವೀಂದ್ರ ಪುಸ್ತಕಾಲಯ ; ಶಿವಮೊಗ್ಗ

೬೭ ಹೊನ್ನಯ್ಯ ಸಿ.ಬಿ ; ೨೦೦೪ ; **ಕನ್ನಡ ಸಣ್ಣ ಕತೆಗಳಲ್ಲಿ ದಲಿತ ಸಂಸ್ಕೃತಿ** ; ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್ ; ಕೃಷ್ಣಾಪುರ ದೊಡ್ಡಿ.

ಇ) ಪತ್ರಿಕೆಗಳು

೬೮ **ಸಾಕ್ಷಿ** ; ಸಂಚಿಕೆ ೨೮ ; ೧೯೭೫; ಅಕ್ಷರ ಪ್ರಕಾಶನ ಸಾಗರ

೬೯ ; **ಕನ್ನಡ ಅಧ್ಯಯನ** ; ೨೦೦೧ ; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೦ ; **ಸಂಕುಲ**;ಸಂಪುಟ-೫ ಸಂಚಿಕೆ-೧;೨೫; ಅಸೀಮ ಪ್ರಕಾಶನ ,ಬೆಂಗಳೂರು

೭೧ **ಸಂಚಯ - ಚಲನ ಚಿತ್ರ ವಿಶೇಷಾಂಕ** ; ಸಂಪುಟ ೮ ;ಸಂಚಿಕೆ ೪ ; ೧೯೯೭;ಸಂಚಯ ಬಳಗ

ಕೆಲವು ಆಯ್ದ ಸಿನಿಮಾಗಳ ಸ್ಥಿರ ಛಾಯಾ ಚಿತ್ರಗಳು



ಸತ್ಯ ಹರಿಶ್ಚಂದ್ರ



ಬೇಡರ ಕಣ್ಣಪ್ಪ



ಮಂತ್ರಾಲಯ ಮಹಾತ್ಮೆ



ಭಕ್ತ ಪ್ರಹ್ಲಾದ



ಶ್ರೀಕೃಷ್ಣದೇವರಾಯ



ಗಂಡುಗಲಿ ಕುಮಾರ ರಾಮ



ಕಿತ್ತೂರು ಚೆನ್ನಮ್ಮ



ಮಯೂರ



ಮೈಸೂರು ಮಲ್ಲಿಗೆ (ಸ್ವಾತಂತ್ರ್ಯ ಹೋರಾಟ)



ಕಾಕನಕೋಟೆ



ಮಣ್ಣಿನ ಮಗ



ಬಂಗಾರದ ಮನುಷ್ಯ



ಒಡಹುಟ್ಟಿದವರು



ದೂರದ ಬೆಟ್ಟ



ಭಕ್ತ ಕುಂಬಾರ



ಚೋಮನ ದುಡಿ (ದಲಿತ ಸಂವೇದನೆ)



ಅದೇ



ಚೋಮನ ದುಡಿ (ದಲಿತ ಸಂವೇದನೆ)



ಹಸೀನಾ (ಮುಸ್ಲಿಂ ಸಂವೇದನೆ)



ಭೂಮಿಗೀತ (ಬುಡಕಟ್ಟು ಸಂವೇದನೆ)





ಮುನ್ನುಡಿ (ಮುಸ್ಲಿಂ ಸಂವೇದನೆ)



ಹಸೀನಾ (ಮುಸ್ಲಿಂ ಸಂವೇದನೆ)



ದೇವ ಸುಂದರಿ



ಸಂಗ್ಯಾಬಾಳ್ಯಾ



ನಾಗಮಂಡಲ



ಸನಾದಿ ಅಪ್ಪಣ್ಣ



ಜನುಮದ ಜೋಡಿ



ಬಂಗಾರದ ಮನುಷ್ಯ



ದ್ವೀಪ



ಜನಪದ

ಚಲನಚಿತ್ರಗಳಲ್ಲಿ ದೇಸೀ ಉಡುಗೆ-ತೊಡುಗೆ, ಜೀವನ ಕ್ರಮ



ಸಿಂಗಾರೆವ್ವ



ದ್ವೀಪ



ಸಂಸ್ಕಾರ



ಸಂಸ್ಕಾರ



ಫಣಿಯಮ್ಮ



ಕಾನೂರು ಹೆಗ್ಗಡಿತಿ



ಕಾಕನಕೋಟೆ



ತಾಯಿಸಾಹೇಬ



ಹೇಮಾವತಿ



ಬೂತಯ್ಯನ ಮಗ ಅಯ್ಯು